ಸಮಗ್ರ ಕಾವ್ಯ

• ದಿನಕರ ದೇಸಾಯಿ



ಬಲಗಾಲಿನ ಅಂಗುಷ್ಟವು ಹರಿಯೆ
ಎಡಗಾಲ್ ಕೆರವೇ, ಮುಂದಕೆ ಸರಿಯೆ;
ಒಬ್ಬನ ಸಂಕಟವಿಬ್ಬರು ಅರಿಯೆ
ಮೇಲ್ಮೆಯು ಧರೆಯೊಳಗೆ

(‘ಕಾಲಿನ ಜೋಡು’ ಕವನದಿಂದ)

ತಾಯಿಯು ದೇವರಿಗಿಂತಲು ಮೇಲು
ದೇವರ ಮೊಲೆಯಲಿ ದೊರೆವುದೇ ಹಾಲು?
ಯಾವಳ ಹಿಡಿಯಲಿ ತೊಟ್ಟಿಲ ದಾರ
ಆಕೆಯ ಉಡಿಯಲಿ ಜಗದೋದ್ಧಾರ.

(‘ತಾಯಿ’ ಕವನದಿಂದ)

ಸಮಗ್ರ ಕಾವ್ಯ

ದಿನಕರ ದೇಸಾಯಿ

ಪ್ರಕಾಶಕರು :

ಕೆನರಾ ವೆಲ್‌ಫೇರ್ ಟ್ರಸ್ಟ್

ಅಂಕೋಲಾ (ಉತ್ತರ ಕನ್ನಡ)

೨೦೦೭

"SAMAGRA K̄AVYA" - a collection of poems of Late Dr. Dinkar Desai, Ankola.
Compiled by : Vishnu Naik, Ankola
Published by : Kanara Welfare Trust, Ankola - 581 314 (Karnataka)
First Impression : 2007 Total Copies : 1000
Paper Used : Maplitho (18.6 K.G. Weight) Total Pages : 548
Price : Rs. 300
ಬೆಲೆ : 300 ರೂಪಾಯಿ

Cover Design : Guru Artz, Ravinagar, Hubli - 30.

DTP & Printing : Metal-O-Prints, Industrial Area, Hubli - 30.

ಪ್ರಕಾಶಕರ ನುಡಿ

ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ಕವಿಗಳಲ್ಲಿ ಒಬ್ಬರಾದ ಡಾ॥ ದಿನಕರ ದೇಸಾಯಿ ಅವರ 'ಸಮಗ್ರ ಕಾವ್ಯ' ಸಂಪುಟವನ್ನು ಸಹೃದಯ ಓದುಗರಿಗೆ ಒಪ್ಪಿಸುವುದಕ್ಕೆ ಕೆನರಾ ವೆಲ್‌ಫೆರ್ ಟ್ರಸ್ಟು ಸಂತೋಷಪಡುತ್ತದೆ.

ದಿನಕರ ದೇಸಾಯಿ ಅವರು ತಮ್ಮ ಜೀವಿತಾವಧಿಯಲ್ಲಿ ಸ್ವಂತ ಹಿತಾಸಕ್ತಿಯಿಂದ ಯಾವ ಕೆಲಸವನ್ನೂ ಮಾಡಿದವರಲ್ಲ. ಅವರ ಹೋರಾಟ, ಅವರ ಬರವಣಿಗೆ, ಅವರು ಕಟ್ಟಿದ ಶಿಕ್ಷಣ ಸಂಸ್ಥೆಗಳು – ಎಲ್ಲವೂ ಜನರಿಗಾಗಿ, ಸಮಾಜದ ಅಭ್ಯುದಯಕ್ಕಾಗಿ. ತಮ್ಮ ಜಾಯಮಾನಕ್ಕೆ ತಕ್ಕಂತೆ ಅವರು ತಮ್ಮ ಸಾಹಿತ್ಯ ಕೃತಿಗಳ ಸಂಪೂರ್ಣ ಹಕ್ಕನ್ನೂ ಕೂಡ – ತಾವೇ ಆರಂಭಿಸಿ ಜನರ ಸೇವೆಗಾಗಿ ಮುಡಿಪಾಗಿಟ್ಟಿರುವ – ಕೆನರಾ ವೆಲ್‌ಫೆರ್ ಟ್ರಸ್ಟಿಗೆ ಕೊಟ್ಟು ಹೋಗಿದ್ದಾರೆ.

ದಿನಕರ ದೇಸಾಯರು ನಮ್ಮನ್ನೆಲ್ಲ ಬಿಟ್ಟುಹೋಗಿ ಇಂದಿಗೆ ೨೫ ವರ್ಷಗಳು ಕಳೆದಿವೆ. ಅವರು ರಚಿಸಿದ ಕವಿತೆಗಳಾಗಲಿ, ಗದ್ಯಸಾಹಿತ್ಯವಾಗಲಿ ಓದುಗರಿಗೆ ಲಭ್ಯವಿಲ್ಲ ಎಂಬುದನ್ನು ಮನಗಂಡಿರುವ ಕೆನರಾ ವೆಲ್‌ಫೆರ್ ಟ್ರಸ್ಟು ಅವರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಒಂದೊಂದಾಗಿ ಪ್ರಕಟಿಸಲು ಮುಂದಾಗಿದೆ. ಇನ್ನೊಂದು ವರ್ಷ ಕಳೆದರೆ ದಿನಕರ ದೇಸಾಯರ ಜನ್ಮಶತಮಾನೋತ್ಸವವನ್ನು ನಾವೆಲ್ಲ ಸೇರಿ ಆಚರಿಸಬೇಕಾದದ್ದಿದೆ. ಆ ಸಂದರ್ಭಕ್ಕೆ ಸರಿಯಾಗಿ ಅವರ ಸಾಹಿತ್ಯ ಕೃತಿಗಳು ಆಸಕ್ತ ಓದುಗರಿಗೆ ಲಭ್ಯವಿರಬೇಕೆಂಬುದು ಈ ಸಮಗ್ರ ಸಂಪುಟಗಳ ಪ್ರಕಟಣೆಯ ಹಿಂದಿನ ಪ್ರೇರಣೆಯಾಗಿದೆ.

ದೇಸಾಯರ ಕೃತಿಗಳಲ್ಲಿ ಜೀವಪೋಷಕವಾದ ಅನೇಕ ವಿಚಾರಗಳಿರುವುದನ್ನು ನಾವು ಕಾಣುತ್ತೇವೆ. ನಮ್ಮ ಹೊಸತಲೆಮಾರು ಅವರು ತಮ್ಮ ಕೃತಿಗಳ ಮೂಲಕ ಬಿಟ್ಟುಹೋದ ಆದರ್ಶದ ಬೆಳಕನ್ನು ತಮ್ಮ ಒಳಗಡೆ ತುಂಬಿಕೊಳ್ಳಲಿ, ಈ ಸಮಗ್ರ ಕಾವ್ಯ ಸಂಪುಟ ಅದಕ್ಕೆ ನೆರವಾಗಲಿ ಎಂದು ಹಾರೈಸುತ್ತೇನೆ.

ಇದರ ಪ್ರಕಟಣೆಯ ಸಂದರ್ಭದಲ್ಲಿ ನಮ್ಮೊಂದಿಗೆ ಸಹಕರಿಸಿದ ಎಲ್ಲರಿಗೂ ಟ್ರಸ್ಟು ಆಭಾರಿಯಾಗಿದೆ.

ಎಸ್. ಪಿ. ಕಾಮತ

ಅಂಕೋಲಾ
ಉತ್ತರ ಕನ್ನಡ)

ಅಧ್ಯಕ್ಷರು,
ಕೆನರಾ ವೆಲ್‌ಫೆರ್ ಟ್ರಸ್ಟ್

ಪ್ರಸ್ತಾವನೆ

ಆಧುನಿಕ ಕನ್ನಡ ಕವಿಗಳಲ್ಲಿ ದಿನಕರ ದೇಸಾಯಿ ಅವರದು ಒಂದು ಗೌರವಾನ್ವಿತ ಹೆಸರು. ಒಬ್ಬ ವಿದ್ಯಾರ್ಥಿಕವಿಯಾಗಿಯೇ ಅವರು ನಾಡಿನ ತುಂಬಾ ಹೆಸರು ಮಾಡಿದವರು. ೧೯೪೦ರ ದಶಕದಲ್ಲೇ ಅವರ ಮಧುರ ಕವನಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಸ್ಥಾನ ಪಡೆದಿರುತ್ತಿದ್ದವು. 'ದೀನಗಿಂತ ದೇವ ಬಡವ' ಎಂಬ ಅವರ ಸುಪ್ರಸಿದ್ಧ ಕವನ ಆಗಲೇ ವಿದ್ಯಾರ್ಥಿಗಳು ಮಾತ್ರವಲ್ಲ, ಹಿರಿಯರ–ವಿಚಾರವಂತರ ಮೆಚ್ಚುಗೆಗೆ ಪಾತ್ರವಾಗಿತ್ತು. 'ಗಡಿಯಾರ' (ಟೀಕ್ ಟೀಕ್ ಗೆಳೆಯ) 'ಬೆಕ್ಕೇ–ಬೆಕ್ಕೇ', 'ಅಂಚೆಯವನು', 'ಕಸಗುಡಿಸುವ ಪಂಚಮರು' – ಇವೆಲ್ಲ ದೇಸಾಯರ ಮೊದಲ ಸಂಕಲನ ಪ್ರಕಟವಾಗುವ ಮುನ್ನವೇ ನಾಡಿನ ಕಾವ್ಯಾಸಕ್ತ ಮಕ್ಕಳ ಮತ್ತು ಕಾವ್ಯಾಸಕ್ತರ ನಾಲಿಗೆಯಲ್ಲಿ ಇದ್ದವು.

ದಿನಕರ ದೇಸಾಯರ ಚೊಚ್ಚಲು ಕವನ ಸಂಕಲನ ('ಕವನ ಸಂಗ್ರಹ') ಪ್ರಕಟವಾದದ್ದು ೧೯೫೦ರಲ್ಲಿ, ಧಾರವಾಡದ ಶೇ.ಗೋ.ಕುಲಕರ್ಣಿಯವರು ಅದನ್ನು ತಮ್ಮ ಸಾಧನ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದ್ದರು. ಅದನ್ನು ಪ್ರಕಟಿಸುವುದಕ್ಕೆ ದಿನಕರ ದೇಸಾಯರ ಒಪ್ಪಿಗೆ ಪಡೆಯಲು ಶೇ.ಗೋ.ಕುಲಕರ್ಣಿಯವರು ಐದುವರ್ಷ ಕಾಯಬೇಕಾಯಿತು. 'ಕವನ ಸಂಗ್ರಹ'ದಲ್ಲಿ ದೇಸಾಯರು ಬರೆದ 'ಅರಿಕೆ'ಯನ್ನು ಓದಿದವರಿಗೆಲ್ಲ ತಿಳಿದಿರುವ ಸಂಗತಿ ಇದು. ದಿನಕರ ದೇಸಾಯರ ಸುಮಾರು ೫೦ ವರ್ಷಗಳ ಕಾವ್ಯಜೀವನದಲ್ಲಿ ಅವರು ಹೊರತಂದದ್ದು – ಮಕ್ಕಳಿಗಾಗಿ ಪ್ರಕಟಿಸಿದ ಎರಡು ಸಂಕಲನಗಳೂ ಸೇರಿದಂತೆ – ಕೇವಲ ೬ ಸಂಕಲನಗಳು ಮಾತ್ರ ಎಂಬುದನ್ನು ಗಣನೆಗೆ ತೆಗೆದುಕೊಂಡಾಗ, ಅವರು ತಮ್ಮ ಕೃತಿಗಳನ್ನು ಪ್ರಕಟಿಸುವವಿಚಾರದಲ್ಲಿ ಎಷ್ಟೊಂದು ನಿರ್ಲಿಪ್ತ ಮತ್ತು ನಿಧಾನಗತಿಯವರಾಗಿದ್ದರು ಎಂಬುದು ಗೊತ್ತಾಗುತ್ತದೆ.

ಮೊದಲ ಸಂಕಲನ ಪ್ರಕಟವಾದ ೮ ವರ್ಷಗಳ ನಂತರ (೧೯೫೮) ದಿನಕರರ ಎರಡನೆಯ ಸಂಕಲನ 'ಹೂಗೊಂಚಲು' ಹೊರಬಂತು. ಅದನ್ನು ಅಂಕೋಲೆಯ ಕೆನರಾ ವೆಲ್‌ಫೇರ್ ಟ್ರಸ್ಟಿನ 'ಜನತಾ ಪ್ರಕಾಶನ' ಪ್ರಕಟಿಸಿತು. ಮೂರನೆಯ ಸಂಕಲನದ ಹೆಸರು 'ದಾಸಾಳ'. ಹೂಗೊಂಚಲು ಪ್ರಕಟವಾದ ೨೪ ವರ್ಷಗಳ ತರುವಾಯ ಹೊರಬಂದ ಸಂಕಲನವಿದು. ಇದನ್ನು ಕೂಡ ಕೆನರಾ ವೆಲ್‌ಫೇರ್ ಟ್ರಸ್ಟೇ ಪ್ರಕಟಿಸಿದೆ. ಮುದ್ರಣಕ್ಕಾಗಿ ಈ ಸಂಕಲನದ ಕವನಗಳನ್ನು ಪೋಣಿಸಿ ಮೊದಲ ಮಾತನ್ನೂ ಬರೆದಿದ್ದ ದಿನಕರ ದೇಸಾಯಿ ಮುದ್ರಣಾಲಯದಿಂದ ಅದು ಹೊರಬರುವ ಮುಂಚೆಯೇ 'ಕಾಲವಶ'ರಾಗಿದ್ದರು. (೧೯೮೨ ನವೆಂಬರ ೬). ಈ ನಡುವೆ ಅವರ ಎರಡು ಮಕ್ಕಳ

ಕವನ ಸಂಕಲನಗಳು ಪ್ರಕಟವಾಗಿದ್ದುಂಟು. 'ಮಕ್ಕಳ ಗೀತಗಳು' ೧೯೫೧ರಲ್ಲೂ 'ಮಕ್ಕಳ ಪದ್ಯಗಳು' ೧೯೫೯ರಲ್ಲೂ ಹೊರಬಂದವು. ಈ ಎರಡೂ ಸಂಕಲನಗಳ ಕವನಗಳನ್ನು ಒತ್ತಟ್ಟಿಗೆ ಸೇರಿಸಿ ದೇಸಾಯರು ೧೯೭೬ರಲ್ಲಿ 'ಮಕ್ಕಳ ಪದ್ಯ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಭಾವಗೀತಗಳ ಜೊತೆಜೊತೆಗೇ ನಾಲ್ಕು ಸಾಲಿನ ಚುಟುಕಗಳನ್ನು ಬರೆಯಲಾರಂಭಿಸಿದ ದಿನಕರ ದೇಸಾಯಿ ೧೯೬೦ರ ದಶಕದಲ್ಲಿ ನಾಡಿನಾದ್ಯಂತ 'ಚುಟಕ ಸಾರ್ವಭೌಮ' ಎಂದೇ ಪ್ರಸಿದ್ಧರಾದರು. ಚೌಪದಿಗೂ ಪೂರ್ವದಲ್ಲಿ ಅವರು ಒಂದಷ್ಟು ದ್ವಿಪದಿಗಳನ್ನೂ ಬರೆದದ್ದಿದೆ. ಅವುಗಳಲ್ಲಿ ಕೆಲವು 'ಹೂಗೊಂಚಲು' ಸಂಕಲನದಲ್ಲೂ ಸೇರಿವೆ. (ನೋಡಿ : ಕಿರು ನುಡಿ ವಿಭಾಗ) ಸುಮಾರು ೧೦ ಸಾವಿರದಷ್ಟು ಚೌಪದಿಗಳನ್ನು ಬರೆದಿದ್ದರೆನ್ನಲಾದ ದೇಸಾಯರು ೧೯೭೮ರಲ್ಲಿ 'ದಿನಕರನ ಚೌಪದಿ' ಎಂಬ ಬೃಹತ್ ಸಂಪುಟವೊಂದನ್ನು ಹೊರತಂದಿದ್ದಾರೆ. ೨,೫೦೦ ಚೌಪದಿಗಳನ್ನೊಳಗೊಂಡ ಆ ಸಂಪುಟವನ್ನೂ ಕೆನರಾ ವೆಲ್‌ಫೇರ್ ಟ್ರಸ್ಟು ಪ್ರಕಟಿಸಿದೆ.

ಪ್ರಸ್ತುತ ಸಮಗ್ರ ಕಾವ್ಯ ಸಂಪುಟದಲ್ಲಿ ದೇಸಾಯರ ೩೫೧ ಕವನಗಳಿವೆ. ಅವರ ಹಿಂದಿನ ಯಾವ ಸಂಕಲನಗಳಲ್ಲೂ ಸೇರ್ಪಡೆಯಾಗದೆ ಉಳಿದಿದ್ದ ಒಂದಷ್ಟು ಬಿಡಿಗವನಗಳೂ ಅವುಗಳಲ್ಲಿ ಸೇರಿವೆ. ದಿನಕರ ದೇಸಾಯಿ ತಮ್ಮ ಹದಿಹರೆಯದಲ್ಲಿ ಕಾವ್ಯಜೀವನವನ್ನು ಆರಂಭಿಸಿದ್ದು ವಾರ್ಧಿಕ ಷಟ್ಪದಿಯೊಂದಿಗೆ. ರಗಳೆ ಛಂದಸ್ಸಿನ ಪ್ರಮುಖ ಪ್ರಕಾರಗಳಲ್ಲಿ ಒಂದಾದ ಲಲಿತ ರಗಳೆಯನ್ನೂ ಬಳಸಿ ಕವಿತೆಯೊಂದನ್ನು ಬರೆದಿದ್ದಾರೆ. ಜಿಲ್ಲೆಯ ಚರಿತ್ರೆಯ ಮುಖ್ಯಭಾಗವಾಗಿ ಉಳಿದಿರುವ ಉಪ್ಪಿನ ಸತ್ಯಾಗ್ರಹ, ರೈತಜನಾಂದೋಲನಗಳಿಗೆ ಸೇರಿದ ಕೆಲವು ಕವನಗಳು ಬಿಡಿಬಿಡಿಯಾಗಿಯೇ ಉಳಿದಿದ್ದವು. ವಿವಿಧ ಕಾರಣಗಳಿಗಾಗಿ ಗಮನಿಸಬೇಕಾದವುಗಳೆನಿಸಿದ್ದರಿಂದ ಅವನ್ನೆಲ್ಲ ಈ ಸಂಪುಟದಲ್ಲಿ ಸೇರಿಸಲಾಗಿದೆ.

******

ದಿನಕರ ದೇಸಾಯರ ಚೊಚ್ಚಲು ಕವನ ಸಂಗ್ರಹಕ್ಕೆ 'ಕೆಳೆನುಡಿ' ಬರೆದಿರುವ ಹಿರಿಯ ವಿದ್ವಾಂಸ ವಿ.ಕೃ.ಗೋಕಾಕ ಅವರು ದೇಸಾಯರ ಕಾವ್ಯದ ವಿವಿಧ ಲಹರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಿದೆ. 'ಅನಿಸಿದ ಅನಿಸಿಕೆ ಕಾವ್ಯಮಯ ಅಹುದೋ, ಅಲ್ಲವೋ ಎಂಬ ಶಂಕೆಯೇ ಇವರ ಕೃತಿಗಳಲ್ಲಿ ಏಳುವುದಿಲ್ಲ' ಅನ್ನುವ ಗೋಕಾಕರು, ಒಂದೊಂದು ಭಾವನೆಯೂ ವ್ಯಕ್ತಿತ್ವದ ಆಳದೊಳಗೆ ಮಿಂದು ಬರುತ್ತದೆಯೆಂದೂ ಕೊಂಡಾಡಿದ್ದಾರೆ. ಗೋಕಾಕರು ಗುರುತಿಸಿದ ಇನ್ನೊಂದು ಲಕ್ಷಣವೆಂದರೆ ದೇಸಾಯರ ಕವನಗಳಲ್ಲಿಯ ನೇರತೆ ಮತ್ತು ಸಹಜಾಭಿವ್ಯಕ್ತಿ. ಅನಗತ್ಯವಾಗಿ ಈ ಕವಿ ಶಬ್ದಗಳನ್ನು ಪೋಲು ಮಾಡುವುದಿಲ್ಲ ಎಂಬುದು ಕೂಡ ಗೋಕಾಕರು ಮೆಚ್ಚಿಕೊಂಡ ಕಾರಣಗಳಲ್ಲಿ ಒಂದು.

ತಮ್ಮ 'ಕೆಳೆನುಡಿ'ಯ ಆರಂಭದಲ್ಲೇ ಅವರು 'ತಳಿರು' ಸಂಕಲನದ ಪ್ರಸ್ತಾಪ ಮಾಡಿದ್ದಾರೆ. ಈ ತಳಿರು ದಿನಕರ ದೇಸಾಯಿ ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ (೧೯೩೨)ಅಂದಿನ ಕುಲಸಚಿವರಾಗಿದ್ದ–ಕನ್ನಡದ ಕಣ್ವ ಖ್ಯಾತಿಯ ಬಿ.ಎಂ.ಶ್ರೀ ಅವರ ಸಂಪಾದಕತ್ವದಲ್ಲಿ ಹೊರಬಂದ ಒಂದು ಕಾವ್ಯಗುಚ್ಛ (Anthology). ಆ ಸಂಕಲನದಲ್ಲಿ ನಾಡಿನ ಬೇರೆ ಬೇರೆ ಭಾಗಗಳನ್ನು ಪ್ರತಿನಿಧಿಸಿದ ಅಂದಿನ ಯುವಕವಿಗಳ ಕವನಗಳಿದ್ದವು. ಅದರಲ್ಲಿ ಅತಿ ಹೆಚ್ಚು ಸಂಖ್ಯೆಯ ಕವನಗಳು (ನಾಲ್ಕು) ದೇಸಾಯರವೇ ಆಗಿದ್ದವು. ಆ 'ತಳಿರು' ಸಂಕಲನವನ್ನು ತಾನು ವಿಮರ್ಶಿಸಿ ಬರೆಯಬೇಕಾದ ಸಂದರ್ಭವೊಂದನ್ನು ನೆನಪುಮಾಡಿಕೊಂಡ ಗೋಕಾಕರು, ಆ ಸಂಕಲನದ ಶ್ರೇಷ್ಠ ಕವಿತೆಗಳಲ್ಲಿ ಒಂದಾದ 'ದೀನಗಿಂತ ದೇವ ಬಡವ' ಕವನವನ್ನು ಮುಕ್ತ ಕಂಠದಿಂದ ಹೊಗಳಿದ್ದಾಗಿಯೂ ತಿಳಿಸಿದ್ದಾರೆ.

ದೇಸಾಯರ ಚೊಚ್ಚಲು ಸಂಕಲನದಲ್ಲಿ ೬೯ ಕವನಗಳಿದ್ದವು. ಹೂಗೊಂಚಲು, ಸಂಕಲನದಲ್ಲಿ ಒಟ್ಟಿಗೆ ೧೫೬ ಕವಿತೆಗಳಿದ್ದು, ಅವನ್ನು ಭಾವಗೀತಗಳು, ವಿಡಂಬನ ಮತ್ತು ವಿನೋದ, ಕಿರುನುಡಿಗಳು, ಕೃತಿ–ಕವನಗಳು ಎಂಬುದಾಗಿ ನಾಲ್ಕು ಭಾಗಗಳಲ್ಲಿ ಅವರು ವಿಂಗಡಿಸಿದ್ದಾರೆ. ಮೊದಲ ಸಂಕಲನವನ್ನು ತಮ್ಮ ತಂದೆ ದತ್ತಣ್ಣನವರಿಗೆ ಅರ್ಪಿಸಿದ ಈ ಕವಿ, ಈ ಎರಡನೆಯ ಸಂಕಲನವನ್ನು ತಮ್ಮ ಕಾವ್ಯಗುರು ಬಿ.ಎಂ.ಶ್ರೀಕಂಠಯ್ಯನವರ ಪುಣ್ಯಸ್ಮರಣೆಗಾಗಿ ಅರ್ಪಣ ಮಾಡಿದ್ದಾರೆ.

'ಹೂಗೊಂಚಲು' ಸಂಕಲನಕ್ಕೆ ತಾವೇ ಸುದೀರ್ಘ ಪ್ರಸ್ತಾವನೆಯೊಂದನ್ನು ಬರೆದಿರುವ ದೇಸಾಯರು ೫೦ರ ದಶಕದಲ್ಲಿ ಅನೇಕ ಆಂಗ್ಲಕವಿಗಳು ನವ್ಯಕಾವ್ಯ ಮಾರ್ಗವನ್ನು ಬಿಟ್ಟು, ಹಳೆಯದಾರಿಯನ್ನು ಹೊಸದಾಗಿ ಹಿಡಿದದ್ದು ಕಂಡುಬರುತ್ತದೆ ಎಂಬ ಬಹುಮುಖ್ಯಸಂಗತಿಯೊಂದರ ಕಡೆ ಓದುಗರ ಗಮನ ಸೆಳೆಯುತ್ತಾರೆ. ದೇಸಾಯಿ ಇಂಥ ಒಂದು ಪ್ರಸ್ತಾಪವನ್ನು ಮಾಡುತ್ತಿರುವುದರ ಹಿಂದೆ ಒಂದು ಘನವಾದ ಉದ್ದೇಶವಿದ್ದಂತಿದೆ. ೧೯೫೨ ರಲ್ಲಿ ಮುಂಬೈಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿ ಅಧ್ಯಕ್ಷತೆಯನ್ನು ವಹಿಸಿದ್ದ ಡಾ|| ವಿ.ಕೃ.ಗೋಕಾಕ ಅವರು ನೀಡಿದ ಒಂದು ಕರೆ ಕನ್ನಡ ಸಾಹಿತ್ಯ ಚರಿತ್ರೆಯ ಮುಖ್ಯ ಘಟನೆಗಳಲ್ಲಿ ಒಂದಾಗಿ ಉಳಿದಿದೆ. ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು – ಇದೇ ವಿನಾಯಕರ ಅಂದಿನ 'ಕರೆ'. ಅಲ್ಲಿಂದ ನಮ್ಮ ಕನ್ನಡ ಕವಿಗಳು ಹೆಚ್ಚು ಹೆಚ್ಚಾಗಿ ಪಾಶ್ಚಾತ್ಯ ಕವಿಗಳ ನವ್ಯಮಾರ್ಗದ ಕಡೆ ಗಮನ ಹರಿಸಿದ್ದರು. ಗೋಪಾಲಕೃಷ್ಣ ಅಡಿಗರು ನವ್ಯದ ನೂತನ ಚಂಡೆ–ಮದ್ದಳೆಯನ್ನು ಬಾರಿಸಿ, ಮುಂದೆ 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಅನ್ನಿಸಿಕೊಂಡರು. ಕ್ರಮೇಣ ರಾಮಚಂದ್ರಶರ್ಮ, ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಜಿ.ಎಚ್. ನಾಯಕ, ಸುಮತೀಂದ್ರ, ನಾಡಿಗ ಮುಂತಾದವರ ಮೇಲೆ ಅಡಿಗರ ನವ್ಯ ಪರಿಕಲ್ಪನೆಯ

ಪ್ರಭಾವ ಆಗಿದ್ದುದನ್ನು ಕಾಣುತ್ತೇವೆ. ಅಂದರೆ, 'ನಾವು ಪಶ್ಚಿಮದ ಕವಿಗಳ ಪ್ರಭಾವಕ್ಕೆ ಹೆಚ್ಚು ಹೆಚ್ಚು ಒಳಗಾಗುತ್ತಿದ್ದ ಸಂದರ್ಭದಲ್ಲಿ ಅವರು ಪುನಃ ಹಳೆಯ ದಾರಿಯನ್ನು ಹೊಸದಾಗಿ ಹಿಡಿದಿದ್ದರು' ಎಂಬ – ತಾವು ಕಂಡುಕೊಂಡ ಸತ್ಯವೊಂದರ ಕಡಗೆ ದಿನಕರ ದೇಸಾಯಿ ಈ ಸಂಕಲನದ 'ಪ್ರಸ್ತಾವನೆ'ಯಲ್ಲಿ ಕನ್ನಡ ಸಾಹಿತ್ಯಕ್ಷೇತ್ರದ ವಿದ್ವತ್‌ವಲಯದ ಗಮನ ಸೆಳೆಯಲು ಪರೋಕ್ಷವಾಗಿ ಪ್ರಯತ್ನಿಸಿದ್ದರು ಅಂದುಕೊಳ್ಳಬಹುದಾಗಿದೆ.

ತಮ್ಮ ಕವನಗಳ ಬಗ್ಗೆ ಅವರು ಬರೆಯುತ್ತ ('ಹೂಗೊಂಚಲು' ಪ್ರಸ್ತಾವನೆ) 'ಇವುಗಳಲ್ಲಿ ಆಧುನಿಕತೆ ಮತ್ತು ಪ್ರಗತಿಶೀಲತೆ ಇವು ಇವೆಯೆಂದು ನನ್ನ ಎಣಿಕೆ' ಅಂದಿದ್ದಾರೆ. ಇದೊಂದು ಮುಖ್ಯವಾದ ಮಾತೆಂದು ನಾನು ಭಾವಿಸಿದ್ದೇನೆ. ೧೯೪೦ರ ದಶಕವನ್ನು – ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಾವು ಪ್ರಗತಿಶೀಲರ ಕಾಲವೆಂದೇ ಗುರುತಿಸುತ್ತೇವೆ. ದಿನಕರ ದೇಸಾಯರ ಆರಂಭದ ಅನೇಕ ಪ್ರಗತಿಪರ ಕವನಗಳು ಹುಟ್ಟಿದ ಕಾಲಾವಧಿ ಕೂಡ ಇದೇ ಆಗಿದೆ. ಅ.ನ.ಕೃ., ಕಟ್ಟೀಮನಿ, ನಿರಂಜನ, ದಿನಕರ ದೇಸಾಯಿ – ಇವರೆಲ್ಲ 'ಪ್ರಗತಿಶೀಲ' ಕಾಲಾವಧಿಯ ಮುಖ್ಯ ಬರಹಗಾರರೆಂದೇ ನಮ್ಮ ಸಾಹಿತ್ಯ ಚರಿತ್ರೆ ಪರಿಗಣಿಸುತ್ತದೆ.

'ದಾಸಾಳ' ೧೯೪೩ರಲ್ಲಿ ಬಂದ ಸಂಕಲನ. ಇದರಲ್ಲಿ ೬೦ ಕವನಗಳಿವೆ. ಈ ಸಂಕಲನಕ್ಕೆ 'ಚಿರಸ್ಮರಣೆ' ಎಂಬ ಶೀರ್ಷಿಕೆಯಡಿ ಮುನ್ನುಡಿಯ ಮಾತುಗಳನ್ನು ಬರೆದಿರುವ ಚೆನ್ನವೀರ ಕಣವಿಯವರು, ಮೊದಲ ಸಂಕಲನದಲ್ಲಿ ಗೋಕಾಕರು, 'ಕನ್ನಡಕ್ಕೆ ಇಂದಿಗೂ ಒಬ್ಬನೇ ದಿನಕರನೆಂದು ಹೇಳದೆ ಗತಿಯಿಲ್ಲ, ಅವರಂತೆ ಇನ್ನಾರೂ ಹಾಡಿಯೇ ಇಲ್ಲ' ಎಂದ ಮಾತನ್ನು ನೆನಪು ಮಾಡಿಕೊಳ್ಳುತ್ತ, 'ಈ ಮಾತು ಇಂದಿನ ಸಂದರ್ಭದಲ್ಲಿಯೂ ನನಗೆ ನಿಜವೆಂದು ತೋರುತ್ತದೆ. ಮಕ್ಕಳಿಂದ ಮುದುಕರವರೆಗೂ ಮೆಚ್ಚುಗೆ ಪಡೆಯಬಲ್ಲ, ಬಹುಶಃ ಅಂದು–ಇಂದೆನ್ನದೆ ಎಂದೆಂದಿಗೂ ಸಲ್ಲುವ ಸಮಾಜವಾದಿ ಕವಿ ಶ್ರೀ ದಿನಕರ ದೇಸಾಯಿಯವರು ಕನ್ನಡಕ್ಕೆ ಸಲ್ಲಿಸಿದ ಕಾಣಿಕೆ ಅನನ್ಯವಾದದ್ದು' ಅಂದಿದ್ದಾರೆ. ಎಲ್ಲರೂ ಮಲ್ಲಿಗೆಯನ್ನು ಹೊಗಳುತ್ತಿರುವಾಗ ದೇಸಾಯರು ಸಾಮಾನ್ಯ ಜನರಂತಿರುವ ದಾಸಾಳ ತನ್ನ ಕಾವ್ಯಸ್ಫೂರ್ತಿ ಅಂದಿರುವುದರ ಹಿಂದೆ ಅವರ ಒಟ್ಟೂ ಕಾವ್ಯಜೀವನದ ರೀತಿ–ನೀತಿಗಳೇ ಅಡಗಿವೆ ಎಂಬುದನ್ನೂ ಗುರುತಿಸುತ್ತಾರೆ.

ದಿನಕರ ದೇಸಾಯರ '೫೨ ಮಕ್ಕಳ ಕವನಗಳು' ಈ ಸಮಗ್ರ ಸಂಪುಟದಲ್ಲಿ ಸೇರಿವೆ. ೧೯೫೧ರಲ್ಲಿ ಪ್ರಕಟವಾಗಿದ್ದ 'ಮಕ್ಕಳ ಗೀತಗಳು' ಸಂಕಲನ ಅಂದಿನ ಮುಂಬೈ ಸರಕಾರದ ಬಹುಮಾನ ಪಡೆದಿತ್ತು. ಅದಕ್ಕಿಂತ ಒಂದು ವರ್ಷ ಮೊದಲು ಪ್ರಕಟವಾದ ಅವರ 'ಕವನ ಸಂಗ್ರಹ'ಕ್ಕೂ ಬಹುಮಾನ ಬಂದಿತ್ತು. ಅವರು ಮಕ್ಕಳ ಗೀತವೆಂದು

ಪ್ರತ್ಯೇಕವಾಗಿ ಗುರುತಿಸದೇ ಇರುವ ಗಡಿಯಾರ, ಅಂಚೆಯವನು ಮುಂತಾದ ಕೆಲವು ಕವನಗಳೂ ಕೂಡ ೫೦ರ ದಶಕದಲ್ಲೇ ಮಕ್ಕಳ ಪಠ್ಯಪುಸ್ತಕದಲ್ಲಿ ಸ್ಥಾನಪಡೆದು ಮನೆಮಾತಾಗಿರುವುದನ್ನು ನೆನಪು ಮಾಡಿಕೊಳ್ಳಬಹುದು. ಅವರ ಕವಿತೆಗಳ ಬಗ್ಗೆ ಗೋಕಾಕರು ಬರೆದಿರುವ ಇನ್ನೊಂದು ಮಾತು ಇಲ್ಲಿ ನೆನಪಾಗುತ್ತಿದೆ. 'ಅವರ ಕಾವ್ಯದ ವಿವಿಧ ಲಹರಿಗಳಲ್ಲಿ ಅನನ್ಯತಮವಾದ ಒಂದು ಲಹರಿ ಎಂದರೆ ಶಿಶುಗೀತೆಗಳಂತೆ ಕಾಣುವ ಪ್ರಕಾರ. ಆದರೆ ಅವು ಶಿಶುಗೀತೆಗಳಲ್ಲ, ಶಿಶುಗೀತೆಗಳಂತೆ ಸಹಜವಾಗಿ ರೂಪವನ್ನು ಪಡೆದ ಸುಂದರ ಕವಿತೆಗಳು. ಈ ಕವಿತೆಗಳಲ್ಲಿ ಒಂದು ನೀತಿಪಾಠವನ್ನು ಕವಿ ಕಲಿಸುತ್ತಿರುವಂತೆ ಭಾಸವಾಗುತ್ತದೆ. ಆದರೆ ಅದು ಬರಿ ನೀತಿ ಪಾಠವಲ್ಲ, ಹೃದಯದಲ್ಲಿ ನೇರವಾಗಿ ಉಗಮಿಸಿ ಹೃದಯವನ್ನು ಮುಟ್ಟುವ ರತ್ನಪಾಠ.' – ಈ ತಮ್ಮ ಅಭಿಪ್ರಾಯದೊಂದಿಗೆ ಗೋಕಾಕರು ದೇಸಾಯರ ಚೊಚ್ಚಲ ಸಂಕಲನದಲ್ಲಿದ್ದ ವಿಮಾನ, ಉಗಿಬಂಡಿ, ಕೌದಿ, ಕಾಲಿನ ಜೋಡು, ಕಸಗುಡಿಸುವ ಪಂಚಮರು, ಭಿಕ್ಷುಕರು, ಅಂಚೆಯವನು, ಗಡಿಯಾರ, ಸಾಬೂನು ಕವನಗಳನ್ನು ಉದಾಹರಿಸಿದ್ದನ್ನು ನೆನೆಯಬಹುದಾಗಿದೆ. ಇವು ಏಕಕಾಲಕ್ಕೆ ಮಕ್ಕಳಿಗೂ, ವಯಸ್ಕರಿಗೂ ಮುದನೀಡುವಂಥ – ಯೋಚಿಸಲು ಹಚ್ಚುವಂಥ ಕವಿತೆಗಳು. ಆದರೆ ಮಕ್ಕಳಿಗೆಂದೇ ಪ್ರಕಟಿಸಿದ ಹೊತ್ತಿಗೆಯಲ್ಲಿ ಬಂದಿರುವ ಬೆಕ್ಕೇ ಬೆಕ್ಕೇ, ಕುಮಟೆಯ ತೇರು, ತಿಪ್ಪಾಭಟ್ಟರು, ಅಡಿಗೆ ಭಟ್ಟ, ಕೀಟಲೆ ಹುಡುಗ, ಸೋಮಾರಿ ಮಲ್ಲ – ಇವೆಲ್ಲ ವಿನೋದಪರ ಗುಣಗಳನ್ನೊಳಗೊಂಡ – ಮಕ್ಕಳೇ ಸ್ವತಂತ್ರವಾಗಿ ಓದಿ ಆನಂದಿಸಬಲ್ಲ ಕವಿತೆಗಳಾಗಿವೆ.

******

ದಿನಕರ ದೇಸಾಯರ ಕವನಗಳಲ್ಲಿ ಕಂಡು ಬರುವ ವರ್ತಮಾನದ ಎಚ್ಚರ ಯಾರನ್ನಾದರೂ ಬೆರಗುಗೊಳಿಸುವಂತಿದೆ. ನಲ್ವತ್ತರ ದಶಕದಲ್ಲಿ ಬರೆದ 'ತರುಣರ ದಸರೆ' ಎಂಬ ಕವನ ಈ ಅಭಿಪ್ರಾಯಕ್ಕೊಂದು ನಿಚ್ಚಳ ನಿದರ್ಶನ. ಕವಿ ಅಲ್ಲಿ ಸೀಮೋಲಂಘನ ಮಾಡಿರಿ ಎಂದು ತರುಣರಿಗೆ ಕರೆ ಕೊಡುತ್ತಾನೆ. ಭೀತಿಯ ಸೀಮೆಯನ್ನು ದಾಟಬೇಕು ಅನ್ನುತ್ತಾನೆ. ಧೈರ್ಯಧ್ವಜವನ್ನು ಹಾರಿಸಲು ಹುಮ್ಮಸ್ಸು ತುಂಬುತ್ತಾನೆ. ಹಾಗೆ ಹೇಳುವಾಗ, ನೀತಿಯ ದಾರಿಯ ಬಗ್ಗೂ ಎಚ್ಚರಿಸುತ್ತಾನೆ. ಅದೇ ಪದ್ಯದಲ್ಲಿ ಬರುವ ಈ ನುಡಿಯನ್ನೂ ನೋಡಿ :

ಧರ್ಮದ ಗಡಿಯನು ದಾಟಲುಬೇಡಿ
ಕರ್ಮದ ಬೆವರಲಿ ಸ್ನಾನವ ಮಾಡಿ
ಮರ್ಮವ ತಿಳಿದೆಲ್ಲರೂ ಹಾರಾಡಿ
ಚರ್ಮದ ದೇಹದ ಸಾರ್ಥಕ ಮಾಡಿ

ಸಾಮಾನ್ಯ ಕಣ್ಣಿಗೆ ಒಂದು ಉಪದೇಶಾತ್ಮಕ ನುಡಿಯಂತೆ ಕಂಡರೂ ಕೂಡ ಅದು ಅಷ್ಟೇ ಅಲ್ಲ, ವರ್ತಮಾನದ ಎಚ್ಚರವೂ ಅದರಲ್ಲಿ ಅಡಕವಾಗಿದೆ. 'ಕಾಲಿನ ಜೋಡು' ಅನ್ನುವ ಒಂದು ಸರಳ ಕವನದಲ್ಲಿ ಅವರು ಮಾನವತೆಯ ಮಾರ್ಯಾದೆ ಹೆಚ್ಚಿಸುವಂಥ ದೃಷ್ಟಿಯೊಂದನ್ನು ಇಟ್ಟಿದ್ದಾರೆ :

ಬಲಗಾಲಿನ ಅಂಗುಷ್ಟವು ಹರಿಯೆ,
ಎಡಗಾಲ್ ಕೆರವೇ, ಮುಂದಕೆ ಸರಿಯೆ;
ಒಬ್ಬನ ಸಂಕಟವಿಬ್ಬರು ಅರಿಯೆ
ಮೇಲ್ಮೆಯು ಧರೆಯೊಳಗೆ

ಒಂದು ಕಾಲಿನ ಅಂಗುಷ್ಟ ಹರಿದರೆ, ಆ ಕಾಲು ಮಾತ್ರವಲ್ಲ, ಇನ್ನೊಂದು ಕಾಲೂ ನಿರಾತಂಕದಿಂದ ಮುಂದೆ ಹೆಜ್ಜೆ ಇಡದು. ಮನುಷ್ಯ ಇನ್ನೊಬ್ಬರ ಸಂಕಟಕ್ಕೆ ಒದಗಬೇಕಾದ ಪರಿಗೆ ಇದಕ್ಕಿಂತ ಸೂಕ್ಷ್ಮವಾದ ಉದಾಹರಣೆ ನೀಡುವುದು ಕಷ್ಟ.

ನಿರುದ್ಯೋಗದ ಕುರಿತು ಬರೆಯುತ್ತ ಇದೊಂದು ನವಶತಮಾನದ 'ಪ್ರಗತಿ ಎಂಬ ರೋಗ' ಎಂದು ಕುಟುಕುತ್ತಾರೆ. 'ಜೇನ್ನೊಣಕಿದ್ದರೂ ಸತತೋದ್ಯೋಗವು, ನಮಗೆ ನಿರುದ್ಯೋಗ' ಎಂದು ವ್ಯಂಗ್ಯವಾಡಿದ್ದಾರೆ. ಈ ಕವಿಯ ಅಭಿಪ್ರಾಯದಲ್ಲಿ ದುಡಿಯುವ ಹಕ್ಕನು ಪಡೆಯುವವರೆಗೂ ಬೆಳಕಿದ್ದರೂ ತಿಮಿರ !. ಸಮಾನತೆಯ ಕುರಿತಾದ ಅವರ ಎಚ್ಚರವಂತೂ ಅನ್ಯಾದೃಶವಾದುದು. ಹುಣ್ಣಿಮೆಯ ಚಂದಿರ ಅನ್ನುವ ಒಂದು ಪುಟ್ಟ ಪದ್ಯದಲ್ಲಿ ಹೀಗೆನ್ನುತ್ತಾರೆ :

ಹೊಲೆಯನಿಗೂ ಮುತ್ತಿಡುವ
ಹುಣ್ಣಿಮೆಯ ಚಂದಿರನು
ಮಾದಿಗರ ಬೀದಿಯಲಿ
ನಕ್ಕು ನಲಿದಾಡುವನು.

ಶಶಿಗೆ ನಾಚಿಕೆಯಿಲ್ಲ
ಅನ್ನುವವರೂ ಉಂಟು
ಜಗದ ಪರಿಯೇ ಹೀಗೆ,
ನಿಂದೆಗಳು ನೂರೆಂಟು

ಗಾಂಧಿ ಪುತ್ಥಳಿಯ ಬಗ್ಗೆ ಪ್ರತಿಕ್ರಿಯಿಸುತ್ತ 'ನಿನ್ನ ಪ್ರತಿಮೆಯ ನಿಲಿಸಿ । ನಾವು ಮರೆವುದು ವ್ಯರ್ಥ । ನಮ್ಮ ಹೃದಯದೊಳಿರಲಿ । ನಿನ್ನ ಮರಣದ ಅರ್ಥ' ಅಂದಿರುವುದರಲ್ಲಿ– ಸಾರ್ವಜನಿಕ ಬದುಕಿನಲಿ ಇರುವ ಪ್ರತಿಯೊಬ್ಬನೂ ತನಗೆ ತಾನೇ ಪ್ರಶ್ನಿಸಿಕೊಳ್ಳಬೇಕಾದ ವಿವೇಕದ ಮಾತಿದೆ. ತಾಯಿಯ ಕುರಿತು ಈ ಕವಿ ಬಳಿಸಿದ ಈ ಕೆಳಗಿನ ಸಾಲುಗಳಂತೂ ಶತಶತಮಾನಗಳ ಸತ್ಯ :

ತಾಯಿಯು ದೇವರಿಗಿಂತಲೂ ಮೇಲು
ದೇವರ ಮೊಲೆಯಲಿ ದೊರೆವುದೇ ಹಾಲು ?
. . . .
ಯಾವಳ ಹಿಡಿಯಲಿ ತೊಟ್ಟಿಲ ದಾರ
ಆಕೆಯ ಉಡಿಯಲಿ ಜಗದೋದ್ಧಾರ.

******

ದಿನಕರ ದೇಸಾಯರ ಕಾವ್ಯದ ಇನ್ನೊಂದು ಲಕ್ಷಣ ಚುರುಕು ಮುಟ್ಟಿಸುವ ವಿಡಂಬನೆ ಮತ್ತು ವಿನೋದ ಗುಣ. ಈ ವಿಡಂಬನೆ ಮತ್ತು ವಿನೋದಗಳ ತೀವ್ರತೆಯಿಂದಾಗಿಯೇ ಅವರ ಚೌಪದಿಗಳು ಇಂದು ನಾಡಿನ ತುಂಬಾ ಹೆಸರು ಮಾಡಿರುವುದು. ಚೌಪದಿಯ ಪ್ರಕಾರಕ್ಕೆ ಹೊರಳಿಕೊಳ್ಳುವುದಕ್ಕಿಂತ ಮುಂಚೆಯೂ, ಅನಂತರವೂ ಕೂಡ ಇವರ ಅನೇಕ ಕವನಗಳಲ್ಲಿ ಮಿಂಚಿನಂಥ ವಿಡಂಬನೆ (Sharp Satire) ಕಾಣಬಹುದಾಗಿದೆ. ಇವರ 'ದಾಸಾಳ' ಸಂಕಲನದ, 'ಸ್ವರ್ಗದ ಗೆಳೆಯನಿಗೆ ಬರೆದ ಪತ್ರ' ಎಂಬ ಸುದೀರ್ಘ ಕವನದ ಉದ್ದಕ್ಕೂ ಅಂಥ ನೇರವೂ, ಹರಿತವೂ ಆದ ವಿಡಂಬನೆ ನಿರಾತಂಕವಾಗಿ ಹರಿದದ್ದನ್ನು ಕಾಣಬಹುದು.

ಅಲ್ಲಿಯೂ ಉಂಟೇನು ಪಾರ್ಲಿಮೆಂಟಿನ ರಗಳೆ
ಐದು ವರುಷಕ್ಕೊಮ್ಮೆ ಕೊಡುವ ಓಟು ?
ಹುರಿಯಾಳುಗಳು ಬಂದು ಬಡಜನರ ಹಿತಕಾಗಿ
ಇಟ್ಟು ಹೋಗುವರೇನು ಕೈಲಿ ನೋಟು ?

ಹೂಗೊಂಚಲು ಸಂಕಲನದಲ್ಲಿ ಬರುವ ಮಂತ್ರಿಯ ನಿಧನ ದೇಸಾಯರ ವಿನೋದ ಮತ್ತು ವಿಡಂಬನ ಪ್ರವೃತ್ತಿಗೆ ಇನ್ನೊಂದು ಸೂಕ್ತ ಉದಾಹರಣೆಯಾಗ ಬಹುದಾಗಿದೆ. ನಿಧನಾನಂತರದ ಮಂತ್ರಿಯ ಗುಣಗಾನಕ್ಕೆ ಶುರು ಹಚ್ಚಿಕೊಂಡ ಕವಿ ಕೊನೆಗೆ ಚುಚ್ಚುವುದು ಹೀಗೆ :

ಕಂಬನಿಯ ಬಿಡಬೇಡ; ಹೋದವರು ಬರಲಿಹರೆ ?
ಈ ರೀತಿ ಅಳಬೇಡ, ಹುಚ್ಚಿ ನೀನು;
ಇಂದು ಸಂಜೆಗೆ ಊರ ಜನರೆಲ್ಲರೂ ಸೇರಿ
ಸಭೆಯೊಳಗೆ ಅಳಬೇಕು, ತಿಳಿಯಿತೇನು ?

ಹಾಗೆಯೇ, ಡಾಂಭಿಕ ಭಕ್ತರ ಮೇಲೆ ಬಿಟ್ಟ ಬಾಣವೊಂದು ಇಂತಿದೆ :

ಎಲ್ಲಿ ಹೋಗಲಿ ನಾನು ? ಬೇಡ, ದೇವರ ಗುಡಿಗೆ
ಲಂಚ ಕೊಡುವವರೆಲ್ಲ ಭಕ್ತರಂತೆ !
ಧನ–ಕನಕಗಳ ನೀಡಿ, ಹರಿಯ ಹರಕೆಯ ಬೇಡಿ
ಪುಣ್ಯ ಗಳಿಸಿದರೇನೇ ಮುಕ್ತರಂತೆ !

ದಿನಕರ ದೇಸಾಯಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶೋಷಿತರ ಪರ ದನಿಯೆತ್ತಿದ ಕವಿಯೆಂದೇ ಗುರುತಿಸಲ್ಪಡುತ್ತಾರೆ. ಇವರ ಕವನಗಳಲ್ಲಿ ದಲಿತಪರ ಮತ್ತು ಬಂಡಾಯ ಮನೋಧರ್ಮದ ರಚನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಿರುವುದೇ ಅಂಥ ಒಂದು ಅಭಿಪ್ರಾಯ ಹೆಪ್ಪುಗಟ್ಟಿ ನಿಲ್ಲುವುದಕ್ಕೆ ಕಾರಣವಾಗಿರಲೂಬಹುದು.

೪೦ರ ದಶಕದಲ್ಲಿ ಬರೆದ 'ಬಡತನ' ಎಂಬ ಒಂದು ಕವನವನ್ನು ಮೊದಲಿಗೆ ಈ ಕಾರಣಕ್ಕಾಗಿ ನೋಡಬಹುದು :

ಬಡತನದ ಬೇಗೆಯಲಿ ಬೆಂದ ಭಿಕ್ಷುಕನೊಬ್ಬ
ಮಸಣದಲಿ ಮಲಗಿದ್ದ ಹೆಣಕೆ ಅಂದ :
ಬಡತನದ ಭಾರವನು ಸ್ವಲ್ಪ ಹಿಡಿ, ಎದ್ದೇಳು,
ಬದುಕಿಸೆನ್ನನು ತಲೆಯ ಭಾರದಿಂದ

. . . .

ಬಡತನದ ಬಾಳ್ವೆಗಿಂತಲೂ ಮರಣ ಲೇಸೆಂದು
ಒಪ್ಪಿಕೊಳ್ಳುವ ತೆರದಿ ಬಿದ್ದ ಹೆಣವು,
ಮರುಮಾತನಾಡದೆಯೆ ಮೌನದಲಿ ಮಲಗಿತ್ತು
ಇಂತಿಹುದು ಬಡತನದ ಕೆಟ್ಟ ಋಣವು !

ವಿಧವೆಯರ ಕಣ್ಣೀರನ್ನು ಒರೆಸಿದ, 'ಸತಿ'ಪದ್ಧತಿಗೆ ತಿಲಾಂಜಲಿ ನೀಡುವಂತೆ ಕರೆಕೊಟ್ಟು ಭಾರತೀಯರ ಕಣ್ಣು ತೆರೆಸಿದ ಹಿರಿಯ ಚೇತನ ರಾಜಾರಾಮ ಮೋಹನರಾಯ್ ಅವರನ್ನು ಈ ಕವಿ ತುಂಬ ಗೌರವದಿಂದ ನೆನೆಯುತ್ತಾರೆ :

ವಿಧವೆಯರ ಕಣ್ಣೀರ ತಡೆದ ಕರಣಾಳು ನೀ,
ಮುಗುದೆಯರ ಮುಗುಳುನಗೆ ನಿನ್ನ ಫಲವು
'ಸತಿ'ಯೆಂಬ ಗತಿಗೆಟ್ಟ ಪಾಪಹತ್ಯವ ನಿಲಿಸೆ,
ಮೂಕ ಅಬಲೆಗೆ ಬಂತು ಧರ್ಮಬಲವು – ಅನ್ನುತ್ತಾರೆ ಮತ್ತು ನೀನು ಹಚ್ಚಿದ ಅಂದಿನ ನಂದಾದೀಪ ಇಂದಿಗೂ ಆಕಾಶದಲ್ಲಿ ತಾರೆಯಾಗಿ ತೇಲುತಿದೆ ಎಂದೂ ಉದ್ಗರಿಸುತ್ತಾರೆ.

'ಕಸ ಗುಡಿಸುವ ಪಂಚಮರು' ಈ ದಾರಿಯಲ್ಲಿ ಒಂದು ಉತ್ತಮ ಕವನವಾಗಿದೆ.

ತಲೆಯ ಮೇಲೆ ಕಸಗುಡಿಸಿದ ಗಂಟು
ಕಂಕುಳಲ್ಲಿ ಕಸಬರಿಗೆಯು ಉಂಟು
ಸಕಲ ಲೋಕವನು ಗುಡಿಸಿದ ಪುಣ್ಯ
ಮೈಯ ಬೆವರಿನಲಿ ಸುರಿಯುವುದುಂಟು.

– ಇದು ದೇಸಾಯರು ನೀಡುವ ಒಂದು ಚಿತ್ರಣ. ಒಂದು ದಿನ ಈ ಜನ ಮುನಿಸಿಕೊಂಡು ಸುಮ್ಮನೆ ಮಲಗಿದರೂ ಸಾಕು, ಹಾದಿ ಬೀದಿಗಳೆಲ್ಲ ಕೆಟ್ಟು ನಾರುತ್ತವೆ. ರೋಗಜಂತುಗಳು ಹುಟ್ಟುವ ಮೊದಲೇ ನೆಲಚೊಕ್ಕ ಮಾಡುವ ಕಾಯಕ ಇವರದು. ಕವಿಯ ಮಾತಿನಲ್ಲೇ ಹೇಳುವುದಾದರೆ 'ನಿತ್ಯಕರ್ಮದಲಿ ನರಕವ ಗುಡಿಸಿ, ಭೂಮಿಗೆ ಸ್ವರ್ಗವನಿಳಿಸುವ' ಜಾತಿಯದು. ಈ ಕ್ಷಣಕ್ಕೆ ನೆನಪಾಗುವ 'ಹರಿಜನರು' ಕವಿತೆಯ ಬಗ್ಗೂ ಒಂದು ಮಾತು ಹೇಳಬೇಕು. ಉತ್ತರ ಕನ್ನಡ ಜಿಲ್ಲೆಗೇ ಸೀಮಿತವಾದ ದಲಿತವರ್ಗ ಅದು:

ಆಗೇರ ಸೋಮೂ
ಮುಕ್ರೀ ಓಮೂ
ಹಳ್ಳೆರ ಖೇಮೂ ಹರಿಜನರೊ
ಹಗಲು ಇರುಳೂ
ಬೆಳಗೂ ಬೈಗೂ
ದುಡಿದೂ ಹೊಟ್ಟೆಗೆ ಸಿಗದವರೊ

ಕವಿ ಚಿತ್ರಿಸಿದ ಈ ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ವಿವರಣೆ ಬೇಕಾಗಿಲ್ಲ. ಬಿಸಿಲಲ್ಲಿ ಬೆಂದೂ, ಬೆವರಲ್ಲಿ ಮಿಂದೂ ಅರ್ಧಹೊಟ್ಟೆಯಲ್ಲಿ ಬಾಳನ್ನು ಸವೆಸುವ ವರ್ಗ ಅದು. ಸಾಲ ಬೆನ್ನುಬಿಡದ ಹಣೆಬರಹ ಎಂದು ಭಾವಿಸಿದವರು. ಕೂಲಿ ಇಲ್ಲದ ದಿನ ಉಪವಾಸ. ಶಿಕ್ಷಣವಂಚಿತ ಮಕ್ಕಳು, ಕೊನೆಯಲ್ಲಿ ಇವರ ಬದುಕನ್ನು ಕವಿ ಚಿತ್ರಿಸುವುದು ಹೀಗೆ :

ಹರನೂ ನೋಡಾ !
ಹರಿಗೂ ಬೇಡಾ !
ಹೆಸರಿಗೆ ಮಾತ್ರ 'ಹರಿಜನ'ರೋ !

–ಇವೆಲ್ಲ ಕಲ್ಪಿಸಿಕೊಂಡ ಚಿತ್ರಣಗಳಲ್ಲ, ಅಂಥ ದುಸ್ತರ ಬದುಕನ್ನು ಕಣ್ಣಾರೆ ಕಂಡವರು ಈ ಕವಿ. ಕೇವಲ ಶೋಷಿತ ಬದುಕನ್ನು ಚಿತ್ರಿಸುವ ಮೂಲಕ ಅಷ್ಟರಮಟ್ಟಿಗೆ ಕಾವ್ಯಸಾಫಲ್ಯದ ಸುಖ ಅನುಭವಿಸಿ ತೃಪ್ತಿಪಡುವ ಜಾಯಮಾನ ದೇಸಾಯರದಲ್ಲ ಅನ್ನುವುದಕ್ಕೆ ಬಂಡಾಯಪರವಾದ ಅವರ ಅನೇಕ ಕವನಗಳನ್ನೂ ಕೂಡ ನೋಡಬಹುದಾಗಿದೆ. ದೀನಗಿಂತ ದೇವ ಬಡವ, ವೀರ ಒಕ್ಕಲಿಗರು, ಕೆಂಪು ಬಾವುಟ, ಉತ್ತರ ಕನ್ನಡದ ಕಚ್ಚೆ, ಚೀನಾದ ಕ್ರಾಂತಿ, ದೇವ ನೀನು ಸತ್ತರೇನು ? ಕಲ್ಲು ಕುಟಿಗರು, ಆತ್ಮವಿಶ್ವಾಸ, ಬಿರುಗಾಳಿ – ಇವೆಲ್ಲ ಈ ಮಾದರಿಯ ಕವನಗಳು.

ದೀನಗೊಂದು ಗೂಡು ಸಾಕು
ದೇವಗೊಂದು ವಿಶ್ವಬೇಕು
ಮಣ್ಣಹುಲ್ಲ ಸಣ್ಣಗೂಡು
ಬಡವಗದುವೇ ಸಿರಿಯಬೀಡು
ಹರಿಗೆ ಎಂದು ಗುಡಿಯನೊಂದ ಕಟ್ಟುತಿರುವೆಯಾ ?
ದೀನಗಿಂತ ದೇವ ಬಡವನೆಂದು ಬಗೆದೆಯಾ ?

– ಹೀಗೆ ಪ್ರಶ್ನಿಸುವ ಕವಿ,

ಹುಚ್ಚ ನೀನು ಹಳ್ಳಿಗೋಡು
ದೀನ ಜನರ ಪಾಡನೋಡು

–ಎಂದೂ ಕರೆ ಕೊಡುತ್ತಾನೆ. ತುಂಬಾ ದೊಡ್ಡ ದೇಶ ಭಾರತ. ಇಲ್ಲಿಯ ಬಹುಸಂಖ್ಯಾತರ ಬಡತನದ ಪರಿಣಾಮ ಎಷ್ಟು ಗಂಭೀರ ಸ್ವರೂಪದ್ದು ಎಂಬ ಎಚ್ಚರ ಈ ಕವಿಗಿದೆ. ಅದಕ್ಕೆಂದೇ, 'ಭಾರತಭೂಮಿಯ ಬಡತನವು ವಿಶ್ವಕುಟುಂಬದ ಜಡತನವು !' ಎಂದೆಚ್ಚರಿಸಿದ್ದಾರೆ – 'ಭಾರತ ಭೂಮಿತ ಬಡತನ', ಎಂಬ ತಮ್ಮೊಂದು ಕವನದಲ್ಲಿ.

ಬಾರ್ಡೋಲಿ ಸತ್ಯಾಗ್ರಹ ಸಮರದಲ್ಲಿ ಕಂದಾಯ ಕೊಡದೆ, ಬೆಳೆಯನ್ನು ಸುಟ್ಟು–ಬ್ರಿಟಿಷರ ಆಡಳಿತದಲ್ಲಿದ್ದ ಗುಜರಾತನ್ನು ತೊರೆದು ಬಡೋದಾ ಸಂಸ್ಥಾನವನ್ನು ಸೇರಿದ (೧೯೩೧ರಲ್ಲಿ) ಬಾರ್ಡೋಲಿಯ ವೀರ ವಕ್ಕಲಿಗರು ಉತ್ತರ ಕನ್ನಡದ ಅಂಕೋಲೆ ಮತ್ತು ಸಿದ್ದಾಪುರ ಮುಂತಾದ ತಾಲೂಕುಗಳ ರೈತರಿಗೂ ಅದೇ ಬ್ರಿಟಿಷರ ವಿರುದ್ಧ ಕರನಿರಾಕರಣೆ ಹೋರಾಟ ನಡೆಸಲು ಪ್ರೇರಣೆ ನೀಡಿದ್ದು ಈಗ ಇತಿಹಾಸ. ಆ ಸಂದರ್ಭದಲ್ಲಿ ದಿನಕರ ದೇಸಾಯರು ಬರೆದ ವೀರ ಒಕ್ಕಲಿಗರು ಕವಿತೆ ನಿಜವಾದ ಅರ್ಥದಲ್ಲಿ ಬಂಡಾಯ ಗೀತೆಯೇ ಆಗಿದೆ.

ಹಾಳಾಗಲಿ ಮನೆ ಮಠ ಹೊಲವೆಲ್ಲಾ !
ಹಾಳಾಗಲಿ ಈ ಜೋಳವು ಬೆಲ್ಲಾ !
ದಾಸ್ಯದಿ ಬೆಳೆದಾ ಬೆಳೆ ನಮದಲ್ಲಾ !
ಸ್ವರಾಜ್ಯತಾಯೀ ಭಾರತ ಭೂ !
. . . .
ಗಾಂಧಿ ಮಹಾತ್ಮನ ಭಕ್ತರು ನಾವು
ಚದುರಿಸದೆಮ್ಮನು ಲಾಠಿಯ ನೋವು
ನುಂಗದು ದಬ್ಬಾಳಿಕೆಯ ಹಾವು
ಸ್ವರಾಜ್ಯ ತಾಯಿ ಭಾರತ ಭೂ !

'ಹಸಿವೆಯಿಂದ ಕೆಂಗೆಟ್ಟ ನರನ ಮನಸ್ಸೇ ಕ್ರಾಂತಿಯ ಬೀಜಕ್ಕೆ ಭೂಮಿ' ಎಂಬುದು ಈ ಕವಿಯ ನಂಬಿಕೆ. ಅವರು ಸಂಘಟಿಸಿದ ರೈತ ಜನಾಂದೋಲನವಾಗಲಿ,

ಸಮುದ್ರ ಕಾರ್ಮಿಕರ ಅಂದೋಲನವಾಗಲಿ ಈ ನಂಬಿಕೆಯ ಹಿನ್ನಲೆಯಲ್ಲಿ ಮೂರ್ತರೂಪ ಪಡೆದದ್ದು. ಮನುಜ ಮಾನವನಾಗಿ ಬದುಕುವುದೇ ನಿರ್ಧಾರ ಅನ್ನುತ್ತಾ, ಅದಕ್ಕಾಗಿಯೇ ಕ್ರಾಂತಿ, ಅಂಥ ಒಂದು ಸಿದ್ಧಾಂತ ಸಿದ್ಧಿಯಲ್ಲೇ ನರನ ಶಾಂತಿ ಎಂದು ನಂಬಿದವರು.

ಮೂಡಣ ಪಡುವಣ ಬಡಗಣ ತೆಂಕಣ
ಐದು ಖಂಡಗಳ ಶ್ರಮಜೀವಿಯ ಗಣ
ಎತ್ತಿಹಿಡಿದ ಧ್ವಜ ವಿಶ್ವದ ತೋರಣ

'ಕೆಂಪು ಬಾವುಟ' 'ಯಾವುದೇ ಪಕ್ಷದ ಚಿಹ್ನೆಯಲ್ಲವೆಂದೂ ಅದು ಅಂತರರಾಷ್ಟ್ರೀಯ ಶ್ರಮಜೀವಿವರ್ಗದ ಪತಾಕೆಯೆಂದೂ ಸ್ಪಷ್ಟಪಡಿಸುತ್ತಾರೆ. 'ಕಲ್ಲುಕುಟಿಗರು' ಎಂಬ ಪದ್ಯದಲ್ಲಿ ಇವರು ಕೊಡುವ ಸಂದೇಶವಂತೂ ತುಂಬಾ ಪ್ರಭಾವಪೂರ್ಣವಾದುದು.

ನಮ್ಮ ಕಾಯುವನಾರು ? ಕೇಳು ಅಂದೆ :
ನಮಗೆ ನಾವೇ ಇನ್ನು ಮುಂದೆ ತಂದೆ
ನಮ್ಮದೇ ಒಕ್ಕಟ್ಟು
ದೇವರಿಗೆ ಬಿಕ್ಕಟ್ಟು
ಪೃಥಿವಿಗೋಲಿನ ಕಲ್ಲ ಗುಂಡ ಕುಟ್ಟಿ
ಮನೆಯ ಕಟ್ಟಲು ಹೊಟ್ಟೆತುಂಬ ರೊಟ್ಟಿ !

'ಬಿರುಗಾಳೆಯೇ ಬೇಕು ನಮ್ಮ ಉದ್ಧಾರಕ್ಕೆ' ಎಂದು ಆರಂಭವಾಗುವ ಇವರ ಇನ್ನೊಂದು ಕವನವೂ ಕೂಡ ಇದೇ ಆಶಯದಿಂದ ಕೂಡಿದ್ದಾಗಿದೆ. ಬಡವರ, ಶೋಷಿತರ ಬದುಕು ಹಸನಾಗಲು ಈ ಕವಿ ಆತ್ಮವಿಶ್ವಾಸವನ್ನು ಬಡಿದೆಬ್ಬಿಸುತ್ತಾರೆ. 'ಒಂದು ದಿನದಲ್ಲಿಯೇ ಬಿಟ್ಟರೂ ಶ್ವಾಸ ! ಆಳಂಬೆಗೂ ಕೂಡ ಆತ್ಮವಿಶ್ವಾಸ !' ಅನ್ನುತ್ತ ಅಂಥ ಒಂದು ಅತುಲ ಆತ್ಮವಿಶ್ವಾಸ ಹೊಂದಿರುವುದರಿಂದಲೇ ದೇವರೊಂದಿಗೂ ಜಗಳಾಡಬಹುದಾದ ನೈತಿಕ ಬಲವನ್ನು ಬಿಂಬಿಸುತ್ತಾರೆ. ಲೋಕದಲ್ಲಿ ಬಲು ಅನರ್ಥ ತುಂಬಿಕೊಂಡಿರುವಾಗ ನೀನು ಬದುಕಿದರೂ ವ್ಯರ್ಥ ಎಂಬುದಾಗಿ ದೇವರೊಡನೆ ಪ್ರೀತಿಯಿಂದ ಜಗಳಾಡಲೂ ಸಿದ್ಧರಾಗುತ್ತಾರೆ.

ದಿನಕರ ದೇಸಾಯರ ದಲಿತ ಮತ್ತು ಬಂಡಾಯಪರ ಮಹತ್ವದ ಗೀತಗಳೆಲ್ಲವೂ ಹುಟ್ಟಿದ್ದು ೧೯೩೦ ರಿಂದ ೫೫ರ ನಡುವಿನ ಕಾಲಾವಧಿಯಲ್ಲಿ ಎಂಬುದು -- ಕಾವ್ಯಾಭ್ಯಾಸಿಗಳ ದೃಷ್ಟಿಯಿಂದ ಮಹತ್ವದ ಸಂಗತಿಯಾಗಿದೆ. ಅದು ಜನಪರ ಹೋರಾಟದ ನಿಗಿನಿಗಿ ಕೆಂಡದ ಹೊಂಡವನ್ನು ಅವರು ಯಶಸ್ವಿಯಾಗಿ ಹಾದುಬಂದ ಕಾಲಾವಧಿ. ಆ ನಂತರದ ಅವರ ಕವನಗಳಲ್ಲಿ ನಿರ್ವಿವಾದ ಜನಪರ ನಿಲುವಿದ್ದರೂ ಕೂಡ ಆ ಬಗೆಯ ರೊಚ್ಚು ಕೆಚ್ಚನ್ನು ಕಾಣಲಾರೆವು. ಮುಂದಿನ ಅವರ ಕಾವ್ಯದ ದಾರಿ

ಏನಿದ್ದರೂ ವ್ಯಂಗ್ಯ ಮತ್ತು ವಿನೋದಗಳಿಂದ ಕೂಡಿದ್ದಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರಕಾರರು ೭೦ ಮತ್ತು ೮೦ರ ದಶಕವನ್ನು ದಲಿತ–ಬಂಡಾಯ ಚಳುವಳಿಯ ಉತ್ಕೃಷ್ಟ ಕಾಲಾವಧಿ ಎಂದು ಗುರುತಿಸುತ್ತ ಬಂದಿದ್ದಾರೆ. ದಿನಕರ ದೇಸಾಯಿ ಇದಕ್ಕಿಂತ ಸುಮಾರು ನಾಲ್ಕು ದಶಕಗಳಷ್ಟು ಮೊದಲೇ ಮನಮುಟ್ಟುವ ರೀತಿಯಲ್ಲಿ ದಲಿತ ಮತ್ತು ಬಂಡಾಯ ಸಂವೇದನೆಯಿಂದ ಕೂಡಿದ ಪದ್ಯಗಳನ್ನು ರಚಿಸಿದ್ದರು ಅನ್ನುವುದು ಕೂಡ ಚರಿತ್ರೆಯ ದೃಷ್ಟಿಯಿಂದ ತುಂಬ ಮಹತ್ವದ ಸಂಗತಿಯಾಗುತ್ತದೆ. ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ದೇಸಾಯಿ ಮೊದಲ ಬಂಡಾಯ ಕವಿ ಎಂಬ ಉಲ್ಲೇಖ ಈಗಾಗಲೇ ಅಲ್ಲಲ್ಲಿ ಆಗಿರುವುದನ್ನೂ ಕೂಡ – ಬಹುಶಃ ನಾವು ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಚರ್ಚೆಗೆ ಒಡ್ಡತಕ್ಕದ್ದಿದೆ.

ಈ ಕವಿಗೆ ನಿಸರ್ಗದ ಬಗ್ಗೆ ಸಾಕಷ್ಟು ಪ್ರೀತಿ ಇದ್ದರೂ ಕುವೆಂಪು–ಪುತಿನ ಅವರಂತೆ ನಿಸರ್ಗವನ್ನು ಆರಾಧನಾಭಾವದಿಂದ ಕೊಂಡಾಡುವುದಿಲ್ಲ. ಕನ್ನಡನಾಡಿನ ಕೊಂಕಣ, ನದಿಯ ಜೀವನ, ಸೂರ್ಯ, ಗಾಳಿ, ಮುಂಜಾವ ಹೂವುಗಳು, ಹೂವಿಗೆ, ವೃಕ್ಷ, ಸುಪ್ರಭಾತ, ಕಡಲ ಕನ್ನಡ, ಕೆಂಪು ದಾಸಾಳ ಮುಂತಾದ ಕವನಗಳಲ್ಲಿ ಬರುವ ಬಣ್ಣನೆಗಳೆಲ್ಲವೂ ಅಂತಿಮವಾಗಿ ನಿಲ್ಲುವುದು – ಮನುಷ್ಯ ಅವುಗಳಿಂದ ಪಡೆಯಬೇಕಾದ ಜೀವನ ಸಂದೇಶದ ಕುರಿತಾಗಿಯೇ. ಈ ದಾರಿಯಲ್ಲಿ 'ಸ್ವರ್ಗ ಮತ್ತು ಭೂಮಿ' ಎಂಬುದು ಒಂದು ವಿಭಿನ್ನ ಉತ್ಕೃಷ್ಟ ಕವನ. ಈ ಕವನದಲ್ಲಿ ನಿಸರ್ಗದ ಭಾಗವಾದ ಚಂದ್ರ, ತಾರೆ, ಭಾನು, ಕಾನುಗಳಷ್ಟೇ ಈ ಕವಿಗೆ ಕಾಣದೆ, ಹಕ್ಕಿಗಳ ಉಲಿ ಕಿನ್ನರ ಗಾನದಂತೆ, ಹರಿಯುವ ಝುರಿನೀರು ಅಮೃತಪಾನದಂತೆ, ಕುರಿಕಾಯುವ ಕುರುಬ ಗೋಪಿಯ ಕಂದನಂತೆ, ಹುಲ್ಲಿನ ಹಾಸು ಸ್ವರ್ಗದೊಡೆಯನ ಸೆಜ್ಜೆಯಂತೆ, ನವಿಲಿನ ನೃತ್ಯ ರಂಭೆಯ ಕುಣಿತದಂತೆ, ನೀಲಿ ನಭದ ತಾರೆ ಈ ಲೋಕದ ಬಾಡದ ಹೂವಿನಂತೆ ಕಾಣುವುದು ವಿಶೇಷವಾಗಿದೆ. ಈ ನೆಲದ ಮುಂದೆ ಸ್ವರ್ಗ ಎಂಬುದು ಏನೇನೂ ಅಲ್ಲ ಎಂಬ ಭಾವನೆಯೇ ಆರೋಗ್ಯಪೂರ್ಣವಾದುದು.

ದಿನಕರರು ಬರೆದ ಚೌಪದಿಗಳಲ್ಲಿ ಪ್ರೇಮಕ್ಕೆ, ತುಂಟತನಕ್ಕೆ ಮೀಸಲಾದ ಚುಟುಕುಗಳು ಹೇರಳವಾಗಿವೆ. ಆದರೆ ಆ ಮಾದರಿಯಲ್ಲಿ ಅವರು ಪ್ರೇಮ ಕವನಗಳನ್ನು ಬರೆದಂತೆ ತೋರುವುದಿಲ್ಲ. ಪ್ರೇಮ, ಮುತ್ತು, ಮುಗುಳು, ತಾರೆ ಮತ್ತು ನೀರೆ, ಪ್ರೇಮದ ಬಣ್ಣ, ನವ್ಯ ತಾರೆ, ಕರಾವಳಿಯ ಕಮಲೆಗೆ ಮುಂತಾದ ಕವನಗಳು ತುಂಬಾ ಚೆನ್ನಾಗಿ ಓದಿಸಿಕೊಂಡು ಹೋಗುತ್ತಿವೆಯಾದರೂ, ಅವುಗಳಲ್ಲಿ ದೀರ್ಘಸಮಯ ಮನಸಿನಲ್ಲಿ ಉಳಿಯುವಂತೆ ಕಾಡುವ ಗುಣಗಳಿವೆಯೆನಿಸುವುದಿಲ್ಲ.

ಕಾವ್ಯಶಿಲ್ಪದ ದೃಷ್ಟಿಯಿಂದ ದೇಸಾಯರ ಕವಿತೆಗಳಲ್ಲಿ ಏಕತಾನತೆಯನ್ನು ಯಾರಾದರೂ ಗುರುತಿಸಿದರೆ ಅದೇನು ಅಸಹಜ ಪ್ರತಿಕ್ರಿಯೆ ಆಗಲಾರದು. ಬೇಂದ್ರೆ, ಅಡಿಗ ಮುಂತಾದವರಂತೆ ಅವರು ಚಮತ್ಕಾರಿಕ ಪದಪ್ರಯೋಗಗಳನ್ನು ಮಾಡುವುದಿಲ್ಲ; ಶ್ಲೇಷೆಗಳನ್ನು ಹೆಚ್ಚುಹೆಚ್ಚಾಗಿ ದುಡಿಸಿಕೊಂಡದ್ದಿಲ್ಲ, ಏನಿದ್ದರೂ ನೇರ, ಸರಳ ! ಕೆಲವು ವಿಮರ್ಶಕರು ಈಗಾಗಲೆ ಗುರುತಿಸಿದಂತೆ, ಪ್ರಾಸಮೋಹಿ ಕವಿ ಇವರು. ಒಂದಷ್ಟು ಕವನಗಳು ಹಾಗೆಂದು ಭಾಸವಾದರೂ, ಎಲ್ಲೂ ಎಳೆದು ತಂದ ಭಾವ ಹುಟ್ಟುವುದಿಲ್ಲ. ಅನನ್ಯ ಎನ್ನಬಹುದಾದ ಅವರ ನೆಲದ ಪ್ರೀತಿಯ ಮುಂದೆ, ನಿರ್ಲಕ್ಷಿತ ವ್ಯಕ್ತಿ ಮತ್ತು ವಸ್ತುಗಳ ಕುರಿತ ಅವರ ತುಡಿತ – ಮಿಡಿತಗಳ ಮುಂದೆ, ಅಲ್ಲೊಮ್ಮೆ ಇಲ್ಲೊಮ್ಮೆ ಎದುರಾಗುವ ಈ ಬಗೆಯ ಮಿತಿಗಳು ದೋಷಗಳೆಂದೆನಿಸುವುದೇ ಇಲ್ಲ.

ದಿನಕರ ದೇಸಾಯಿ ಅವರನ್ನು ನಾನು ಬೇರೊಂದು ಸಂದರ್ಭಗಳಲ್ಲಿ, ಜನತೆಯ ಕವಿ, ಜನರಿಗಾಗಿ ಬರೆದ ಕವಿ ಎಂಬುದಾಗಿ ಗುರುತಿಸಿದ್ದೇನೆ. ಖಾದ್ರಿ ಶಾಮಣ್ಣ ಮತ್ತು ಕಣವಿ ಮುಂತಾದವರು ಈಗಾಗಲೇ ಪ್ರಸ್ತಾಪಿಸಿರುವಂತೆ, ಇವರ ಕವನಗಳು ಸಮಾಜವಾದಿ ಸಂಸ್ಕಾರದಿಂದ ಜೀವ ಪಡೆದವುಗಳೆಂಬುದಕ್ಕೂ ನನ್ನ ಸಹಮತವಿದೆ. ಮಕ್ಕಳ ಕವನದಂತೆ ತೋರುವ 'ಗಡಿಯಾರ' (ಟೀಕ್ ಟೀಕ್ ಗೆಳೆಯಾ) ಕವನದಿಂದ ಹಿಡಿದು ಅವರ ಮರಣೋತ್ತರ ಆಶಯಗೀತದಂತಿರುವ 'ನನ್ನ ದೇಹದ ಬೂದಿ' ಕವನದವರೆಗೆ ನಮಗೆ ಎದುರಾಗುವ ಬಹುಸಂಖ್ಯೆಯ ಕೃತಿಗಳಲ್ಲಿ ಶ್ರಮಸಂಸ್ಕೃತಿ ಕುರಿತ ಅವರ ಕಾಳಜಿ, ಸಮಾನತೆಯ ಕುರಿತ ಎಚ್ಚರ, ಸರ್ವರಿಗೆ ಸಮಬಾಳು ಇರಲೆಂಬ ಆಶಯಗಳನ್ನು ನಾವು ಪುಷ್ಕಳವಾಗಿ ಕಾಣಬಹುದಾಗಿದೆ. ಮಕ್ಕಳ ಪಾಲಿಗಂತೂ ನಿಜವಾದ ಅರ್ಥದಲ್ಲಿ ಈ ಕವಿ 'ಟೀಕ್ ಟೀಕ್ ಗೆಳೆಯನೇ' ಆಗಿದ್ದಾರೆ. ಚೆಕ್ಕು, ತಿಪ್ಪಾಭಟ್ಟರ ಕುರಿತ ಇವರ ಹಾಡುಗಳು ಮಕ್ಕಳ ಲೋಕದಲ್ಲಿ ನಿರಂತರ ಮಿನುಗುವ ತಾರೆಗಳಾಗಿವೆ.

ವಿಷ್ಣು ನಾಯ್ಕ
ಸಂಪಾದಕ

ಪರಿವಿಡಿ

'ಕವನ ಸಂಗ್ರಹ'

'ಹೂಗೊಂಚಲು'

'ಬಿಡಿಗವನಗಳು '

❖❖

೧

ಕವನ ಸಂಗ್ರಹ

೧೯೫೦

ಅರಿಕೆ

ಈ ಸಂಗ್ರಹದಲ್ಲಿ ಸೇರಿಸಿರುವ ಕೆಲವು ಕವನಗಳು ಬೆಳಕಿಗೆ ಬಂದು ಅನೇಕ ವರುಷಗಳಾದವು. ದೀನಗಿಂತ ದೇವ ಬಡವ, ಭಿಕ್ಷುಕರು, ಗಡಿಯಾರ, ಅಂಚೆಯವನು, ಗೊಲ್ಲನ ಬಾಳು, ನಾನು, ತರಣರ ದಸರೆ, ಎಂಬುವು ವಿವಿಧ ಕವಿಗಳ ಕಾವ್ಯಮಾಲೆ (anthology)ಗಳಲ್ಲಿ ಪ್ರಕಟವಾಗಿವೆ. ಬೇರೆ ಕೆಲವು ಕವಿತೆಗಳು ನಿಯತಕಾಲಿಕೆಗಳಲ್ಲಿ ಅಚ್ಚಾಗಿದ್ದವು. ಹೀಗೆ ಕೆಲವು ಕವನಗಳನ್ನು ಬಿಟ್ಟರೆ, ಮಿಕ್ಕುಳಿದವುಗಳು ಇದೇ ಮೊದಲಾಗಿ ಬೆಳಕಿಗೆ ಬರುತ್ತವೆ.

ನನ್ನ ಕವನಗಳನ್ನು ಪುಸ್ತಕರೂಪದಲ್ಲಿ ಪ್ರಕಾಶನಕ್ಕೆ ತರುವೆನೆಂದು ಸಾಧನ ಮುದ್ರಣಾಲಯದ ಒಡೆಯರಾದ ಶ್ರೀ ಶೇಷಗಿರಿ ಕುಲಕರ್ಣಿರಾಯರು ಐದು ವರುಷಗಳ ಹಿಂದೆಯೇ ನನಗೆ ಪತ್ರ ಹಾಕಿದ್ದರು. ಆದರೆ ಆ ಕಾರ್ಯದಲ್ಲಿ ನನಗೆ ಸಾಕಷ್ಟು ಉತ್ಸಾಹವಿಲ್ಲದ್ದರಿಂದ ಪುಸ್ತಕ ಪ್ರಕಟವಾಗಲಿಲ್ಲ. ಇತ್ತೀಚಿಗೆ ನನ್ನ ಗೆಳೆಯರು ಕೆಲವರು ಪುಸ್ತಕ ಪ್ರಕಟವಾಗಬೇಕೆಂದೂ ನಾನು ಕನ್ನಡಮ್ಮನ ಸೇವೆಯನ್ನು ಅಲಕ್ಷಿಸಬಾರದೆಂದೂ ಆಗ್ರಹ ಹಿಡಿದರು. ಈ ಆಗ್ರಹದ ಫಲವೇ ಈ ಕವನ ಸಂಗ್ರಹ.

ಸಂಗ್ರಹದೊಳಗಿನ ಸುಮಾರು ೩೦ಕವನಗಳು ಹಳೆಯವೆಂದು ಹೇಳ ಬಹುದು. ನಾನು ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ೧೯೨೭–೧೯೩೩ ಕಾಲಖಂಡದಲ್ಲಿ ರಚಿತವಾದವುಗಳು. ಉಳಿದ ಸುಮಾರು ೪೦ಕವನಗಳು ಆಮೇಲೆ ಬರೆದವುಗಳು. 'ಹೆಸರು' ಕವನವು ಕೋಲ್‌ರಿಜ್ ಕವಿಯ ಗೀತವೊಂದರ ಅನುಕರಣವಾಗಿದೆ. 'ತೋಟಿಗ' ಕವನವು ರವೀಂದ್ರರ 'The Gardener'ದೊಳಗಿನ ಮೊದಲನೆಯ ಕವನ. ಮಹಾರಾಷ್ಟ್ರ ಕವಿ 'ಗೋವಿಂದಾಗ್ರಜ'ರ ಪ್ರಭಾವವನ್ನು 'ತರುಣರ ದಸರೆ'ಯಲ್ಲಿ ನೋಡಬಹುದು. 'ಬಡತನ' ಕವನವು ಪಂಚತಂತ್ರದಿಂದ ಎತ್ತಿಕೊಂಡದ್ದು. ಕೌದಿ ಮತ್ತು ಗೋವಿಂದ ಕವನಗಳು ನನ್ನ ಕೊಂಕಣಿ ಗೀತಗಳಲ್ಲಿಯ ಎರಡು ಕೃತಿಗಳ ಹೆಜ್ಜೆಯಲ್ಲಿ ರಚಿತವಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿರುವ ರೈತ ಚಳುವಳಿಯ ಪ್ರಚಾರಾರ್ಥವಾಗಿ ಬರೆದ ಪದಗಳಲ್ಲಿ 'ಕೆಂಪು ಬಾವುಟ', ಮತ್ತು 'ದೊಡ್ಡ ಒಡೆದಿರು' ಇವುಗಳನ್ನು ಇಲ್ಲಿ ಆರಿಸಿಕೊಂಡಿದ್ದೇನೆ.

ಆಧುನಿಕ ಕನ್ನಡ ಸಾಹಿತಿಗಳಲ್ಲಿ ಪ್ರಸಿದ್ಧಿ ಹೊಂದಿದವರೂ ನನ್ನ ಗೆಳೆಯರೂ ಆದ ಶ್ರೀ ಗೋಕಾಕ ವಿನಾಯಕರಾಯರು ಈ ಸಂಗ್ರಹಕ್ಕೆ ಮುನ್ನುಡಿ ಬರೆದು ನನ್ನನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಅವರಿಗೆ ನನ್ನ ವಂದನೆಗಳು. ಅವರ ಮುನ್ನುಡಿಯಿಂದ ನನಗೆ ಒಂದು ತರದ ಧೈರ್ಯ. ತಮ್ಮನಿಗೆ ಅಣ್ಣನ ಬೆಂಬಲವಿದ್ದಂತೆ. ಅಲ್ಲದೆ ಅವರು ಬರೆದ ಮುನ್ನುಡಿ ಓದುವ ಕುತೂಹಲದಿಂದ ಪುಸ್ತಕದ ಹೆಚ್ಚು ಪ್ರತಿಗಳು ಖರ್ಚಾಗಬಹುದೆಂಬ ಸ್ವಾರ್ಥ ಬುದ್ಧಿಯೂ ನನ್ನಲ್ಲಿತ್ತು. ಇವೆಲ್ಲ ಕಾರಣಗಳ ಮೂಲಕ ಅವರನ್ನು ಕೇಳಿಕೊಂಡದ್ದು.

ಈ ಕವನ ಸಂಗ್ರಹವನ್ನು ಬೆಳಕಿಗೆ ತರಲು ಶ್ರೀ ಕುಲಕರ್ಣಿ ಶೇಷಗಿರಿ ರಾಯರೇ ಕಾರಣರು. ೧೯೪೫ನೆಯ ಅಗಸ್ತು ತಿಂಗಳಲ್ಲಿ ನನಗೆ ಬರೆದ ಒಂದು ಪತ್ರದಲ್ಲಿ ಅವರು 'ನಿಮ್ಮ ಕವನಗಳನ್ನು ನಾನು ತುಂಬಾ ಮೆಚ್ಚಿದ್ದೇನೆ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತೇನೆ' ಎಂಬುದಾಗಿ ನನಗೆ ಪ್ರೋತ್ಸಾಹನೆ ಕೊಟ್ಟಿದ್ದರು. ಇದನ್ನು ನಾನು ಮರೆಯಲಾರೆ. ಕನ್ನಡ ಕಾವ್ಯಪ್ರಕಾಶನಕಾರ್ಯ ಸಹಾಸವೇ ಸರಿ. ಸಾಧಾರಣವಾಗಿ ಒಂದು ಸಾವಿರ ಪ್ರತಿ ಖರ್ಚಾಗಲಿಕ್ಕೆ ಪ್ರಕಾಶಕರು ಹತ್ತು ವರುಷ ಹಾದಿ ಕಾಯಬೇಕಾಗುತ್ತದೆ. ಅದರಲ್ಲಿಯೂ ವರಕವಿಯಲ್ಲದ ನನ್ನ ಕವನ ಸಂಗ್ರಹ ಓದುವವರ ಸಂಖ್ಯೆ ಇನ್ನೂ ಕಡಿಮೆಯಾಗಿರಬೇಕು. ಇಂಥ ಪ್ರಸಂಗದಲ್ಲಿ ಶ್ರೀ ಶೇಷಗಿರಿರಾಯರು ಪ್ರಕಾಶನಕ್ಕೆ ದುಡುಕಿದ್ದು ಅವರ ಕನ್ನಡ ಕಾವ್ಯಪ್ರೇಮವನ್ನು ವ್ಯಕ್ತಗೊಳಿಸುತ್ತದೆ. ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಕವನಗಳನ್ನು ಓದಿ ಕನ್ನಡ ಹೃದಯವು ತುಸು ಆನಂದಪಟ್ಟು ಕುಣಿದರೆ, ನನಗೂ ಆನಂದ. ನಾನೂ ಕುಣಿಯಲಿಕ್ಕೆ ಅಣಿಯಾಗಿದ್ದೇನೆ. ಆದರೆ ಕಾರಣವಿಲ್ಲದೆ ವೃಥಾ ನನ್ನನ್ನು ಕುಣಿಸಬಾರದಾಗಿ ಬಿನ್ನಹ.

ಭಾರತ ಸೇವಕ ಸಮಾಜ,
ಗಿರಗಾಂವ್, ಮುಂಬಯಿ

ದಿನಕರ ದೇಸಾಯಿ

ಕೆಳೆನುಡಿ

ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ದಿನಕರ ದೇಸಾಯರು ತಮ್ಮ ಮುದ್ದಾದ ಈ ಕವನಸಂಗ್ರಹಕ್ಕೆ ಒಂದು ಮುನ್ನುಡಿ ಬರೆಯಬೇಕೆಂದರು. 'ಅಣ್ಣ–ತಮ್ಮ' ಎಂದು ಜನ್ಮಸಿದ್ಧ ಸೌಜನ್ಯದಿಂದ ನನ್ನನ್ನು ಗೌರವಿಸಿದರು. ಅವಳಿ–ಜವಳಿ ಹುಟ್ಟಿದ್ದಾಗ ಯಾರು ಅಣ್ಣ ಯಾರು ತಮ್ಮ ಎಂಬುದನ್ನು ನಿರ್ಣಯಿಸುವುದು ಸುಲಭವಲ್ಲ. ನಾವಿಬ್ಬರೂ ಇಂದಿನ ಕನ್ನಡದ ಸುಪ್ರಭಾತದಲ್ಲಿ ಕೂಡಿಯೇ ಬಾಯ್ದೆರೆದೆವು. ಇಂದಿಗೂ ಕನ್ನಡದ ಮೇಳಗೀತದಲ್ಲಿ ದನಿಗೂಡಿಸುತ್ತಿದ್ದೇವೆ. ಆ ದಶಕದ ಕವಿಗಳ ಕೃತಿಗಳೆಲ್ಲ ಬಹುಶಃ ಈಗ ಸಂಗ್ರಹರೂಪವಾಗಿ ಉಪಲಬ್ಧವಾಗಿವೆ. ಶ್ರೀಮಾನ್ ದೇಸಾಯರೊಬ್ಬರೆ ಪಂಜರವನ್ನು ತಪ್ಪಿಸಿದ ಗಿಳಿಯಂತೆ ಮಾಸಿಕಗಳ ಮುಗಿಲಲ್ಲಿ ಇಲ್ಲವೆ ಗಿಳಿವಿಂಡಿನಲ್ಲಿ ಒಂದು ಗಿಳಿಯಾಗಿ ಹಾರಾಡುತ್ತಿದ್ದರು. ಅವರ ಕವನಗಳನ್ನು ಹೀಗೆ ಒಂದು ಪುಸ್ತಕ ರೂಪದಲ್ಲಿ ಸಂಗ್ರಹಿಸಿರುವದಕ್ಕಾಗಿ ನಾನು ಗೆಳೆಯ ಕುಲಕರ್ಣಿ ಶೇಷಗಿರಿರಾಯರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ದಿನಕರ ದೇಸಾಯರನ್ನು ನಾನು ಮೊದಲು ಕಂಡದ್ದು ಈಗ ಇಪ್ಪತ್ತೊಂದು ವರ್ಷಗಳ ಹಿಂದೆ, ಬೆಳಗಾವಿಯ ಸಾಹಿತ್ಯ ಸಮ್ಮೇಲನದಲ್ಲಿ. ಆಗ ಅವರು ಮೈಸೂರಿನಲ್ಲಿ ಇನ್ನೂ ವಿದ್ಯಾರ್ಥಿಗಳಾಗಿದ್ದರು. 'ಬಿ.ಎಮ್.ಶ್ರೀ' ಅವರೂ ಶ್ರೀ ಮಾಸ್ತಿಯವರೂ ವ್ಯಾಸಪೀಠದ ಮೇಲೆ ವಿರಾಜಮಾನರಾಗಿದ್ದಾಗ ತಮ್ಮ ಒಂದು ಮುದ್ದು ಕವನವನ್ನು ಅಂದು ತೋರಿಸಿ, ಕನ್ನಡ ಕಲಿಯಲಿಚ್ಛಿಸುವವರು 'ನನ್ನಂತೆ ಮೈಸೂರಿಗೆ ಬರಬೇಕು ?' ಎಂದು ಮುಂತಾಗಿ ಹೇಳಿದರು. ಅವರು ಹಾಗೆ ಹೇಳುವಾಗ 'ಬಿ.ಎಮ್.ಶ್ರೀ' ಅವರ ಮುಖ ಮೋಹಕವಾಗಿ ಅರಳಿತ್ತು, ನಾನು ಆ ಮುಖವನ್ನೇ ನೋಡುತ್ತ ಕುಳಿತಿದ್ದೆ.

ಮುಂದೆ 'ತಳಿರಿ'ನಲ್ಲಿ ಮೈಸೂರಿನ ಉಳಿದ ತರುಣ ಕವಿಗಳೊಡನೆ ದಿನಕರ ದೇಸಾಯಿಯರ ಒಂದೆರಡು ಕವಿತೆಗಳೂ ಅಚ್ಚಾದವು. 'ದೀನಗಿಂತ ದೇವ ಬಡವ' ಎಂಬ ಅವರ ಕವನ ಆ ಸಂಗ್ರಹದ ಶ್ರೇಷ್ಠ ಕವಿತೆಗಳಲ್ಲಿ ಒಂದಾಗಿತ್ತು, ಆ ಸಂಗ್ರಹವನ್ನು ವಿಮರ್ಶಿಸುವಾಗ ನಾನು ಆ ಕವನವನ್ನು ಮುಕ್ತಕಂಠನಾಗಿ ಹೊಗಳಿದೆ.

ನಾನು ಫರ್ಗುಸನ್ ಕಾಲೇಜಿಗೆ ಪ್ರಾಧ್ಯಾಪಕನೆಂದು ಹೋದಾಗ ಶ್ರೀ ದೇಸಾಯರೂ ಮುಂಬಯಿಯಿಂದ ಪುಣೆಗೆ ಬರುತ್ತಿದ್ದರು. ಆಗ ಅವರು ತಮ್ಮ ಅಭ್ಯಾಸವನ್ನು ಮುಗಿಸಿ "ಭಾರತ ಸೇವಕ ಸಮಾಜ"ವನ್ನು ಅಜನ್ಮ ಸೇವಕರಾಗಿ ಸೇರುವ ವಿಚಾರದಲ್ಲಿದ್ದರು. ಆ ವಿಷಯವನ್ನು ನಾವು ಚರ್ಚಿಸುತ್ತಿದ್ದೆವು. ಕೂಡಿದಾಗ ಒಬ್ಬರೊಬ್ಬರ ಕವಿತೆಗಳನ್ನು ಕೇಳುತ್ತಿದ್ದೆವು.

ಮುಂದೆ ನಾನು ವಿಲಾಯತಿಯಿಂದ ತಿರುಗಿ ಬಂದಾಗ ಆಗಲೆ ಆಜನ್ಮ ಸೇವಕರಾಗಿ ಶ್ರೀ ದೇಸಾಯರು ಮುಂಬಯಿಯಲ್ಲಿ ಕೆಲಸ ಮಾಡುತ್ತಿದ್ದರು. ಅದೇ ನನ್ನ 'ಸಮುದ್ರದಾಚೆ'ಯಿಂದ ಪ್ರಕಟವಾಗಿತ್ತು. ಅದರಲ್ಲಿ ನಾನು ಹಡಗದ ಮೇಲಿನ ಬಡಪಾಯಿಯಾದ 'ಕಾರ್ಡೋಜ್' ಎಂಬವನ ಬಗ್ಗೆ ಬರೆದಿದ್ದೆ. ಭೆಟ್ಟಿಯಾದಾಗ – ಪಿ.ಎಂಡ್.ಓ. ಕಂಪನಿ ಹಡಗಗಳ ಮೇಲೆ ದುಡಿಯುತ್ತಿರುವ ಎಲ್ಲ ಗೋವನೀಜ್ ವೇಟರರ ಒಂದು ಸಂಘವನ್ನು ಮಾಡಿರುವುದಾಗಿಯೂ ಕಾರ್ಡೋಜ್‌ನಂತರ ಅನೇಕರ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿಯೂ ಶ್ರೀ ದೇಸಾಯರು ನನಗೆ ಹೇಳಿದರು. ನಾನು ಕೌತುಕಗೊಂಡೆ. ಮುಂದೆ ಅವರು ಸಮುದ್ರದ ಮೇಲಿನ ಭಾರತೀಯ ಕೂಲಿಗಳನ್ನು ಕುರಿತು ಇಂಗ್ಲಿಷಿನಲ್ಲಿ ಬರೆದ ಗ್ರಂಥವು ಪ್ರಸಿದ್ಧವಾಯಿತು. ಅದರಂತೆ ಭಾರತೀಯ ಶಿಕ್ಷಣಕ್ರಮದ ಒಂದೆರಡು ಮಟ್ಟಗಳನ್ನು ಕುರಿತು ಸಹ ಅವರು ಬರೆದರು. ಅವರ ಭಾರತ ಸೇವೆ ತನುಮನಧನ ಪೂರ್ವಕವಾಗಿ ಸಂತತವಾಗಿ ಸಾಗಿತ್ತು; ಸಾಗಿದೆ; ಸಾಗಲಿ.

ಶ್ರೀ ದಿನಕರ ದೇಸಾಯರ ಜೀವನಲತೆಯಲ್ಲಿ ಅರಳಿದ ಎರಡು ಮಂದಾರಗಳು ಇವು : ಒಂದು ಅವರ ಕಾವ್ಯ; ಇನ್ನೊಂದು ಅವರ ದೇಶಸೇವೆ. ವಿನಯದಿಂದ ಬಾಗಿ ಬಳಕುವ ಲತೆ ಅದು. ಅದಕ್ಕೆ ವೃಥಾಡಂಬರ ಬೇಡ. ಮೈತುಂಬ ಹೂ ಬೇಡ, ಬರಿ ಎರಡು ಹೂಗಳಲ್ಲಿ ತನ್ನ ಅಮೃತತ್ವವನ್ನು ಅರಳಿಸಿ ಅದು ಕೃತಕೃತ್ಯವಾಗುತ್ತಲಿದೆ. ಆದರೆ ಆ ಹೂಗಳು ಮಂದಾರಗಳು. ಸಾವಿರ ಮಲ್ಲಿಗೆಗಳನ್ನು ಮಿಕ್ಕಿ ಅವುಗಳ ಸೌರಭವು ಸೂಸಿದೆ. ತಾವು ಬರೆದ ಕವಿತೆಗಳನ್ನು ಬನ್ನಿಗಿಡವು ಬಿಡುವ ಹೂವಿಗೆ ಅವರು ಹೋಲಿಸಿದ್ದಾರೆ. ಇದು ಅವರಲ್ಲಿ ರಕ್ತಗತವಾದ ವಿನಯದ ಪ್ರತೀಕ. ಎರಡು ಕೋಗಿಲೆಗಳು ಕುಳಿತ ಮಾಮರವೆಂದರೇ ಅವರ ಜೀವನವಾಗಿದೆ.

(೨)

ಈ ಕವನಗಳ ರೀತಿ ಏನು ? ಯಾವ ತಾಳಲಯವನ್ನನುಸರಿಸಿ ಪ್ರತಿಭೆಯು ಇಲ್ಲಿ ಕುಣಿದಿದೆ ?

ಈ ಕವನಗಳಲ್ಲಿಯ ಮೊದಲನೆಯ ಲಕ್ಷಣ ಅವುಗಳಲ್ಲಿಯ ಭಾವ ನಿರ್ಭರತೆ. ಅನಿಸಿದ ಅನಿಸಿಕೆ ಕಾವ್ಯಮಯವಹುದೋ ಅಲ್ಲವೋ ಎಂಬ ಶಂಕೆಯೇ ಇಲ್ಲಿ ಏಳುವುದಿಲ್ಲ. ಭಾವದ ಉತ್ಕಟತೆಯಲ್ಲಿಯೇ ಅದರ ಕಾವ್ಯಮತೆಯ ಉಗಮವಿದೆ. ಒಂದೊಂದು ಭಾವನೆಯೂ ವ್ಯಕ್ತಿತ್ವದ ಆಳದೊಳಗೆ ಮಿಂದು ಬರುತ್ತದೆ.

ಈ ಕನವಗಳ ಎರಡನೆಯ ಲಕ್ಷಣವೆಂದರೆ ಅವುಗಳ ನೇರತೆ, ಸಹಜಾಭಿವ್ಯಕ್ತಿ ಸುಲಭವಾಗಿ ನೇರವಾಗಿ ಎದೆಹೊಗುವ ಭಾಷೆಯಲ್ಲಿ ಅವರ ಕಾವ್ಯಲಕ್ಷ್ಮಿಯು ಪ್ರಕಟವಾಗುತ್ತಾಳೆ. ಅವರ ಜನ್ಮಸ್ಥಾನವಾದ ಉತ್ತರ ಕನ್ನಡದ ಗಿರಿನಿರ್ಝರಗಳಂತೆ ಅವರ ಕಾವ್ಯವು ಲಲಿತವಾಗಿದೆ, ಮೋಹಕವಾಗಿದೆ, ಅಚ್ಚುಕಟ್ಟಾಗಿದೆ. ಇದ್ದ ಭಾವವೆಲ್ಲ ಮನಮುಟ್ಟುವಂತೆ ಎದೆತುಂಬಿ ವ್ಯಕ್ತವಾಗುತ್ತದೆ. ಅಲ್ಲಿ ಸಂದಿಗ್ಧವಾಗುದೇನೂ ಇಲ್ಲ; ಅಸ್ಪಷ್ಟವಾವುದೂ ಇಲ್ಲ. ಇಂಥ ಸೌಕುಮಾರ್ಯದ ಕಾಂತಿಗೆ ಕುಂದಿಲ್ಲ. ಅದರ ಔಚಿತ್ಯಕ್ಕೆ ಬಾಧೆಯೂ ಇಲ್ಲ. ಹಿತಮಿತವಾದ ಶೈಲಿ–ಛಂದಗಳನ್ನು ಕೂಡಿಕೊಂಡು ಒಂದು ಕೋಗಿಲೆಯ ಹಾಡಿನಂತೆ ಇಂಪಾಗಿ ಅವರ ಕಾವ್ಯವು ಕಿವಿಯಮೇಲೆ ಬೀಳುತ್ತದೆ. ಅದರ ವ್ಯಕ್ತಿತ್ವದ ಸ್ಫುಟ ಲಕ್ಷಣಗಳನ್ನು ಮರೆಯುವುದೇ ಸಾಧ್ಯವಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅನೇಕ ಪ್ರಯೋಗಗಳು ಕನ್ನಡದಲ್ಲಿ ಆಗಿರುವುದುಂಟು. ಆದರೆ ಕನ್ನಡಕ್ಕೆ ಇಂದಿಗೂ ಒಬ್ಬನೇ ದಿನಕರನೆಂದು ಹೇಳದೆ ಗತಿ ಇಲ್ಲ. ಅವರಂತೆ ಇನ್ನಾರು ಹಾಡಿಯೇ ಇಲ್ಲ.

(೩)

ಅವರ ಕಾವ್ಯದ ವಿವಿಧ ಲಹರಿಗಳಲ್ಲಿ ಅನನ್ಯತಮವಾದ ಒಂದು ಲಹರಿಯೆಂದರೆ ಶಿಶುಗೀತೆಗಳಂತೆ ಕಾಣುವ ಪ್ರಕಾರ. ಆದರೆ ಅವು ಶಿಶುಗೀತೆಗಳಲ್ಲ. ಶಿಶುಗೀತೆಗಳಂತೆ ಸಹಜವಾಗಿ ರೂಪವನ್ನು ಪಡೆದ ಸುಂದರ ಕವಿತೆಗಳು. ಈ ಕವಿತೆಗಳಲ್ಲಿ ಒಂದು ನೀತಿಪಾಠವನ್ನು ಕವಿ ಕಲಿಸುತ್ತಿರುವಂತೆ ಭಾಸವಾಗುತ್ತದೆ. ಆದರೆ ಅದು ಬರಿ ನೀತಿಪಾಠವಲ್ಲ. ಹೃದಯದಲ್ಲಿ ನೇರವಾಗಿ ಉಗಮಿಸಿ ಹೃದಯವನ್ನು ಮುಟ್ಟುವ ರತ್ನಪಾಠ. ವಿಮಾನ, ಉಗಿಬಂಡಿ, ಕೌದಿ, ಕಾಲಿನ ಜೋಡು, ಕಸಗುಡಿಸುವ ಪಂಚಮರು, ಭಿಕ್ಷುಕರು, ಅಂಚೆಯವನು, ಗಡಿಯಾರ, ಸಾಬೂನು :

—ಇವು ಅವರ ಕೆಲವು ಕವನಗಳ ಶಿರೋನಾಮಗಳು. ಅವುಗಳ ತಂತ್ರ ಒಂದೇ. ಆ ವಸ್ತುಗಳ ವಿಜ್ಞಾನವನ್ನಾಗಲಿ ಸ್ವಭಾವ ವಿಶೇಷವನ್ನಾಗಲಿ ಕವಿಯು ಕಾವ್ಯಮಯವಾಗಿ ಬಣ್ಣಿಸಿ, ಆ ವಸ್ತುವಿನಲ್ಲಿ ಅಡಕವಾದ ತತ್ವವನ್ನು ಎತ್ತಿ ತೋರಿಸುತ್ತಾನೆ. ಚಳಿಯಾದರೂ ಸಮ, ಮಳೆ ಬಂದರೂ ಸಮ, ವಿಮಾನಕ್ಕೆ ಲಗುಲಗು ಬುಗಬುಗು ಹೊರಟು ಉಗಿಬಂಡಿಯು ಯಂತ್ರಯುಗದ ಚಾಮುಂಡಿಯಾಗುತ್ತದೆ. ಹೆಣ್ಣಿನ ಸೀರೆಯನ್ನೂ ಗಂಡಿನ ಧೋತ್ರವನ್ನು ಕೂಡಿಸಿಕೊಂಡ ಕೌದಿ – 'ಗಂಡೂ ಹೆಣ್ಣು ಕೂಡಲು ಬಾಳು' ಎಂದು ಸಾರುತ್ತದೆ. ಕಾಲಿನ ಜೋಡು 'ಸೇವಾಧರ್ಮ'ವನ್ನು ಸಾರುತ್ತದೆ. ಅಂಚೆಯವ 'ಎಲ್ಲಾ ಸುದ್ದಿಗಳೊಂದೇ ನಮಗೆ' ಎಂದು ಹೇಳುತ್ತಾನೆ ! ಗಡಿಯಾರವು 'ಕರ್ಮರಹಸ್ಯದ ಶಾಂತಿ'ಯನ್ನು ತಿಳಿಸುತ್ತದೆ. ಸಾಬೂನನ್ನು ನೆನೆದಾಗ –

'ಹೊರಗಿನ ಬಣ್ಣವು ಕೆಂಪಾಗಿದ್ದರು
ಹಳದೀ ನೀಲಿ ಎಂಥದು ಇದ್ದರು
ಹೃದಯದ ನೊರೆ ಸತತವು ಬಿಳಿ ಶುದ್ಧವು !'

ಎನ್ನುತ್ತಾನೆ ಕವಿ ! ಸಣ್ಣ ಸಣ್ಣ ಮಾತಿನೊಳಗಿಂದ, ಬಣ್ಣ ಬಣ್ಣದ ಇಂದ್ರ ಧನಸ್ಸು ಮೇಲಕ್ಕೇಳುತ್ತದೆ.

ಇವುಗಳ ಜೊತೆಗೆ ನಿಲ್ಲತಕ್ಕ ಇನ್ನೊಂದು ಗುಂಪೆಂದರೆ, – ಗೋವಿಂದ, ಯಮುನೆ, ಸೂಳೆ, ತಂಬುರಿದಾಸ, ಕಾಳಿಗೌಡ, 'ದೊಡ್ಡ ಒಡೆದಿರು', ತಾಯಿ, ಮೊದಲಾದ ಸ್ವಭಾವಪರ ಗೀತಗಳು, ಒಂದೊಂದು ಮಾದರಿಯ ಸ್ವಭಾವ ಒಂದೊಂದರಲ್ಲಿ ಪ್ರಕಟವಾಗಿದೆ ಇಲ್ಲಿ, ಹಳ್ಳಿಗೆ ಗೋಪಿಯ ಕಂದನಾದ ಗೋವಿಂದನ ಚಿತ್ರಣ ಮೋಹಕವಾಗಿದೆ. ಯಮುನೆಯ ಮೈಬಣ್ಣವೇನೋ ಕರಿದು, ಆದರೆ ಆಕೆಯ ಹೃದಯದ ಪ್ರೇಮ ಹೊಳೆಯುತ್ತದೆ.

"ಕುಣಿಯುವದೊಂದೇ ಕುಣಿಸುವದೊಂದೇ ಸಂಗೀತದ ಶಕ್ತಿ" ಎಂದು ಸಂಗೀತದ ದಾಸ ಹಾಡಿದರೆ ಪುಣ್ಯಪುರುಷನಾದ ಕಾಳಿಗೌಡನ ಬಗ್ಗೆ ಬರೆಯುತ್ತ –

"ಏನು ಹೇಳಲಿ ಜನರ ಸಂದಣಿ
ಪುಣ್ಯ ಪುರುಷನ ಯಾತ್ರೆಗೆ;
ಇಷ್ಟು ಜನ ಕೂಡುವುದು ಕಷ್ಟವು
ನಾಡದೇವರ ಜಾತ್ರೆಗೆ"

ಎಂದು ಕವಿ ಉದ್ಗಾರ ತೆಗೆಯುತ್ತಾನೆ. ಇದೇ ಮಾನವೀಯತೆಯ ತಿರುಳನ್ನೇ 'ತಾಯಿ'ಯಲ್ಲಿ ಕಾಣುತ್ತೇವೆ.

"ತಾಯಿಯು ದೇವರಿಗಿಂತಲು ಮೇಲು,
ದೇವರ ಮೊಲೆಯಲಿ ದೊರೆವುದೇ ಹಾಲು ?"

ಈ ಜನ ನೆಲೆನಿಂತ ನಾಡು ಯಾವುದು ? ಕವಿಯು ಅದನ್ನೂ ರಮ್ಯವಾಗಿ ಬಣ್ಣಿಸಿದ್ದಾನೆ. ಉತ್ತರ ಕನ್ನಡ, ವೀರ ಮೈಸೂರು, ಮೈಸೂರು, ಕನ್ನಡ ನಾಡಿನ ಕೊಂಕಣ, ನಮ್ಮ ಕಡಲ ನಾಡು – ಈ ಕವನಗಳು ಒಂದು ಸಹಜರಮಣೀಯ ನಿಸರ್ಗಪ್ರೇಮದಿಂದ, ತಾಯ್ನೆಲದ ಪ್ರೀತಿಯಿಂದ ತುಂಬಿವೆ. ಅಲ್ಲಲ್ಲಿ ತಾಯ್ನೆಲದ ಘನತೆಯನ್ನು ಚೆಲುವನ್ನೂ ಕವಿಯು ಅಭಿಮಾನದಿಂದ ನೆನೆಯುತ್ತಾನೆ.

ಒಂದು ಕವನವು ಇಲ್ಲಿ ತಾನೇ ತಾನಾಗಿ ನಿಂತಿದೆ. ಅದಾವುದೆಂದರೆ, – **'ನೀಲಿಯ ಕೋಳಿಗಳು'**. 'ಗೋವಿಂದ'ದ ಮಾದರಿಯ ತಿಳಿಹಾಸ್ಯ ಇಲ್ಲಿ ಒಂದು ಕಥೆಯ ರೂಪವನ್ನು ತಾಳಿ ನಾಡಜನತೆಯ ಜೀವನದ ಮಾನವೀಯ ಸೀಮೆಯನ್ನು ಸುಂದರವಾಗಿ ಚಿತ್ರಿಸುತ್ತದೆ. ಕವಿಯ ಕಣ್ಣಿಗೆ ನೀಲಿಯ ಕುರುಡು ನಂಬಿಗೆಯೂ ಅಷ್ಟೇ. ತಿಮ್ಮನ ತುಂಟತನವೂ ಅಷ್ಟೇ. ಎರಡನ್ನು ನೋಡಿ ಶುದ್ಧಾಂತಃಕರಣದಿಂದ ಉಲ್ಲಸಿತನಾಗಿ ಕವಿಯು ನಕ್ಕುಬಿಡುತ್ತಾನೆ. ಇಂಥ ಕವನಗಳನ್ನು ಶ್ರೀ ದೇಸಾಯರು ಇನ್ನಷ್ಟು ಬರೆದರೆ ಚೆನ್ನು. ಉದಾತ್ತ ವಿನೋದದ ಸಂಸ್ಕಾರ ಸಹಜವಾಗಿ ಓದುಗರ ಹೃದಯವನ್ನು ಹೊಕ್ಕೀತು.

ಭಾರತದ ಸಂಸ್ಕೃತಿಯನ್ನು ಕವಿಯು ಅಭಿಮಾನಪೂರ್ವಕವಾಗಿ ನೆನೆಯುತ್ತಾನೆ. ರಾಜಾರಾಮಮೋಹನರ ಕರ್ಮದ ನೆರಳಿನಲ್ಲಿ ಧರ್ಮ ಚಿಗಿತಿದೆ. ವೀರಗಲ್ಲು ಗತವೈಭವದ ಬಿಂಬವಾಗಿದೆ. ಕುಮಾರವ್ಯಾಸನ ಕವನ, ಬೀಸುವ ಪವನ, ಭಾವದ ಭವನ. ಆದರೆ ಭಾರತ ಭೂಮಿಯ ಬಡತನ ? ಅದು ವಿಶ್ವಕುಟುಂಬದ ಜಡತನವೇ ಸರಿ. ಬಂಗಾಲದ ಬರಗಾಲದ ಸಮಯದಲ್ಲಿ ಹದ್ದಿಗೂ ಓಕರಿಕೆ ಬರುವಂತಾಯಿತು. ಹರಿಜನರು, ಹೆಸರಿಗೆ ಮಾತ್ರ ಹರಿಜನರು. ಈ ಹಿರಿಯ ಸಾಮಾಜಿಕ ಸಮಸ್ಯೆಗಳಿಗೆ ಉತ್ತರವೆಲ್ಲಿ ?

ಹೀಗೆ ಕವಿಯ ಸಾಮಾಜಿಕ ಪ್ರಜ್ಞೆಯು ಕುದುರಿ ಸಮತೆಯೆಡೆಗೆ ಅವನ ಒಲವು ಹರಿಯುತ್ತದೆ. 'ತರುಣರ ದಸರೆ'ಯ ನೆನಪಾಗುತ್ತದೆ. ಯುವಕನಿಗೇಕೆ

ಬಾವಿಯ ನೀರು ? ಅದು ಮುದುಕರಿಗಿರಲಿ, ಯುವಕನು ಸೇರಲಿ ವನವಾಸವನು, 'ಹುಲಿಗಳ ಜೊತೆಯಲಿ ಬಾಳುವನವನು !' ಬಾಡೋರ್ಲಿಯ ವೀರ ಒಕ್ಕಲಿಗರ ಧೈರ್ಯವನ್ನು ಕವಿ ನೆನೆಯುತ್ತಾನೆ. ಹೊಟ್ಟೆಯ ವ್ಯಾಜ್ಯ – ಅನ್ನದ ಸಮಸ್ಯೆ ಇಂದಿನ ಹಿರಿ ಸಮಸ್ಯೆಯಾಗಿದೆ. ಕನಸಿನೊಳಗಿನ ಮೀನುಗಾರ ನನಸಿನ ಸೃಷ್ಟಿಯಲ್ಲಿಯೆ ಯಕ್ಷಪ್ರಶ್ನೆ, ಅವನ ಸ್ಥಿತಿ ಸುಧಾರಿಸಿದ ಹೊರತು ಜಗತ್ತು ಪ್ರಗತಿಪರವಾಗಲಾರದು. 'ನೀಲಿಯ ಕೋಳಿಗಳ'ಲ್ಲಿ ಮೃದು ಹಾಸ್ಯ ತುಂಬಿದ್ದರೆ ಈ ಕಥನಕವನದಲ್ಲಿ ಕರುಣೆ–ವಿಷಾದಗಳು ಎದೆ ತಂತಿಯನ್ನು ಮೀಟುತ್ತಿವೆ. ಪ್ರಗತಿ–ರಥಕ್ಕೆ ಎರಡು ಗಾಲಿಗಳಂತಿದ್ದ ರೈತ–ಕಾರ್ಮಿಕರ ಕಷ್ಟಗಳನ್ನು ಕುರಿತು ಕವಿ ಬರೆಯುತ್ತಾನೆ. 'ಕೂಲಿಯ ಸುಖವೇ ಮಾನವ ಧರ್ಮ'ವೆಂಬ ಮಾತು ಮನದಟ್ಟಾಗುತ್ತದೆ. ಉತ್ತರ ಕನ್ನಡದ ಕಚ್ಚೆಯು 'ಲಂಗೋಟಿಯೊಳೇ ಗಾಂಧಿ ಮಹಾತ್ಮ !' ಎಂಬ ಪಾಠವನ್ನು ಸೂಚಿಸುತ್ತದೆ. ಹತ್ತು ಯುಗದ ಪಿತ್ತ ಕಾರಿಹೋದಂತೆ ಚೀನದ ಕ್ರಾಂತಿ ದಿಕ್‌ಪಥದಲ್ಲಿ ಕಾಣುತ್ತದೆ.

ಆದರೆ ಬರಿ ಒಂದು ರಾಜಕೀಯ ಮೀಮಾಂಸೆಯಿಂದ ಇಲ್ಲವೆ ಒಂದು 'ವಾದ'ದಿಂದ ವ್ಯಕ್ತಿಗಾಗಲಿ ಸಮಾಜಕ್ಕಾಗಿ ವಿಮೋಚನೆ ಸಾಧ್ಯವಿಲ್ಲ. ಸಂಸ್ಕೃತಿ–ಜೀವನದ ಕೆಚ್ಚು–ಅದಕ್ಕಾಗಲಿ ಬೆಳೆದು ಬರಬೇಕಾಗುತ್ತದೆ. ಆಂತರಿಕ ಪ್ರಜ್ಞೆ, ಭಾವನೆಯ ನಯ, ವಿಚಾರದ ಆಳ, ಇವೆಲ್ಲ ಇದಕ್ಕೆ ಅವಶ್ಯಕ. ಕವಿಯು ಇಂತಹ ವಿಚಾರಪೂರ್ಣ ಕವನಗಳಲ್ಲಿ ತನ್ನ ಕೆಚ್ಚನ್ನು ತೋರಿಸಿದ್ದಾನೆ. ಮಳೆಯಿಂದ ಹರುಷದ ಬೆಳೆ ಬಂದಿದೆ. ಆದರೆ ಬಡವನ ಗುಡಿಸಲಲ್ಲಿ ಕೆಸರೇ ಕೆಸರು ! 'ವಾರದ ಪದ' ನಯವಾದ ವಿಡಂಬನೆಯಿಂದ ತುಂಬಿದೆ. 'ಆಳಂಬೆ' ಎಂಬ ಕವನದಲ್ಲಿ ಶಿಶುಗೀತೆಯ ಸಹಜತೆಯೂ ವಿಚಾರಗಾಂಭೀರ್ಯವೂ ಮೋಹಕವಾಗಿ ಬೆರೆತುಕೊಂಡಿವೆ. ತುದಿಮೊದಲು ಹಿರಿಚಿಂತೆ ನೆರಳಿನಂತೆ, ಎಂದು ಬಾಳುವ ಚಿಂತೆ ಹಾಗೂ ಮರಣದ ಚಿಂತೆಯನ್ನು ಕವಿಯು ನೆನೆಯುತ್ತಾನೆ. ನರನ ಉದರಂಭರಣಕ್ಕಾಗಿ ನಡೆಯುವ ವಿಚಿತ್ರ ಪ್ರಾಣಿಪ್ರದರ್ಶನವನ್ನು ವರ್ಣಿಸುತ್ತಾನೆ. ನದಿಯ ಗತಿ ಮಾನವ ಜೀವನದ ಗತಿಯನ್ನು ಪ್ರತಿಬಿಂಬಿಸುತ್ತದೆ.

ಹೀಗೆ ವಿಚಾರಪರನಾದಾಗೆಲ್ಲ ಕವಿಯನ್ನು ಮೂರು–ನಾಲ್ಕು ಆದರ್ಶಗಳು ಆಳವಾಗಿ ಆಕರ್ಷಿಸುತ್ತವೆ. ಕೋಟ್ಯಾವಧಿ ಜೀವಗಳಿದ್ದರೂ ಜೀವ ಒಂದೇ. ಎಲ್ಲ ಜೀವಿಗಳೂ ದೇವರ ಅವತಾರ. ದೇವರು ನೊರೆಹಾಲನ್ನು ಬೇಡುವುದಿಲ್ಲ, ಅದು

ದನದ ಕರುವಿಗಿರಲಿ; ನನಗಿರಲಿ ನಿರ್ಮಲಾಂತಃಕರಣ ಎಂದು ಹೇಳುತ್ತಾನೆ. ಮಣ್ಣುಗೊಂಬೆಯ ಆಟದಲ್ಲಿ ಕಂದ ತಾಯಿಯನ್ನು ಕೆಲವು ಸಮಯ ಮರೆತಿರುತ್ತಾನೆ. ಆದರೆ ಕೊನೆಗೆ ಅವನಿಗೆ ನೆನಪಾಗುವುದು ತಾಯಿಯದೇ. ನರನಿಗೂ ದೇವರ ನೆನಪು ಹೀಗೆಯೆ ಆಗುವುದು. ಜೀವ ದೇವನೆಡೆಗೆ ನಡೆದುಹೋಗುವಾಗ, ದೇಹವಿದು ಬರಿ ಪಯಣದ ಬಟ್ಟೆಯಂತೆ.

ಆದರೆ ದೇವನನ್ನು ನೆನೆಯುವದೆಂದರೆ ವಿರಕ್ತನಾಗಿ ಸಮಾಜಕ್ಕೆ ಬೆನ್ನು ತೋರಿಸುವ ನಿವೃತ್ತಿಪ್ರಿಯನಾಗಬೇಕೆಂದಲ್ಲ.

'ಹರಿಗೆ ಒಂದು ಗುಡಿಯನೊಂದ
ಕಟ್ಟುತಿರುವೆಯಾ ?
ದೀನಗಿಂತ ದೇವ ಬಡವ –
ನೆಂದು ಬಗೆದಯಾ ?' – ಎಂಬ ಕವಿಯ ಪ್ರಶ್ನೆ ಎಂತಹರನ್ನೂ ಕೆಣಕಬಲ್ಲದು, ಅಂದದ ಚೆಂದದ ಭೂಮಿಗೆ ಬಂದು ಸ್ವರ್ಗವನ್ನು ನೆನೆಸುವುದೇಕೆ ?

'ಇಹಲೋಕದೊಳೇ ನಂಬಿಗೆಯಿದ್ದರೆ
ನರಕವ ನಾ ಕಾಣೆ'ಎಂದು ಕವಿ ಹೇಳುತ್ತಾನೆ. ಸತಿ ಪತಿ, ಮಗು ಹಾಗೂ ಜಗ ಕಂಗಳ ಮುಂದಿನ ದೇವರಿದ್ದಂತೆ. ದೇವರ ಮುತ್ತಿನ ಸವಿ ಎಲ್ಲೆಡೆಗಿದೆ. ಮೋಡಗಳು ಸಹ ಮಳೆ ಹನಿ ತಂದು ಭೂಮಿಗೆ ಅಭಿಷೇಕ ಮಾಡುತ್ತಿವೆ. ಪ್ರೇಮವೊಂದೇ ಜಗದ ಮೂಲ ತತ್ವದ ನೀತಿ–ನನ್ನ ರಂಗಿಯ ಮೊಗದ ಮಂದಹಾಸ ರೀತಿ ! ಇಣಚಿಯಂತೆ ಸಣ್ಣವನಿದ್ದಾಗ ಮರವೇರುವ ಬಾಲ್ಯದ ಸವಿ ನೆನಪನ್ನೂ ಕವಿ ನೆನೆಯುತ್ತಾನೆ. ಮಗುಗಳ ಆಟದ ಮೋಹಕತೆ ಎಷ್ಟು !

"ಅಜ್ಜಿಯು ಮಲಗಲು ಆಕೆಯ ಕಾಲಿಗೆ
ಗೆಜ್ಜೆಯ ಸುತ್ತುವೆ ನೀ ಕಳ್ಳಾ !"
ತಾಯಿಯ ತಾಯ್ತನ ಎಂಥದು !
"ಯಾವಳ ಹಿಡಿಯಲಿ ತೊಟ್ಟಿಲ ದಾರ
ಆಕೆಯ ಉಡಿಯಲಿ ಜಗದೋದ್ಧಾರ !

ಇಂಥ ಚೆಲವು ತುಂಬಿದ್ದ ಪೃಥ್ವಿಗಿಂತ ಹೆಚ್ಚಿನದೇನು ? ಅದನ್ನು ನೆನೆದಾಗ ಲೋಕಕಲ್ಯಾಣಕ್ಕಿಂತ ಹೆಚ್ಚಿನದೇನೂ ಇಲ್ಲವೆಂದು ಕವಿಗೆ ಮನವರಿಕೆಯಾಗುತ್ತದೆ :

“ನನ್ನ ದೇಹದ ಬೂದಿ – ಗಾಳಿಯಲ್ಲಿ ತೂರಿ ಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ”

ಎಂದು ಕವಿಯು ಸಮರ್ಪಣ ಭಾವದ ತುದಿಯನ್ನು ಮುಟ್ಟುತ್ತಾನೆ.

ಕಾವ್ಯವು ಕವಿಯನ್ನು ಆಕರ್ಷಿಸಿದ ಇನ್ನೊಂದು ಸತ್ಯಸೌಂದರ್ಯ. ಕಾವ್ಯವು ದೇವಗೆಂದು ಚಿತ್ತಭಿತ್ತಿಯಿಂದ ತಂದ ಕವನದಾರತಿ. ಆದರೆ ಈ ಆರತಿ ದೇವರ ಒಡವೆಗಳನ್ನು ದೇವರಿಗೇ ಕೊಟ್ಟಂತೆ, ಏಕೆಂದರೆ ಪ್ರತಿಭೆ ದೈವಾಯತ್ತ; ಪ್ರತಿಭೆ ಪ್ರತಿಬಿಂಬಿಸುವ ಸೌಂದರ್ಯವು ದೇವನಿರ್ಮಿತ ಸೃಷ್ಟಿಯಲ್ಲಿಯದು. ಕವನವೇ ಕವಿಯ ಕಮಲೆ, ಅಮರಸಖಿ, ಇಂಥ ಕವಿಯ ಬಾಳೇ ಕವಿ ಬಯಸುವ ಗೊಲ್ಲನ ಬಾಳು :

“ಗೊಲ್ಲರು ಊದುವ ಕೊಳಲಿನ ದನಿಯಲಿ
ಜೀವವು ನಲಿನಲಿದಾಡುವದು !”

ನಾನು ಸಾಯಲು ನನ್ನ ಕವನಗಳ ಮರೆತು ಬಿಡಿ ಎಂದು ಕವಿ ಹೇಳುತ್ತಾನೆ. ಆದರೆ ಇಂಥ ಮುದ್ದು ಕವನಗಳನ್ನು ಮರೆಯುವುದು ಹೇಗೆ ? ಕವಿಯೇ ಹೇಳಿದಂತೆ ಎಲ್ಲೆಲ್ಲಿಯೂ ದೇವನ ಭಾವಪವನ ಬೀಸುತ್ತಿದೆ; ಆ ಪವನದ ಒಂದು ಪಾವನ ಸುಳಿ ಈ ಕಾವ್ಯಮಾಲೆ. ವರಕವಿಯಲ್ಲವೆಂದು ವಿನಯದಿಂದ ಹೇಳಿದ ಕವಿಯ ಪ್ರಸಾದ ವಾಣಿಯು ಈ ಸಂಗ್ರಹದಲ್ಲೆಲ್ಲ ನಮ್ಮನ್ನು ತಣಿಸುತ್ತದೆ.

(೪)

ಈ ಕವನಗಳ ಬಗ್ಗೆ ಇನ್ನೊಂದು ಮಾತು ಹೇಳಬೇಕು. ಕವಿಯ ವ್ಯಕ್ತಿತ್ವ ಇಲ್ಲಿ ಒಂದು ಹವಣನ್ನರಿತಿದೆ, ಹದಕ್ಕೆ ಬಂದಿದೆ. ಯಾವ ಒಂದೇ ಒಂದು ಮಾತನ್ನೂ ಕವಿಯು ದೀರ್ಘಕ್ಕೊಯ್ಯುವುದಿಲ್ಲ. ಇಲ್ಲಿ ದೇವಭಕ್ತಿ ಹಾಗೂ ಅಚಿಂತ್ಯೋಪಾಸನೆಯಿದೆ. ಆದರೆ ಅದು ಅನುಭಾವವಾಗಿ ಗಹನವಾಗಿಲ್ಲ. ಇಲ್ಲಿ ಸಮಾಜಸೇವೆಯ ಉದಾತ್ತ ಪ್ರೇರಣೆಯಿದೆ. ಆದರೆ ಅದು ಗಡುಚಾಗಿ ಒಂದು ‘ವಾದ’ವಾಗಿಲ್ಲ. ಭೂಮಿತಾಯಿಯಲ್ಲಿ ಒಂದು ಆಳವಾದ ಶ್ರದ್ಧೆಯಿದೆ. ಆದರೆ ಮಿತಿಯನ್ನರಿಯದ ವಿಡಂಬನೆಗೆ ಅದು ಆಸ್ಪದ ಕೊಟ್ಟಿಲ್ಲ. ಹಾಸ್ಯವಿದೆ; ಆದರೆ ಅದು ಗಹಗಹಿಕೆಯಾಗಿಲ್ಲ. ಕುರುಣೆಯಿದೆ; ಅದು ಆರ್ತತೆಯಾಗಿಲ್ಲ. ಒಲುಮೆ–ನಿಸರ್ಗ ಪ್ರೀತಿಗಳಿವೆ; ಆದರೆ ಅವು ತುಂಬಿ ಬಂದ ಮಾನವೀಯ ಭಾವನೆಗಳೇ ಹೊರತು ಅನುಭಾವದಂತಹ ರಹಸ್ಯಗಳಲ್ಲ. ಹೀಗೆ ಒಂದು ಸಹಜ, ಮಧುರ, ಗವ್ಯ

ಸಮನ್ವಯವನ್ನು ಕವಿಯ ವ್ಯಕ್ತಿತ್ವವು ಸಾಧಿಸಿದೆ. ಇಂದು ಎಲ್ಲರಲ್ಲಿಯೂ ಇರಬೇಕಾದ ಸಂಸ್ಕೃತಿಗೆ ಒಂದು ಚೆಲುವ ಕನ್ನಡಿ ಹಿಡಿದಂತಿದೆ ಈ ಕವನಸಂಗ್ರಹ.

ಶೈಲಿಯಲ್ಲಿಯೂ ಹಾಗೆಯೇ. ಸಹಜವಾಗಿ ಮಾತನಾಡುತ್ತ ಆಡುತ್ತ –

"ದೀನಗಿಂತ ದೇವ ಬಡವ–
ನೆಂದು ಬಗೆದೆಯಾ ?"

"ತಾಯಿಯು ದೇವರಿಗಿಂತಲೂ ಮೇಲು,
ದೇವರ ಮೊಲೆಯಲಿ ದೊರೆವುದೇ ಹಾಲು ?"

ಎಂಬ ಉಕ್ತಿಗಳಲ್ಲಿಯ ಅಪೂರ್ವ ಕಾಂತಿಯನ್ನು ಕವಿಯು ನೀಡುತ್ತಾನೆ. ವ್ಯಕ್ತಿತ್ವದ ಆ ಸುಂದರ–ಬಂಧುರ, ರಮ್ಯ–ಗಮ್ಯ ಸಮನ್ವಯ ಶೈಲಿಯ ಈ ಸೌಕುಮಾರ್ಯ ಹಾಗೂ ಪ್ರಸಾದ, ಈ ಎರಡೂ ಗುಣಗಳು ಶ್ರೀ ದಿನಕರ ದೇಸಾಯರ ಪ್ರತಿಭೆಗೆ ಆಧುನಿಕ ಕಾವ್ಯದಲ್ಲಿ ಒಂದು ಅನನ್ಯ ಸ್ಥಾನವನ್ನು ಕಲ್ಪಿಸಿ ಕೊಟ್ಟಿವೆ. ಅವರ ದೇಶಸೇವೆಯಂತೆ ಅವರ ಕಾವ್ಯ ಪ್ರತಿಭೆಯೂ ನಾಡಿನ ತುಂಬೆಲ್ಲ ಬಹು ಕಾಲ ಕಂಪುವಿಡಿದು ಗಮಗಮಿಸಲಿ. ಅವರ ಕಾವ್ಯದ ರಮ್ಯ–ಗಮ್ಯತೆಗಳು ಇನ್ನೂ ವಿಸ್ತಾರವಾಗಿ ಹಬ್ಬಲಿ.

ರಾಜಾರಾಮ್ ಕಾಲೇಜು
ಕೊಲ್ಲಾಪುರ

ವಿ. ಕೃ. ಗೋಕಾಕ

ಕಾಣಿಕೆ

ದೇವಗಿಂದು ಭಾವಪೂಜೆ,
ಮಂಗಳಾರತಿ;
ಚಿತ್ತಭಿತ್ತಿಯಿಂದ ತಂದ
ಕವನದಾರತಿ.

ಮುಗಿಲು ಬಟ್ಟೆ, ಭೂಮಿ ತಟ್ಟೆ,
ವಿಶ್ವ–ಮೂರುತಿ,
ತಟ್ಟೆಯಲ್ಲಿ ಸುಮದ ರಾಜಿ,
ಪುಣ್ಯ ಭಾರತಿ.

ಪರ್ವತಗಳ ಶ್ರೇಣಿಯಿಂದ
ಗುಡಿಯ ಕಟ್ಟುವೆ;
ಗಗನ ವಸ್ತ್ರದಿಂದ ಮೇಲೆ
ಹೊದಿಕೆ ಹಾಕುವೆ.

ಭೃಂಗ ರವವು ವೇದಮಂತ್ರ;
ಗುಡುಗು ಭೇರಿಯು;
ಪುಣ್ಯ ಸ್ನಾನವಾಗಲೆಂದು
ಮೇಘ–ವಾರಿಯು.

ಮೋಡದಲ್ಲಿ ಮಾಯವಾದ
ಮುಗಿಲ ಹೂವನು
ಮಿಂಚುಗೋಲಿನಿಂದ ಹುಡುಕಿ
ನಿನ್ನಲಿಡುವೆನು !

ಇಂದ್ರಚಾಪ ಮಾರ್ಗದಿಂದ
ಮುಗಿಲನೇರುವೆ;
ಚಂದ್ರನನ್ನು ಹಿಡಿದು, ತಿಲಕ
ಹಣೆಗೆ ಹಚ್ಚುವೆ.

ಮಂದಪವನ ಬೀಸಣಿಕೆಯು;
ಕಡಲು ದರ್ಪಣ !
ನನ್ನ ತೊದಲುನುಡಿಯ ಕವನ
ನಿನಗೆ ಅರ್ಪಣ !

ಇಂತು ನಾನು ನಿನಗೆ ಕೊಡುವ
ಕಿರಿಯ ಕಾಣಿಕೆ !
ಮಗುವು ಭಾವಸ್ವಪ್ನದಲ್ಲಿ
ನೇಯ್ದ ಮಾಲಿಕೆ !

ಮರುಳ ನಾನು; ನಿಜವ ಮರೆತೆ,
ಕ್ಷಮಿಸು ದೇವನೆ,
ನಿನ್ನ ಒಡವೆಗಳನೆ ನನ್ನ
ವೆಂದು ಕೊಡುವೆನೆ !

❖❖

ವಿಮಾನ

ನೀಲ ದಿಗಂತಕೆ ಮೋರೆಯನೆತ್ತಿ,
ಸುಂಟರ ಗಾಳಿಯನೂ ಬದಿಗೊತ್ತಿ,
ಮುಗಿಲೊಳಗೋಡುವೆ ಮೋಡವ ಹತ್ತಿ,
ಯಂತ್ರ–ವಿಹಂಗಮ ವಾಹನವೇ.

ಐದು ಖಂಡಗಳ ಭಾರವ ಹೊತ್ತು
ಮೂರೇ ದಿನದಲಿ ವಿಶ್ವದ ಸುತ್ತು !
ಜಗದಾಕಾರವು ನಿನಗೇ ಗೊತ್ತು !
ಯಂತ್ರ–ವಿಹಂಗಮ ವಾಹನವೇ.

ಎಣ್ಣೆಯ ಕುಡಿದು ಪರಾಕ್ರಮ ತೋರಿ,
ದಶದಶ ಯೋಜನ ನಿಮಿಷಕೆ ಹಾರಿ,
ತೇಲುವ ನೀನೇ ಗಗನ–ವಿಹಾರಿ;
ಯಂತ್ರ–ವಿಹಂಗಮ ವಾಹನವೇ.

ಚಳಿಯಾದರು ಸಮ, ಮಳೆ ಬಂದರು ಸಮ,
ಒಂದೇ ವೇಗದೊಳೋಡುವ ತವ ಕ್ರಮ
ಅದ್ಭುತರಮ್ಯವು, ಶ್ರೇಷ್ಠ ವಿಹಂಗಮ;
ಯಂತ್ರ–ವಿಹಂಗಮ ವಾಹನವೇ.

ಕೋಟಿ ಕುದುರೆಗಳ ವೇಗವು ವ್ಯರ್ಥ !
ನಿನ್ನ ಪರಾಕ್ರಮ ನಿಜ ಪುರುಷಾರ್ಥ !
ವ್ಯೋಮಸಾಗರದಿ ನೀನೇ ಧೂರ್ತ !
ಯಂತ್ರ–ವಿಹಂಗಮ ವಾಹನವೇ.

ನವ ಶತಮಾನದ 'ಪ್ರಗತಿಯ' ತೋರಣ !
ಹೃದಯ ಕಠೋರವು ಮನ ಬಲು ದಾರುಣ !
ಹೊಸ ಪರಿ ಯುದ್ಧಕೆ ನೀನೇ ಕಾರಣ !
ಯಂತ್ರ–ವಿಹಂಗಮ ವಾಹನವೇ.

ಕಾಳಗದಲಿ ನೀ ಕ್ರೂರ ಕಠಿನ ಯಮ;
ಬೆಂಕಿಯ ಸುರಿಮಳೆಗರೆದು, ವಿಹಂಗಮ,
ಮನೆಮನೆಗಳ ನೀ ಮಾಡುವೆ ನೆಲಸಮ,
ಯಂತ್ರ–ವಿಹಂಗಮ ವಾಹನವೇ.

ದ್ವಾಪರ ಯುಗದಲಿ ಪುಷ್ಪ–ವಿಮಾನ;
ಕಲಿಯುಗದೊಳಗೇ ಯಂತ್ರಕೆ ಸ್ಥಾನ !
ಮಾನವ ಸಂಸ್ಕೃತಿಯಾಯಿತು ಕ್ಷೀಣ !
ಯಂತ್ರ–ವಿಹಂಗಮ ವಾಹನವೇ.

❖❖

ನನ್ನ ರಂಗಿ

ನನ್ನ ಪ್ರೇಮದ ರಂಗಿ,
ನೀನು ಬಾಡದ ಹೂವು;
ನಿನ್ನ ಹಾಸದ ಭಂಗಿ
ಯಿಂದ ನಿಲುವುದು ನೋವು.

ಹತ್ತು ವರುಷದ ಹಿಂದೆ
ನಾ ನಿನ್ನ ಕೈಹಿಡಿದೆ;
ಅಂದಿನಿಂದಲೂ ಇಂದೆ
ಪ್ರೇಮರಸವನೆ ಕುಡಿದೆ.

ನನಗೆ ನಿನ್ನದೆ ಹುಚ್ಚು
ದಿನದಿನಕೆ ಹೆಚ್ಚುವುದು,
ಕಮಲದಂತೆಯೆ ಮೆಚ್ಚು
ಅರಳರಳಿ ಮುಚ್ಚುವುದು.

ಮುಚ್ಚಿ ಅರಳಲು, ಮತ್ತೆ
ಹೆಚ್ಚು ತಿಳಿತಿಳಿಯಾಯ್ತು,
ಝುರಿ ಹರಿದು ತುಸು ಬತ್ತೆ
ಇದ್ದ ಮಲಿನವು ಹೋಯ್ತು.

ನಾವಿಬ್ಬರೂ ಜೋಡಿ
ಪಾರಿವಾಳದ ಜಾತಿ,
ಖಗದಂಪತಿಯ ನೋಡಿ
ನಾವು ಕಲಿತೆವು ಪ್ರೀತಿ

ನನ್ನ ಒಲುಮೆಯು ರೆಕ್ಕೆ
ನೀನು ಹಾರುವದಕ್ಕೆ;
ಹಾರಾಡಿ ನೀ ನಕ್ಕೆ
ಹೃದಯ ಗಗನದಿ ಚುಕ್ಕೆ.

ಪ್ರೇಮವೊಂದೇ ಜಗದ
ಮೂಲ ತತ್ವದ ನೀತಿ
ನನ್ನ ರಂಗಿಯ ಮೊಗದ
ಮಂದಹಾಸದ ರೀತಿ.

ನನ್ನ ಪ್ರೇಮದ ರಂಗಿ,
ನೀನು ಬಾಡದ ಹೂವು,
ನಿನ್ನ ಹಾಸದ ಭಂಗಿ –
ಯಿಂದ ನಿಲುವುದು ನೋವು.

❖❖

ಭಾರತ ಭೂಮಿಯ ಬಡತನ

ಭಾರತ ಭೂಮಿಯ ಬಡತನವು
ವಿಶ್ವಕುಟುಂಬದ ಜಡತನವು !

ಧರ್ಮದ ಭೂಮಿ ಚಿರಂತನವು;
ಉದರದಿ ಕರ್ಮದ ಮಂಥನವು !

ಕೋಟಿ ಮಾನವರ ಕಣ್ಣೀರು
ಹರಿದು ತುಂಬಲದು ಮುನ್ನೀರು !

ಕಾಳಿನ ಕಣಜವು ತುಂಬಿದರೂ
ಹಸಿವೆಯು ತೀರದು ನುಂಗಿದರೂ !

ಬರಗಾಲಂಬುದು ಬೇರಿಲ್ಲಾ ;
ಯಾವಾಗಲೂ ತುತ್ತಿಗೆ ಇಲ್ಲಾ !

ಕೋಟಿ ಕೋಟಿ ಜನ ಬಾಲಕರು
ಹುಟ್ಟಿದ ಕ್ಷಣವೇ ಸಾಯುವರು !

ತೊಟ್ಟಿಲು ಮಸಣಕೆ ದೂರುವದು ;
ಮರಣವು ಜನನಕೆ ಸೇರುವುದು !

ಹುಟ್ಟು ಸಾವುಗಳ ಮಿತಿಯಿಲ್ಲ;
ಬದುಕಿದವರಿಗೂ ಗತಿಯಿಲ್ಲ !

ಬ್ರಹ್ಮದೇವನಿಗು ಬಿಡುವಿಲ್ಲ ;
ಯಮದೇವನಿಗೂ ತಡವಿಲ್ಲ !

ಪಾಪಪುಣ್ಯಗಳ ವೇದಾಂತ !
ಬಡತನವೆಂಬುದು ಸಿದ್ಧಾಂತ !

ನಡುಹಗಲಲಿ ಯಾರದು ತಪ್ಪು ?
ಯೌವನದಲಿ ಬರುವುದು ಮುಪ್ಪು !

ಚಡಪಡಿಸಿದರೂ ನರಜೀವ
ಹೋಗದು ! ಪ್ರಾಣ ಚಿರಂಜೀವ !

ಉಸಿರೆಳೆದಾಡುವ ಜೀವನವು
ಸತ್ತೂ ಬದುಕಲು, ಪಾವನವು !

ಭಾರತ ಭೂಮಿಯ ಬಡತನವು
ವಿಶ್ವ ಕುಟುಂಬದ ಜಡತನವು !

❖❖

ದೀನಗಿಂತ ದೇವ ಬಡವ !

ಹರಿಗೆ ಎಂದು ಗುಡಿಯನೊಂದ
ಕಟ್ಟುತಿರುವೆಯಾ ?
ಹರಿಯ ಒಲುಮೆ ಪಡೆದು ಪುಣ್ಯ
ಗಳಿಸುತಿರುವೆಯಾ ?

ಹುಚ್ಚ, ನೀನು ಹಳ್ಳಿಗೋಡು;
ದೀನ ಜನರ ಪಾಡ ನೋಡು;
ಇರಲು ಗುಡಿಲು ಇಲ್ಲವಲ್ಲ !
ಹೊಟ್ಟೆ ತುಂಬ ಅನ್ನವಿಲ್ಲ !
ಹರಿಗೆ ಎಂದು ಗುಡಿಯನೊಂದ ಕಟ್ಟುತಿರುವೆಯಾ ?

ಹರಿಯ ವಿಶ್ವರೂಪವನ್ನು
ಮರೆತು ಬಿಟ್ಟೆಯಾ ?
ಜಗಕೆ ಗೋಡೆ ಹಾಕಿ ಗುಡಿಯ
ಕಟ್ಟಬಲ್ಲೆಯಾ ?
ದೀನಗೊಂದು ಗೂಡು ಸಾಕು;
ದೇವಗೊಂದು ವಿಶ್ವ ಬೇಕು;
ಮಣ್ಣ ಹುಲ್ಲ ಸಣ್ಣ ಗೂಡು –
ಬಡವಗದುವೆ ಸಿರಿಯ ಬೀಡು.
ಹರಿಗೆ ಎಂದು ಗುಡಿಯನೊಂದ
ಕಟ್ಟುತಿರುವೆಯಾ ?
ದೀನಗಿಂತ ದೇವ ಬಡವ –
ನೆಂದು ಬಗೆದೆಯಾ ?

❖❖

ಹಿಂದಿನ ದಿನಗಳು

ಹಳೆಯ ಹಿಂದಿನ ದಿನಗಳೆಂದರೆ
ಮನಕೆ ಹಬ್ಬದ ಊಟವು;
ನೆನಪು ಬಂದರೆ, ಕನಸಿನಂತೆಯೆ
ಕಾಣುವುದು ಹಳೆ ನೋಟವು.

ನಾನು ಸಣ್ಣವ, ನನ್ನ ತಂಗಿಯು
ಇನ್ನು ಚಿಕ್ಕವಳಿದ್ದಳು;
ಅಂದಿನಾ ದಿನಗಳಲಿ ಆಕೆಗೆ
ಯಾರು ಹೋಲದೆ ಇದ್ದರು

ಅವಳ ಮುದ್ದಿನ ಮೊಗವು ಚೆಂದವು
ತಾನೆ ಅರಳಿದ ಹೂವದು,
ಬಾಳ ಬಿಸಿಲಿನ ತಾಪವಿಲ್ಲದ
ತಾಯಿ ನೆರಳಿನ ಹೂವದು.

ಆಕೆ, ನಾನೂ, ನೆರೆಯ ಕಾಮೂ,
ಅಲ್ಲಿ–ಇಲ್ಲಿಯ ಮಕ್ಕಳು
ತೋಟದಲಿ ಸುಳಿದಾಡುತಿದ್ದೆವು
ಬರುವ ವರೆಗೂ ಕತ್ತಲು.

ಗೇರಹಣ್ಣಿನ ಮರದ ಬುಡದಲಿ
ಹಿಗ್ಗಿ ಹಾರುತಲಿದ್ದೆವು;
ಹಕ್ಕಿ ಕೊರಕಿದ ಹಣ್ಣಿಗೂ ಸಹ
ನಾವು ಕೋರುತಲಿದ್ದೆವು !

ಹಕ್ಕಿಯಂತೆಯೆ ಹಾರಿ, ಹಣ್ಣನು
ತಿನ್ನುವಾಸೆಯು ಮನದಲಿ;
ಇಣಚಿಯಂತೆಯೆ ಹಣಕಿ, ಮರವನು
ಹತ್ತುವಾಸೆಯು ಕ್ಷಣದಲಿ.

ಹೊಳೆಯ ದಂಡೆಯ ಮರಳಿನಲಿ ನಾವ್
ಆಟಪಾಟವ ಹೂಡಲು,
ನೀರಿನಂಚಿಗೆ ಮೀನು–ಮರಿಗಳು
ಸುಳಿದು ಬಿಸಿಲಲಿ ಹೊಳೆಯಲು –

ಮೀನಿನಂತೆಯೆ ಮಿಂಚಿ ನೀರಲಿ
ಈಜುವಾಸೆಯು ಮನಕದು;
ಈಜಿ ಮುಂದಕೆ ದೂರ ಹೋಗುವ
ಕಡಲ ಕಾಣುವ ಕನಸದು.

ಮನೆಯ ಮುಂದಿನ ಗುಡ್ಡ ದೊಡ್ಡದು.
ಅದರ ತುದಿಯನು ಮುಟ್ಟಲು
ಏನು ಹರುಷವೊ ಏನು ಸರಸವೊ
ನಾವು ಕೈಗಳ ತಟ್ಟಲು !

ಕಡಲ ಮೇಲಿನ ಹಡಗ ತೋರಲು
ಮನಸಿಗೊಂದೇ ಆಸೆಯು
ದೂರ ದೇಶಕೆ ಹೋಗಿ ಮರಳುವ
ಕನಸಿನಲ್ಲಿ ಪಿಪಾಸೆಯು.

ಹಳೆಯ ಹಿಂದಿನ ಚಂದ ದಿನಗಳು
ಇಂದಿಗವು ಕನಸಾದವು;
ಚಿಕ್ಕತನದಲಿ ಚೊಕ್ಕ ಕನಸವು
ಇಂದು ಮಸಮಸಕಾದವು.

❖❖

ಹೆಸರು

ಗಂಡ :

ಹೆಸರಾವುದು ನನ್ನಯ ಪ್ರಿಯತಮೆಗೆ ?
ಯಾವುದು ಹೆಸರಲಿ ಕರೆಯಿಲಿ ನಿನಗೆ ?
ಕಮಲಾ, ವಿಮಲಾ, ಲೀಲಾ, ಮಾಲಾ,
ನಲಿನೀ, ದಲಿನೀ, ಸೀತಾ, ಗೀತಾ,
ಎಂಬೀ ಸಕ್ಕದ ಹೆಸರೊಳಗೊಂದನು
ಆರಿಸಿಕೊಂಬುದು ಓ ನನ್ನರಸಿ.

ಕತ್ತುರ್ತಿ ಕನ್ನಡದಿಂಪಿನ ಹೆಸರುಗ
ಳಿದ್ದೂ ಸಕ್ಕದ ನಾಮಗಳೇಕೆ ?
ಅನ್ನುವೆಯಾದರೆ ಇವುಗಳ ಕೇಳು :
ನೀಲೀ, ನಿಂಗೀ, ಮಾದೀ, ಗೋದೀ,
ನಾಗೀ, ಬಾಗೀ, ಬೆಳ್ಳೀ, ಹೂವೀ,
ಆರಿಸಿಕೊಂಬುದು ಓ ನನ್ನರಸಿ,

ಹೆಂಡತಿ :

ಹೆಸರೊಳಗೇನಿದೆ ಓ ನನ್ನರಸಾ,
ಹೆಸರೆಂದರೆ ಬರಿ ಮಾತಿನ ಸರಸ !
'ಕಮಲೇ' ಅನ್ನಲು ತಾವರೆ ನಾನೇ !
'ನಾಗೀ' ಅನ್ನಲು ನಾಗಿಣಿಯೇನೇ ?
ಯಾವುದು ಹೆಸರಾದರು ನನಗೇನು ?
ನಿಮ್ಮವಳೆನ್ನಿರಿ, ಹಿಗ್ಗುವೆ ನಾನು !

❖❖

ಗೋವಿಂದ

ಅಂಗಿಯ ಮೇಲದು ಶಾಯಿಯ ಚುಕ್ಕಿ.
ಜೇಬಿನಲ್ಲಿ ಚಕ್ಕಲಿ ಅವಲಕ್ಕಿ,
ನಾಲಿಗೆ ಬಹಳೇ ಹೋಗಿದೆ ಸೊಕ್ಕಿ !
ಬಂದ ಬಂದನವ ಗೋವಿಂದಾ.

ಮಾಮಿಡಿಯೊಂದೂ ಮರದೊಳಗಿಲ್ಲ ;
ಪೇರಲ ಹಣ್ಣೂ ಕಾಣುವುದಿಲ್ಲ;
ಆತನು ಹುಡುಕದ ಗಿಡಮರವಿಲ್ಲ !
ಬಂದ ಬಂದನವ ಗೋವಿಂದಾ.

ಸಂಗಡ ಹುಡುಗರ ತಂಡವ ಕಟ್ಟಿ,
ಊರಿನ ನಾಲ್ಕೂ ಗಡಿಯನೆ ಮುಟ್ಟಿ,
ತಂಟೆಯ ತರುವುದಕವನೇ ಗಟ್ಟಿ !
ಬಂದ ಬಂದನವ ಗೋವಿಂದಾ.

ಕುಂಬಾರನ ಗಡಿಗೆಗೆ ಗುರಿ ಹಿಡಿದು,
ಮಣ್ಣಿನ ಕೊಡವನು ಠಣ್ಣನೆ ಒಡೆದು,
ಅಡಗಿದ ಸ್ಥಳದಿಂ ಬೇಗನೆ ನಡೆದು
ಬಂದ ಬಂದನವ ಗೋವಿಂದಾ.

ಹುಣಸೆಯ ಮರವನು ತುದಿವರೆಗೇರಿ,
ಹುಲ್ಲಿನ ಬಣವೆಗೆ ಡಬ್ಬನೆ ಹಾರಿ,
ಅತುಲ ಪರಾಕ್ರಮ ಜಗದಲಿ ತೋರಿ
ಬಂದ ಬಂದನವ ಗೋವಿಂದಾ.

ಮೂಲೆಮೂಲೆಗೂ ಅವನದೇ ಕಣ್ಣು:
ಬೇಲಿಯ ಅಂಚಿನ ಅನಾಸು ಹಣ್ಣು!
ಆತನ ಬಾಯಲಿ ಬೀಳಲಿ ಮಣ್ಣು!
ಬಂದ ಬಂದನವ ಗೋವಿಂದಾ.

ಮಂಗನವೊಲು ಟೊಂಗೆಯ ಹಾರಾಟ,
ಕುರಿಮರಿ ಪರಿಯಲಿ ಜಿಗಿಜಿಗಿದಾಟ,
ಸಂಜೆಯ ವರೆಗೂ ಬರಿ ಚೆಲ್ಲಾಟ!
ಬಂದ ಬಂದನವ ಗೋವಿಂದಾ.

ನೆಟ್ಟನೆ ಮೂಗೂ, ಉದ್ದನ ಜುಟ್ಟು,
ಜಟ್ಟಿಯ ತೆರದಲಿ ದೇಹದ ಕಟ್ಟು,
ಇವನೇ ಶ್ಯಾಮಲ ವರ್ಣದ ಕಿಟ್ಟು!
ಬಂದ ಬಂದನವ ಗೋವಿಂದಾ.

ಬೃಂದಾವನದಲಿ ನಮ್ಮ ಮುಕುಂದ!
ಬೆಣ್ಣೆಯ ಕಳ್ಳನಿಗಿಂತಲು ಚಂದ!
ನಮ್ಮೀ ಹಳ್ಳಿಗೆ ಗೋಪಿಯ ಕಂದ!
ಬಂದ ಬಂದನವ ಗೋವಿಂದಾ.

❖❖

ಯಮುನೆ

ಯಮುನೆಯ ಮೈಬಣ್ಣವು ಕರಿದಾದರು,
ಕಣ್ಣಲಿ ಕಾಂತಿಯು ಮೂಡಿಹದು;
ಚಂದಿರನೊಲವಿನ ನೈದಿಲೆಯಂದದಿ
ಮೊಗದಲಿ ಶಾಂತಿಯು ಕೂಡಿಹುದು.

ನೀರನು ತಾರಲು ಬಾವಿಗೆ ಹೋಗಲು
ಯಮುನೆಯ ಕಂಡೆನು ತೋಷದಲಿ;
ಬಾವಿಯ ದಾರಿಯಲಿರುವಾಲದ ಮರ–
ದಾಚೆಗೆ ನಿಂತೆನು ಪಾಶದಲಿ.

ಯಮುನೆಯ ಮೈಬಣ್ಣವು ಕರಿದಾದರು,
ಹೃದಯದಿ ಮೋಹವು ತೇಲುವದು;
ರಮಣಿಯ ಮೋರೆಯು ಚಂದ್ರನ ತೇಜಕೆ
ಎಲ್ಲಾ ತರದಲಿ ಹೋಲುವದು !

ಬೆಳಗಿನ ಜಾವದಿ ಆಕಳ ಹಾಲನು
ಹಿಂಡುತಲಿರುವಳು ನನ್ನರಸಿ,
ಆಗವಳಾ ನಗು ಹಾಲಿನಗಿಂತಲು
ಬಿಳುಪಾಗೆಸೆವುದು ಹೊರಸೂಸಿ !

ಮಳೆಗಾಲಲಿ ನೀರ್ ಸುರಿಸುವ ಮೋಡವು
ಯಮುನೆಯ ಮೊಗಕದು ಹೋಲುವುದು;
ಚಳಿಗಾಲದ ಬಿಳಿ ಮೋಡವು ಸುಮ್ಮನೆ,
ನೀರಿಲ್ಲದೆ ಬರಿ ತೇಲುವುದು !

ಯಮುನೆಯ ಮೈಬಣ್ಣವು ಕರಿದಾದರು,
ಹೃದಯದ ಪ್ರೇಮವು ಹೊಳೆಯುವುದು.
ಹೊರಗಿನ ಬೆಡಗಿಗೆ ಮರಳಾಗುವ ಮನ
ಚಂಚಲ ವೃತ್ತಿಯ ತಳೆಯುವುದು.

ಯಮುನೆಯ ಮೈಬಣ್ಣವು ಕರಿದಾದರು,
ಕಣ್ಣಲಿ ಕಾಂತಿಯು ಮೂಡಿಹುದು;
ಚಂದಿರನೊಲವಿನ ನೈದಿಲೆಯಂದದಿ
ಮೊಗದಲಿ ಶಾಂತಿಯು ಕೂಡಿಹುದು.

❖❖

ತರುಣರ ದಸರೆ

ಹೆಜ್ಜೆಯ ಹಾಕುತ ಬನ್ನಿರಿ ಮುಂದೆ
ಹೂಡಲು ದಸರೆಯ ಹಬ್ಬವನು;
ಉತ್ಸಾಹದ ಕಿರುಗೆಜ್ಜೆಯ ಕಟ್ಟಿ
ಹಾಡಿರಿ ನಾಡಿನ ಕಬ್ಬವನು.

ಹಬ್ಬದೊಳೇ ಹಿರಿ ದಸರೆಯ ಹಬ್ಬ,
ಕಬ್ಬದೊಳೇ ಸಿರಿ ರನ್ನನ ಕಬ್ಬ,
ಪದದೊಳಗೆಲ್ಲಾ ದಾಸರ ಹಾಡು,
ಧರೆಯೊಳು ನಮದೇ ಕನ್ನಡ ನಾಡು !

ನಾಡಿನ ಹಾಡನು ಹಾಡುತ ಬನ್ನಿ
ದಸರೆಯ ಸಡಗರ ನೋಡಲು ತನ್ನಿ.
ಮೋಡಗಳೆಲ್ಲವು ಸರಿದವು ಹಿಂದೆ,
ಆಗಸವು ತಿಳಿ, ಬಿಳುಪಾಯ್ತು;

ಚಳಿಗಾಳೆಂಬುವ ಸಗ್ಗದ ಅಗಸನು
ಗಗನವ ತೊಳೆದನೆ ? ನೆನೆಪಾಯ್ತು.
ಬಿಸಿಲೇ ಬಾರದ ಮಳೆಗಾಲ
ಹಿಂದಕೆ ಸರಿಯಿತು ಆ ಕಾಲ;

ಬಂದಿದೆ ಬೆಳಕಿನ ಚಳಿಗಾಲ
ಅರಿವನು ಬೀರುವ ನವಕಾಲ
ಮುಗಿಲಿನ ಮಳೆ ಮುಗಿಯಿತು ಅನ್ನಿ
ನಗುಮಳೆಯನು ಸುರಿವುತ ಬನ್ನಿ

ಸೀಮೋಲ್ಲಂಘನ ಮಾಡಿರಿ ಇಂದೆ
ಭೀತಿಯ ಸೀಮೆಯ ದಾಟುತಲಿ
ಧೈರ್ಯಧ್ವಜವನು ಮರೆಸುವ ಹುಂದೆ
ನಡೆಯಿರಿ ನೀತಿಯ ನಾಡಿನಲಿ.

ಧರ್ಮದ ಗಡಿಯನು ದಾಟಲು ಬೇಡಿ;
ಕರ್ಮದ ಬೆವರಲಿ ಸ್ನಾನವ ಮಾಡಿ,
ಮರ್ಮವ ತಿಳಿದೆಲ್ಲರು ಹಾರಾಡಿ,
ಚರ್ಮದ ದೇಹದ ಸಾರ್ಥಕ ಮಾಡಿ.

ಬನ್ನಿಯ ಗಿಡ ಬಂದಿತು ಅನ್ನಿ
ಚಿಣ್ಣರೆ, ನೀವೆಲ್ಲರು ತನ್ನಿ
ಹಿಂದಿನ ಕಾಲವು ಹಿಂದಕೆ ಅನ್ನಿ
ಮುಂದಿನ ಕಾಲವು ನಮ್ಮುಂದೆ.

ನಾಡಿನ ಯುವಕರೆ ಮುಂದಕೆ ಬನ್ನಿ,
ಮುದುಕರು ನಿಲ್ಲಲಿ ಹಿಂದಿಂದೆ
ಹೊಸ ಹೊಸ ಮತಗಳು ಬಗೆಬಗೆ ಹುರುಪಿನ
ಚೆನ್ನ ಚಟಾಕಿಯ ಹಾರಿಸುವಾ;

ಕೆಂಪಿನ ವರ್ಣದ, ಕೆಚ್ಚದೆ ಬಣ್ಣದ,
ಕಿಡಿಗಳನವರಿಗೆ ತೋರಿಸುವಾ.
ಮುದುಕರು ನಿಲ್ಲಲಿ ತುಸು ಹಿಂದೆ
ಹುಡುಗರ ಸಾಹಸವೇ ಇಂದೆ.

ಮುದುಕರು ಪಾಪಾ ! ಕಂಗಳು ಮಂದ,
ಮುಂದಿನ ನೋಟವ ನೋಡಲು ಅಂಧ;
ಹೊಸ ಹೊಸ ರೀತಿಯ ದೂರುವರು
ಹಳೆಯ ಪುರಾಣವ ಸಾರುವರು !

ಅಂಥ ಭಕ್ತಿಗೇ ಉರಿಯನು ಒಡ್ಡಿ
ಎಲ್ಲರು ನಿಲ್ಲಿರಿ ಗೋಲಾಗಿ,
ಚಂದದಿಂದ ಚಪ್ಪಾಳೆಯ ತಟ್ಟುತ
ತಿರುಗಿರಿ ಸುತ್ತಲು ಸಾಲಾಗಿ.

ದೊಡ್ಡ ಮನಸ್ಸಿನ ಕುದುರೆಯ ಹತ್ತಿ
ಕೈಯಲಿ ಹಿಡಿಯಿರಿ ಧೈರ್ಯದ ಕತ್ತಿ;
ವಿಶ್ವಧರ್ಮದಾ ರುಮಾಲು ಸುತ್ತಿ
ಆತ್ಮ ಸಂಯಮನ ಲಗಾಮು ಒತ್ತಿ

ದುಗುಡವ ಬಗ್ಗಿಸಿ ಹಿರಿ ಹಿರಿ ಹಿಗ್ಗಿ
ಎಲ್ಲ ಜಾತಿಗಳ ಗುಂಪನು ನುಗ್ಗಿ,
ಬೇಧವನೊಡೆಯಿರಿ ತಲೆಯನು ಬಗ್ಗಿ;
ಆಗ ನಲಿಯುವುದು ಸಂತಸ ಸುಗ್ಗಿ
ಭಾರತ ಭೂಮಿಯ ಅಬಲತೆ ಕುಗ್ಗಿ;

ಅಂದು ಮೂಡುವನು ದಸರೆಯ ಅರುಣ,
ಅಜ್ಞಾನದ ಕತ್ತಲೆಗೇ ಮರಣ.

ಮಾನವ ಧರ್ಮದ ದಸರೆಯ ಮಾಡಿ
ಕನ್ನಡ ನಾಡಿನ ಹಾಡನು ಹಾಡಿ
ನವೀನ ಆಸೆಯ ಹೊಸ ಚಿಗರುಗಳೇ
ನಮ್ಮೀ ಕುದುರೆಗೆ ಆಹಾರ;
ನಾವು ಹೊರಡುವುದು ವಿಜಯಾದಶಮಿ,
ಅಂದಿನ ದಿನವೇ ರವಿವಾರ

ಸೀಮೋಲ್ಲಂಘನ ಮಾಡಿರಿ ಬನ್ನಿ,
ಸುಗುಣಗಳೆಂಬಾಯುಧಗಳ ತನ್ನಿ,
ಬನ್ನಿಯ ಗಿಡದಡಿ ಸೇರಲು ಬನ್ನಿ,
ಕುಣಿಯುತ ಬನ್ನಿರಿ, ಸ್ವರ್ಣವ ತನ್ನಿ

ಒಂಟೆಯ ಮೇಲಿನ ಯಾರೋ ಜಾಣ
ಒಡಕು ನಗಾರಿಯ ಬಾರಿಸೆ,ಅವನ
ರುಂಡವ ಬೀಳಿಸಿ, ಹೋಗಲಿ ಪ್ರಾಣ;
ಮುಂದೆ ಸಾಗಲೈ ಶೂರ ಗಣ.

ರನ್ನನ ಕವನದ ಕೊಂಬನು ಊದಿ
ಧೇಹದೊಳೆಲ್ಲಾ ಶೌರ್ಯವ ಸೇದಿ;
ಪಂಪನ ಹೆಸರನು ಸೊಂಟಕೆ ಸುತ್ತಿ
ರನ್ನನ ಭೀಮನ ಗದೆಯನು ಎತ್ತಿ;

ಹುಕ್ಕನ ಬುಕ್ಕನ ಶಸ್ತ್ರವ ಹೂಡಿ
ವಿದ್ಯಾರಣ್ಯರ ಚರಿತವ ಹಾಡಿ;
ದಸರೆಯ ಹಬ್ಬವ ಹಬ್ಬಿಸಿರಿ,
ಕನ್ನಡ ನಾಡನು ಹಿಗ್ಗಿಸಿರಿ.

ಬನ್ನಿಯ ಗಿಡದಡಿ ಬೇಗನೆ ಸೇರಿ,
ಮುಗಿಲಿಗೆ ಮುಟ್ಟಿದ ವೃಕ್ಷವನೇರಿ,
ಸುರಲೋಕದ ಎಲೆಗಳನೇ ಕುಯ್ದು
ತನ್ನಿರಿ ಭೂಮಿಗೆ ಬನ್ನಿಯ ಆಯ್ದು;

ಅಂದು ಅಡಗುವುದು ಕುಂದು
ಭೂಮಿಯ ದುಃಖವು ಬೆಂದು
ಪೂರ್ವದು ಬೇಕ್ಕೈ ಪೂರ್ವದು ಎಂದು
ಏಕೆ ಬೊಗಳುವಿರಿ ಸುಮ್ಮಗೆ ನಿಂದು ?

ಹಳಬರ ಹೆಸರದು ಸ್ಫೂರ್ತಿಗೆ ಸಾಕು
ಹೊಸ ಕಾಲಕೆ ಹೊಸ ಸಿಂಗರ ಬೇಕು;
ಹಿಂದಿನ ವೈಭವ ಮುಂದಕೆ ದೂಡಿ,
ಸುಮ್ಮನೆ ಬೆಚ್ಚಗೆ ಕುಳ್ಳಿರಬೇಡಿ

ದಸರೆಯ ಹೊಸ ಪರಿ ಹೂಡಲು ಬೇಕು.
ಹಿಂದಿನ ಕಾಲದ ರೂಢಿಯು ಸಾಕು
ಹಿರಿಯರದೆಲ್ಲವು ಬಲು ಚೆನ್ನ;
ಆದರೆ ಏನೈ ? ಆ ಚಿನ್ನ

ಅವರೊಂದಿಗೆ ಕೂಡಿದೆ ಮಣ್ಣ,
ಇಂದಿಗೆ ಇಹುದೇ ಹೇಳಣ್ಣಾ ?

ಹಿಂದಿನ ಹಿರಿಯರು ಎರಡಡಿಯ
ನಡೆದುದರಿಂದಲೆ ಈ ಗಡಿಯ
ಮುಟ್ಟಿದರಲ್ಲವೆ ? ನಾವೀಗ
ಮುಂದಡಿಯಿಡುವುದು ಬಲು ಬೇಗ

ಅಂದು ಬೆಳಗುವುದು ನವರಾತ್ರಿ
ಬೆಳಕಿಂ ಹೊಳೆವುದು ಈ ಧಾತ್ರಿ
ಅಂದಿನ ದಿವಸವು ನಿಜ ದಸರೆ,
ಇಂದಿನ ದಸರೆಯು ಬರಿ ಹೆಸರೆ !

ಪಕ್ಕದೊಳೆರಡೂ ರೆಕ್ಕೆಯು ಕಟ್ಟಿ,
ಹಕ್ಕಿಯ ತೆರದಲಿ ಮುಗಿಲನೆ ಮುಟ್ಟಿ,
ನಭದಲಿ ನಂದಾದೀಪವ ಕಚ್ಚಿ,
ದಸರೆಯ ಹಬ್ಬದ ಜ್ಯೋತಿಯ ಹಚ್ಚಿ;

ಕೊನೆಯಲಿ ಗಗನದ ತುದಿವರೆಗೇರಿ,
ತಾರಾಗಣಗಳ ಮೇಲಕೆ ಹಾರಿ,
ಯಾರೂ ಕಾಣದ ಲೋಕವ ಸೇರಿ,
ವಿಶ್ವಾನಂದ ಸುಗಂಧವ ಬೀರಿ;

ಸೀಮೋಲ್ಲಂಘನ ತೀರಿತು ಅಂದು
ವಿಶ್ವಪ್ರಪಂಚದ ತುದಿಯೇ ಬಂದು !
ಅಂದಿನ ದಿನವೇ ನಿಜ ದಸರೆ,
ಇಂದಿನ ದಸರೆಯು ಬರಿ ಹೆಸರೆ !

❖❖

ಬಡತನ

ಬಡತನದ ಬೇಗೆಯಲಿ ಬೆಂದ ಭಿಕ್ಷುಕನೊಬ್ಬ
ಮಸಣದಲಿ ಮಲಗಿದ್ದ ಹೆಣಕೆ ಅಂದ :
"ಬಡತನದ ಭಾರವನು ಸ್ವಲ್ಪ ಹಿಡಿ, ಎದ್ದೇಳು,
ಬದುಕಿಸೆನ್ನನು ತಲೆಯ ಭಾರದಿಂದ;

ಇತ್ತೀಚೆ ಬಾಳುವೆಗೆ ಮತ್ತಿಷ್ಟು ಬೇಸತ್ತು
ನಿನ್ನ ಬಗೆ ನನಗಿಂತಲೂ ಮಿಗಿಲು ಎಂದು,
ನಿನ್ನೆಡೆಗೆ ಬಂದಿಹೆನು ತಾಪ ಕಳೆಯಲಿಕೆಂದು
ನಿನ್ನ ಶಾಂತಿಯ ನಾನು ಪಡೆಯಲೆಂದು".

ಬಡತನದ ಬಾಳ್ವೆಗಿಂತಲು ಮರಣ ಲೇಸೆಂದು
ಒಪ್ಪಿಕೊಳ್ಳುವ ತೆರದಿ ಬಿದ್ದ ಹೆಣವು
ಮರುಮಾತನಾಡದೆಯೆ ಮೌನದಲಿ ಮಲಗಿತ್ತು !
ಇಂತಿಹುದು ಬಡತನದ ಕೆಟ್ಟ ಋಣವು !

❖❖

ಪಿರಿ ಪಿರಿ ಮಳೆಯು

ಪಿರಿ ಪಿರಿ ಮಳೆಯು,
ಹರಿಯಿತು ಹೊಳೆಯು,
ತೊಳೆಯಲು ಇಳೆಯೇ ಹಸನಾಯ್ತು;
ಹರುಷದ ಬೆಳೆಯು,
ಎಲ್ಲೆಡೆ ಕಳೆಯು,
ಭೂಮಿಯ ತಲವೇ ಬೆಸನಾಯ್ತು !

ತಿರೆಯಂತಿರಲೂ,
ಜೀವನವೊಂದೆಡೆ
ತಲ್ಲಣಗೊಳುತಿದೆ ! ಏನೆಂಬೆ ?
ಬಡವನ ಗುಡಿಸಲು
ಪಟಪಟ ಸೋರಲು,
ಮನೆಯಲಿ ಕೆಸರೇ ಕೆಸರೆಂದೆ !

❖❖

ವಾರದ ಪದ

ಸೋಮವಾರದ ಸಂತೆ
ನಮಗೆ ಬೇಕಾದಂತೆ :
ಮಂಗಳದ ಸಿರಿ ಮುತ್ತು
ಮಾರಲಿಕೆ ಬಂದಿತ್ತು

ಬುಧವಾರ ಬಂದಾಗ
ಬುದ್ಧಿ ಕೆಟ್ಟಿತು ಆಗ;
ಗುರುವಾರ ಗುರು ಸಿದ್ಧ
ಬುದ್ಧಿ ಕಲಿಸಲು ಎದ್ದ;

ಶುಕ್ರವಾರದ ಸುದ್ದಿ–
ಇಲ್ಲ ತಲೆಯಲಿ ಶುದ್ಧಿ !
ಶನಿವಾರ ಶನಿಭೂತ
ಮನೆಯಲ್ಲಿಯೇ ಕೂತ !

ರವಿವಾರ ವಿಶ್ರಾಂತಿ ?
ಹೊಟ್ಟೆಯೊಳಗಿನ ಕ್ರಾಂತಿ !
ಇಂತು ಮುಗಿಯಿತು ವಾರ !
ಮಾನವನ ಉದ್ಧಾರ !

❖❖

ಸ್ವರ್ಗ ಮತ್ತು ಭೂಮಿ

ಸಗ್ಗವನೇರಲು ಬಯಸುವದೇತಕೆ ?
ಅಂದದ ಚಂದದ ಭೂಮಿಗೆ ಬಂದು
ನೆಲದಲಿ ಬೆಳೆದೂ ಹೊಲದಲಿ ಸುಳಿದೂ
ತೋಟದ ತಿನಿವಣ್ಣಗಳನು ತಿಂದು

ಹಕ್ಕಿಗಳುಲುಹಿನ ಸವಿಯನು ಕೇಳಲು
ಕಿವಿಗಳಿಗದುವೇ ಕಿನ್ನರಗಾನ;
ತಿರೆಯಲಿ ಹರಿಯುವ ಝುರಿಯನು ಕುಡಿಯಲು
ನಾಲಿಗೆಗದುವೇ ಅಮೃತಪಾನ

ಕುರಿಗಳ ಕಾಯುವ ಕುರುಬನ ಕಾಣಲು
ಕಂಗಳಿಗವನೇ ಗೋಪಿಯ ಕಂದ;
ಮಕ್ಕಳ ಮಾತಿನ ಮಮತೆಯು ಮೂಡಲು
ಮನಸಿಗೆ ಸ್ವರ್ಗದ ಹಿರಿದಾನಂದ

ಮರದಡಿ ಹಸುರಿನ ಹುಲ್ಲಲಿ ಮಲಗಲು
ಸಗ್ಗಿಗರೊಡೆಯನು ಪವಡಿಸ ಸೆಜ್ಜೆ;
ನವಿಲಿನ ನೃತ್ಯದ ಚಂದವ ನೋಡಲು
ಅದುವೇ ರಂಭೆಯ ಕುಣಿತದ ಹೆಜ್ಜೆ

ನೀಲಿಯ ನಭದಲಿ ಹೊಳೆಯುವ ತಾರೆಯು
ನಮ್ಮೀ ಲೋಕದ ಬಾಡದ ಹೂವು;
ಮಳೆಗಾಲದಿ ಮೂಡುವ ಮಳೆಬಿಲ್ಲೇ
ಮಾನವ ಲೋಕದ ಕಾಮನಬಿಲ್ಲು

ಸಗ್ಗವನೇರಲು ಬಯಸುವದೇತಕೆ
ಅಂದದ ಚೆಂದದ ಭೂಮಿಗೆ ಬಂದು ?
ನೆಲದಲಿ ಬೆಳೆದೂ ಹೊಲದಲಿ ಸುಳಿದೂ
ತೋಟದ ತಿನಿವಣ್ಣುಗಳನೆ ತಿಂದು

❖❖

ಸೂಳೆ

ತುಟಿಯಲಿ ಬಣ್ಣ,
ಕಾಲಲಿ ಗೆಜ್ಜೆ,
ಹಿಂದಕೆ ಮುಂದಕೆ
ಸುಳಿವುದು ಹೆಜ್ಜೆ

ಮಿರುಗುವ ಸೀರೆ,
ಸೆರಗದು ಒರೆ,
ಕಾಮವಾಸನೆಗೆ
ಬರುವುದು ಧಾರೆ

ಮೋರೆಯ ಮೇಲೆ
ನಸು ನಸು ಹಾಸಾ,
ನಿಮಿಷಕೆ ನಿಮಿಷಕೆ
ವಿಧ ವಿಧ ವೇಷ

ಬಂಧುರ ಗಣಿಕಾ;
ಸುಂದರ ಕುಣಿತಾ;
ತುಸು ತುಸು ಮಣಿದೂ
ಮನದಲಿ ಗಣಿತಾ

ಹಾರಿತು ಹುಬ್ಬು,
ಕೋರಿತು ಕಣ್ಣು,
ಕಾಮದೇವನಿಗೆ
ಹರಕೆಯ ಹಣ್ಣು

ಮಲ್ಲಿಗೆ ಮುಡಿದು,
ನಿರಿಯನು ಹಿಡಿದು
ಮರುಳುಗೊಳಿಸುವಳು
ಮೆಲ್ಲಗೆ ನಡೆದು

ತೆಳು ತೆಳು ಕುಪ್ಪಸ
ಅಭ್ರಕದಂತೆ;
ಒಳದೋರುವ ಮೈ
ಕಾಮನ ಸಂತೆ

ಕಿವಿಯಲಿ ವಾಲಿ,
ಲಕ ಲಕ ಚಿನ್ನಾ;
ಕಾಲ ಪೈಜಣವು
ಝುಣಝುಣ ಚೆನ್ನಾ

ಗೆಜ್ಜೆಯ ಪಟ್ಟೀ
ಸೊಂಟಕೆ ಬಿಗಿದು,
ತೇಲಿ ಬಳುಕುವಳು
ಮೇಲಕೆ ಜಿಗಿದು

ಅಲಗಲು ಚೆಂದಾ
ಮೂಗಿನ ನತ್ತು;
ದಂತದ ಸಾಲೂ
ಕಟ್ಟಿದ ಮುತ್ತು

ಕುಂಕುಮ ತಿಲಕಾ
ಅತಿಶಯ ಸಣ್ಣಾ;
ಕೈಯಿಗೆ ಮೈಯಿಗೆ
ಅರಿಸಿಣ ಬಣ್ಣಾ

ಕೆನ್ನೆಗಳೆರಡೂ
ನಸು ನಸುಗೆಂಪು;
ಜೋತಾಡುವ ಜಡೆ
ಗೂದಲು ಸೊಂಪು

ಗಂಧ ಸುಗಂಧವ
ಅಂಗಕೆ ಬೀರಿ,
ಮನ ಮೋಹಿಸುವಳು
ಬಿಂಕದ ನಾರಿ

ಸಡಗರದಿಂದಲಿ
ಬೆಡಗಿನ ಸೂಳೆ
ರಂಜಿಸಿ ನಟಿಸಲು,
ಕಾಮನ ಲೀಲೆ

ಮಂಚದ ಮೇಲೆ
ರಮಿಸಲು ಹೆಣ್ಣು,
ರಮಣಿಯ ಮೇಲೆ
ರಸಿಕನ ಕಣ್ಣು

ಸುಳಿದವರಾರೈ ?
ನಲಿದವರಾರೈ ?
ಮಾಳಿಗೆಯಿಂದಲಿ
ಇಳಿದವರಾರೈ ?

ಪ್ರಣಯಿಗಳಿಂದಾ
ತುಂಬಿದ ಕೋಣೆ;
ಗುರುತಿಸು ಅಂದರೆ
ಯಾರನು ಕಾಣೆ !

ಜಾರಿದರಾರೈ
ಸುಖವನು ಹೀರೆ,
ನಾಚಿಕೆಯಿಂದಲಿ
ಅಡಗಿಸಿ ಮೋರೆ ?

ಸೂಳೆಯ ಹಾಸಾ
ರತಿಯ ವಿಲಾಸಾ
ಹೊಸ ಹೊಸ ಕಾಮಿಯ
ನವ ಮಧುಮಾಸಾ.

ಹಿಂದಿನ ಗಂಡನು
ಇಂದಿಗೆ ಇಲ್ಲಾ !
ಮುಂದಿನ ಮಿಂಡನು
ಯಾರದು ಬಲ್ಲಾ ?

ಬಂದವರಾರೈ ?
ಪರಿಚಯವಿಲ್ಲಾ,
ಆದರು ಕರೆವಳು
ನಲ್ಲಾ ! ನಲ್ಲಾ !

ಸೂಳೆಯ ಮನೆಯಲಿ
ಕಾಣದು ಭೇದಾ !
ಧರ್ಮದ ಹುಚ್ಚೊ
ಜಾತಿಯ ವಾದಾ !

ಯೌವನದಲಿ ಸಂ
ಭೋಗದ ಭುಕ್ತಿ;
ಮುಪ್ಪಿನ ದಿನದೊಳು
ದೇವರ ಭಕ್ತಿ!

ಮಾನವ ಪ್ರಾಣಿಯ
ನಾನಾ ವೇಷಾ
ನೋಡುವ ಪುಣ್ಯವು
ಸೂಳೆಗೆ ! ಈಶಾ !

ಕಾಮವಿಲಾಸವು
ನಾಟಕ ರಂಗಾ;
ಆಟವು ಮುಗಿಯಲು
ಮಿಥ್ಯಾಭಂಗಾ !

ನಿನ್ನದೆ ಆಟಾ !
ನಿನ್ನದೆ ನೋಟಾ !!
ವಿಶ್ವರಂಗದಲಿ
ಬಗೆ ಬಗೆ ಮಾಟಾ !!!

❖❖

ದೇವನ ಅವತಾರ

ಕಿರಣಗಳೆನಿತೋ ಮಿರುಗುತಲಿದ್ದರು
ತರಣಿಯು ಒಬ್ಬನೆ, ಸೋದರನೆ;
ಊರುಗಳೆನಿತೋ ತಿರೆಯೊಳಗಿದ್ದರು
ಧರೆಯೊಂದಲ್ಲವೆ, ಮಾನವನೆ ?

ರಾಗಗಳೆನಿತೋ ಮುಗಿಲೊಳಗಿದ್ದರು
ಆಗಸವೊಂದಲ್ಲವೆ, ಮಗನೆ ?
ಕಡಲುಗಳೆನಿತೋ ಪೊಡವಿಯೊಳಿದ್ದರು
ಜಲವೊಂದಲ್ಲವೆ, ಸೋದರನೆ ?

ಜೀವಿಗಳೆನಿತೋ ಬುವಿಯೊಳಗಿದ್ದರು
ಜೀವವು ಒಂದಲ್ಲವೆ, ಮಗನೆ ?
ಎಲ್ಲಾ ಜೀವಿಗಳೊಂದೇ ಜಗದಲಿ
ದೇವನ ಅವತಾರವು, ಮಗನೆ !

❖❖

ಉಗಿಬಂಡಿ

ಲಗುಲಗು ಬಗುಬುಗು ಉಗಿಬಂಡಿ,
ಯಂತ್ರ ಯುಗಾದಿಯ ಚಾಮುಂಡಿ

೧

ಎತ್ತುಗಳಿಲ್ಲದೆ ಹೋಗುವ ಬಂಡಿ;
ಕುದಿಯುವ ನೀರಿನ ಕಬ್ಬಿಣ ಹಂಡಿ;
ಬೆಂಕಿಯ ಕಿಡಿಗಳನುಗುಳುವ ಚಂಡಿ
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೨

ಇಂದ್ರನ ತೇಜಿಗೆ ಸೋಲದ ಗಾಡಿ;
ಭೂಮಿಗೆ ಬಿಟ್ಟವರಾರಿದ ನೋಡಿ,
ಮಾಡಿದರೇನೋ ಮಂತ್ರದ ಮೋಡಿ ?
ಲಗುಲಗು ಬುಗುಬುಗು ಉಗಿಬಂಡಿ .
ಯಂತ್ರ ಯುಗಾದಿಯ ಚಾಮುಂಡಿ

೩

ಮಸೀ ಕೆಂಡಗಳ ಸಂಗಡ ಸುಟ್ಟು,
ಒಳಗೆ ಹೊಟ್ಟೆಯಲಿ ವೇಗದ ಹುಟ್ಟು
ಇದುವೇ ಶಾಸ್ತ್ರಪುರಾಣದ ಗುಟ್ಟು
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೪

ಮೊರೆಯುದಿದ್ದರೂ ವೈದಿಕ ಮಂತ್ರ,
ಕಲಿಯುಗದೊಳಗಿದು ನಡೆವುದು ಯಂತ್ರ !
ಭೌತಿಕಶಾಸ್ತ್ರ–ಪಿಶಾಚಿಯ ತಂತ್ರ !
ಲಗುಲಗು ಬುಗುಬುಗು ಉಗಿಬಂಡಿ,
ಯಂತ್ರ ಯುಗಾದಿಯ ಚಾಮುಂಡಿ

೫

ಲೋಹಮಾರ್ಗವೇ ಸ್ವರ್ಗದ ದಾರಿ !
ದಾರಿ ದಾಟುವವನುರುಳಿಸಿ, ಚೀರಿ,
ಜೀವ ನುಂಗುವಳು ಜಂಜಡ ಮಾರಿ !
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೬

ವರ್ಗಭೇದ ನಿನ್ನೊಳಗಿನ ಕುತ್ತ;
ಮೊದಲ ವರ್ಗ – ಸುಖಶಾಂತಿಯ ಚಿತ್ತ,
ಕೊನೆಯ ವರ್ಗ – ತಲೆಗೇರಿತು ಪಿತ್ತ;
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೭

ಹಿಂದಕೆ ಮುಂದಕೆ ಸಾವಿರ ಚಕ್ರ;
ಡೊಂಕು ದಾರಿಯಲಿ ಅಂಗವು ವಕ್ರ;
ಬಲಭೀಮನಿಗೂ ಹೋಲದ ಗಾತ್ರ !
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೮

ಮೋರೆಯಿಂದ ಮೇಲೇರುವ ಧೂಮ,
ವಾಯುದೇವನಿಗೆ ಹರಕೆಯ ಹೋಮ ?
ಹೋಮದಿಂದ ಕಪ್ಪಾಯಿತು ವ್ಯೋಮ
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೯

ತುಳಿದು ತುಳಿದು ನಿಜ ಒಂದೇ ದಾರಿ,
ಅಡ್ಡ ಹಾದಿಯನು ನೀ ಹಿಡಿಲಾರಿ;
ನಿನ್ನೀ ನಡತೆಯು ನಮಗುಪಕಾರಿ
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೧೦

ಬೆನ್ನಿನ ಮೇಲದು ಜಂಗಮ ಜಾತ್ರೆ;
ಹಸಿವೆ ತಂಗಿಸುವ ಧಾನ್ಯದ ಪಾತ್ರೆ,
ಬರದೊಳು ನೀನೇ ಜೀವನ–ಮಾತ್ರೆ !
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೧೧

ಹಿಮಗಿರಿ – ತಲದಿಂ ಲಂಕೆಯ ವರೆಗೆ,
ಮೂಡಲ ದೆಸೆಯಿಂ ಪಡುವಲ ತೆರೆಗೆ,
ದವಸವ ಹಂಚುವ ಕೆಲಸವು ನಿನಗೆ
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೧೨

ಲೋಹಮಾರ್ಗವೇ ದೇಶದ ನಾಡಿ,
ನಾಡಿಯೊಳಗೆ ನೀ ಚಲಿಸುವ ಗಾಡಿ;
ನಲಿವೆನು ತವ ನವ ಕವನವ ಹಾಡಿ
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

೧೩

ಯಂತ್ರಯುಗದ ಜನ–ಜೀವನ ಕ್ರಮವು
ಸ್ಥಿರವಾಗುಳಿಯಲು ನಿನ್ನದೆ ಶ್ರಮವು;
ತೀರಿತು ಹಿಂದಿನ ಕಾಲದ ಋಣವು !
ಲಗುಲಗು ಬುಗುಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ

❖❖

ರಾಜಾ ರಾಮಮೋಹನ ರಾಯನಿಗೆ

ವಿಧವೆಯರ ಕಣ್ಣೀರ ತಡೆದ ಕರುಣಾಳು ನೀ,
ಮುಗುದೆಯರ ಮುಗಳುನಗೆ ನಿನ್ನ ಫಲವು;
ಸತಿಯೆಂಬ ಗತಿಗೆಟ್ಟ ಪಾಪಹತ್ಯವ ನಿಲಿಸೆ,
ಮೂಕ ಅಬಲೆಗೆ ಬಂತು ಧರ್ಮಬಲವು.

ಹಾಳು ರೂಡಿಯ ಧೂಳು ಭಾರತಕೆ ತಾಗಿರಲು,
ಕಸಗುಡಿಸಿ ಹಸನಾಗಿ ತೊಳೆದು ಬಿಟ್ಟೆ;
ಪುಣ್ಯ ಗಂಗಾನದಿಯ ಕೊಳಕು ನೀರನು ಸೋಸಿ,
ಮೇಲೆ ನಂದಾದೀಪ ತೇಲಿಸಿಟ್ಟೆ,

ನಿನ್ನ ಕರ್ಮದ ನೆರಳಿನಲಿ ಧರ್ಮ ಚಿಗಿತೆದ್ದು,
ಹೂಬಿಡುತಲಿಹುದು ತಾ ಮಂದಾರವಾಗಿ;
ನಿನ್ನ ನಂದಾದೀಪ ಇಂದಿಗೂ ತೇಲುತಿದೆ
ಆಕಾಶದಲಿ ತಾನು ತಾರೆಯಾಗಿ.

❖❖

ಮಂಜು

ಮಂಜಿನ ಮುತ್ತು
ಮುಗಿಲಿಂ ಬಿತ್ತು
ಚುಕ್ಕಿಯ ಕಣ್ಣೀರು;
ಬಡವನು ಚೀರೆ
ಅತ್ತವು ತಾರೆ !
ಉದುರಿತು ತುಸು ನೀರು !

❖❖

ತಂಬುರಿ ದಾಸ

ನನಗಿಂತಲು ಸುಖಿ ಯಾರಿಹನಯ್ಯಾ
ಭೂಮಂಡಲದೊಳಗೆ ?
ನನಗೆಂಬರು ಜನ ತಂಬುರಿ ದಾಸಾ
ಕನ್ನಡ ನಾಡೊಳಗೆ

ಕೈಯಲಿ ತಂಬುರಿ, ಕೊರಳಲಿ ಮಂಜರಿ,
ಹೆಗಲಲಿ ಜೋಳಿಗೆಯು;
ಜೋಳದ ದವಸದಿ ಜೋಳಿಗೆ ತುಂಬಲು
ಬಾಯಲಿ ಹೋಳಿಗೆಯು

ಊರಿಂದೂರಿಗೆ ದೂರದ ಕೇರಿಗೆ
ಮಂಗಳ ಸಂಗೀತ;
ಉಡುಪಿಯ ಕೃಷ್ಣನ ಪುರಂದರ ವಿಠಲನ
ಭಕ್ತಿಯ ವೇದಾಂತ

ಕನ್ನಡ ದಾಸರ ಭಕ್ತಿರಸಾಮೃತ
ಸವಿಯಿರಿ ಸವಿ ಜೇನ;
ತಂಬುರಿ ತಾಳದ, ಅನುಭವದಾಳದ
ಪದದಲಿ ತಲ್ಲೀನ

ತಂತಿಯ ಸುತ್ತಲು ಜನರದು ಮುತ್ತಲು
ತಂಬುರಿಗಾವೇಶ;
ಸಂತೆಯ ಪರಿಯಲಿ ಸಂದಣಿ ಸೇರಲು
ನನಗೂ ಸಂತೋಷ

ತಂತಿಯ ಮಿಡಿಯಲು, ತಂಬುರಿ ನುಡಿಯಲು
ಕುಣಿವುದು ಜನವೃಂದ;
ದಾಸರ ಪದಗಳ ಭಾವತರಂಗವು
ಭುವನಕೆ ಆನಂದ

ನಾನೂ ಕುಣಿವೆನು ಮನದಣಿ ಮಣಿವೆನು
ಚಿಣ್ಣರು ಕುಣಿದಂತೆ;
ಗೋಪಿಯ ಕಂದನ ಮುರಲಿಯ ನಾದಕೆ
ಗೋಗಳು ಕುಣಿವಂತೆ

ಕುಣಿಯುವದೊಂದೇ ಕುಣಿಸುವದೊಂದೇ
ಸಂಗೀತದ ಶಕ್ತಿ;
ಗಾನದ ಝುರಿಯೊಳು ತಾನವು ಹರಿಯಲು,
ಧರೆಗಿಳಿವುದು ಮುಕ್ತಿ !

ಸ್ವರ್ಗವದೆಂಬರು ನರಕವದೆಂಬರು,
ಎರಡನು ನಾನರಿಯೆ !
ಸ್ವರ್ಗದೊಳಾಗಲಿ ನರಕದೊಳಾಗಲಿ
ಸಂಗೀತವ ಮರೆಯೆ

ತಂಬುರಿಯೊಂದೇ ದಾಸನ ಬದುಕು,
ತಿರುಪೆಯೆ ಸಂಸಾರ;
ಜನರದು ಹಿಗ್ಗಲು ನನಗದು ಹುಗ್ಗಿಯು,
ಹಸಿವೆಯ ಪರಿಹಾರ

❖❖

ಯುವಕನ ವನವಾಸ

ಯುವಕನಿಗೇತಕೆ ಬಾಳಿನ ಕಾಟ
ಅವನಿಗೆ ಬೇಕೈ ಬನದಾಟ !
ಮುದಕನಿಗೇತಕೆ ವನಗಳ ನೋಟ
ಮುಪ್ಪಿಗೆ ಮಕ್ಕಳ ಮರಿಯಾಟಾ !
ಜೀವನಯಾತ್ರೆಯ ನಡು–ಹಗಲಲ್ಲಿ
ತರುಣನು ಸತಿ–ಸುತರನು ಕೂಡಿ
ಮಾಯಾಪಾಶದಿ ಸಿಲುಕುವದೇತಕೆ
ಮೋಹದ ಪಲ್ಲವಿಯನು ಹಾಡಿ ?

ತರುಣನ ರಕ್ತವು ಬಿಸಿಯಾಗಿರುವುದು,
ಶಕ್ತಿಯು ಮೈಯೊಳಗಾಡುವುದು;
ಆವೇಶದ ಹಿರಿದಾಸೆಯ ಕಿರಣವು
ಮನಸಿನ ಮುಗಿಲಲಿ ಮೂಡುವುದು.
ತರುಣನು ಸೇರಲಿ ವನವಾಸವನು
ಧೈರ್ಯದೊಳೇರಲಿ ಹಿಮಗಿರಿಯನ್ನು
ಮುಟ್ಟಲಿ ಮುಗಿಲಿನ ಬೆಳ್ಳಿಯ ತುದಿಯ
ನೆಟ್ಟನೆ ತಟ್ಟಲಿ ಕೆಂಗಿಡಿಯೆದೆಯ !
ತರುಣನು ಮೋಡವ ಕುಡಿಯುತಲಿರಲಿ
ಬಾವಿಯ ನೀರದು ಮುದಕನಿಗಿರಲಿ !
ನಡೆ ನಡೆ ತರುಣನೆ, ಮುಂದಕೆ ಸಾಗು
ಹಿರಿದಾಸೆಯ ನೀರಡಿಕೆಯ ನೀಗು !

ಯುವಕನು ಸೇರಲಿ ವನವಾಸವನು
ಹುಲಿಗಳ ಜೊತೆಯಲಿ ಬಾಳುವನವನು !
ಮುದಕನಿಗೇತಕೆ ಹುಲಿಗಳ ಕತೆಯು
ಅವನಿಗೆ ಹೆಂಡತಿ–ಮಕ್ಕಳ ಜೊತೆಯು !

ಕಾನನ ಉದ್ಯಾನದ ಫಲ ಸಂಚಯ
ಯುವಕನ ಹಸಿವೆಗೆ ಆಹಾರ;
ಮುದುಕನ ಪಾಲಿಗೆ ಹಬ್ಬದ ಹೋಳಿಗೆ,
ಮನೆಯಲಿ ಕೂತು ಫಲಾಹಾರ.

ಬನದಲಿ ಕೇಳುವ ಖಗಗಳ ಕವನವು
ಯುವಕನ ಕಿವಿಗದು ಸಂಗೀತ,
ಮಠದಲಿ ಕೀರ್ತನೆಕಾರರು ಗೊಜಗುವ
ಹರಟೆಯು ಮುದುಕನಿಗೇ ಗೀತ.

ಯುವಕನು ಸೇರಲಿ ವನವಾಸವನು,
ಮುದುಕನು ಕೋರಲಿ ಸಂಸಾರವನು;
ಯುವಕ ಯುವತಿಯರು ಬನದೊಳಗಿರಲಿ,
ಮುದುಕ ಮುದುಕಿಯರು ಮನೆಯೊಳಗಿರಲಿ,

ತುರಣನಿಗೇತಕೆ ಬಾಳಿನ ಕಾಟ
ಅವನಿಗೆ ಬೇಕೈ ಬನದಾಟ !
ಮುದುಕನಿಗೇತಕೆ ವನಗಳ ನೋಟ ?
ಮುಪ್ಪಿಗೆ ಮಕ್ಕಳ ಮರಿಯಾಟ !

ವೀರ ಒಕ್ಕಲಿಗರು

(ಬಾರ್ಡೋಲಿಯ ಸತ್ಯಾಗ್ರಹ ಸಮರದಲ್ಲಿ ಕಂದಾಯವನ್ನು ಕೊಡದೆ, ಬೆಳೆಯನ್ನು ಸುಟ್ಟು, ಬ್ರಿಟಿಶ್ ಗುಜರಾತವನ್ನು ಬಿಟ್ಟು, ಬಡೋದಾ ಸಂಸ್ಥಾನವನ್ನು ಸೇರಿದ ಬಾರ್ಡೋಲಿಯ ವೀರ ಒಕ್ಕಲಿಗರು ದಾರಿಯಲ್ಲಿ ಈ ಹಾಡನ್ನು ಹಾಡುತ್ತ ಹೋಗಿರಬಹುದೆಂದು ಊಹಿಸಿ ಈ ಕವನ ಬರೆಯಲಾಗಿದೆ. ಇದು ನಡೆದದ್ದು ೧೯೩೧ರಲ್ಲಿ)

ಹಾಳಾಗಲಿ ಮನೆ ಮಠ ಹೊಲವೆಲ್ಲಾ !
ಹಾಳಾಗಲಿ ಆ ಜೋಳವು ಬೆಲ್ಲ !
ದಾಸ್ಯದಿ ಬೆಳೆದಾ ಬೆಳೆ ನಮದಲ್ಲಾ !
ಸ್ವರಾಜ್ಯ ತಾಯೀ ಭಾರತ ಭೂ

ಉತ್ತಿ ಬಿತ್ತಿದಾ ಭತ್ತದ ಪೈರು,
ಸಾಕಿ ಸಲುಹಿದಾ ತಾಪಿಯ ನೀರು,
ಎಲ್ಲವು ಬರಿದೋ ಭಣ ಭಣ ಊರು !
ಸ್ವರಾಜ್ಯ ತಾಯೀ ಭಾರತ ಭೂ

ಗಾಂಧಿ ಮಹಾತ್ಮನ ಭಕ್ತರು ನಾವು
ಚದುರಿಸದೆಮ್ಮನು ಲಾಠಿಯ ನೋವು !
ನುಂಗದು ದಬ್ಬಾಳಿಕೆಯಾ ಹಾವು !
ಸ್ವರಾಜ್ಯ ತಾಯೀ ಭಾರತ ಭೂ

ಮೋಹ ಮಮತೆಗಳ ಮೂಲೆಗೆ ನೂಕಿ,
ಭತ್ತದ ಪೈರಿಗೆ ಬೆಂಕಿಯ ಹಾಕಿ,
ಥೈ ಥೈ ಕುಣಿವೆವು ನವಿಲನು ಮಿಕ್ಕಿ !
ಸ್ವರಾಜ್ಯ ತಾಯೀ ಭಾರತ ಭೂ

ಬಂಧನದೊಳಗಿನ ಬಾಳುವೆಯಿಂದ
ಬೆಂದು ಹೋಗುವುದೆ ಪರಮಾನಂದ !
ಮಾತೃಸೇವೆಯೇ ಮಗನಿಗೆ ಚೆಂದ;
ಸ್ವರಾಜ್ಯ ತಾಯೀ ಭಾರತ ಭೂ

ತ್ಯಾಗದಲ್ಲಿಯೇ ಭೋಗವ ಕಂಡು,
ಸಂಕಟದಲ್ಲೇ ಸೌಖ್ಯವನುಂಡು,
ತೇಗಿ ತೇಗುತಲೆ ಸಾಗಿದೆವಿಂದು !
ಸ್ವರಾಜ್ಯ ತಾಯೀ ಭಾರತ ಭೂ

ಸತ್ಯವೆಂಬುದೇ ಕೈಯಾ ಕೋಲು,
ಲೋಕಸೇವೆಯೇ ತಲೆಯ ರುಮಾಲು,
ಜಪ ತಪ ಕರ್ಮವು ತಕಲಿಯ ನೂಲು !
ಸ್ವರಾಜ್ಯ ತಾಯೀ ಭಾರತ ಭೂ

ವೀರ ವಲ್ಲಭನ ಬಂಟರು ನಾವು !
ಉರುಳಿಸದೆಮ್ಮನು ಗುಂಡಿನ ನೋವು !
ನಾಡ ಭಕ್ತರಿಗೆ ಬೇವೇ ಮಾವು !
ಸ್ವರಾಜ್ಯ ತಾಯೀ ಭಾರತ ಭೂ

ಅಮ್ಮಾ ಅಮ್ಮಾ ಭಾರತರಮ್ಮಾ
ಇನ್ನು ಬಂಧನವು ನಿನಗೇಕಮ್ಮಾ ?
ನಿನಗರ್ಪಣವೀ ಪ್ರಾಣಗಳೆಮ್ಮಾ !
ಸ್ವರಾಜ್ಯ ತಾಯೀ ಭಾರತ ಭೂ

ಹೊಟ್ಟೆಯಲ್ಲಿ ಭೋ ಭಗಭಗ ಜ್ವಾಲೆ !
ಹಸಿವೆಯ ಬೆಂಕಿಯು ಕೆಳಗೂ ಮೇಲೆ !
ಪುತ್ರಯಜ್ಞದಲಿ ನರಬಲಿ ನಾಳೆ !
ಸ್ವರಾಜ್ಯ ತಾಯೀ ಭಾರತ ಭೂ

❖❖

ವೀರಗಲ್ಲು

ಬೀರ ದೇವರ ಕಲ್ಲು
ವೀರಸ್ವರ್ಗದ ಸೊಲ್ಲು;
ಪುಣ್ಯಕರ್ಮದ ಕುರುಹು,
ನಮ್ಮ ಧರ್ಮದ ಅರುಹು.

ಐತಿಹಾಸಿಕ ಕಂಬ,
ಗತ ವೈಭವದ ಬಿಂಬ;
ಪೂರ್ವಜರ ಕೈದೀಪ,
ನಮ್ಮ ಕೀರ್ತಿಯ ರೂಪ.

ಕಲ್ಲು ಎಂಬುದು ಹೆಸರು,
ಮಾತನಾಡುವ ಉಸುರು !
ಕೆತ್ತಿದಕ್ಷರ ಗೋಲು
ಮುತ್ತುಗಳಿಗೂ ಸೋಲು !

ಪಂಚವಾದ್ಯದ ಮೇಳ
ಡೋಲು, ಜಂಗಟೆ, ತಾಳ;
ವಾದ್ಯದೊಂದಿಗೆ ವೀರ
ಸ್ವರ್ಗವೇರುವ ಶೂರ;

ಏನು ಸುಂದರ ಚಿತ್ರ
ಕಲಿಯ ಬಂದುರ ಗಾತ್ರ !
ಶಿಲ್ಪಕಲೆ ಜೀವಂತ
ತಲ್ಪಶಿಲೆಯಲಿ ಗ್ರಂಥ !

ತುರಗವೇರಿದ ಸ್ವಾರ,
ಸಂಗ್ರಾಮ ಘನ ಘೋರ
ರಣರಂಗದಲಿ ಗೆಲವು
ಪ್ರಾಣಗಿಂತಲು ಚೆಲುವು !

ಸೂರ್ಯಚಂದ್ರರ ಚಿತ್ರ
ಕಲಿಗೆ ಮಾನದ ಪತ್ರ;
ವೀರಸ್ವರ್ಗದ ಸಾವೆ
ದೇವಾಂಗನೆಯ ಸೇವೆ.

ಮಂಗಳಾರತಿ ಕಲಿಗೆ
ಕ್ಷಾತ್ರ ತೇಜದ ಹುಲಿಗೆ;
ಹೆಮ್ಮೆ ಕನ್ನಡ ಕುಲಕೆ
ಧಮ್ಮು ವೈರಿಯ ಬಲಕೆ;

ವೀರ್ಗಲ್ಲು ಅಡಿಗಡಿಗೆ
ಜಯವು ಕನ್ನಡ ಗುಡಿಗೆ.

❖❖

ಸ್ವರ್ಗ ಮತ್ತು ನರಕ

ಸ್ವರ್ಗವು ಬೇಕೋ ? ನರಕವು ಬೇಕೋ ?
ಯಾವುದು ಬೇಕಪ್ಪಾ ?
ಸ್ವರ್ಗದ ಸಿದ್ಧೀ ನರಕದ ಸುದ್ದೀ
ಎರಡೂ ಸಾಕಪ್ಪಾ !

ನಾವೇನಯ್ಯಾ ಸಾದಾ ಮಂದಿ
ಕಲಿತದ್ದೇ ಅಷ್ಟು;
ಕಾರ್‌ವಾರ್‌ದಿಂದಾ ಮೈಸೂರ್ ವರೆಗೇ
ನಮ್ಮದು ವೈವಾಟು.

ಸ್ವರ್ಗದೊಳಯ್ಯಾ ಅಮೃತವೊಂದೇ
ಸೇವಿಸಬೇಕೆಂತೆ !
ಅಮೃತವನ್ನೇ ಭೋಜನವೆಂದು
ಭಾವಿಸಬೇಕಂತೆ !

ಸವಿಯಾದಮೃತ ಸವಿದೂ ಸವಿದೂ
ಬೇಸರವಿಲ್ಲೇನೋ ?
ಸವಿಯೇ ತಿಂದರೆ ಮೈಯಿಗೆ ಕಜ್ಜಿ
ಆಗುವುದಿಲ್ಲೇನೋ ?

ಉಳ್ಳಾಗಡ್ಡೀ ಜೋಳದ ಭಕ್ರೀ
ಕನ್ನಡಿಗರ ಸ್ವರ್ಗಾ !
ರಾಗಿಯ ಮುದ್ದೆ ಮೈಸೂರ್ ಗೌಡಗೆ
ಸುಖದಾಯಕ ಮಾರ್ಗಾ !

ಕುಚ್ಚಿಗೆ ಅಕ್ಕೀ ಮೀನಿನ ಪಳದೀ
ಕಾರ್‌ವಾರ್ ಜನಕೆಲ್ಲಾ;
ಈ ತರದೂಟಾ ಕಣ್ಣಿಗೆ ಕಾಣಾ,
ಸ್ವರ್ಗದ ಮೇಲಿಲ್ಲಾ !

ಸ್ವರ್ಗದೊಳಯ್ಯಾ ಹೂವಿನ ಹಾಸಿಗೆ,
ಕಂಬಳಿಯಿಲ್ಲಂತೆ !
ಇಂದ್ರನ ಸೂಳೆಗೆ ರಂಭೆಗೆ ಸ್ವರ್ಗಾ
ಉಂಬಳಿಯಾಯ್ತಂತೆ !

ನಮಗೇಕಯ್ಯಾ ರಂಡೆಯ ರಾಜ್ಯಾ ?
ಭಂಡರು ನಾವಲ್ಲಾ;
ಕೆಚ್ಚೆದೆ ಕನ್ನಡ ಗಂಡರು ನಾವು,
ಷಂಡರ ಮಾತಲ್ಲಾ.

ಎಂಥಾ ಸ್ವರ್ಗಾ ! ಎಂಥಾ ನರಕಾ !
ಸುಮ್ಮನೆ ತಲೆಬೇನೆ !
ಇಹ ಲೋಕದೊಳೇ ನಂಬಿಗೆಯಿದ್ದರೆ
ನರಕವ ನಾ ಕಾಣೆ.

❖❖

ಕೌದಿ*

ಮನದಲಿ ತುಂಬಿತು
ನವ ಸಂತೋಷ
ಕವನವ ರಚಿಸಲು
ನನಗಾವೇಶ.
ಎಣಗಲು ಹಾಕಿದ
ನಿನ್ನನು ನೋಡಿ
ಮೂಡಿತು ಪ್ರತಿಭೆಯು
ಗುಣುಗುಣು ಹಾಡಿ.
ಹೊಳೆಹೊಳೆಯಾಗಿಯೆ
ಮೋಹದ ದಾಹ
ಹರಿಯಿತು, ಕವನದ
ಭಾವಪ್ರವಾಹ.
ಕಬ್ಬಿಗರೆಲ್ಲಾ
ಚಂದ್ರನ ಸುತ್ತು!
ಕೌದಿಯ ಚರಿತವು
ಮೂಲೆಗೆ ಬಿತ್ತು.
ನಾನೇ ನಿನ್ನಯ
ಹೊಸ ಕವಿವರನು
ಬಡವಿಯ ಭಾಗ್ಯದ
ಬಡ ಅನುಚರನು.
ಕೇಳೌ ಕೌದೀ,
ಬೆಚ್ಚಗೆ ತಾಯಿ,
ಚಳಿಯಲಿ ನೀನೇ
ಉತ್ತಮ ದಾಯಿ.

---

* ಕೌದಿಗೆ ಇಂಗ್ಲೀಷ ಭಾಷೆಯಲ್ಲಿ Quilt ಅನ್ನುತ್ತಾರೆ.

ಹೆಣ್ಣಿನ ಸೀರೆಯು
ಗಂಡಿನ ಧೋತ್ರ
ಎರಡೂ ಕೂಡಲು
ಕೌದಿಯ ಗಾತ್ರ;
ಗಂಡೂ ಹೆಣ್ಣೂ
ಕೂಡಲು ಬಾಳು,
ಕೂಡದೆ ಹೋದರೆ
ಜಗವೇ ಹಾಳು !
ಚಿಂದಿಗಳೆಷ್ಟೋ
ಹೊಟ್ಟೆಯ ಒಳಗೆ,
ಒಕ್ಕಟ್ಟಿನ ಶ–
ಕ್ತಿಯು ಮೈಯೊಳಗೆ,

ನಿನ್ನಂಗಕೆ ಹಳೆ
ಬಗೆ ಬಗೆ ಬಣ್ಣ;
ಚಿಂದಿಗೆ ಚಿಂದಿಯ
ಜೋಡಿಸೆ, ನಿನ್ನಾ
ಆಕೃತಿಯಾಯಿತು
ಸುಕೃತದ ಹುಟ್ಟು;
ಧರೆಯಲಿ ನೀ–
ನುಪಕಾರದ ಗುಟ್ಟು
ಅರ್ಭಕನನು ಸೆಲೆ
ಕೌದಿಯ ಮೇಲೆ
ಮಲಗಿಸೆ, ತಾಯಿಗೆ
ಕಂದನ ಲೀಲೆ.
ಮಲಮೂತ್ರದ ತಾ–
ಪತ್ರಯ ಸಹಿಸಿ,
ತಾಯಿಯಗಿಂತಲು
ನೀ ಮೇಲೆನಿಸಿ,

ಜೀವನ ನಿನ್ನದು
ಪಾವನವಾಯ್ತು !
ಸೇವಾಧರ್ಮಕೆ
ಅರ್ಪಣವಾಯ್ತು.

ಪಿರಿಪಿರಿಯಾಗಿದೆ
ಕೌದಿಯ ದೇಹ
ಜರಿಜರಿಯಾಗಿದೆ
ಮುದುಕಿಯ ಗೇಹ.
ಸಂದಿಗೆ ಸಂದಿಗೆ
ನೂಲದು ಎದ್ದು,
ಹರಕ್ಟರಕಾಗಿದೆ
ನೀರಲಿ ಅದ್ದು;
ದಿನದಿನ ದಿನವೂ
ಜಲದಲಿ ಬಿದ್ದು,
ಒಗೆಯುವ ನೆವದಲಿ
ಸಾವಿರ ಗುದ್ದು !
ನಿನ್ನುಪಕಾರಕೆ
ಪ್ರತಿಫಲ ಹೀಗೆ !
ಮಾನವ ಧರ್ಮದ
ಮಾದರಿ ಹೇಗೆ ?

ಹೊಟ್ಟೆಯ ಒಳಗಿಂ–
ದೇನೋ ಒಂದು
ಚಿಂದಿ ಪತಾಕೆಯು
ಹೊರಗೇ ಬಂದು,
ಕರುಳಿನ ಪರಿಯಲಿ
ಕಾಣುವುದುಂಟು !
ಮುಪ್ಪಿನ ಕಾಲದ

ಭಾಗ್ಯದ ಗಂಟು !
ಒಂದೇ ಸರ್ತಿಗೆ
ಬಾರದು ಮರಣ !
ತುಸು ತುಸು ಬಸಿದೇ
ಮುಗಿವುದು ಪ್ರಾಣ !
ನಿನ್ನಾಯುಷ್ಯವ
ದೂಡಲು ಮುಂದೆ
ಸೂಜಿಯ ಚುಚ್ಚುತ
ಹೊಲಿವರು ಚಿಂದೆ.
ಈ ಪರಿ ಹುಟ್ಟಿತು
ಸರ್ಜರಿ ವಿದ್ದೆ
ವಿದ್ದೆಗೆ ನೀನೇ
ಕಾರಣಳಾದೆ.

ಇಂತಿದೆ ನಿನ್ನದು
ಜೀವನ ಕಷ್ಟ;
ಸೇವಾಸಕ್ತಿಗೆ
ಮನ ಸಂತುಷ್ಟ.
ಸಂಕಟದಲ್ಲೂ
ಸೇವೆಗೆ ತಪ್ಪೆ !
ಸಾಯುವ ವರೆಗೂ
ದೇಹದ ಹಿಪ್ಪೆ !
ನಿನ್ನೀ ಗೀತವು
ನನ್ನಾವೇಶ,
ಮಾನವ ಜಾತಿಗೆ
ನವ ಸಂದೇಶ !

❖❖

ಸಂಸಾರದ ಭಾಗ್ಯ

"ಹೆಂಡತಿ ಮಕ್ಕಳನೆಲ್ಲರನುಳಿದು
ಭೈರಾಗಿಯು ನಾನಾಗುವೆನು;
ಸಂಸಾರದ ಹುಸಿ ಜಾಲವ ಹರಿದು
ಭಗವಂತನ ಕಡೆ ಸಾಗುವೆನು"

ಏತಕೆ ಮರುಳೇ, ಈ ವೈರಾಗ್ಯ !
ನೋಡೈ – ಸುಖ ಸಂಸಾರದ ಭಾಗ್ಯ :
ನಿರ್ಮಲ ಮನಸ್ಸಿನ ಮಕ್ಕಳ ನಗೆಯು
ಮಾದೇವನು ಹೊರಸೂಸುವ ಬಗೆಯು;
ದೇವನು ನಾನಾ ರೂಪವ ತಳೆದು
ಭೂಮಿಗೆ ಬರುವನು ಸ್ವರ್ಗವನುಳಿದು;
ತಾಯಿಯ ಹೃದಯದ ಮೋಹದಿ ಬಂದು
ಮಕ್ಕಳ ಮುದ್ದಿನ ಜೊಲ್ಲಲಿ ಮಿಂದು
ಸಂಸಾರದ ತಿಳಿ ಸಾರವಿದೆಂದು
ನಲಿನಲಿದಾಡುವ ಕಂಗಳ ಮುಂದು;
ಕಂಗಳ ಮುಂದಿನ ದೇವರನುಳಿದು
ಕಾಣದ ಲೋಕಕೆ ಬಿಜಯಂಗೈದು
ಆತನ ನೋಡಲು ಬಯಸುವದೇಕೆ ?
ಸನಿಯದೊಳಿರಲೂ ದೂರದೊಳೇಕೆ ?

ಸತಿಯೂ ಪತಿಯೂ ಮಗುವೂ ಜಗವೂ
ಎಲ್ಲವು ದೇವನ ಪ್ರತಿಬಿಂಬ;
ಈ ಸಂಸಾರವೆ ಮುಕ್ತಿಯ ಲೋಕದ
ದಾರಿಯ ತೋರುವ ಕೈಗಂಬ !

❖❖

ಮುತ್ತು

ಹೂಗಳ ಮುತ್ತು
ಗಾಳಿಗೆ ಗೊತ್ತು ;
ಗಿರಿಗಳ ಮುತ್ತು
ಮುಗಿಲಿನ ಸೊತ್ತು;
ಚಂದ್ರನ ಮುತ್ತು
ಹುಣ್ಣಿಮೆಗಿತ್ತು;
ಸೂರ್ಯನ ಮುತ್ತು
ವಿಶ್ವದ ಸುತ್ತು,
ಮೂಡುವ ಹೊತ್ತು
ಮೂಡಲ ಮುತ್ತು
ಪಡುವಲ ದಿಕ್ಕಿಗೆ
ಸಂಜೆಗೆ ಇತ್ತು,
ಕಡಲಿನ ಮುತ್ತು
ತರೆಗಳ ಸುತ್ತು
ನೊರೆನೊರೆಯಾಗಿ
ಕುಣಿಯುತಲಿತ್ತು.
ತಾಯಿಯ ಬಾಯಿಯ
ಮೋಹದ ಮುತ್ತು
ಏನೂ ಅರಿಯದ
ಕೂಸಿಗೆ ಗೊತ್ತು !
ಎಲ್ಲಾ ಕಡೆಯಲಿ
ದೇವರ ಮುತ್ತು,
ಭಾವತರಂಗದ
ಕವಿಗೇ ಗೊತ್ತು !

❖❖

ಹೊಟ್ಟೆಯ ವ್ಯಾಜ್ಯ

ಮುಟ್ಟಿದೆನಯ್ಯಾ
ಮುಟ್ಟಿದೆನಯ್ಯಾ
ಕೊನೆಯಲಿ ಯಮರಾಜ್ಯ !
ಹುಟ್ಟಿದ ನಂತರ
ಸಾಯುವ ವರೆಗೂ
ಹೊಟ್ಟೆಯದೇ ವ್ಯಾಜ್ಯ !

ಹಾಳದು ಲೋಕಾ,
ನ್ಯಾಯದ ತೂಕಾ
ಧರೆಯೊಳಗೇ ಇಲ್ಲಾ !
ಯಮಲೋಕದ ಸುಖ
ಹೆಚ್ಚಿನದಯ್ಯಾ;
ಯಾರಿಗು ಗೊತ್ತಿಲ್ಲಾ !

ಹೊಟ್ಟೆಗು ನನಗೂ
ದಿನ ದಿನ ವ್ಯಾಜ್ಯಾ;
ಕೇಳದು ಕಡು ಪಾಪಿ !
ಅದಕೂ ಹಟವು,
ನನಗೂ ಚಟವು,
ಇಬ್ಬರು ಕಡು ಕೋಪಿ.

ನಡೆಯಿತು ಯುದ್ಧಾ,
ಗುದ್ದಿಗೆ ಗುದ್ದಾ,
ಹೋಯಿತು ನರಜೀವಾ;

ನೋಡುತ ದೇವನು
ಸುಮ್ಮಗೆ ನಿಂತು
ತಪ್ಪಿಸದೇ ಸಾವಾ !

ಜೀವವು ಸತ್ತರು
ನಾ ಬದುಕಿದ್ದೆ !
ಹೋಯಿತು ತಕರಾರು;
ನ್ಯಾಯಾಧೀಶನು
ನನಗೇ ಬೈದನು !
ಹೊಡೆದನು ಐದಾರು !

ಸೆರೆಮನೆಗಟ್ಟಲು,
ಅನ್ನವ ಮುಟ್ಟಲು,
ಶಕ್ತಿಯು ತುಸು ಬಂತು;
ತಪ್ಪಿಸಿಕೊಂಡೇ
ಬಂದೇ ಬಿಟ್ಟೆನು
ಯಮಲೋಕಕೆ ಇಂತು !

ಮುಟ್ಟಿದೆನಯ್ಯಾ
ಮುಟ್ಟಿದೆನಯ್ಯಾ
ಕೊನೆಯಲಿ ಯಮರಾಜ್ಯ !
ಹುಟ್ಟಿದ ನಂತರ
ಸಾಯುವ ವರೆಗೂ
ಹೊಟ್ಟೆಯದೇ ವ್ಯಾಜ್ಯ.

❖❖

ಕವಿ ಕುಮಾರವ್ಯಾಸ

೧

ಸಗ್ಗವಾಗವುದು ಹಿಗ್ಗಿ ಬುವಿ
ಹಾಡೆ ನೀನು ಭೂಲೋಕ ಕವಿ!
ನಿನ್ನ ಮಾತುಗಳ ಸುಮಗಳನು
ಕುಯ್ದು ಹೃದಯದಲಿ ನೇಯುವೆನು;
ಹಿಗ್ಗಿ ಹಾರುವುದು ಎನ್ನ ಬಗೆ
ಗದುಗಿನ ಭಾರತ ನಾನೋದೆ.

ಹಾಡಿನ ಕಂದಾ
ಹೂಮಕರಂದಾ
ಕವಿತಾನಂದಾ
ನಾಡೆ ಹಾಡೆ ಕನ್ನಡ ಕೋಗಿ
ವಸಂತಋತುವಾಯಿತು ಮಾಗಿ

೨

ಹರಿವುದು ಭಾವವು ಒಡಮೂಡಿ
ನಿನ್ನ ಕಾವ್ಯದಲಿ ನಲಿದೋಡಿ;
ಇಂದಿನ ಕವಿಗಳ ಸಂಗೀತ
ನಿನ್ನ ಮುಂದೆ ಯಾವುದು ಗೀತ?
ಹೊಸ ಹುರುಪಿನ ಕಬ್ಬಿಗ ನೀನು
ಭಾವವರಳಿಸುವ ಕವಿ ಭಾನು!

ನಿನ್ನಯ ಕಬ್ಬ
ಸೊಬಗಿನ ದಿಬ್ಬ,
ಕವಿ ನೀನೊಬ್ಬ
ನಾಡೆ ಹಾಡೆ ಕನ್ನಡ ಕೋಗಿ
ವಸಂತ ಋತುವಾಯಿತು ಮಾಗಿ

೩

ಅರಳಿತು ಹಾಡಿನ ಹೊಸ ಹೂವು,
ತಲೆದೂಗಿತು ರಸಿಕತೆ–ಹಾವು,
ಹಣ್ಣಾಯಿತು ಕನ್ನಡ ಮಾವು
ಹಣ್ಣಿನ ರಸ ಹೀರಲು ನಾವು,
ಸಕ್ಕದ ಬೆಲ್ಲವ ಹದಗೊಳಿಸಿ
ಸಕ್ಕರೆ ಮಾಡಿದೆ ಕನ್ನಡದಿ

ಕವನದ ಕೋಗಿ,
ಷಟ್ಪದಿ–ಭೋಗಿ,
ಕವಿಗಳ ಯೋಗಿ,
ನಾಡೆ ಹಾಡೆ ಕನ್ನಡ ಕೋಗಿ
ವಸಂತ ಋತುವಾಯಿತು ಮಾಗಿ

೪

ವ್ಯಾಕರಣದ ಜಾಲವ ಹರಿದು,
ರೂಢಿಯ ಕಾಲ್–ಕಡಗವ ಮುರಿದು,
ಹಕ್ಕಿಯಂತೆ ನಭದಲಿ ಹಾರಿ,
ಚಿಕ್ಕೆಯಂತೆ ಹೊಳಪನು ತೋರಿ,
ಮಿಂಚಿನಂತೆ ಭಾವವ ಬೀರಿ
ಜಗವನು ಮೆಚ್ಚಿಸಿದುಪಕಾರಿ!

ನಿನ್ನಯ ಕವನ
ಬೀಸುವ ಪವನ
ಭಾವದ ಭವನ
ನಾಡೆ ಹಾಡೆ ಕನ್ನಡ ಕೋಗಿ
ವಸಂತ ಋತುವಾಯಿತು ಮಾಗಿ.

೫

ಕನ್ನಡವೆಣ್ಣಿಗೆ ಸಿಂಗಾರ
ಇನ್ನೇತಕೆ ನೀನಿರೆ ಹಾರ?
ಕಾವ್ಯಶರೀರಕೆ ಬಗೆಗಣ್ಣು,
ಇರುಳಿಗೆ ಹುಣ್ಣಿಮೆ–ಪೆರೆಹಣ್ಣು,
ಭಾವದ ತೋಟಕೆ ಎರೆಮಣ್ಣು
ಇಂತಿರುವುದು ಗದುಗಿನ ಹೊನ್ನು;

ಭಕ್ತಿಯ ಬೇರು
ಮುಕ್ತಿಯ ನೀರು
ಶಕ್ತಿಯ ಸಾರು,
ನಾಡೆ ಹಾಡೆ ಕನ್ನಡ ಕೋಗಿ
ವಸಂತ ಋತುವಾಯಿತು ಮಾಗಿ

೬

ವ್ಯಾಸರು ಜನಿಸಿದರೆರಡು ಸಲ !
ಭಾರತ ಮಾತೆಯ ಭೂಮಿತಲ
ಕೋಗಿಲೆ ಹಾಡುವ ವನವಾಯ್ತು
ವನದಲಿ ಗದುಗೇ ಮನೆಯಾಯ್ತು;
ಭಾರತ ಕನ್ನಡಿಗರದಾಯ್ತು
ಕನ್ನಡಿಯಂದದಿ ತಿಳಿಯಾಯ್ತು;

ಸಂಸ್ಕೃತ ಧನ್ಯ
ಕನ್ನಡ ಮಾನ್ಯ
ಎರಡೂ ಚಿನ್ನ,
ನಾಡೆ ಹಾಡೆ ಕನ್ನಡ ಕೋಗಿ
ವಸಂತ ಋತುವಾಯಿತು ಮಾಗಿ.

❖❖

ಕಾಳಿ ಗೌಡ

ನಮ್ಮ ಹಳ್ಳಿಯ ಕಾಳಿ ಗೌಡನು
ಬಾಳ ತುದಿಯಲಿ ನಿಂದರೂ
ಚಿಗುರಿನಂದದಿ ಮಣಿದು ಕುಣಿದನು
ಬಿರುಸು ಗಾಳಿಯು ಬಂದರೂ

ತಲೆಯ ಕೂದಲು ಹತ್ತಿಗೂ ಬಿಳಿ,
ಹೃದಯ ತಿಳಿ ತಿಳಿ ತೆಳ್ಳಗೆ;
ಬಾಳ ಝರಿಯದು ಹರಿದು ಹರಿದೂ
ಹಾಲಿನಂದದಿ ಬೆಳ್ಳಗೆ.

ಊರ ಮಕ್ಕಳಿಗೆಲ್ಲ ಅಜ್ಜನು,
ಪ್ರಾಯದವರಿಗೆ ಕಕ್ಕನು
ಹಳ್ಳಿ ಹೆಂಗಳೆಯರಿಗೆ ಮಾವನು,
ಗೌಡನಾಗಲು ತಕ್ಕನು.

ಜನರ ನಗುವೇ ಗೌಡನೈಸಿರಿ,
ಅವನ ಹೆಸರೇ ಊರಿಗೆ;
ಕಾಳಿ ಗೌಡನ ಹಳ್ಳಿಯೆಂದರೆ
ಹೆಮ್ಮೆ ನಾಡಿನ ಜನರಿಗೆ.

ಹಳ್ಳಿ ಬಡವರು ಮುಗಿಲ ನೋಡಲು
ಕಣಜವನೆ ತೆರೆದಿಟ್ಟನು;
ಕಾಳಿ ಗೌಡನಗಿಲ್ಲ ಚಿಂತೆಯು,
ಊರ ಸೆಟ್ಟಿಯು ಕೆಟ್ಟನು.

ದೂರ ಜಾತ್ರೆಗೆ ಬಂದ ಜನರಿಗೆ
ಕಾಳಿ ಗೌಡನ ಭೋಜನ,
ನೂರುಗಟ್ಟಲೆ ಜನಕೆ ಬಡಿಸಿದ
ಮೇಲೆಯೇ ಹರಿ ಪೂಜನ.

ಗಿಳಿಯು ಪಂಜರದಲ್ಲಿ ಕಾಣಲು,
ಮುದಿಯ ಮನಸಿಗೆ ಕನಿಕರ;
ಸೆರೆಯ ಬಿಡಿಸಿದ ಹೊರತು ಹೋಗದು
ಕಾಳಿ ಗೌಡನ ಚಳಿಜ್ವರ

ಅವನ ತೋಟದ ಕಬ್ಬು ತಿನ್ನದ
ಒಬ್ಬನೂ ಸಹ ಸಿಕ್ಕನು;
ನೆಟ್ಟ ಕಬ್ಬುಗಳೆಲ್ಲ ಮುಗಿಯಲು
ತನಗೆ ತಾನೇ ನಕ್ಕನು

ಮನೆಯ ತೋಟದ ಬಾಳೆ ಕೊನೆಯದು
ಊರ ಮಕ್ಕಳ ಬಾಯಲಿ;
ಕಾಳಿ ಗೌಡನ ಪುಣ್ಯ ಕರ್ಮವೆ
ನಮ್ಮ ಸೀಮೆಯ ಕಾಯಲಿ

ಏನು ಹೇಳಲಿ ಜನರ ಸಂದಣಿ
ಪುಣ್ಯ ಪುರುಷನ ಯಾತ್ರೆಗೆ;
ಇಷ್ಟು ಜನ ಕೂಡುವುದು ಕಷ್ಟವು
ನಾಡ ದೇವರ ಜಾತ್ರೆಗೆ.

ಹಕ್ಕಿಪಕ್ಕಿಯ ಬಳಗವೂ ಸಹ
ಮಸಣದಾಚೆಯ ಮರದಲಿ
ತನ್ನ ದುಃಖವ ಹೇಳಿಕೊಂಡಿತು
ಹಾಡಿ ಕರ್ಕಶ ಸ್ವರದಲಿ

ಗ್ರಾಮ ಕಟ್ಟೆಯ ವೃದ್ಧ ವೃಕ್ಷವು
ಬಾಡಿ ಹೋಯಿತು ಆಲವು;
ಮುದಕರಿಬ್ಬರು ಮಾಯವಾಗಲು
ಊರಿಗೇ ಬರಗಾಲವು

ಇಂದಿಗೂ ಜನ ಕಣ್ಣನೊರೆಸುತ
ಕಾಳಿ ಗೌಡನ ನೆನೆವರು;
ಊರ ಬಡ ಕಂಗಾಲರೋ? ಪರ–
ದೇಶಿ ಜೀವಿಗಳಾದರು.

❖❖

ಕಾಲಿನ ಜೋಡು

ಕಾಲಲಿ ನಡೆಯುವ ನಿನ್ನನು ನೋಡಿ
ನೂತನ ಭಾವನೆ ಮನದಲಿ ಮೂಡಿ,
ಮಿನುಗುತಲಿದೆ ಹೊಸ ಕವನವ ಕೂಡಿ;
ಕಾಲಿನ ಸೇವಕನೆ

ಗೋಮಾತೆಯ ಚರ್ಮವು ನೀನಾದರು,
ಭೂದೇವಿಯ ನೀನಗಲದೆ ಇದ್ದರು,
ಮನೆಯೊಳಗೇತಕೆ ನಿನ್ನನು ಒಯ್ಯರು ?
ನನಗಿದು ಸೋಜಿಗವು !

ಸೇವೆಯ ಮಾಡುವುದೊಂದೇ ಅರಿತು,
ಸುಖದುಃಖದ ಹುಸಿ ಮಾಯೆಯ ಮರೆತು,
ಮುಳ್ಳಲಿ ನಡೆಯುವ ನಿನ್ನನು ಕುರಿತು
ಹೊಗಳುವರಾರಣ್ಣಾ ?

ಇದ್ದರೆ ಇರಬೇಕಿಂತಹ ಜೋಡಿ !
ಯಾವಾಗಲು ನೀವಿಬ್ಬರು ಕೂಡಿ
ಸುಖದುಃಖದ ಸರಿ ಪಾಲನು ಮಾಡಿ
ದಿನಗಳ ದೂಡುವಿರಿ

ಬಲಗಾಲಿನ ಅಂಗುಷ್ಠವು ಹರಿಯೆ,
ಎಡಗಾಲ್–ಕೆರವೇ, ಮುಂದಕೆ ಸರಿಯೆ;
ಒಬ್ಬನ ಸಂಕಟವಿಬ್ಬರು ಅರಿಯೆ
ಮೇಲ್ಮೆಯು ಧರೆಯೊಳಗೆ.

ಕೆರವೇ, ನಾವ್ ನೆಲತಾಯಲಿ ಹುಟ್ಟಿ,
ಅಕೆಯ ಚಲುವಾದೊಡಲನೆ ಮುಟ್ಟಿ,
ಹೊಲಸಿನ ಸ್ಥಳದಲಿ ನಿನ್ನನು ಮೆಟ್ಟಿ
ಕೆಟ್ಟೆವು ನರರಾಗಿ !

ಕಾಲಿನ ಸೇವಕ, ಹೇಳುವೆ ಕೇಳು–
ಮನುಜನಿಗಿಂತಲು ನೀನೇ ಮೇಲು !
ಮುಂದಿನ ಜನ್ಮದಿ ನನ್ನೀ ಬಾಳು
ಆಗಲಿ ನಿನ್ನಂತೆ.

❖❖

ಉತ್ತರ ಕನ್ನಡ

ಉತ್ತರ ಕನ್ನಡ
ಎತ್ತರ ಗುಡ್ಡ
ಸುತ್ತಲು ಹಚ್ಚಗೆ
ಚಪ್ಪರ ದೊಡ್ಡ

ಮುಗಿಯದ ಬೆಟ್ಟ
ಮುಗಿಲಿನ ಮುಟ್ಟ;
ಕಂದರ ಹಂದರ,
ಹಸುರಿನ ದಟ್ಟ

ಕನ್ನಡ ನಾಡಿನ
ಕಡಲಿನ ಸೀಮೆ,
ಬಣ್ಣಿಸಿದಷ್ಟೂ
ಇನ್ನೂ ಕಡಿಮೆ

ಹರಿಯುವ ಮುರಿಯುವ
ಝರಿಗಳ ವೇಣಿ,
ಪಕ್ಕದೊಳೆರಡೂ
ಪರ್ವತ ಶ್ರೇಣಿ

ಪಡುವಣ ಪರ್ವತ–
ದಂಗಳ ಬೀಡು;
ತೆಂಗಿನ ತೋಟದ
ಮಂಟಪ ನೋಡು

ಅಡಿಕೆಯ ಕೊನೆ ಬಾ
ಸಿಂಗವು ನಮಗೆ,
ಯಾಲಕ್ಕಿಯ ಮಾ–
ಲೆಯು ಕೊರಳೊಳಗೆ

ಮೆಣಸಿನ ಕಾಳಿನ
ಮಂಗಳ ಸೂತ್ರ,
ಬಾಳೆಯ ತಾಳೆಯ
ಸೋಗೆಯ ಛತ್ರ
ನೊರೆಯ ತರಂಗದ
ರಂಜಿತ ಕುಣಿತ,
ನಾನಾ ಖಗದ ಸು–
ಮಂಗಲ ಗೀತ

ಕಡಲಲಿ ಬಿಂಬಿಸೆ
ಸಂಜೆಯ ಅರುಣ
ಕುಂಕುಮ–ಜಲದಲಿ
ಗಿರಿಗಳ ಚರಣ

ಸ್ವರ್ಗ ನಿಸರ್ಗವು,
ಸೊಬಗಿನ ದಿಬ್ಬ;
ಎಲ್ಲಾ ಕಡೆಯಲಿ
ಕಣ್ಣಿಗೆ ಹಬ್ಬ

ಹುಟ್ಟುವುದಾದರೆ
ಇನ್ನೂ ಇನ್ನೂ
ಉತ್ತರ ಕನ್ನಡ–
ದಲ್ಲೇ ಅನ್ನು.

❖❖

ಕವಿಯ ಕಮಲೆ

ಕಂಡೆನು ಸುಂದರಿ ಕಮಲೆಯನು,
ಕಂಡೆನು ಕೋಮಲೆ ವಿಮಲೆಯನು,
ಹೆಂಡತಿಯೊಬ್ಬಳು ಕವಿಗಿರಬೇಕೆಲೆ ?
ಕಮಲೆಗೆ ಈ ಪರಿ ಕೇಳಿದೆನು :

ಕವಿಯನು ವರಿಸಲು ಒಪ್ಪುವಿಯೇ ?
ಕವನವ ಕೇಳಲು ತಪ್ಪುವಿಯೇ ?
ಕಲ್ಪನೆಗಳ ಹೂಮಾಲೆಯ ಪೋಣಿಸಿ,
ರಮಣಿಯ ಕೊರಳಲಿ ಹಾಕುವೆನು.

ಚಿನ್ನದ ಭೂಷಣ ನಿನಗೆಲ್ಲಿ ?
ರನ್ನದ ಉಂಗುರ ಸಿಗದಿಲ್ಲಿ;
ಕನ್ನಡ ನುಡಿಯಲಿ ಕೆತ್ತಿದ ಕಲ್ಪನೆ
ನನ್ನಾ ಮಡದಿಯ ಸಿಂಗರವು.

ಜಗದರಮನೆಯಲಿ ಕೂಡುವೆನು;
ಮುಗುದೆಯ ಸೊಬಗನು ಹಾಡುವೆನು;
ಕತ್ತಲೆಯೆಂಬುವ ಕೂದಲ ಮುಡಿಯಲಿ
ಮಿರುಗವ ಚಿಕ್ಕೆಯ ಮುಡಿಸುವೆನು

ಕೆರೆಯೇ ಕನ್ನಡಿ ನಿನಗಾಯ್ತು,
ತೊರೆಯೇ ತೈಲವು ತಲೆಗಾಯ್ತು
ಧರಣಿಯ ಹಸುರಿನ ಹುಲ್ಲಿನ ಸೀರೆಯು,
ಮಂಜಿನ ಮಣಿಗಳ ಕುಪ್ಪಸವು

ಕಂತುವ ದಿನಕರ ಕುಂಕುಮವಾ,
ಕಾಡಿನ ವೃಕ್ಷವು ಚಂಪಕವಾ,
ನೀಡುವುದಲ್ಲದೆ ಮಿಂಚಿನ ಹುಳುವನು
ನೀಡುವೆ ನಿನ್ನಗೆ, ವಜ್ರವಲಾ !

ವರಿಸುವೆಯೇನೇ ಚಲವು ಕಣೆ ?
ವರಿಸುವದಾದರೆ ಕೇಳೆ ಮಣೆ,
ಚಿರಕಾಲವು ನಿನ್ನಯ ಪತಿರಾಜಗೆ
ಮರಣವು ಬಾರದು ಹೇ ರಮಣಿ

ನೀನೆಂದಿಗು ಸೌಭಾಗ್ಯವತಿ,
ಅಮರನಲ್ಲವೇ ನಿನ್ನ ಪತಿ ?
ಕವಿಗಳ ಜೀವನ ಕವನದಲ್ಲಿಯೆ,
ಕವನವೆಂದಿಗೂ ಅಮರ ಸಖಿ !

❖❖

ತೋಟಿಗ

ಸೇವಕ : ರಾಣೀ, ಸೇವಕನಲಿ ದಯೆ ತೋರಿ

ರಾಣಿ : ಸೇವಕರೆಲ್ಲರು ಓಲಗ ಸೇರಿ
ಈಗಲೆ ಹೊರಟರು; ನೀನೇಕೆಂದು
ತಡಮಾಡಿಲ್ಲಿಗೆ ನಿಂದಿಹೆ ಬಂದು ?

ಸೇವಕ : ಎಲ್ಲರು ಜಾರಿದ ವೇಳೆಯ ಕಂಡು
ಅದುವೇ ನನಗತಿ ಒಳ್ಳೆಯದೆಂದು
ಬಂದಿಹೆನಿಲ್ಲಿಗೆ ಕಡೆಯಲಿ ತಾಯಿ
ಉಳಿದಾ ಕೆಲಸವ ಮಾಡಲು ಎಂದು

ರಾಣಿ : ಕಡೆಯಲಿ ಬಂದರೆ ಕೆಲಸೆಲ್ಲಿಹದು ?

ಸೇವಕ : ನನ್ನನು ತೋಟಿಗನನು ಮಾಡುವುದು.

ರಾಣಿ : ಹಾ! ಹಾ! ಹಾ! ಹಾ! ಮತಿ ನಿನಗಿಲ್ಲ

ಸೇವಕ : ಇಲ್ಲಾ ರಾಣೀ, ನಾ ಹಾಗಲ್ಲ
ಕತ್ತಿಯ ಬರ್ಚಿಯ ಬಿಸುಡುವೆನಿಲ್ಲಿ,
ದೂರದ ದೇಶಕೆ ಹೋಗೆನು ಅಲ್ಲಿ;
ಹೊಸ ರಾಜ್ಯಗಳನು ಜಯಿಸಲು ಎಂದು
ಕಳಿಸಲು ಬೇಡಿರಿ ನನ್ನನು ಇಂದು;
ನನ್ನನು ತೋಟದ ಸೇವಕ ಮಾಡಿ
ಹೂಗಳ ಕೊಯ್ಯಲು ಗೀತವ ಹಾಡಿ

ರಾಣಿ : ತೋಟಿಗನಾಗಲು ಮಾಡುವೆಯೇನು ?

ಸೇವಕ : ರಾಣೀ, ರಾಣೀ, ಆ ಬಳಿಕೇನು ?
ರಾಣಿಯು ತೋಟಕೆ ಬರುವಳು ಎಂದು
ಹುಲ್ಲಿಗೆ ನೀರನು ಎರೆಯುವೆನೆಂದು
"ರಾಣಿಯ ಹೆಜ್ಜೆಯ ಬುಡದಲಿ ಬಿದ್ದು

ಮರಣವ ಗೆದ್ದರೆ ನಮಗದು ಮುಂದು
ಮುಕ್ತಿಯ ಮಾರ್ಗವ ತೋರಿಪುದೆ"ಂದು
ಸಂತಸದಿಂದಲಿ ನಲಿಯುವ ಹೂಗಳ
ತಿಳಿ ನೀರೆರೆಯುತ ಸಾಕುವೆನಂದು
ಮುದಿಯಾಲಕೆ ಜೋಕಾಲಿಯ ಕಟ್ಟಿ
ತೂಗುವೆ ನಿಮ್ಮನು ನಾ ಮನಮುಟ್ಟಿ;
ಎಲೆಯೊಳಗಿಂದಲಿ ಚಂದಿರನಾಗ
ಮುತ್ತಿಡುವನು ನಿಮ್ಮಂಗಕೆ ಬೇಗ.
ಅರಮನೆಯಲಿ ಬೆಳಗುವ ಬಿಳಿ ದೀಪಕೆ
ಗಂಧದೆಣ್ಣೆಯನು ಕುಡಿಯಲು ಕೊಟ್ಟು,
ನಿಮ್ಮಾ ಮಲಗುವ ಕೋಣೆಯೊಳೆಲ್ಲ
ಹೂ ಹಾಸಿಗೆಯನು ಹಾಸುವೆನಲ್ಲಾ ?

ರಾಣಿ : ತೋಟಿಗನಾಗಲು ಸಂಬಳವೆನಿತು ?

ಸೇವಕ : ಸಂಬಳವೇ ? ಆ ಸಂಬಳವಿಂತು:
ರಾಣಿಯ ಕರಕಮಲಗಳನು ಹಿಡಿದು
ಹೂಬಳೆಗಳ ತೊಡಿಸುವುದೇ ಸೊಗಸು;
ರಾಣಿಯ ಕಾಲಲಿ ಕಡಗವ ಹಾಕಿ
ಪಾದದ ಧೂಳಿಯ ಬಿಡುವೆನು ನೆಕ್ಕಿ;
ಇದರಿಂದೊದಗುವ ಭಕ್ತಿಯ ಸುಖವೇ
ಸಂಬಳವೆನಿಸುವದಲ್ಲವೆ ನನಗೆ ?

ರಾಣಿ : ಆಗಲಿ ಸೇವಕ, ಚಿಂತೆಯ ನೀಗು,
ಹೂವಿನ ತೋಟದ ತೋಟಿಗನಾಗು.

❖❖

ಕಸ ಗುಡಿಸುವ ಪಂಚಮರು

೧

ಲಕ್ಷ ಲಕ್ಷ ಜನಸಂಖ್ಯೆಯ ಪಟ್ಟಣ;
ಡಾಮ್ರ ಮಾರ್ಗಗಳು ಬಿಸಲಲಿ ರಣರಣ;
ಜನರ ಸಂದಣಿಯ ಗೊಂದಲದಲ್ಲಿ
ಬಂಡಿ ಗಾಡಿಗಳ ಸಪ್ಪಳ ಝಣಝಣ;
ಯಾರು ಯಾರಿಗೂ ಕಾಣಿಸರು !
ಹೊಲಸು ಓಣಿಯಲಿ ಹರಿಜನರು !

೨

ಬೀದಿ ಬೀದಿಯಲಿ ಬೀರಿದ ಕಸವು,
ಗುಡಿಸಿ ಗುಡಿಸಿ ತುಸು ತುಸು ತುಸು ತುಸುವು,
ತುಂಬ ತುಂಬಲದು ಪರ್ವತ ರಾಶಿ;
ಕಾಯಕಷ್ಟವೇ ಜೀವದ ಕಸವು !
ಕರ್ಮಯೋಗಿಗಳು ಪಂಚಮರು,
ಧರ್ಮಜೀವಿಗಳು ದುಡಿಯುವರು.

೩

ತಲೆಯ ಮೇಲೆ ಕಸಗುಡಿಸಿದ ಗಂಟು;
ಕಂಕುಳಲ್ಲಿ ಕಸಬರಿಗೆಯು ಉಂಟು;
ಸಕಲ ಲೋಕವನು ಗುಡಿಸಿದ ಪುಣ್ಯ
ಮೈಯ ಬೆವರಿನಲಿ ಸುರಿಯುವದುಂಟು !
ತ್ಯಾಗಿಯೋಗಿಗಳು ಹರಿಜನರು,
ಕಷ್ಟಭೋಗಿಗಳು ಬಡ ಜನರು

೪

ಮಸಣದೀಶ್ವರನು ಕೃತಯುಗದಲ್ಲಿ
ವಿಷ ಕುಡಿಯಲು ಜಗ ಬದುಕಿತು ಅಲ್ಲಿ;
ಹಾಳು ಬಿದ್ದ ಈ ಕಲಿಯುಗದಲ್ಲಿ
ಕಸ ಗುಡಿಸದೆ ಶಿವ ಹೋದನು ಎಲ್ಲಿ ?
ದುರಿತ ಭಕ್ಷಕರು ಯಾರಿವರು ?
ಲೋಕ–ರಕ್ಷಣೆಯ ಪಂಚಮರು.

೫

ಹೊಲಸು ನಾರಿದರು ಹಿಡಿಯರು ಮೂಗ !
ಯಾವ ದೇವನಿಗು ನಿಲುಕದ ತ್ಯಾಗ !
ಕೊಳೆತ ಲೋಕವನು ತೊಳೆವ ಸಾಹಸವು
ಕರ್ಮಜೀವಿಗಳ ಸತತೋದ್ಯೋಗ
ಶ್ರೇಷ್ಠ ಸೇವಕರು ಹರಿಜನರು
ಕಷ್ಟ ಕಾಯಕದ ವಾನರರು.

೬

ಕಸ ಗುಡಿಸುವ ಬಡ ಜೀವಿಗಳೊಮ್ಮೆ
ಸುಮ್ಮನೆ ಮಲಗಲು, ಸಾಯಲು ಎಮ್ಮೆ
ಮುಟ್ಟುವರಿಲ್ಲದೆ ಕೆಟ್ಟಿತು ಜಗವು,
ಮೂಗು ಮೂಗಿನಲಿ ಬಿಟ್ಟ ವಾಸನೆ !
ಲೋಕಪಾಲಕರು ಯಾರಿವರು ?
ಯಲ್ಲಮ್ಮನ ಪರಿ ಪೂಜಕರು.

೭

ರೋಗಜಂತುಗಳು ಹುಟ್ಟುವ ಮುನ್ನ
ಚೊಕ್ಕ ಮಾಡುವರು ಪೃಥ್ವಿಯ ಬೆನ್ನ;
ನಿತ್ಯ ಕರ್ಮದಲಿ ನರಕವ ಗುಡಿಸಿ,
ಭೂಮಿಗೆ ಸ್ವರ್ಗವನಿಳಿಸುವರಣ್ಣಾ!
ಚೊಕ್ಕಟ ಮಕ್ಕಳು ಹರಿಜನರು,
ಉತ್ಕಟ ಸೇವಾ ತತ್ಪರರು.

೮

"ಕಸ ಗುಡಿಸುವ ಚಾಂಡಾಲನು ಭ್ರಷ್ಟ!
ಮುಟ್ಟಲು, ಗಳಿಸಿದ ಪುಣ್ಯವು ನಷ್ಟ!"
ಅನ್ನುವ ಧರ್ಮಶಿರೋಮಣಿ ಕೇಳೈ,
ಮುಟ್ಟದೆ ಇರಲವ ಜಗವೇ ಭ್ರಷ್ಟ!
ಕಸಬರಿಗೆಯ ವರ ಪಂಚಮರು
ಪುಣ್ಯ ಪುರಾತನ ಪೂರ್ವಜರು.

❖❖

ವೀರ ಮೈಸೂರು

ಟೀಪು ವ್ಯಾಘ್ರನೆ, ಮಡಿದು ನೀನು
ನೂರು ವರುಷಗಳಾದುವೇನು ?
ನೀನೆ ಕನ್ನಡ ಕೊನೆಯ ಭಾನು !
ವೀರ ಮೈಸೂರು. ॥ ೧ ॥

"ನನ್ನ ನಾಡಿದು ನನ್ನ ಬೀಡಿದು"
"ನನ್ನ ತಾಯೀ, ನನ್ನ ದೇವಿ,"
ಎಂದು ನುಡಿದೆ, ಹಾಗೆ ದುಡಿದೆ !
ವೀರ ಮೈಸೂರು. ॥ ೨ ॥

ನಾಡ ಬಡತನ ನೋಡಲಿಲ್ಲ;
ತಾಯ ದುಗುಡವ ಕೇಳಲಿಲ್ಲ;
ಪ್ಗರಗ ಅಡಿಯಾಳಾದುದಿಲ್ಲ।
ವೀರ ಮೈಸೂರು. ॥ ೩ ॥

ನಿನ್ನ ಕಾಲೊದಳೇನು ಚಂದ !
ಹಸರು ಭೂಮಿಯು ಪಸಲೆಯಿಂದ
ಸುತ್ತುಮುತ್ತಲು ಪೈರಿನಿಂದ
ವೀರ ಮೈಸೂರು. ॥ ೪ ॥

ರಂಗಸ್ವಾಮಿಯ ಹಾಡ ಹಾಡಿ
ಹಿಂದು–ಮುಸಲರನೊಂದುಮಾಡಿ !
ನೆಲವನಾಳಿದೆ ನಿಜವ ನೋಡಿ !
ವೀರ ಮೈಸೂರು. ॥ ೫ ॥

ಯುದ್ಧ ಮಾಡಿದೆ ಧೈರ್ಯಪಟ್ಟು
ಜೀವ ಬಲಿದಾನವನು ಕೊಟ್ಟು

ಧನ್ಯವಾದುದು ನಿನ್ನ ಹುಟ್ಟು
ವೀರ ಮೈಸೂರು. ॥ ೬ ॥

ಯುದ್ಧರಥವದು ಗಿಡ್ಡ ಕಾಲು !
ನಿನ್ನ ಕೈಯೇ ಇರಿವ ಕೋಲು !
ಕೆಚ್ಚಿನಾ ಎದೆ ದೊಡ್ಡ ಢಾಲು !
ವೀರ ಮೈಸೂರು. ॥ ೭ ॥

ನಿನ್ನ ಕಣ್ಣುಗಳೊಮ್ಮೆ ಹೊಳೆದು
ನಾಡಗೋಸುಗ ದುಡಿದು ದುಡಿದು
ಮುಚ್ಚಿಕೊಂಡವು ನೆಲವ ಹಿಡಿದು !
ವೀರ ಮೈಸೂರು. ॥ ೮ ॥

ಪುಣ್ಯ ಕಾವೇರಿಯಲಿ ಹೊಳೆದು
ನಿನ್ನ ಶೌರ್ಯವು ತೇಲುತಿಹುದು;
ನಮ್ಮನದು ಎಚ್ಚರಿಸಲಿಹುದು !
ವೀರ ಮೈಸೂರು. ॥ ೯ ॥

ನಿನ್ನ ಕೀರ್ತಿಯು ಕೇಳಲಂದ,
ನಿನ್ನ ಮೂರ್ತಿಯು ಪೂಜೆಗಂದ,
ಭರತ ಭೂಮಿಯ ಶೂರ ಕಂದಾ
ವೀರ ಮೈಸೂರು. ॥ ೧೦ ॥

ನಿನ್ನ ಕೋಟೆಯು ಬೀಳಬಹುದು;
ನಿನ್ನ ಖಡ್ಗವು ಮುರಿಯಬಹುದು;
ನಿನ್ನ ಶೌರ್ಯವು ಮಾಸದಿಹದು !
ವೀರ ಮೈಸೂರು. ॥ ೧೧ ॥

❖❖

ನೆಲ ತಾಯಿ

ತಾಯ ಪಾದವ ತೊಳೆಯಲೆಂದು
ಕಡಲ ತೆರೆಗಳು ಹಾರಿ ಬಂದು
ನೊರೆಯ ಬಿಳಿ ಕಾಣಿಕೆಯ ತಂದು
ಭೂಮಿಗರ್ಪಿಸುತಿರುವವು !

ಮುಗಿಲ ಲೋಕವ ಬಿಟ್ಟು ಬಂದು
ಮೋಡಗಳು ಮಳೆ ಹನಿಯ ತಂದು
ತಾಯಿಗದು ಅಭಿಷೇಕವೆಂದು
ಭೂಮಿಗರ್ಪಿಸುತಿರುವವು !

❖❖

ಕನಸಿನೊಳಗಿನ ಮೀನುಗಾರ

ದೋಣಿ ನೂಕಿ ಬಲೆಯ ಹಾಕಿ,
ಮೀನುಗಾರನು
ಕಡಲ ತೆರೆಯ ನೊರೆಯ ಹಾದು
ಮುಂದೆ ಹೋದನು

ಮುಂದಿನಾಸೆಯಿಂದ ಒಂದು
ಗಳಿಗೆ ಜೀವನ
ಜಲತರಂಗ ಕುಣಿಯುವಂತೆ
ಹಿಗ್ಗಿ ಚೇತನ

ಮುಗಿಲ ತುದಿಯು ಕಡಲಿನಂಚ
ಕೂಡಿದೆಡೆಯಲಿ
ಸೇರುವಾಸೆಯಿಂದ ದೋಣಿ
ಮುಂದೆ ನಡೆಯಲಿ

ಸಾಗಿ ಸಾಗಿ, ನಡುವ ಬಾಗಿ
ಬಲೆಯ ಬೀಸಿದ;
ನೀಲ ಜಲದ ಮೇಲೆ ಜಾಲ
ಮರಳಿ ಹಾಸಿದ

ಚಂದ್ರ ಬಿಂಬ ನೀರ ತುಂಬ
ನೋಡಿ ನಲಿದನು.
ಒಂದು ನಿಮಿಷ ರಸಿಕನಾಗಿ
ಕವನಕೊಲಿದನು.

ತಾಳ ಹಾಕಿ ತಲೆಯ ತೂಗಿ
ಬಲೆಯ ನೆಗೆದನು;
ಮೀನು ಏನು ಬಾರದಿರಲು
ತಿರುಗಿ ಒಗೆದನು.

ಕೂತು ಕೂತು, ಮನವು ಸೋತು,
ದಾರಿ ತೋರದು
ಕಡಲ ಹೊಟ್ಟೆಯಿಂದ ಮೀನು
ಹೊರಗೆ ಬಾರದು

ಇರುಳು ನೀಗಿ ಕೋಳಿ ಕೂಗಿ
ಬೆಳಗು ಮೂಡಿತು
ಬಲೆಯೊಳೊಂದು ಮೀನು ಬರದೆ
ಮೊಗವು ಬಾಡಿತು

ಬಲೆಯು ಹರಿದು ದೋಣಿ ಬರಿದು,
ಜಗವು ಶೂನ್ಯವು !
ಮೀನು ಬೇಟೆಯೊಂದರಲ್ಲಿ
ಅವನ ಅನ್ನವು.

"ಮೀನ ಹಿಡಿದ ಹೊರತು ನಾನು
ಮನೆಗೆ ಹೋಗಲು
ಕೂಳಿಗೇನು ಗತಿಯ ಕಾಣೆ
ಸಂಜೆಯಾಗಲು !

ಮನೆಯ ಹೆಣ್ಣು ಬಸುರು, ಆಕೆ
ಗೇಳು ತಿಂಗಳು;
ತಿಂಬರೇನು ಮಣ್ಣು ಬೂದಿ
ಮನೆಯ ಮಕ್ಕಳು !

ಆಕೆಗೊಂದು ಸೀರೆಯಿಲ್ಲ
ಚಿಂದಿಯುಡುವಳು;
ತಲೆಯ ಕೂದಲನ್ನು ಬಾಚಿ
ಹೂವ ಮುಡಿಯಳು !

ಸಣ್ಣ ಪುಟ್ಟಿಗೊಂದು ದಟ್ಟಿ
ತರುವುದಾಗದು;
ತಂದೆಯಾಗಿ ತರುವ ಭಾಗ್ಯ
ಯಾರಿಗಿರುವುದು ?

ಗಂಜಿ–ತೆಳಿಯ ಬಟ್ಟಲಲ್ಲಿ
ಉಪ್ಪು ಇಲ್ಲವು;
ಅಂದ ಮೇಲೆ ಹಬ್ಬದಲ್ಲಿ
ಎಲ್ಲಿ ಬೆಲ್ಲವು ?

ಹಬ್ಬದೂಟವೆಂಬುದಿಲ್ಲ
ಸಪ್ಪೆ ಗಂಜಿಯೆ;
ಚಳಿಯು ಬರಲಿ, ಮಳೆಯು ಬರಲಿ
ಹರಕು ಅಂಗಿಯೆ

ಹುಡುಗ ಕಾಮು ಸಣ್ಣ ರಾಮು
ಬೇಕು ಅಂದರೂ
ವರುಷಕೊಮ್ಮೆ ಹಲಸು ಹಣ್ಣು ?
ಯಾರು ತಿಂಬರು !

ಊರ ಸೆಟ್ಟಿ ಕೊಟ್ಟ ಸಾಲ
ಇನ್ನು ತೀರದು
ದೆವ್ವದಂತೆ ಬೆನ್ನು ಬಿಡದು;
ದಿಕ್ಕು ತೋರದು

ಮನೆಯ ನೆನಪು ಹಾಳು ಕನಸು !
ಕೀಳು ಬಾಳಿದು !
ಕೇಳು ದೇವ, ನನ್ನ ಮನಸು
ಇನ್ನು ತಾಳದು !"

ಇಷ್ಟರಲ್ಲಿ ದೊಡ್ಡದೊಂದು
ತೆರೆಯು ಹುಟ್ಟಿತು;
ಜಲತುಷಾರ – ಕಡಲು ಕಂಬ
ನಿಗಳ ಬಿಟ್ಟಿತು !

ಮಿತಿಯು ಮೀರಿ ತೆರೆಯು ಹಾರಿ
ಡೋಣಿ ಮುಳುಗಿತು;
ಮೀನುಗಾರನೆದೆಯ ದುಃಖ
ಕಡಲು ನುಂಗಿತು.

ಕನಸು ತೀರಿತಿಷ್ಟರಲ್ಲಿ,
ಕಣ್ಣ ತೆರೆದೆನು;
ಕಂಬನಿಗಳ ಧಾರೆಯೊರಸಿ
ಕವನ ಬರೆದೆನು !

❖❖

ಆಳಂಬೆ

ಒಂದು ಎರಡು,
ಭೂಮಿಯು ಬರಡು

ಮೂರು ನಾಕು,
ಮಳೆ ಹನಿ ಬೇಕು.

ಐದೂ ಆರು,
ಮೊಗ್ಗೆಯ ತೇರು.

ಏಳೂ ಎಂಟು,
ಛತ್ರಿಯ ದಂಟು

ಬಳಿಕೊಂಬತ್ತು,
ಇನ್ನೂ ಇತ್ತು

ಕೊನೆಯಲಿ ಹತ್ತು,
ಹೋಯಿತು ಸತ್ತು

❖❖

ಭಿಕ್ಷುಕರು

ಮುಂಜಾವಿನಿಂದಲಿ ಸಂಜೆಯ ವರೆಗೆ
ತಿರುಗುತಲಿರುವೆವು ಮನೆಯಿಂ ಮನೆಗೆ
ಬಿಕ್ಕೆಯ ಬೇಡುತ ಸಾಯುವ ವರೆಗೆ
ಸಾಂಬ ಶಿವಾ ಹರ ಸಾಂಬ ಶಿವಾ !

ವಿಧಿ ಮಾತೆಯ ಮಕ್ಕಳು ಮರಿ ನಾವು !
ಶ್ರೀಮಂತರ ಸಿರಿಯಿಂದೆಮಗೇನು ?
ಕಾಣದ ಕುರುಡನಿಗೇತಕೆ ಭಾನು ?
ಸಾಂಬ ಶಿವಾ ಹರ ಸಾಂಬ ಶಿವಾ !

ದಾನವ ಮಾಡದೆ ಬಿಟ್ಟರೆ ಬಿಡಲಿ;
ಕುಡಿಯಲು ಹರಿಯುವ ನೀರೊಂದಿರಲಿ;
ನೆರಳಿನ ಮರವೇ ಮನೆಯಾಗಿರಲಿ;
ಸಾಂಬ ಶಿವಾ ಹರ ಸಾಂಬ ಶಿವಾ !

ಅನ್ನವ ಕೊಟ್ಟರು, ಪಾಯಸವಿತ್ತರು,
ರಾಗಿಯ ಅಂಬಲಿ ಗಂಜಿಯ ಕೊಟ್ಟರು,
ಒಂದೆಡೆಗೂಡಿಸಿ ಬಾಯೊಳಗಿಡುವೆವು;
ಸಾಂಬ ಶಿವಾ ಹರ ಸಾಂಬ ಶಿವಾ !

ಬೇಡುವದೊಂದೇ ಭಿಕ್ಷುಕ ಧರ್ಮ;
ನೀಡುವದೊಂದೇ ದಾನಿಯ ಕರ್ಮ:
ಇಂತಿರುವದು ಭಗವಂತನ ಮರ್ಮ!
ಸಾಂಬ ಶಿವಾ ಹರ ಸಾಂಬ ಶಿವಾ !

ಜೀವದ ಭೀತಿಯು ನಮಗೆಲ್ಲಿರುವುದು;
ಸ್ವಾತಂತ್ರ್ಯದ ಕೋಲೂರುತ ನಡೆವೆವು;
ಊರಿಂದೂರಿಗೆ ತಿರುಗುತಲಿರುವೆವು;
ಸಾಂಬ ಶಿವಾ ಹರ ಸಾಂಬ ಶಿವಾ !

ನಮ್ಮೀ ದೈನ್ಯವೆ ನಮ್ಮಯ ಶಕ್ತಿ !
ಸಂಕಟದಲಿ ಕಾಂಬುದು ಶಿವಭಕ್ತಿ !
ಬಡತನವೆಂಬುದು ಬಡವರ ಮುಕ್ತಿ !
ಸಾಂಬ ಶಿವಾ ಹರ ಸಾಂಬ ಶಿವಾ !

ಅರಸನು ಅರಸಾಗಿರುವನು ಇಂದು;
ಆದರು ಹೋಗುವನೆಲ್ಲಿಗೆ ಮುಂದು ?
ಮರಣವ ಸೇರಲು ಎಲ್ಲರು ಒಂದು !
ಸಾಂಬ ಶಿವಾ ಹರ ಸಾಂಬ ಶಿವಾ !

❖❖

ಬಂಗಾಲದ ಬರಗಾಲ

(೧೯೪೩ರಲ್ಲಿಯ ಬಂಗಾಲದ ಬರಗಾಲದಲ್ಲಿ ಲಕ್ಷಾವಧಿ ಜನರು ತೀರಿ ಕೊಂಡಾಗ ಬರೆದ ಕವನವಿದು)

ಭೀಕರ ಭೀಕರ ಬರಗಾಲಾ !
ತಳಮಳಗೊಳುತಿದೆ ಬಂಗಾಲಾ ॥ಪಲ್ಲ॥

೧

ಎದ್ದರು ಹೆಣವೋ !
ಬಿದ್ದರು ಹೆಣವೋ !
ಬೇಸರ ಬೇಸರ ಬೇಸರಿಕೆ;
ಹದ್ದಿಗು ಬಂದಿದೆ ಓಕರಿಕೆ !

೨

ಸತ್ತರೆ ತಾಯಿ,
ಅತ್ತರೆ ಕೂಸು,
ಹತ್ತರ ಕರೆಯಲು ಯಾರಿಲ್ಲ;
ಸುತ್ತಲು ಮುತ್ತಲು ಹೆಣವೆಲ್ಲಾ !

೩

ಭತ್ತದ ಭೂಮಿ
ಉತ್ತಮ ಬೆಳೆದೂ
ದುಡಿವರ ತುತ್ತಿಗೆ ಸಿಗಲಿಲ್ಲಾ !
ಕಲಿಯುಗ–ಪುಣ್ಯವು ಮುಗಿದಿಲ್ಲಾ !

೪

ಹೆಣಗಳು ಬಿದ್ದರೆ,
ಎಣಿಸಲು ಹೋದರೆ,
ಕುಲುಕುಲು ನಗುವನು ಯಮದೇವ;
ನೊಣದೊಲು ಬಡವನ ನರಜೀವ !

೫

ಮಾನವ ಕೂಸೇ,
ಶ್ವಾನದ ಹತ್ತರ
ಅನ್ನದ ಗೋಸುಗ ಜಗಳಾಟ !
ಆದರು ದೊರೆಯದು ನಿನಗೂಟ !

೬

ಹೆಣಗಳ ಮಾಲೆ
ತೇಲುತ ಮೇಲೆ
ಗಂಗೆಯ ಕೊರಳಲಿ ಶುಭ ಚಿನ್ಹಾ !
ಧರೆಯಲಿ ಧನ್ಯರು ಯಾರಿನ್ನ ?

೭

ಧಾನ್ಯದ ಕೋಟಿ
ಜಗದಲಿ ಹುಟ್ಟಿ
ಸೆಟ್ಟಿಯ ಮೊಟ್ಟೆಗೆ ಆಧಾರ !
ರೈತನ ಹೊಟ್ಟೆ ನಿರಾಧಾರ !!

೮

ಬಡವನು ಬಿದ್ದಾ
ಒಡೆಯನು ಗೆದ್ದಾ
ಹಸಿವೆಯ ಭೀಕರ ರಣದಲ್ಲಿ !
ತ್ರಾಣವು ಪ್ರಾಣವು ಧನದಲ್ಲಿ !!

೯

ನ್ಯಾಯವು ಸುಳ್ಳು,
ಬಾಯಿಗೆ ಮುಳ್ಳು !
ಸುಮ್ಮನೆ ಗುಲ್ಲೂ ಬೊಬ್ಬಾಟಾ
ನೀತಿಯ ಹೆಸರಲಿ ಕೂಗಾಟಾ !

೧೦

ಶಾಂತಿಯ ರಕ್ಷಕ
ಅನ್ನುತ ಭಕ್ಷಕ
ರಾಕ್ಷಸನಾಗಿಯೇ ಸಂಹಾರ !
ಲೋಕಕೆ ಇಲ್ಲಾ ಆಹಾರ !

❖❖

ನಾನು

ಅಡವಿಯಲಿ ನಾನಿಲ್ಲ;
ಗುಡಿಯಲ್ಲಿ ನಾನಿಲ್ಲ;
ಗಿಡದಡಿಯ ಕರಿಗಲ್ಲು ನಾನಲ್ಲವು.
ಅಡಿಗಡಿಗೆ ನಾನಿರುವೆ,
ಪೊಡವಿಯಲಿ ತುಂಬಿರುವೆ,
ಹುಡುಕಿ ತೆಗೆ; ನಾನೆಲ್ಲಿ ? ಭಕುತಿಯಲ್ಲಿ !

ಧನಕನಕ ಬೇಕಿಲ್ಲ;
ವನಮಾಲೆ ಬೇಕಿಲ್ಲ;
ನನಗೇಕೆ ಹಣ್ಣುಗಳು? ಹೂಗಳೇಕೋ?
ನನಗೇಕೆ ನೊರೆ ಹಾಲು?
ದನದ ಕರು ಸೇವಿಸಲಿ,
ನನಗಿರಲಿ ನಿರ್ಮಲಾಂತಃಕಣರವು.

❖❖

ಕನಸಿನಲ್ಲಿಯ ಕಂದ

ಕಿರಿಯ ಮುದ್ದಿನ ಕಂದನೊಬ್ಬನು
ಮನೆಯ ಒಳಗಿಂದೋಡುತ
ಹೊರಗೆ ಮನೆಯಂಗಳದಿ ಚೆಂದದಿ
ಬಂದು ನಿಂದನು ನೋಡುತ

ಗೆಜ್ಜೆ ಸರವದು ಕಾಲೊಳಿಲ್ಲವು,
ಅಂಗಿಯಿಲ್ಲವು, ಬೆತ್ತಲೆ;
ಸಣ್ಣ ಗೊಂಬೆಯು ಬಣ್ಣ ಬುಗುರಿಯು
ಬಿದ್ದು ಇದ್ದವು ಸುತ್ತಲೆ

ಮಣ್ಣಗೊಂಬೆಯನೆತ್ತಿಕೊಂಡನು
ಬಣ್ಣ ಬುಗುರಿಯ ನೋಡುತ;
ಜೊಲ್ಲು ಸುರಿಯುತ ತೊದಲಿ ನುಡಿಯುತ
ಕಾಲ ಕಳೆದನು ಆಡುತ

ನೆಲದ ಮೇಲಿನ ಅಂಗಿಯೊಂದನು
ಎತ್ತಿ ಹೆಗಲಲಿ ಹೊತ್ತನು;
ಮಾತು ಬಾರದ ಕಿರಿಯ ಕಂದನು
ತೊಟ್ಟು ಕೊಳ್ಳಲು ಅರಿಯನು

ಪದವನೊಂದನು ಹಾಡುತಿದ್ದನು
ಸ್ವರವು ಇಂಪಾಗಿದ್ದಿತು;
ಕವನದರ್ಥವು ನನಗೆ ಬಾರದು
ಕಂದಗೂ ಸಹ ತಿಳಿಯದು !

ಜಗವು ಮರೆಯಾಗಿತ್ತು ಕಂದಗೆ
ಆಟವಾಡುವ ಭರದಲಿ;
ಬುಗುರಿಯೊಂದೇ ಗೊಂಬೆಯೊಂದೇ
ಅವನ ದೃಷ್ಟಿಯ ಪಥದಲಿ

ಹತ್ತು ಕ್ಷಣಗಳು ಕಳೆಯಲಿಲ್ಲವು
ಕಂದ ಹಸಿವಿಂ ಬಾಡಿದ;
ಮಣ್ಣ ಗೊಂಬೆಯ ಬಣ್ಣ ಬುಗುರಿಯ
ಸೆಳೆದು ಮನೆಯೊಳಗೋಡಿದ

ಬಂದ ಹಾಗೆಯೆ ಕಂದ ಸಾಗಿದ
ಹೆಗಲ ಅಂಗಿಯು ಹಾರಿತು;
ಬೆಳ್ಳಿ–ಗೆಜ್ಜೆಯು ಕಾಲೊಳಿಲ್ಲವು
ಆಟದಲಿ ಅದು ಜಾರಿತು

ಮನೆಯ ಬಾಗಿಲ ಬಳಿಯೆ ತಾಯಿಯು
ಮಗನ ನೋಡುತಲಿದ್ದಳು;
ದಣಿದ ಬಾಲಕನಪ್ಪಿಕೊಂಡಳು,
"ಕಂದ ಕಿರಿಯನು" ಅಂದಳು

"ಮುದ್ದಿನಾಮಣಿ, ಸದ್ಗುಣದ ಕಣಿ,
–ಆಟವಾಡುವ ಭರದಲಿ;
ನನ್ನ ಮರೆತರು ಕೊನೆಗೆ ಮರೆತನೆ?"
ನುಡಿದಳಾತ್ಮಿಕ ಸ್ವರದಲಿ

ಧನ್ಯ ಮಗು ತಾಯ್–ತೊಡೆಯ ಮಧ್ಯದಿ
ಗಾಡ ನಿದ್ದೆಯೊಳಿದ್ದಿತು,
ಪುಣ್ಯ ದಿವ್ಯಾನಂದ ಶರಧಿಯ
ತೆರೆಯ ಮೇಲದು ತೇಲಿತು
ಕನಸು ತೀರಿತು, ಕಣ್ಣು ತೆರೆದೆನು,
ಕಂಡ ನೋಟಕೆ ಹಿಗ್ಗಿದೆ;
"ನಿನ್ನ ಕಂದನು ನಾನು ದೇವಾ"
ಎಂದು ಶಿರವನು ಬಗ್ಗಿದೆ.

❖❖

ಇಂತಿರಲಿ ನನ್ನ ಬಾಳು

ಮಲ್ಲಿಗೆಯು ಸೌರಭದ ಸಾಗರದಿ ಮುಳುಗಿರಲಿ;
ಹುಲ್ಲೆಸಳು ಮಂಜು ಹನಿಗಾಶ್ರಯವ ಕೊಡುತಿರಲಿ;
ಕಲ್ಲು ಕಲ್ಲಾಗಿರದೆ ಶಿಲ್ಪಿಗನ ಮಗುವಾಗಿ
ನಗುವುದನು ಕಲಿಸುತಿರಲಿ

ಕಡಲ ತೆರೆ ಹಿಂದಿರದೆ ಮುಂದೆ ಸಾಗುತ ಬರಲಿ;
ಕಡಲಡಿಯ ಮೌಕ್ತಿಕವು ಜಸವ ಕೋರದೆಯಿರಲಿ;
ಕಡು ಬಡವ ಬಲು ಕಿರಿಯ ತಾನೆಂದು ಜಲಬಿಂದು
ಮನಸಿನಲಿ ಕೊರಗದಿರಲಿ

ಕೋಗಿಲೆಯು ಶ್ರೀಹರಿಯ ಪದವ ಪಾಡುತಲಿರಲಿ;
ಸೋಗೆ ಪಸರಿಸಿ ನವಿಲು ಹಾಡ ಕೇಳುತಲಿರಲಿ;
ಆಗಸವನೇರಿದರು ಕೆಳಗಿರುವ ಜಲದಲ್ಲಿ
ತಾರೆ ತಾ ತೋರುತಿರಲಿ

ಹೊಳೆಯ ಹೊನಲಿನ ತೆರೆದೊಳುತ್ಸಾಹ ಸಾಗಿರಲಿ;
ಹೊಳೆಗೆ ಕಡಲನು ಕೂಡುವಾಸೆ ದೃಢವಾಗಿರಲಿ;
ಕಡಲ ತೆರೆ ತಾಯ್ನಾಡ ಪದವ ತೊಳೆಯುತಲಿರಲಿ;
ಇಂತಿರಲಿ ನನ್ನ ಬಾಳು.

❖❖

ನೀಲಿಯ ಕೋಳಿಗಳು

ಕನ್ನಡ ನಾಡಿನ ಕಡಲಿನ ಹತ್ತರ
ಮೆರೆವುದು ಸೊಬಗಿನ ಮಾವಳ್ಳಿ;
ಹಳ್ಳಿಯ ಸುತ್ತಲು ತೆಂಗಿನ ನೋಟವು
ಅಡಿಕೆಯ ಮರದಲಿ ಎಲೆಬಳ್ಳಿ

ಬೆಳ್ಳಗೆ ಕೂದಲ ತೆಳ್ಳಗೆ ದೇಹದ
ಮುದುಕನು ತಿಮ್ಮನು ಹಳ್ಳಿಯಲಿ
ಹೆಂಡತಿಯೊಂದಿಗೆ ಸುಖದೊಳಗಿದ್ದನು;
ಆಕೆಗೆ ಹೆಸರಿದ್ದಿತು ನೀಲಿ

ಬೇಸರವಿಲ್ಲದೆ ದುಡಿಯುವಳಾಕೆಯು
ಮುದುಕನ ಮೇಲತಿಶಯ ಪ್ರೀತಿ;
ಬಾಳಿನ ಸಾಗರ ದಾಟಲು ನೀಲಿಯು
ತಿಮ್ಮನ ಜೀವನದಾ ಜ್ಯೋತಿ

ತಿಮ್ಮನು ಗುಣಯುತ ಗಂಡನು ಆದರು
ಕೆಲಸವ ಮಾಡನು ಮೈಗಳ್ಳ;
ಒಪ್ಪತು ದುಡಿದರೆ ಇಪ್ಪತು ದಿನಗಳ
ವರೆಗೂ ಕೆಲಸವನವನೊಲ್ಲ

ಕೋಳಿಯ ಮರಿಗಳ ಸಾಕುವದೆಂದರೆ
ನೀಲಿಗೆ ಎಳೆ ಪ್ರಾಯದ ಕನಸು,
ಸಾಕಿದ ಮರಿಗಳು ಕೋ ಕೋ ಕೂಗಲು
ಹಿಗ್ಗುವದಾಕೆಯ ಮುದಿ ಮನಸು.

ಮುದುಕಿಯು ಸಾಕಿದ ಕೋಳಿಯ ಸಂಖ್ಯೆಯು
ಒಂದೆರಡಲ್ಲಾ; ಮೂವತ್ತು;
ಅವುಗಳ ಸುತ್ತಲು ಸುಳಿ ಸುಳಿದಾಡುವ
ಮರಿಗಳ ಸಂಖ್ಯೆಯು ತೊಂಬತ್ತು

ಕೋಳಿಗಳೆಂದರೆ ಮುದುಕಿಯ ಪ್ರಾಣ
ಮಗನೂ ಮೊಮ್ಮಗನೂ ಎಲ್ಲಾ !
ಕೋಳಿಯ ಹಿಂಡೇ ನೀಲಿಯ ಬಳಗ,
ಆಕೆಗೆ ಮಕ್ಕಳು ಇರಲಿಲ್ಲಾ

ಹಳ್ಳಿಯ ಬೀರೇ ದೇವರ ಹೆಸರಲಿ
ವರುಷಕೆ ಮೂರೇ ಮರಿಗಳನು
ಆಹುತಿಗೈಯೆ ಪ್ರಸಾದವ ತಿಮ್ಮನು,
ನೀಲಿಯ ಸಂಗಡ ತಿನ್ನುವನು

ವರುಷಕೆ ಮೂರೇ ಕೋಳಿಗಳೆಂದರೆ
ತಿಮ್ಮನ ಮನದಲಿ ಕಡು ಕೋಪ
ಮನೆಯಲಿ ನೂರಾರಿದ್ದೂ ತಿನ್ನಲು
ಸಿಗದಿರೆ ಉರದಲಿ ಉರಿ ತಾಪ

ನೀಲಿಗೆ ಪರಿ ಪರಿ ಹೇಳಿದರೇನ್ನೈ ?
ಕೋಳಿಯ ಮರಿಗಳ ಕೊಲ್ಲುವಳೇ ?
ಎಷ್ಟೂ ಹೇಳಿದರಷ್ಟೇ ಮುದುಕಿಗೆ
ಹಟದೊಳಗಾಕೆಯು ಗೆಲ್ಲುವಳೇ ?

ಕೋಳಿಯ ಮುಕ್ಕುವ ಯುಕ್ತಿಯನೊಂದನು
ಯೋಚಿಸಬೇಕೆಂದನು ತಿಮ್ಮಾ–
ಊರಲಿ ಮಾದೇವಿಯು ಸುರುವಾಗಿದೆ
ನೆರವಾಗವ್ವಾ ಮಾರಮ್ಮ

ಮರುದಿನ ತಿಮ್ಮನು ನೀಲಿಗೆ ಹೇಳಿದ
ಊರಲಿ ಮಾದೇವಿಯು ಬಂದು
ವಾರೆರಡಾದರು ನಾನೂ ನೀನೂ
ಕಾಣಿಕೆ ಸಲ್ಲಿಸಲಿಲ್ಲೆಂದು

ಮಾರಿಯ ಬಂಟನು ನಿನ್ನೆಯ ರಾತ್ರಿಗೆ
ಕನಸಿನೊಳೆನ್ನೆದುರಿಗೆ ಬಂದು,
"ತಿಮ್ಮಾ ಕಾಣಿಕೆ ಸಲ್ಲಿಸು" ಅಂದನು;
ಹೆದರಿದೆ ನಾ ಬೆವರಲಿ ಮಿಂದು

"ನಿನ್ನಾ ಪ್ರೀತಿಯ ಕಾಣಿಕೆ ಯಾವುದು ?
ಹೇಳೈ ಸಲ್ಲಿಸುವೆನು ತಂದೆ,
ಮಾರಿಯ ಬಂಟನೆ, ಬಡವರ ನಂಟನೆ,
ರಕ್ಷಿಸು ತಪ್ಪಾಯಿತು" ಅಂದೆ,

"ಪ್ರತಿ ಶನಿವಾರಕೆ ಬೇಯಿಸಿ ಕೋಳಿಯ
ಮರಿಯೊಂದನು ಕೊಟ್ಟರೆ ತೃಪ್ತಿ;
ಕೋಳಿಯ ಬಳಗವು ಬೆಳೆಯಲಿ ತಿಮ್ಮಾ,
ತೋರಲಿ ದಂಪತಿಗಳ ಭಕ್ತಿ

ಮಾರಿಯ ಮಂದಿರದಾಚೆಗೆ ತೋರುವ
ಹಲಸಿನ ಮರದಾ ಹೊದರಿನಲಿ
ನನ್ನಾವಾಸವು; ಕೋಳಿಯ ಮರಿಯನು
ತಂದರ್ಪಿಸುವುದು ಪೊಳ್ತಿನಲಿ"

ಕನಸಿನ ಕತೆಯನು ಕೇಳಲು ನೀಲಿಯ
ಮೈಯೊಳಗೆದ್ದವು ಮುಳ್ಳುಗಳು;
ದೇಹವು ನಡುಗಿತು, ಬೆವ್ವರನಿ ಮೂಡಿತು
ಕಟಕಟವೆಂದವು ಹಲ್ಲುಗಳು

ಮರು ದಿನ ಶನಿವಾರದ ರವಿ ಮೂಡಿರೆ
ಕೋಳಿಯ ಮರಿ ಕೊಲ್ಲುವುದೆಂದು
ನೀಲಿಯ ಅಪ್ಪಣೆಯಾಗಲು ತಿಮ್ಮನು
ಕೊಂದನು ಮರಿ ದೇವರಿಗೆಂದು

ಬೇಯಿಸಿ ಮರಿಗೆ ಮಸಾಲೆಯ ಹಾಕಲು
ಗಮ ಗಮ ವಾಸನೆ ಮನೆಯಲ್ಲಿ;
ತಿಮ್ಮನ ಬಾಯಲಿ ಸುರಿಯಿತು ನೀರು
ಸಂತಸವುಕ್ಕಿತು ಮನದಲ್ಲಿ

"ನೀನೇ ಕಾಣಿಕೆ ಸಲ್ಲಿಸು ನೀಲೀ,
ಹೋಗುವೆ ನಾ ಗದ್ದೆಯ ಕಡೆಗೆ"
ಅನ್ನುತ ತಿಮ್ಮನು ಮನೆಯಿಂದೆದ್ದನು
ಅಡಗಿದ ಹಲಸಿನ ಹೊದರೊಳಗೆ

ಮುದುಕಿಯು ಮಾಂಸದ ಮುದ್ದೆಯ ಹಿಡಿದು
ಬೀರೇ ದೇವಗೆ ಋಣಿಯಾಗಿ
ಹಲಸಿನ ಹೊದರಲಿ ತೂರಿದಳಯ್ಯಾ
ಭಕ್ತಿಯ ಮುಕ್ತಿಯ ಕಣಿಯಾಗಿ

ಮರದೊಳಗಡಗಿದ ತಿಮ್ಮನು ಪಡೆದನು
ಎಂದೂ ತೋರದ ಆನಂದ;
ಗಮ ಗಮ ವಾಸನೆಯಿಂದಲಿ ತುಂಬಿದ
ಮಾಂಸವ ಗಪಗಪನೇ ತಿಂದ

ಕಪಟವನರಿಯದೆ ಕೋಳಿಯ ಕೊಟ್ಟಳು
ನೀಲಿಯು ವಾರಕೆ ಒಂದು ದಿನ;
ತಪ್ಪದೆ ತಿಮ್ಮನು ಬಲು ರುಚಿಯಿಂದಲಿ
ಕೋಳಿಯ ತಿಂದನು ಬಿದ್ದ ಕ್ಷಣ

ನಾಕ್ಕೈದಾರನು ಮರಿಗಳ ತಿಂದನು
ತಿಮ್ಮನು ದೇವರ ಹೆಸರಿನಲಿ !
ಏಳನೆ ಬಾರಿಗೆ ದೇವರ ದರುಶನ
ದಾಸೆಯು ಮೂಡಿತು ನೀಲಿಯಲಿ

ಏಳನೆ ಮರಿ ಕಾಣಿಕೆ ಕೊಡುವಾಗಲೆ
ದೇವರ ದರುಶನದಾಸೆಯಲಿ
ಮರದಲಿ ನೋಡಿದಳಾಕೆಯು ! ಅಯ್ಯೋ !
ಗಂಡನ ಕಂಡಳು ಹೊದರಿನಲಿ !!

ಕಿಡಿಕಿಡಿಯಾದಳು; ತಿಮ್ಮನು ನುಡಿದನು;
ನಾನೇ ಮಾರಮ್ಮನ ಬಂಟ !
ಕೋಳಿಯ ಮಾಂಸವ ತಿನ್ನಲು ಬಂದಾ
ದೇವಿಯ ಮನೆಯೊಳಗಿನ ನೆಂಟ

❖❖

ಹರಿಜನರು

*ಆಗೆರ ಸೋಮೂ
ಮುಕ್ರೀ ಓಮೂ
ಹಳ್ಳೆರ ಖೇಮೂ ಹರಿಜನರೋ;
ಹಗಲೂ ಇರಳೂ
ಬೆಳಗೂ ಬೈಗೂ
ದುಡಿದೂ ಹೊಟ್ಟೆಗೆ ಸಿಗದವರೋ !

ಬಿಸಲಲಿ ಬೆಂದು
ಬೆವರಲಿ ಮಿಂದು
ಭೂಮಿಗೆ ಕಳೆಯನು ತಂದವರೊ;
'ಬರಿದೋ ಹೊಟ್ಟೆ
ಮೈಯಲಿ ಬಟ್ಟೆ
ಇಲ್ಲದೆ ಕೆಟ್ಟೆ' ಎಂಬುವರೋ !

ಮಳೆಗಾಲ್ ಬಂತು,
ಕೆಲಸಾ ಸಂತು,
ದುಡಿಸುವರಿಲ್ಲಾ; ಜರ್‌ಜರರೋ !
ಸರಕಾರ್ ಸುಳ್ಳು,
ಜನರಿಗೆ ಮುಳ್ಳು
ಬಡವರದಲ್ಲಾ, ಒಡೆಯರದೋ !
ಗುಡಿಸಲು ಸಣ್ಣಾ;
ತೊಯ್ದಿದೆ ಮಣ್ಣಾ
ಸೋರುವದಣ್ಣಾ, ಅಲ್ಲಲ್ಲಿ !

---

* ಆಗೆರ, ಮುಕ್ರೀ ಮತ್ತು ಹಳ್ಳೆರ ಇವು ಹರಿಜನ ಜಾತಿಯ ಹೆಸರುಗಳು, ಉತ್ತರ ಕನ್ನಡದಲ್ಲಿ ಬಳಕೆಯಲ್ಲಿವೆ.

ಮಡಕೆಯು ತುಂಡು;
ಸುತ್ತುವ ಮುಂಡು
ಜಿರಿಜಿರಿಯಾಗಿದೆ ಅಲ್ಲಲ್ಲಿ !

ಮದುವೆಯು ಬಂದರೆ
ಸಾಲವ ತಂದರೆ
ಸಾಯುವವರೆಗೂ ದುಡಿಸುವರೊ !
ಸತ್ತರೆ ತಂದೆ
ದುಡಿವನು ಮುಂದೆ
ಮಗ ತಾನಿದ್ದರೆ; ದಣಿಸುವರೊ !

ತೆಗೆದರೆ ದೆವ್ವ,
ಮುದುಕಿಯು ಅವ್ವ
ಬದುಕುವಳೆಂಬುದೆ ವಿಶ್ವಾಸ !
ಭಟ್ಟರ ಮಂತ್ರಾ,
ಮೋಡಿಯ ಯಂತ್ರಾ,
ದೆವ್ವದ ತಂತ್ರಾ; ಬಲು ಪಾಪಾ !

ಕೂಲಿಯ ಕೆಲಸಾ
ಇಲ್ಲದ ದಿವಸಾ
ಊರದಲಿ ತಾಪಾ ಉಪವಾಸಾ !
"ಯಾಕೋ ಕದ್ದೆ ?
ಹೊಟ್ಟೆಗೆ ತಿಂದೆ ?"
ಎನ್ನುವ ಜಾಣರಿಗಾವೇಶಾ
ಗುಡಿಸಲ ಭೂಮಿ
ಒಡೆಯದು ಸ್ವಾಮಿ;
ಅಡಿಯಷ್ಟೂ ನೆಲ ನಮಗಿಲ್ಲಾ !

ಇಲ್ಲಾ ಗದ್ದೆ;
ಇರುವುದು ಹುದ್ದೆ !
'ಹರಿಜನ' ಹುದ್ದೆಯು ನಿಮಗಿಲ್ಲಾ !

ಶಿಕ್ಷಣ ಲೇದು,
ಬಾರದು ಓದು,
ಲೆಕ್ಕಾ ಪೊಕ್ಕಾ ಸೆಟ್ಟರಿಗೆ;
ಮಣಮಣ ಮಂತ್ರಾ
ದೇವರ ತಂತ್ರಾ,
ಬರುವುದು ಮಾತ್ರಾ ಭಟ್ಟರಿಗೆ !

ಸಾಲದು ತ್ರಾಣಾ !
ಹೋಗದು ಪ್ರಾಣಾ !
ಭಗವಂತನಿಗೇ ಅರ್ಪಣವೋ ?
ಬಡ ಕಂಗಾಲನ
ಹರಿಜನ–ಜೀವನ
ನ್ಯಾಯ ನೀತಿಗಳ ದರ್ಪಣವೋ ?

ಬಂತು ಸ್ವರಾಜ್ಯಾ,
ಆದರು ಭಾಗ್ಯಾ
ಹರಿಜನಕಿಲ್ಲಾ, ನಿರ್ಬಲರೋ;
ಹರನೂ ನೋಡಾ !
ಹರಿಗೂ ಬೇಡಾ !
ಹೆಸರಿಗೆ ಮಾತ್ರಾ "ಹರಿಜನರೋ !"

❖❖

ಮೈಸೂರು

ಬಂಧುರ ಭೂಪದ;
ಸುಂದರ ಶಿಲ್ಪದ
ಮಂಗಳ ಮಂದಿರ ಮೈಸೂರು
ಮಿಂಚಿನ ದೀಪವು
ಕಂಗೊಳಿಸಲು, ಮನ
ರಂಜಿಪ ಜನಪದ ಮೈಸೂರು

ಕನ್ನಡ ಧರೆಯಲಿ
ಚಿನ್ನವು ದೊರಕುವ
ಚೆನ್ನೆಯ ಖನಿಯಿದು ಮೈಸೂರು
ನುಣ್ಣಗೆ ತೊದಲುವ
ಕನ್ನಡ ಮಕ್ಕಳ
ಬಣ್ಣದ ಬೀಡಿದು ಮೈಸೂರು

ಊಣೆಯನರಿಯದ
ವೀಣೆಯ ಬೆಡಗಿನ
ಗಾನದ ಗುಡಿಯಿದು ಮೈಸೂರು
ಆನೆಗಳಿರುತಿಹ
ಕಾನನದಿಂದಲಿ
ಕ್ಷೋಣಿಯೊಳೆಸೆವುದು ಮೈಸೂರು

ಬತ್ತದ ಕೊಳಗಳು
ಸುತ್ತಲು ಹೊಲಗಳು
ಎತ್ತರ ಭೂತಲ ಮೈಸೂರು
ಮುರಲಿಯನೂದುತ
ತರಳರು ದನಗಳ
ಕರೆಯುವ ಬೀಡಿದು ಮೈಸೂರು

ಗಂಧದ ಮರದಡಿ
ಕಂದರು ಕುಣಿಯುವ
ಅಂದದ ಬನವಿದು ಮೈಸೂರು
ಕುಂದದೆ ಬೆಳಕಿನ
ಚಂದಿರ ಮೂಡಲು,
ಮುಂದಕೆ ನಡೆವುದು ಮೈಸೂರು.

❖❖

ನೆರಳು

ಆಸೆಯೆಂಬುದು ನೆರಳು,
ಹಿಂದು ಮುಂದಿನ ಮರಳು,
ಎಲ್ಲಿ ಹೋದರು ಬಿಡದು ಭೂತದಂತೆ;
ಚಿಕ್ಕದಾದರು ಬೆರಳು,
ಮುಂಜಾವದಲಿ ನೆರಳು
ಬೆರಳಿಗಿಂತಲು ಬಹಳ ದೀರ್ಘವಂತೆ !

ಮರಳಿ ಸಂಜೆಗೆ ಛಾಯೆ
ದೀರ್ಘವಾಯಿತು, ಮಾಯೆ !
ಈ ರೀತಿ ಮಾನವನ ಮನದ ಚಿಂತೆ !
ಮೊದಲು ಬಾಳುವ ಚಿಂತೆ,
ಕೊನೆಗೆ ಮರಣದ ಚಿಂತೆ,
ತುದಿಮೊದಲು ಹಿರಿ ಚಿಂತೆ ನೆರಳಿನಂತೆ !

❖❖

ಅಂಚೆಯವನು

ಓಲೆಯ ಹಂಚಲು ಹೊರಡುವೆ ನಾನು
ತೋರಲು ಆಗಸದಲಿ ಬಿಳಿ ಭಾನು;
ಮನೆಯಲಿ ನೀವು ಬಿಸಿಲಲಿ ನಾನು
ಕಾಗದ ಬಂತು ಕಾಗದವು

ಹೆಗಲಲಿ ಹಳದಿಯ ಹಸುಬೆಯ ನೀಡಿ
ಕಾಲಲಿ ಚರ್ಮದ ಮೆಟ್ಟಿನ ಜೋಡಿ;
ತಲೆಯಲಿ ಖಾಕಿಯ ಪಗಡಿಯ ನೋಡಿ;
ಓಲೆಯ ತಂದೆ ಓಲೆಯನು.

ಒಳಗಿಂದಲಿ ಜನರೆನ್ನನು ಕಂಡು
ಬೇಗನೆ ಹೊರ–ಅಂಗಳಕೈತಂದು
'ಕಾಗದವಿದೆಯೇ ?' ಅನ್ನುವುದುಂಟು !
ಕಾಗದ ಬಂತು ಕಾಗದವು

ಸೊಗಸಿನ ಸುದ್ದಿಯ ತರುವೆನು ನಿಮಗೆ;
ವ್ಯಸನದ ವಾರ್ತೆಯ ಕೊಡುವೆನು ತಮಗೆ
ಎಲ್ಲಾ ಸುದ್ದಿಗಳೊಂದೇ ನಮಗೆ !
ಓಲೆಯ ತಂದೆ ಓಲೆಯನು

ಇದು ಧನಹೀನರ, ಇದು ಹಣವಂತರ,
ಇದು ಗುಣಹೀನರ, ಇದು ಗುಣವಂತರ,
ಕಾಗದವೆನ್ನುತ ಮಾಡೆನು ಅಂತರ !
ಕಾಗದ ಬಂತು ಕಾಗದವು.

ಗಂಡನು ನಾಳೆಗೆ ಬರುವನು ಎಂದು,
ಅಯ್ಯೋ ಹೆಂಡತಿ ತೀರಿದಳೆಂದು
ಹಿಗ್ಗುವ ತಗ್ಗುವ ಮೂಢರಿಗೆಂದು
ಓಲೆಯ ತಂದೆ ಓಲೆಯನು

ಓಲೆಯ ಕೊಡುವಧಿಕಾರಿಯು ನಾನು,
ಆದರು ಅದರಲಿ ಬರೆದುದು ಏನು ?
ಎಂಬುದನರಿಯನು ! ಬಲು ಸುಖಿ ನಾನು !
ಕಾಗದ ಬಂತು ಕಾಗದವು.

ಕಳ್ಳಾ, ಮಳ್ಳಾ !

ಯಾರಿಗು ಕಾಣದೆ ಅಡಗಿಸಿ ತಿಂಡಿಯ
ಮುಕ್ಕುವೆಯೇತಕೆ ನೀ ಕಳ್ಳಾ ?
ಅಜ್ಜಿಯು ತೇಗುತೆ ಮಜ್ಜಿಗೆ ಕುಡಿಯಲು
ಏತಕೆ ನಗುವಿಯೊ ನೀ ಮಳ್ಳಾ ?

ಅಕ್ಕಗೆ ಅಪ್ಪನು ಬಿಮ್ಮನೆ ಬೈದರೆ
ಕುಣಿಯುವದೇತಕೆ ನೀ ಕಳ್ಳಾ ?
ತಂಗಿಯು ದೊಪ್ಪನೆ ಬಿದ್ದರೆ, ಎತ್ತದೆ
ಸುಮ್ಮನೆ ನೋಡುವೆ ನೀ ಮಳ್ಳಾ !

ಖರ್ಜೂರ ಹಿಡಿಯಂದಕ್ಕನ ಬಾಯಲಿ
ಹುಣಸೆಯ ಹಾಕುವೆ ನೀ ಕಳ್ಳಾ !
ಬಾಳೆಯ ಹಣ್ಣಿನ ಸಿಪ್ಪೆಯನೀಯುತ
ಹೆಣ್ಣಿಂದೊರೆಯುವೆ ನೀ ಮಳ್ಳಾ !

ಅಜ್ಜಿಯು ಮಲಗಲು ಆಕೆಯ ಕಾಲಿಗೆ
ಗೆಜ್ಜೆಯ ಸುತ್ತುವೆ ನೀ ಕಳ್ಳಾ !
ಅಜ್ಜನ ಹಿಂಬದಿ ಆತನ ಜುಟ್ಟಿಗೆ
ಕಾಗದ ಕಟ್ಟುವೆ ನೀ ಮಳ್ಳಾ !

ಈ ಬಗೆ ಮಕ್ಕಳು ಮನೆಯಲಿ ಇದ್ದರೆ
ಏನೇ ಬಡವಿಯ ನನ ಭಾಗ್ಯಾ !
ತಾಯಿಯ ಕಣ್ಣಿಗೆ ಮುದ್ದಿನ ಕಂದನು
ಆಡುವ ನಾಟಕ ಅತಿ ಯೋಗ್ಯಾ !

❖❖

ತಾಯಿ

ತೂಗುವ ತೊಟ್ಟಿಲು ದೇಗುಲ, ತಾಯಿ,
ಜೋಗುಳ ವೇದಮನೋಹರ, ಮಾಯಿ

ಕೈಯಲಿ ಹಗ್ಗವು, ಬಾಯಲಿ ಹಾಡು,
ಹೃದಯವು ಮಮತೆಯ ಸಮತೆಯ ಬೀಡು

ಮಲಗು ಮುಕುಂದಾ, ಗೋಪಿಯ ಕಂದಾ,
ಮಲಯಜ ಗಂಧಾ, ಹೂಮಕರಂದಾ

ಝರಿಯೇ ಹರಿಯಲು ಜೋಗುಳವಾಡು
ಮರೆವುದು ಧರೆಯಲಿ ನಾಕವು, ನೋಡು

ತಾಯಿಯು ದೇವರಿಗಿಂತಲು ಮೇಲು,
ದೇವರ ಮೊಲೆಯಲಿ ದೊರೆವುದೆ ಹಾಲು ?

ವಿಶ್ವದ ಬಾಳಿನ ಮೂಲವದೆಲ್ಲಿ
ಮಾತೆಯ ಪಾಲನೆ ಲಾಲನೆಯಲ್ಲಿ

ಯಾವಳ ಹಿಡಿಯಲಿ ತೊಟ್ಟಿಲ ದಾರ
ಆಕೆಯ ಉಡಿಯಲಿ ಜಗದೋದ್ಧಾರ

ತೂಗುವ ತೊಟ್ಟಿಲು ದೇಗುಲ, ತಾಯಿ,
ಜೋಗುಳ ವೇದಮನೋಹರ, ಮಾಯಿ

❖❖

ಗೊಲ್ಲನ ಬಾಳು

'ಮುಂದಿನ ಜನ್ಮದಿ ಬೃಂದಾವನದಲಿ
ನಿನ್ನನು ಗೊಲ್ಲನ ಮಾಡುವೆನು'
ಎಂದೀ ವರವನು ವಿಧಿಯನಗಿತ್ತರೆ
ಇಂದೇ ಸಾಯಲು ಬಯಸುವೆನು !

ಬೃಂದಾವನದೊಳು ಗೊಲ್ಲನ ಮಾಡಲು
ಗೋವುಗಳನು ನಾ ಕಾಯುವೆನು;
ಮುರಲಿಯನೂದುತ ಆಲದ ನೆರಳಲಿ
ಬನಗಳ ಗೀತವ ಹಾಡುವೆನು

ಪಂಡಿತ ಕವಿಗಳು ವ್ಯಾಕರಣದ ಬಲ್ –
ಬಲೆಯಲಿ ಬಗಿದಿಹ ಕವಿತೆಗಳ,
ಜನರಿಗೆ ತಿಳಿಯದ ಸಕ್ಕದ ನುಡಿಯಲಿ
ಸೆರೆಯಾಗಿರುವ ಗೀತಗಳ –

ಇವುಗಳನೋದಿ ನನ್ನೀ ಜನ್ಮವು
ಸಂಸ್ಕೃತವಾಗಿದೆ ಹೇ ದೇವ !
ಜೀವವು ಇಲ್ಲದ ಸಂಸ್ಕೃತಿಯೇತಕೆ ?
ಬೇಕಾಗಿರುವುದು ನಿಜ ಜೀವ

ಗೊಲ್ಲರು ಊದುವ ಕೊಳಲಿನ ದನಿಯಲಿ
ಜೀವವು ನಲಿನಲಿದಾಡುವದು !
ದನಗಳ ಬಾಯಿಯ 'ಅಂಬಾ' 'ಅಂಬಾ'
ಎಂಬಾ ಗೀತೆಯೊಳಲೆಯುವದು !

ದನಗಳ ಕಾದು ಹಾಲನು ಕುಡಿದು,
ಕಂಬಳಿಯಲಿ ನಾ ಮಲಗುವೆನು,
ನೀಲಿಯ ನಭವೇ ಮನೆಯಾಗಿರುವುದು,
ಹಾಡುವ ಹಕ್ಕಿಯ ಕೇಳುವೆನು

'ಮುಂದಿನ ಜನ್ಮದಿ ಬೃಂದಾವನದಲಿ
ನಿನ್ನನು ಗೊಲ್ಲನ ಮಾಡುವೆನು'
ಎಂದೀ ವರವನು ವಿಧಿಯನಗಿತ್ತರೆ
ಇಂದೇ ಸಾಯಲು ಬಯಸುವೆನು !

❖❖

ಕನ್ನಡ ತಾಯಿ

ಬಾಳು ಕನ್ನಡ ತಾಯಿ, ಬಾಳು ಭೂದೇವಿ,
ಗಜವೃಷಭ ಕೇತುವಿನ ಸದ್ಧರ್ಮ ದೇವಿ,

೧

ಮೂರು ಮುನ್ನೀರುಗಳ ನೀಲ ಜಲ ಮಧ್ಯದಲಿ
ಮೂರು ಸಾವಿರ ವರುಷದಾಚೆ ಜನಿಸಿ,
ಕೋಟಿ ಮಕ್ಕಳ ಹೆತ್ತ ಮುದುಕಿಯಾದರು, ತಾಯೆ,
ತರುಣಿಯೊಲು ನೀನಿರುವೆ ಚಲುವ ಸೂಸಿ

೨

ಒಂದು ಕೈಯಲಿ ಚಕ್ರ, ಒಂದು ಕೈಯಲಿ ಶೂಲ,
ಉಗ್ರ ಬೆಂಕಿಯ ಕಾರಿ ಸ್ವಾತಂತ್ರ್ಯ ಪಡೆವೆ;
ಒಂದು ಮಗ್ಗಲಿಗಾನೆ, ಒಂದು ಮಗ್ಗಲಿಗೆತ್ತು
ಸೌಮ್ಯ ರೂಪವ ತೋರಿ ಶಾಂತಿಯನು ಕೊಡುವೆ

೩

ಅನ್ಯ ದೇಶಗಳಿಂದ ವೈರಿಗಳು ನಡೆತಂದು
ನಿನ್ನ ಧರ್ಮಾಮೃತವ ಕೆಡಿಸಲಿಕೆ ನೋಡೆ,
ಪುಣ್ಯ ಪಂಪಾತೀರದಲ್ಲಿ ರಾಜ್ಯವ ಕಟ್ಟಿ,
ಧರ್ಮವನು ಕಾಪಾಡಿ, ಕೀರ್ತಿಗೈದೆ

೪

ತೊಡಗಿ ಜಗಳಾಟದಲಿ ನಿನ್ನ ಮಕ್ಕಳು ಕೆಟ್ಟು,
ಕೆಲಕಾಲ ದಾಸ್ಯದಲಿ ಮುಳಗೆ, ನೊಂದೆ;
ಘೋರ ಗರ್ಜನೆಗೈದು, ಸಿಂಗಿಯಂತುರಿದೆದ್ದು
ಸ್ವರಾಜ್ಯ–ಫಲವನ್ನು ತಿರುಗಿ ತಂದೆ

೫

ನಿನ್ನ ಮಕ್ಕಳು ಕಡಲರಾಯನೆದೆಯನು ಸೀಳಿ,
ನಾವೆಗಳ ನಡೆಸುತ್ತ ದೂರ ಸೇರೆ,
ಗ್ರೀಕ ರೋಮನ್ ಬ್ಯಾಬಿಲೋನಿಯರ ಗಗನದಲಿ
ಮೂಡಿ ಬೆಳಗಿತು ನಿನ್ನ ಕೀರ್ತಿ–ತಾರೆ

೬

ನಿನ್ನ ದೇಹದ ಬಣ್ಣ ಕರಿಯ ದ್ರಾಕ್ಷಿಯ ಹಣ್ಣ
ಕಾಂತಿಯನು ಹೋಲುವುದು, ಎರೆ ಮಣ್ಣ ತಾಯಿ;
ನಿನ್ನ ಕೀರ್ತಿಯ ವರ್ಣ ಶುಭ್ರ ಸೂರ್ಯನ ಕಿರಣ
ತೇಜಕೆಣೆಯಾಗಿಹುದು ಸಂಸ್ಕೃತಿಯ ದೇವಿ !

❖❖

ಕೆಂಪು ಬಾವುಟ*

ಕೆಂಪು ಬಾವುಟವು ರೈತನದೋ । ಈ –
ರಕ್ತ ಬಾವುಟವು ಕೂಲಿಯದೋ ॥ಪಲ್ಲ॥

ಬಡವರ ಉರದಲಿ ಹಸಿವೆಯ ಸುಣ್ಣ
ಉರಿದೂ ಉರಿದೂ ಉರಿದೂ ಹುಣ್ಣ;
ಹುಣ್ಣಿನ ನೆತ್ತರು ಧ್ವಜಕದು ಬಣ್ಣ!
ಕೆಂಪು ಬಾವುಟೆಯು................ ॥ ೧ ॥

ರೈತನಿಂದಲೇ ಜಗದಲಿ ಅನ್ನ
ರೈತನ ಹೊಟ್ಟೆಯು ತುಂಬುವ ಮುನ್ನ
ಕೊಡಲಾಗದು ಯಾರಿಗು ಬೆಳೆಯನ್ನ !
ಕೆಂಪು ಬಾವುಟೆಯು................ ॥ ೨ ॥

ಕೂಲಿಯಿಂದಲೇ ಜಗದಲಿ ಕರ್ಮ;
ಶ್ರಮಜೀವನವೇ ವಿಶ್ವದ ಮರ್ಮ;
ಕೂಲಿಯ ಸುಖವೇ ಮಾನವ ಧರ್ಮ !
ಕೆಂಪು ಬಾವುಟೆಯು................ ॥ ೩ ॥

ರೈತನಂತೆಯೇ ಬೆವರಲಿ ತೇಲಿ
ಕಾರಖಾನೆಯಲಿ ದುಡಿವನು ಕೂಲಿ;
ಪ್ರಗತಿ ರಥಕೆ ಇವರಿಬ್ಬರು ಗಾಲಿ !
ಕೆಂಪು ಬಾವುಟೆಯು................ ॥ ೪ ॥

---

* ಧ್ವಜದ ಮೇಲೆ ಯಾವುದೇ ತರದ ಚಿನ್ಹವಿರದ ಸಾದಾ ಕೆಂಪು ಬಾವುಟವೇ ಅಂತರ ರಾಷ್ಟ್ರೀಯ ಶ್ರಮಜೀವಿ ವರ್ಗದ ಪತಾಕೆಯೆಂದು ಹೆಸರಾಗಿದೆ. ಈ ಪತಾಕೆಯನ್ನು ಕುರಿತ ಕವನವಿದು.

ಹಾರಲಿ ಹಾರಾಡಲಿ ಈ ಧ್ವಜವು;
ಧ್ವಜದ ಕೆಳಗೆ ರೈತರ ಭುಜಬಲವು,
ಜಮೀನುದಾರಿಯ ಮರಣವು ನಿಜವು !
ಕೆಂಪು ಬಾವುಟೆಯು................ ॥ ೫ ॥

ಕೂಲಿಕಾರ ಒಕ್ಕಲಿಗರ ಬಲವು
ಮೀನುಗಾರ ಶ್ರಮಜೀವಿಯ ಕುಲವು
ಒಂದೆಡೆ ಸೇರಲು, ಜನತೆಯ ಗೆಲವು !
ಕೆಂಪು ಬಾವುಟೆಯು................ ॥ ೬ ॥

ಮೂಡಣ ಪಡುವಣ ಬಡಗಣ ತೆಂಕಣ
ಐದು ಖಂಡಗಳ ಶ್ರಮಜೀವಿಯ ಗಣ
ಎತ್ತಿ ಹಿಡಿದ ಧ್ವಜ ವಿಶ್ವದ ತೋರಣ !
ಕೆಂಪು ಬಾವುಟೆಯು................ ॥ ೭ ॥

ಧ್ವಜದಲಿ ಮೂಡಲು ಅನುಪಮ ಭಕ್ತಿ
ಹೊಳೆವುದು ಬೆಳೆವುದು ಜನತೆಯ ಶಕ್ತಿ;
ಇದರೊಳಗೇನೇ ಮನುಜನ ಮುಕ್ತಿ !
ಕೆಂಪು ಬಾವುಟೆಯು................ ॥ ೮ ॥

ಬಿಟ್ಟು ಬಿಡಲು ನಾವ್ ಸಂಶಯ ಭ್ರಾಂತಿ
ನಾಲ್ಕು ದಿಕ್ಕಿನಲಿ ಹಬ್ಬಿತು ಕ್ರಾಂತಿ,
ಸಮತಾವಾದದಿ ವಿಶ್ವದ ಶಾಂತಿ !
ಕೆಂಪು ಬಾವುಟೆಯು................ ॥ ೯ ॥

ಕೆಂಪು ಧ್ವಜದಲೇ ಜನತೆಯ ತ್ರಾಣಾ
ಧ್ವಜ ಬಿಡಲಾರೆವು ಹೋದರು ಪ್ರಾಣಾ !
ವೀರ ಪ್ರತಿಜ್ಞೆಯು ವೆಂಕಟರಮಣಾ !
ಕೆಂಪು ಬಾವುಟೆಯು................ ॥ ೧೦ ॥

❖❖

ಪಯಣ

ಲೋಕವಿದು ನನ್ನಾಟದಿಳೆಯೆಂದು ತಿಳಿದು
ಅದನುಳಿದು ನಿನ್ನೆಡೆಗೆ ಬರುವೆ ಹಿಗ್ಗಿ
ಭಾಸ್ಕರನು ಪಥದೊಳುರಿಯುವ ದೀಪವೆಂದು
ಹೆಜ್ಜೆಯಿಡುವೆನು ಮುಂದೆ ನುಗ್ಗಿ ನುಗ್ಗಿ

ನಂಬಿಗೆಯು ನನ್ನೂರುಗೋಲೆಂದು ತಿಳಿದು
ಸತ್ಯವೇ ಬುತ್ತಿ ನನಗೆಂದು ಬಗೆವೆ;
ಬರುವ ತೊಡರುಗಳೆಲ್ಲ ಧರ್ಮಛತ್ರಗಳೆಂದು
ಅವುಗಳಲಿ ನಲಿದುಂಡು ಮುಂದೆ ನಡೆವೆ

ತೃಪ್ತಿ ನನ್ನಾಯಾಸವನು ಕಳೆವ ಪತ್ನಿ,
ಪತ್ನಿಯೊಡಗೂಡಿ ನಾ ಹಿಗ್ಗಿ ತರುವೆ,
ಭಕ್ತಿನೇತ್ರಗಳಿಂದ ಮುಕ್ತಿಮಾರ್ಗವ ಹುಡುಕಿ
ಪ್ರೇಮಗೀತೆಯ ರಸವ ಕುಡಿದು ಬರುವೆ

ನಡೆವಾಗ ಚಳಿಗಾಲ ನಡುಗಿಸುವದೆಂದು
ದೇಹವಿದು ನಾ ತೊಟ್ಟ ಪಯಣ ಬಟ್ಟೆ !
ಇಂತು ಪಯಣವ ಮುಗಿಸಿ ನಿನ್ನೆಡೆಗೆ ಸೇರದಿರೆ
ಸಂಸಾರದಲಿ ನಾನು ಕೆಟ್ಟೆ ಕೆಟ್ಟೆ !!

❖❖

ಪ್ರಾಣಿ ಪ್ರದರ್ಶನ

ಕೋಲಿಗೆ ಕಟ್ಟಿದ ಮರ್ಕಟವು,
ಸೀಸೆಯ ಜಲದಲಿ ಕರ್ಕಟವು,
ಪಂಜರದೊಳಗಿನ ಶುಕಪಕ್ಷಿ,
ಪೇಳಿಗೆಯೊಳಗಿನ ನಾಗರವು

ಸ್ತಂಭನವಾಗಲು ಚೇತನವು
ಬಂಧನವಾಯಿತು ಜೀವನವು;
ಇದುವೇ ಪ್ರಾಣಿ ಪ್ರದರ್ಶನವು;
ಕರ್ಕಶ ನರನ ನಿದರ್ಶನವು !

ಮಂಗನ ಆಟದ ಇಂಗಿತವು ?
ಕರಡಿಯ ಕುಣಿತದ ಕಾರಣವು ?
ನರನ ಉದರವೇ ವಿವರಣವು !
ಮಾನವ ಜಾತಿಯ ಹಗರಣವು !

❖❖

ಗಡಿಯಾರ

ಗಂಟೆಯ ನೆಂಟನೆ ಓ ಗಡಿಯಾರಾ,
ಬೆಳ್ಳಿಯ ಬಣ್ಣದ ಗೋಲಾಕಾರಾ,
ವೇಳೆಯ ತಿಳಿಯಲು ನೀನಾಧಾರಾ,
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಹಗಲೂ ಇರುಳೂ ಒಂದೇ ಬಾಳು,
ನೀನಾವಾಗಲು ದುಡಿಯುವ ಆಳು,
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಮುಖವೊಂದಾದರು ದ್ವಾದಶ ನೇತ್ರ !
ಎರಡೇ ಕೈಗಳು ಏನು ವಿಚಿತ್ರ !
ಯಂತ್ರಪುರಾಣದ ರಾಕ್ಷಸ ಪುತ್ರಾ !
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ಟಿಕ್ ಟಿಕ್ ಎನ್ನುತ ಹೇಳುವೆಯೇನು ?
ನಿನ್ನೀ ಮಾತಿನ ಒಳಗುಟ್ಟೇನು ?
ಕಾಲವು ನಿಲ್ಲದು ಎನ್ನುವೆಯೇನು ?
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ನಿನಗೆಲ್ಲಿರುವದು ಸಖಿ ವಿಶ್ರಾಂತಿ ?
ಆದರು ಮೊಗದಲಿ ಮೂಡಿದೆ ಕಾಂತಿ !
ಇದುವೇ ಕರ್ಮರಹಸ್ಯದ ಶಾಂತಿ
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

ದುಡಿಯುವದೊಂದೇ ಕೂಲಿಯ ಕರ್ಮ !
ದುಡಿಸುವದೇ ಶ್ರೀಮಂತರ ಧರ್ಮ !
ಇಂತಿರುವುದು ಕಲಿಯುಗದೀ ಮರ್ಮ !
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್

❖❖

ಕನ್ನಡ ನಾಡಿನ ಕೊಂಕಣ

(ಸಹ್ಯಾದ್ರಿ ಪರ್ವತಕ್ಕೂ ಅರಬೀ ಸಮುದ್ರಕ್ಕೂ ಮಧ್ಯದಲ್ಲಿ ಮೆರೆಯುವ ದಕ್ಷಿಣೋತ್ತರ ಕನ್ನಡ ಜಿಲ್ಹೆಯ ಕರಾವಳಿಯೇ ಕನ್ನಡ ನಾಡಿನ ಕೊಂಕಣ.)

ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೧

ಅಲ್ಲಿ ಇಲ್ಲಿ ಕಡಲಿನಲ್ಲಿ
ಪುಟಿಯುತಿಹುದು ನೊರೆಯ ಬಳ್ಳಿ,
ಹಸುರಿನಿಂದ ಹೊಳೆವ ಹಳ್ಳಿ,
ತೋಟದಲ್ಲಿ ಜಾಜಿ ಬಳ್ಳಿ,
ಇಂಥ ಜೋಡಿ ಇನ್ನು ಎಲ್ಲಿ ?
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೨

ಕನ್ನಡಿಗರ ಚೆನ್ನ ನಾಡು
ಕೊಂಕಣಿಗರ ತೆಂಕ ಬೀಡು
ನಾಕಲೋಕದಂಥ ಕಾಡು
ಕಾಡಿನಲ್ಲಿ ಖಗದ ಹಾಡು
ಬರದು ಇಲ್ಲಿ ಕವಿಗೆ ಕೇಡು !
ಸೊಗದ ಜೇನ ಸವಿದು ನೋಡು
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೩

ಹಾರಿ ಹರಿವ ಝುರಿಯ ನೀರು
ತುಂಗ ತೆಂಗು ಕೌಂಗು ಗೇರು
ಬಿಸಿಲೊಳೆಸವ ಭತ್ತ ಪೈರು
ಬೆಳೆದ ಕಬ್ಬು ಮೂರು ಮಾರು !
ನಮ್ಮ ನಾಡು ಸೊಗದ ಸಾರು
ಸುಖದ ಲತೆಯ ತಾಯಿ ಬೇರು
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೪

ಮರಳಿನಂತೆ ಮೆರೆವ ಮಣ್ಣು
ಬೆಳೆವುದಿಲ್ಲಿ ಹಲಸು ಹಣ್ಣು
ಬಾಳೆಯಲೆಯೊದಳನು ಉಣ್ಣು
ಬಡಿಸಲಿಹಳು ಹರೆಯ ಹೆಣ್ಣು
ಕೊಂಕಣಿಗರ ಸರಳ ಪೆಣ್ಣು
ಕಾಂತಿಯುಗಮು ಅವಳ ಕಣ್ಣು !
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೫

ಮನವ ಮರಳಗೊಳಿಪ ಹೂವು
ಸವಿಯ ಸೊನೆಯ ಹಣ್ಣು ಮಾವು
ಬೆಳೆಯದಿಲ್ಲಿ ಕಹಿಯ ಬೇವು !
ಬಾರದಿಲ್ಲಿ ಬಾಳ ನೋವು !
ಇಲ್ಲಿಯೊಮ್ಮೆ ಬಾಳೆ ನಾವು

ಬಳಿಕ ಬಂದರೇನು ಸಾವು ?
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

೬

ಜಲಧಿಯೊಳಗೆ ಹೊಳೆವ ಫೆರೆಯು
ನೆಗೆದು ಜಿಗಿದು ಕುಣಿವ ತೆರೆಯು
ಮಂದಹಾಸ ತೋರ್ಪ ನೊರೆಯು
ಮರಳಿನಿಂದ ಮೆರೆವ ಕರೆಯು
ಮರಳ ಮಧ್ಯೆ ಮಲಗಿದರೆಯು
ಸಗ್ಗವಾಯ್ತು ನರರ ತಿರೆಯು !
ಸಗ್ಗದಿಂದ ಸೊಗದ ದೇವಿ ತಿರೆಗೆ ಬಂದಳೋ ?
ಬಂದು ಮುದವ ತಂದು ಕೊಂಕಣದಲಿ ನಿಂದಳೋ ?

❖❖

ಹುಚ್ಚನ ಪದ

ಜಗದಲಿ ನಾನೊಬ್ಬನೆ ಹುಚ್ಚ !
ಉಳಿದವರೆಲ್ಲರ ತಲೆ ಸ್ವಚ್ಛ !
ಹುಚ್ಚನ ಮಾತಿಗೆ ಹುರುಳಿಲ್ಲ !
ಲುಚ್ಚರ ನುಡಿಯೇ ಜಗಕೆಲ್ಲಾ !

ಹುಚ್ಚನ ತಲೆ ತಿರುಗುತಲಿಲ್ಲ !
ತಿರೆಯೇ ತಿರುಗುತಲಿಹುದಲ್ಲ !
ತಿರೆ ತಿರುಗಲು ಲೋಕಕೆ ಕುತ್ತು !
ಭೂಲೋಕವು ನನಗೇ ಗೊತ್ತು !

ಯುದ್ಧವ ಗೆದ್ದ ಮಹಾಶಯನು
ಕಟುಕನಿಗೂ ತುಸು ಮೇಲವನು !
ಕಟುಕನ ಕತ್ತಿಗೆ ಕುರಿಮರಿಯೇ
ರಣರಂಗದಿ ಬರಿ ನರಬಲಿಯೇ !

ಈ ಪದ ಹಾಡಲು ನಾ ಹುಚ್ಚ !
ಎಲ್ಲಾ ಲೋಕದ ತಲೆ ಸ್ವಚ್ಛ !

❖❖

ದೊಡ್ಡ ಒಡೆದಿರು*

ಕೇಸವ ಕಾಮ್ತಿ ।
ಕೇಳೋ ಸಂಗ್ತಿ ॥
ಊರಿಗೆ ದೊಡ್ಡ ಒಡೆಯಾ ।
ದೆವ್ವದಗಿಂತಲು ಕಡೆಯಾ ॥ ಪಲ್ಲ॥

ಸಾವಿರ ಖಂಡಗ ಗೇಣಿ ।
ಹೊಟ್ಟಿಗೆ ತಿನ್ನದ ಪ್ರಾಣಿ ॥
ರೈತರ ತಲೆಯನು ಬೋಳ್ಸಿ ।
ಕಾಮ್ತಿಯು ಆದನು ಕೇಲ್ಶಿ ॥ ೧ ॥

ಹೊಟ್ಟೆಲಿ ಮಕ್ಕಳು ಇಲ್ಲಾ ।
ದತ್ತಕನೂ ಸಹ ಮಳ್ಳಾ ॥
ಅಪ್ಪನ ತಿಥಿಯನು ಮಾಡಾ
ನೆಂಟರು ಬಂದರು ನೋಡಾ ॥ ೨ ॥

ಹಳ್ಳಿಗೆ ಹೋಗೀ ಕಾಮ್ತಿ ।
ಕದ್ದಾ ಮೊಗೆಕಾಯ್ ಸಂವತಿ ॥
ಊರಿಗೇ ಊರೇ ಕೋಪಿ ।
ಛೀ ಥೂ ಅಂದರು ಪಾಪಿ ॥ ೩ ॥

ತುಟ್ಟೀ ಮೀನಿಗೆ ನಂಬಾ ।
ಶೆಟ್ಲೀ ಪುಡಿಯನೆ ತಿಂಬಾ ॥
ಪಾಯ್ಸಕೆ ಇಲ್ಲಾ ಬೆಲ್ಲಾ ।
ಉಪ್ಪಿಗು ಮೂರ್ ಕಾಸ್ ಕಳ್ಳಾ ॥ ೪ ॥

---

* 'ಒಡೆದಿರು' ಅಂದರೆ, ಒಡೆಯಂದಿರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಜಮೀನುದಾರನಿಗ 'ಒಡೆದಿರು' 'ಒಡೆಯ' ಎಂದು ಕರೆಯುತ್ತಾರೆ.

ಲೆಕ್ಕಕೆ ಲೆಕ್ಕಾ ಹಾಕಿ ।
ಇಲ್ಲದ ಸಲ್ಲದ ಬಾಕಿ ॥
ಮುಗಿಯದು ರೈತನ ಸಾಲಾ ।
ಇದುವೇ ಕಲಿಯುಗ ಕಾಲಾ ॥ ೫ ॥

ಕೇಸವ ಕಾವ್ಹ್ತಿಯ ಅಂಗ್ಡಿ ।
ಯಾರಿಗು ದೊರೆಯದು ಚುಂಗ್ಡಿ ॥
ತಕ್ಕಡಿ ತೂಕಾ ಸುಳ್ಳು ।
ಮಾರುವ ಭತ್ತಾ ಪೊಳ್ಳು ॥ ೬ ॥

ಕೊರ್ಟು ಕಚೇರಿಲಿ ದಾವೆ ।
ಮೋಸದ ಸುಳ್ಳು ನಿಕಾಲೆ ॥
ರೈತನ ಹೊಲಮನೆ ಜಪ್ತಿ ।
ಹೋಯಿತು ಎಲ್ಲಾ ಪ್ರಾಪ್ತಿ ॥ ೭ ॥

ನಿಂಗೇ ಗೌಡನ ಎತ್ತು ।
ನಿಂಗಿಯ ಕೊರಳಿನ ಮುತ್ತು ॥
ನುಂಗೇ ಬಿಟ್ಟನು ದುಷ್ಟಾ ।
ಹೇಗಿದೆ ಬಡವರ ಕಷ್ಟಾ ? ॥ ೮ ॥

ಸ್ವಾಮೀ ವೆಂಕಟರಮಣಾ ।
ಬೀಳ್ವೆವು ನೀನ್ನೀ ಚರಣಾ ॥
ಕೇಳೋ ಕತೆಯಿದು ಕರುಣಾ ।
ದುಡಿಯುವ ರೈತರ ಮರಣಾ ॥ ೯ ॥

❖❖

ಸಾಬೂನು

ಎಲೆ ಸಾಬೂನೆ ನೋಡಲು ನೀನೆ
ಪರೋಪಕಾರಿಯು ಜಗದಲಿ ಶಾನೆ ?
ದೇಹದ ಕೊಳೆಯನು ತೆಗೆಯುವೆ ತಾನೆ;
ಬುರು ಬುರು ಬುರು ಬುರು ನೊರೆಯಣ್ಣಾ,
ಹೊರಹಾಕುವೆ ಬಟ್ಟೆಯ ಮಣ್ಣ !

ಕವಿಗಳಿಗೆಲ್ಲಾ ಹಿಡಿದಿದೆ ಹುಚ್ಚು !
ಅವರಿಗೆ ನಿನ್ನಲಿ ಎಲ್ಲಿಯ ಮೆಚ್ಚು ?
ಬೆಳದಿಂಗಳಲೇ ಅವರಿಗೆ ನಚ್ಚು !
ಬುರು ಬುರು ಬುರು ಬುರು ನೊರೆಯಣ್ಣಾ,
ಕವಿಗಳ ಕಣ್ಣಿಗೆ ನೀ ಸಣ್ಣ

ನಿನ್ನನು ನಿತ್ಯವು ಬಚ್ಚಲ ಮನೆಯಲಿ
ಹಚ್ಚುವರೊಡಲಿಗೆ ಬೆಚ್ಚನೆ ನೀರಲಿ;
ಆದರು ನಿನ್ನನು ನುತಿಸರು ಪದದಲಿ
ಬುರು ಬುರು ಬುರು ಬುರು ನೊರೆಯಣ್ಣಾ,
ಕಲಿಯುಗವೆಂದರೆ ಹೀಗಣ್ಣ !

ಹೊರಗಿನ ಬಣ್ಣವು ಕೆಂಪಾಗಿದ್ದರು
ಹಳದೀ ನೀಲೀ ಎಂಥದು ಇದ್ದರು,
ಹೃದಯದ ನೊರೆ ಸತತವು ಬಿಳಿ ಶುದ್ಧವು !
ಬುರು ಬುರು ಬುರು ಬುರು ನೊರೆಯಣ್ಣಾ,
ದೇಹದೊಳಡಗಿದೆ ಬಿಳಿ ಬಣ್ಣ

ಏನಯ್ಯಾ ನಿನ ದೇಹದ ಸೊಂಪು
ಅಲ್ಲದೆ ಮೈಯಿಂ ಸೂಸುವ ಕಂಪು
ನನ್ನೊಡಲಿಗೆ ನೀ ನೀಡುವ ತಂಪು
ಬುರು ಬುರು ಬುರು ಬುರು ನೊರೆಯಣ್ಣಾ,
ನಿನ್ನಾಕಾರವೊ ಬಲು ಚೆನ್ನಾ

ಹುಡುಗರು ನಿನ್ನಯ ನೀರನು ಮಾಡಿ
ಹುಲ್ಲಿನ ಕಿರು ಕೊಳವಿಯಲದ ದೂಡಿ
ಊದುತ ಚೆಂಡನು ಮಾಡುವರಾಡಿ !
ಬುರು ಬುರು ಬುರು ಬುರು ನೊರೆಯಣ್ಣಾ,
ಕುಣಿಸುವೆ ಮಕ್ಕಳ ಮನವನ್ನ

ಸಂಕಟ ಬಂದರು ನೀನಳಲರಿಯೆ !
ನಿನ್ನನು ತಿಕ್ಕಿದರೂ ಅದೂ ಸರಿಯೆ !
ಧವಳದ ನೊರೆಯಲಿ ನಗುತಲಿ ಮೆರೆವೆ !
ಬುರು ಬುರು ಬುರು ಬುರು ನೊರೆಯಣ್ಣಾ,
ವೇದಾಂತಿಗು ನೀ ಮಿಗಿಲಣ್ಣಾ

ಒಳ್ಳೆಯದಾದರು ಎಲ್ಲಾ ಗುಣವು
ಮೈಯಲಿ ಸೇರಿದೆ ಸುಣ್ಣದ ಕಣವು;
ಉರಿವುದು ಕಣ್ಣಲಿ, ಒಂದೇ ಕ್ಷಣವು !
ಬುರು ಬುರು ಬುರು ಬುರು ನೊರೆಯಣ್ಣಾ,
ನಿನ್ನಯ ಚರಿತವು ಹೀಗಣ್ಣಾ !

❖❖

ಉತ್ತರ ಕನ್ನಡದ ಕಚ್ಚೆ

ಯಾರಪ್ಪನ ಯಾರವ್ವನ ಇಚ್ಛೆ ?
ಉತ್ತರ ಕನ್ನಡ ಜಿಲ್ಹೆಗೆ ಕಚ್ಚೆ !

ಇದುವೇ ನಮ್ಮ ಪತಾಕೆಯ ವಸ್ತ್ರಾ !
ಬಡತನದಲಿ ಹೋರಾಡುವ ಶಸ್ತ್ರಾ !

ಅಪಜಯವಾಗುವ ಹೆದರಿಕೆಯಿಲ್ಲಾ !
ಇಡಿ ಮೈ ಮುಳುಗಲು ಚಳಿಯೇನಿಲ್ಲಾ !

'ಕಚ್ಚೆಯ ಸುಖವೇ ಬಡವರ ಮಾರ್ಗಾ !'
ಅನ್ನುವ ಜಾಣರಿಗಾವುದು ಸ್ವರ್ಗಾ ?

ಆಚೆಗೆ ತೋರಲು ಎರಡೂ ಕುಂಡೆ,
ನಾಚುವುದೇತಕೆ ದೇವರ ರಂಡೆ ?

ಲಂಗೋಟಿಯೊಳೇ ಗಾಂಧಿ ಮಹಾತ್ಮಾ !
ಉತ್ತರ ಕನ್ನಡ ಜಿಲ್ಹೆಯ ಆತ್ಮಾ !

ಬೆವರ್ಹನಿಯೊರಸಲು ಕಚ್ಚೆಯ ವಸ್ತ್ರಾ !
ಅದುವೇ ಧೋತ್ರವು, ಅದು ಕರವಸ್ತ್ರಾ !

ಕಚ್ಚೆಗು ನಮಗೂ ಜೀವದ ದೋಸ್ತಿ !
ಕಚ್ಚೆ–ರುಮಾಲೇ ಜೀವನದಾಸ್ತಿ !

ಕನ್ನಡ ಕಡಲಿನ ವೈಭವ – ದೇವಾ !
ಕಚ್ಚೆಗೆ ಹೆದರುವದೇನೋ ದೆವ್ವಾ ?

ಬಡ ಕಂಗಾಲರ ಭಾಗ್ಯದ ಚಿನ್ಹಾ !
ಉಡಿದಾರಕೆ ನೇತಾಡುವದಮ್ಮಾ !

ನೇತಾಡಲು ಜೋತಾಡಲು ಚಿಂದೆ,
ಕನ್ನಡ ಸಂಸ್ಕೃತಿ ಮೆರೆವುದು ಮುಂದೆ !

ಉತ್ತರ ಕನ್ನಡ ಜನತೆಯ ಭಾಗ್ಯಾ !
ಕಚ್ಚೆಗು ಬಂದಿದೆಯೇ ವೈರಾಗ್ಯಾ ?

ಕಚ್ಚೆ–ಪತಾಕೆಯು ಗಾಳಿಗೆ ತೇಲಿ,
ನೀಲ ದಿಗಂತಕೆ ಹಾರಲಿ ಮೇಲೆ !

ಸ್ವರ್ಗವನೇರಲಿ ಬಡವರ ಚಿಂದಿ !
ನೋಡಲಿ ಇಂದ್ರನ ಲೋಕದ ಮಂದಿ !

ದೇವರಿಗರ್ಪಣವಾಗಲಿ ಕಚ್ಚೆ !
ಇದುವೆ ಯುವಕರ ಹೊಸ ಯುಗದಿಚ್ಛೆ !

ಸಾಕಾಯಿತು ಪಶುಪಕ್ಷಿಯ ನಿಂದೆ !
ಮಾನವರಂತೆಯೆ ಮೆರೆವೆವು ಮುಂದೆ.

ಹೂಡೇ ಬಿಡಿ ಕಂಗಾಲರ ಬಂಡಾ.
ಉರುಳಿಸಿ ಬಿಡಿ ದಾರಿದ್ರ್ಯದ ರುಂಡಾ !

ಯಾರವ್ವನ ಯಾರಪ್ಪನ ಹಂಗು ?
ಕಾಸಿದ ಕಬ್ಬಿಣಕೆಲ್ಲಿಯ ಜಂಗು ?

❖❖

ನದಿಯ ಆತ್ಮ ಚರಿತ್ರೆ

ಸಹ್ಯಾದ್ರಿ ಶೃಂಗದಲಿ ಜನಿಸಿದೆನು ನಾನು,
ಚಿಕ್ಕಂದಿನಲಿ ನನ್ನ ಬಾಳು ಸವಿ ಜೇನು.

ಚಲ್ಲವಾಡುತ ಜಿಗಿದು ಕುಣಿಯುತ್ತಲಿದ್ದೆ,
ಬಂಡೆಗಲ್ಲಿನ ದಾಹ ತಣಿಸುತ್ತಲಿದ್ದೆ;

ಮುಂದೆ ಕಂದರದಲ್ಲಿ ಭೋರೆಂದು ಹಾರಿ,
ಲಲಿತ ಜಲಪಾತದಲಿ ಚೇತನವ ತೋರಿ,

ಬೆಟ್ಟವನು ಬಿಟ್ಟು ಬಿಸಿ ಬೈಲೊಳಗೆ ಬಂದೆ,
ಇಷ್ಟರಲಿ ಯೌವನವು ಬಂತೆನಗೆ; ಮುಂದೆ

ದಾರಿಯಲಿ ಹಳ್ಳಗಳು ನೂರಾರು ಸೇರಿ,
ಸಂಸಾರ–ವಿಸ್ತಾರ ಬೆಳೆದು ಮಿತಿ ಮೀರಿ,

ದೋಣಿ–ಹಡಗದ ಬಳಗ ಮೈಮೇಲೆ ನಿಂತು
ಸಂಸಾರ–ಭಾರವೇ ಸಾಕಾಗಿ ಬಂತು.

ಜಂತು ಮೊಸಳೆಗಳೆಲ್ಲ ಒಡಲಲ್ಲಿ ಸೇರಿ
ಬೇನೆ ತಂದವು, ಸಾಕು ಜೀವನ, ಮುರಾರಿ !

ಮುಂದೆ ಉಸುಬಿಗೆ ಬರಲು ಮುದುಕಾದೆ, ದೇವ.
ಮುಂದಮುಂದನೆ ಸಾಗಿ ಜಿಣುಗಾಯ್ತು ಜೀವ.

ಇನ್ನು ಕಡಲನು ಸೇರೆ, ಮರಣದಲಿ ಶಾಂತಿ !
ಮುನ್ನೀರ ತೆರೆಯಲ್ಲಿ ಜೀವನದ ಕ್ರಾಂತಿ !

❖❖

ನನ್ನ ದೇಹದ ಬೂದಿ

ನನ್ನ ದೇಹದ ಬೂದಿ ಗಾಳಿಯಲಿ ತೂರಿ ಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ;
ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ ಹೊಳೆಯಲ್ಲಿ ಹರಿದು ಬಿಡಿ,
ತೇಲಿ ಬೀಳಲಿ ಮೀನ ಬಾಯಿಯಲ್ಲಿ;
ಮುಷ್ಠಿ ಬೂದಿಯು ತಿಂದು ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ ಕೊಳದಲ್ಲಿ ಬೀರಿ ಬಿಡಿ,
ತಾವರೆಯು ದಿನದಿನವು ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ಸತ್ತಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ, ದೇವ
ನಿಜ ಸೇವೆಗೈಯಲಿಕೆ ಬರಲಿ ಮುಂದು

❖❖

ನಮ್ಮ ಕಡಲ ನಾಡು

ಹೋಗಿ ಬರುವೆನು ನಾನು ನಮ್ಮೂರಿಗಮ್ಮಾ
ಮಾಗಿಯಲಿ ನನಗಿಲ್ಲಿ ಚಳಿ ಸೇರದಮ್ಮಾ
ಸಾಗುವೆನು ನಾನಿಂದು ಕಡಲ ತಡಿಗಮ್ಮಾ
ಸಡಗರದ ಬೆಡಗ ಸಿರಿ ನಾಡ ಬಳಿಗೆ

ಎಲ್ಲವೂ ಸೊಗಸಲ್ಲಿ ನಮ್ಮೂರಲಮ್ಮಾ
ಅಲ್ಲಿರುವುದೆಲ್ಲವೂ ಇಲ್ಲಿಲ್ಲವಮ್ಮಾ !
ನಮ್ಮ ಗಂಜಿಗೆ ನಿಮ್ಮ ಗೋದಿ ಯಾಕಮ್ಮಾ
ಅಕ್ಕಿ ಬೆಳೆಯುವ ಚೊಕ್ಕ ನಾಡಿನೊಳಗೆ ?

ಇಲ್ಲಿ ಚಳಿ ಬಲು ಹೆಚ್ಚು, ಅಲ್ಲವೇನಮ್ಮಾ ?
ನಮ್ಮೂರು ಬಲು ಮೆಚ್ಚು, ಸರಿ ಬೆಚ್ಚಗಮ್ಮಾ
ಸಕಲಾತಿ ಬೇಕಿಲ್ಲ, ಮುಂಡು ಸಾಕಮ್ಮಾ
ನಡುಗಿಲ್ಲ ಕಡಲ ತಡಿ ನಾಡಿನೊಳಗೆ

ಅಲ್ಲಿಹಳು ನಮ್ಮಜ್ಜಿ ನೀಲಿ ನಿಂಗಮ್ಮ
ಎಲ್ಲ ಕತೆ ಬಲ್ಲವಳು, ಕತೆಯಲ್ಲಿ ಗುಮ್ಮ
ಬೆಲ್ಲದಂತಹ ಚರಿತ ಚಲ್ಲ, ಸೊಗಸಮ್ಮಾ;
ಹೊರಡುವೆನು ಪಡುವಲದ ಕಡಲ ತಡಿಗೆ

ಹಣ್ಣಿಗೂ ಬೆಲೆಯಿಲ್ಲ ನಮ್ಮೂರಲಮ್ಮಾ !
ಗೇರು ಹಣ್ಣನು ಕೆಡವಿ ತಿನ್ನುವುದು ನಮ್ಮ
ಊರ ಮಕ್ಕಳ ಹಕ್ಕು, ಚಲ್ಲಾಟವಮ್ಮಾ;
ತೆರಳುವೆನು ಕನ್ನಡದ ಕಡಲ ಕಡೆಗೆ

❖❖

ಚೀನದ ಕ್ರಾಂತಿ

ಏಶಿಯಾ ಖಂಡದಲಿ ನವಕಿರಣ–ಮಾರ್ತಾಂಡ
ಉದಯವಾದನು, ಬೇಗನೇಳಿರಣ್ಣಾ;
ಸುಪ್ರಭಾತದ ಸೊಂಪು, ಪಕ್ಷಿಗಳ ಸ್ವರದಿಂಪು,
ಮೂಡಣದ ಬಾನೊಳಗೆ ಕೆಂಪು ಬಣ್ಣ

ಕಪ್ಪು ಶತಮಾನಗಳ ದಪ್ಪ ಕತ್ತಲು ಹರಿದು
ಬೆಳಗಾಗೆ ದೂರಾಯ್ತು ನರನ ಭ್ರಾಂತಿ;
ಹೊಸ ಹುರುಪು, ಹೊಸ ರೂಪು, ಹೊಸದು ಜೀವನದಾಸೆ
ಹೊಸ ಯುಗದ ಕೋರಿಕೆಯೆ ಚೀನ ಕ್ರಾಂತಿ

ಹೊಸ ತರದ ಹೂವುಗಳು ದೆಸೆದೆಸೆಗೆ ಅರಳಿದವು,
ಮೊಗ್ಗೆಯೇ ಕಾಣಿಸದು, ವಿಧಿಯ ಮಾಟ;
ಎಲ್ಲ ಗಿಡಬಳ್ಳಿಗಳು ಒಮ್ಮೆಗೇ ಹೂ ಬಿಡಲು
ಹಿಂದೆಂದಿಗೂ ನೋಡದಂಥ ನೋಟ

ಯಾವ ಹೂವಿನ ಬಣ್ಣ ಹೇಳುವರು ಯಾರಣ್ಣ ?
ಎಲ್ಲವು ಹೊಸದಣ್ಣ ಕಣ್ಣ ಮುಂದೆ;
ಹಸರು ಹಾಡುವ ವೃಕ್ಷ, ಎಸಳು ಬಾಡದ ಪುಷ್ಪ,
ಹೊಸ ದೃಷ್ಟಿಯೇ ಹುಟ್ಟಿ ಬಂತು ಇಂದೆ

ಚೀನ ದೇಶದ ಕ್ರಾಂತಿ ಬ್ರಹ್ಮಾಂಡಕದು ವಾಂತಿ,
ಕಾರಿ ಹೋಯಿತು ಹತ್ತು ಯುಗದ ಪಿತ್ತ;
ಕೆಟ್ಟ ಪಾಪದ ಗಂಟು, ಧರೆಗೆ ಹತ್ತಿದ ಅಂಟು,
ತೊಳೆದು ಹೋಯಿತು ದೊಡ್ಡದೊಂದು ಕುತ್ತ

ರಕ್ಷಕನ ಹೆಸರಿನಲಿ ರಾಕ್ಷಸನು ತಾನಾಗಿ
ಜೀವಭಕ್ಷಕನಾಗಿ ದೇಶಭಕ್ತ,
ಜನರ ದುಃಖದ ಹೊಳೆಯ ಕಾಲಪ್ರವಾಹದಲಿ
ಸೆಳೆದು ಹೋದನು; ಚೀನದೇಶ ಮುಕ್ತ

ಮನುಜ ಮಾನವನಾಗಿ ಬದುಕುವುದೆ ನಿರ್ಧಾರ,
ನಿರ್ಧಾರಕಾಗಿಯೇ ಚೀನಕ್ರಾಂತಿ;
ಅನ್ನ ದೇವರ ಮುಂದೆ ಇನ್ನು ದೇವರು ಇಲ್ಲ
ಸಿದ್ಧಾಂತ ಸಿದ್ಧಿಯಲಿ ನರನ ಶಾಂತಿ

ಬುದ್ಧ ದೇವನ ಕನಸು ನನಸಾಗಿ ಬಂತೇನೊ ?
ಮಾನವನ ಸಂಸ್ಕೃತಿಯ ಹೊಸದು ಹಣ್ಣೊ ?
ಬೋಧಿವೃಕ್ಷವು ತಿರುಗಿ ಚಿಗುರೊಡೆದು ಫಲಿಸಿತೋ ?
ಬೌದ್ಧತತ್ವವು ಕ್ರಾಂತಿಗೆರೆಯ ಮಣ್ಣೊ ?

ಚೀನ ದೇಶದ ಗಾಳಿ ಹೂಣ ದೇಶಕೆ ಬೀಸಿ
ಏಶಿಯದ ದೆಸೆದೆಸೆಗೆ ಸುಳಿವುದೇನೋ ?
ಹೂವಿಂದ ಹೂವಿನಲಿ ಭಾವಭೃಂಗವು ಹಾರೆ,
ಕ್ರಾಂತಿಬೀಜವ ಗಾಳಿ ತರುವದೇನೊ ?

ಮೂಡಣದ ಹೊಸ ತಾರೆ ಬಯಕೆ–ಬಾನಲಿ ತೋರೆ,
ಹಸಿವೆಯಿಂ ಕೆಂಗಟ್ಟ ನರನ ಮನಸೇ
ಕ್ರಾಂತಿಬೀಜಕೆ ಭೂಮಿ; ಹದವಾಗಿ ನಿಂತಿರಲು,
ಪಶ್ಚಿಮ ಕುಬೇರರಿಗೆ ಕೆಟ್ಟ ಕನಸೇ ?

ಮೂಡಲದ ಕಡಲ ತೆರೆ ಹಿಗ್ಗಿ ಮುಗಿಲಿಗೆ ಹಾರೆ,
ಲೋಕವಾತ್ಸಲ್ಯವೇ ಉಕ್ಕಿ ಬಂತು;
ಹಕ್ಕಿಗೂ ಆನಂದ, ಚುಕ್ಕಿಗೂ ಸಾನಂದ,
ಸತ್ತವರಿಗೂ ಕುಣಿವ ಹಕ್ಕು ಬಂತು !

❖❖

ಡೊಂಬರಾಟ

(ಪುರಂದರ ದಾಸರ ಪದದ ಮಾದರಿಯಲ್ಲಿ)

ಡೊಂಬರ ಆಟವ ನಿಲ್ಲಿಸಿರಯ್ಯಾ
ಡೊಂಬರ ಆಟವ ನಿಲ್ಲಿಸಿರೋ;
'ಭಾರತ ಭೂಮಿಗೆ ವೈಭವ ಬಂದಿದೆ'
ಎನ್ನುವರೆಲ್ಲರು ಆಲಿಸಿರೋ ॥ಪಲ್ಲ॥

ಪಂಡಿತರೆಲ್ಲರು ಬುದ್ಧಿಯ ಮಲ್ಲರು,
ಸರ್‍ರನೆ ಸ್ವರ್ಗಕೆ ಹಾರಿದರೋ;
ನಮ್ಮ ಸ್ವರಾಜ್ಯದ ಜನಪದ ಭಾಗ್ಯದ
ಕೀರ್ತಿ ದಿಗಂತಕೆ ಬೀರಿದರೋ !

'ಉತ್ತಮ ನಾಯಕ ಸಿದ್ಧಿ ವಿನಾಯಕ
ಮಂಗಲದಾಯಕ ಮಂತ್ರಿಗಳೋ ?
ಆರತಿ ಬೆಳಗಲು ಭಾರತಿ ನಲಿದಳು !
ತಂದ ಪ್ರಸಾದಕೆ ತಂತ್ರಿಗಳೋ ?

ಹೇಳಿದ ಮಾತಿಗೆ ತಾಳವ ಹಾಕುವ
ಹಗರಣದೊಳಗಿನ ಸೋಗುಗಳೋ;
ಒಳಗಿನ ಆಸೆಗೆ ಈಚೆಗೆ ಆಚೆಗೆ
ನಾಲಿಗೆ ನೆಕ್ಕುವ ತ್ಯಾಗಿಗಳೋ;'

ಕವಿಗಳ ವೃಂದವು ಬಣ್ಣಿಸಲಂದವು,
ಒಂದೇ ಪದವನು ಹಾಡುವರೋ
ಜೀವನವಿಂದಿಗೆ ಪಾವನವೆಂಬರು,
ಮೃಗಜಲವನ್ನೇ ನೋಡುವರೋ

ಹೂವು ತುರಾಯೀ ತೆಂಗಿನ ಕಾಯೀ
ಬಾಳೆಯ ಹಣ್ಣೂ ದೇವರಿಗೋ ?
ದೇವರ ಹೆಸರಲಿ ದೇಶದ ಜಸದಲಿ
ಜನರಿಗೆ ವಂಚನೆ ಈ ವರೆಗೋ

ಮಂತ್ರಿಗಳುಕ್ತಿಯೆ ಜೀವನ–ಮುಕ್ತಿಯೆ ?
ಮನದೊಳಗಾಸೆಯು ಉಕ್ಕುವದೋ;
ಉಕ್ಕಿದ ಕಡಲಲಿ ತೇಲುವ ಬೆಂಡದು
ಬೇಕಾದವರಿಗೆ ಸಿಕ್ಕುವದೋ !

ಕಳ್ಳರ ಸಂತೆಯು, ಲಂಚದ ಚಿಂತೆಯು,
ಉತ್ತಮ ಕಾಳೂ ಜೊಳ್ಳಾಯ್ತೋ !
ಭಾರತ ಭೂಮಿಯ ಭವನದ ಜಂತೆಯು
ಒಳಗಿಂದೊಳಗೇ ಪೊಳ್ಳಾಯ್ತೋ !

ಹಗ್ಗದ ಮೇಲಿನ ಹಗರಣ ಕಂಡರೆ
ಹಿಗ್ಗುವ ಮನಸಿದು ಮರುಳಲ್ಲೋ ?
ಒಗ್ಗರಣೆಯ ಬರಿ ವಾಸನೆಯಿಂದಲಿ
ಹೊಟ್ಟೆಯು ತುಂಬುವ ಪರಿಯಲ್ಲೋ ?

ಸಕ್ಕರೆಗಿಂತಲು ಬೆಲ್ಲವು ತುಟ್ಟಿ !
ಹಗಲೇ ಕತ್ತಲು ! ಕಾಣಿಸದೋ ?
ಭಾರತ ಭೂಮಿಯ ವೈಭವ ಗಟ್ಟಿ !
ಕುರಡನಿಗೂ ಸಹ ಕಾಣುವದೋ !

ಅಟ್ಟದ ಮೇಲಿನ ಸೆಟ್ಟಿಯ ಮನೆಯಲಿ
ವೈಭವ ಸಂಭ್ರಮ ಜರುಗುವದೋ;
ಮೆಟ್ಟಲ ಹತ್ತರ, ಹೊಟ್ಟೆಯ ನೆತ್ತರ
ಕಾರುತ ಜೀವವು ಕೊರಗುವದೋ !

ಬಡವರ ಸಂದಣಿ, ಹಸಿವೆಯ ಕಂಬನಿ,
ಸಾಯ್ಕಲು ಚೀರುವ ಭೂತಗಳೋ !
ಸಾಯದೆ ಬದುಕಲು ಭಾರತ–ಮಕ್ಕಳು
ಜಗದಲಿ ಬಾಳುವ ಪ್ರೇತಗಳೋ !

ವೈಭವ ತಾರೆಯು ಕಾಣುವದೇನೋ ?
ಕಂಡರೆ ನಮಗೂ ಕಾಣಿಸಿರೋ;
ಸುಮ್ಮನೆ ಗುಲ್ಲಿಗೆ ಮರುಳಾಗದೆ ಮನ,
ವಿಠಲನ ದುಃಖವ ಮಾಣಿಸಿರೋ

❖❖

ನಾನು ಸಾಯಲು

ನಾನು ಸಾಯಲು ನನ್ನ ಕವನಗಳ ಮರೆತು ಬಿಡಿ.
ಸತ್ತ ಮೇಲವು ಮತ್ತೆ ಯಾಕೆ ಬೇಕು ?
ಈ ಕವನ, ಆ ಕವನ, ಹೇಗಿತ್ತು ಕವಿಯ ಮನ
ಎಂಬ ಚರ್ಚೆಯ ಮಾತು ಮುಗಿಯಬೇಕು

ಸತ್ತ ಮೇಲಾದರೂ ಶಾಂತಿ ಹೊಂದಲಿ ಚಿತ್ತ,
ಈ ಹೊತ್ತು ಮನಕೆ ಬೇಸರಿಕೆ ಭ್ರಾಂತಿ;
ಹಾಳು ಕವನವು ಬೇಡ, ಇನ್ನು ಜನನವು ಬೇಡ,
ಬೇಕೆನಗೆ ಚಿರಕಾಲ ಶಾಂತಿ ಶಾಂತಿ

❖❖

ಹಿನ್ನುಡಿ

ನನ್ನ ಭಾವದ ಕವನ,
ನನ್ನ ಗಾನದ ತನನ,
ನನ್ನದೆಂಬುವ ಜಂಬ ಸಾಕು ದೇವಾ,
ನಿನ್ನ ಕೃಪೆಯಿಂದಲೇ
ಬನ್ನಿ ಗಿಡ ಹೂ ಬಿಡಲು,
ನಿನ್ನ ಸೇವೆಗೆ ನೀನೆ ತಂದೆ ಹೂವ !

ಹಕ್ಕಿಗಳ ಇಂಚರವು,
ಚುಕ್ಕಿ ಮಿಂಚುವ ತೆರವು,
ಉಕ್ಕಿ ಮೊರೆಯುವ ತೆರೆಯು ನಿನ್ನ ಕವನ;
ನನ್ನದೆಂಬುವ ಗೀತ
ನಿನ್ನದೇ ಸಂಗೀತ,
ಎಲ್ಲೆಲ್ಲಿಯೂ ನಿನ್ನ ಭಾವ–ಪವನ

ನನ್ನ ಕನ್ನಡ ನುಡಿಗೆ
ನಿನ್ನ ಹಿನ್ನುಡಿಯಿರಲು
ನನ್ನದೆಂಬುದು ತಾನೆ ಕನ್ನಡಿಯ ಬಿಂಬ;
ಪೊಡವಿಯಲಿ ನಾಲ್ದೆಸೆಗೆ
ನೀನೆ ಹಾಡುತಲಿರಲು,
ನಿನ್ನ ಭಾವವೆ ನನ್ನ ನುಡಿ–ಗುಡಿಯ ಕಂಬ !

❖❖

೨

ಹೂ ಗೊಂಚಲು

೧೯೩೮

ಪ್ರಸ್ತಾವನೆ

ಎಲುಬುಗಳೆ ಕುದಿಯಾಗೆ
ಹೃದಯವೇ ನದಿಯಾಗೆ
ಹಾಡುವನು ಕವಿಯು,
ಮೂಡುವನು ರವಿಯು.

ನನ್ನ ಕವನಸಂಗ್ರಹ ಪ್ರಕಟವಾಗಿ ಏಳು ವರುಷಗಳಾದವು. ಈ ಅವಧಿಯೊಳಗೆ ರಚಿತವಾದ ಗೀತಗಳನ್ನು ದಂಡೆಗಟ್ಟಿ, ನನ್ನ ಕಾವ್ಯಗುರುಗಳಾದ ದಿವಂಗತ ಶ್ರೀಯವರ ಪುಣ್ಯಸ್ಮರಣೆಗಾಗಿ ಇಲ್ಲಿ ಅರ್ಪಿಸಿದ್ದೇನೆ. ಇಲ್ಲಿಯ ಬಹುಸಂಖ್ಯ ಕವನಗಳು ಕೆನರಾ ವೆಲ್‌ಫೆರ್ ಟ್ರಸ್ಟಿನ 'ಜನಸೇವಕ' ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದುವು.

ಇತ್ತೀಚಿಗೆ ಅನೇಕ ಆಂಗ್ಲ ಕವಿಗಳು ನವ್ಯ ಕಾವ್ಯದ ಮಾರ್ಗವನ್ನು ಬಿಟ್ಟು, ಹಳೆಯ ದಾರಿಯನ್ನು ಹೊಸದಾಗಿ ಹಿಡಿದದ್ದು ಕಂಡು ಬರುತ್ತದೆ. ಇಂದಿನ ಜಗತ್ತಿನಲ್ಲಿ ಕ್ಷಣ ಕ್ಷಣಕ್ಕೆ ಬದಲಾಗುತ್ತಿರುವ ರೀತಿ–ನೀತಿಗಳೇ ಇದಕ್ಕೆ ಕಾರಣವಾಗಿರಬಹುದು. ಈ ಸಂಕಲನದಲ್ಲಿ 'ನವ್ಯ' ಮಾರ್ಗವಿಲ್ಲ. ಆದರೆ ಅಧುನಿಕತೆ ಮತ್ತು ಪ್ರಗತಿಶೀಲತೆ ಇವು ಇವೆಯೆಂದು ನನ್ನ ಎಣಿಕೆ. ಇವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ಮೂಡಿವೆ ಎಂಬುದನ್ನು ವಿಮರ್ಶಕರು ನಿರ್ಣಯಿಸಬೇಕು. ಈ ಕವನಗಳಲ್ಲಿಯ ಕೆಲವು ವೈಶಿಷ್ಟ್ಯಗಳನ್ನು ಕುರಿತು ಮಾತ್ರ ಪ್ರಸ್ತಾವನೆಯಲ್ಲಿ ಹೇಳುವುದು ಅವಶ್ಯ.

ಮೊದಲನೆಯದಾಗಿ, ತೀರ ಚಿಕ್ಕ ಕವನಗಳೇ ಹೆಚ್ಚಾಗಿ ಬಂದಿವೆ. ಚುಟುಕುಗಳೂ ಉಂಟು. ಉದ್ದ ಕವನಗಳನ್ನು ರಚಿಸುವುದರಲ್ಲಿ ನನಗೆ ಬೇಸರ. ಶಕ್ತಿಯೂ ಸಾಲದು. ಕವನ ಚಿಕ್ಕದಾದಷ್ಟು ನನ್ನ ಮನಸ್ಸಿಗೆ ತೃಪ್ತಿ ಹೆಚ್ಚು. ಇದಕ್ಕೆ ನನ್ನ ಸ್ವಭಾವಗುಣವೂ ಕಾರಣವಾಗಿರಬಹುದು. ನನ್ನಲ್ಲಿ ಸಹನೆ ಕಡಿಮೆ. ನೋವನ್ನಾಗಲಿ ಅನ್ಯಾಯವನ್ನಾಗಲಿ ತಾಳ್ಮೆಯಿಂದ ಸಹಿಸುವುದು ನನಗೆ ಕಷ್ಟ. ಒಂದು ಕಾರ್ಯ ಸಾಧನೆಗಾಗಿ ಆತುರಪಡುವುದೂ ಉಂಟು. ಮೇಲಾಗಿ ಇಂದಿನ ಪ್ರಪಂಚದಲ್ಲಿ ಪಸರಿಸಿದ ವಿಧ್ವಂಸಕ ವಾತಾವರಣ, ಸಾಮಾಜಿಕ ಅನ್ಯಾಯ ಮುಂತಾದ ಅನಿಷ್ಟಗಳಿಂದ ಮನಸ್ಸು ಉದ್ರೇಕಗೊಳ್ಳುವುದು ಸಹಜ. ಇಂಥ ಪರಿಸ್ಥಿತಿಯಲ್ಲಿ ಉದ್ದ ಕವನಗಳನ್ನು ರಚಿಸುವುದು ಬಲು ಕಠಿಣ. ಉದ್ರೇಕ ಉಗ್ರವಾದಂತೆ ಕವನದ ಶರೀರವೂ ಸಂಕುಚಿತವಾಗುತ್ತದೆ.

ಎರಡನೇಯದಾಗಿ, ಇಲ್ಲಿಯ ಅನೇಕ ಕವನಗಳು ಹಗುರ ಜಾತಿಗೆ ಸೇರಿವೆ. ಇಂಗ್ಲೀಷಿನಲ್ಲಿ ಅವುಗಳಿಗೆ 'Light verse' ಅನ್ನುತ್ತಾರೆ. ಹಗುರ ಕವನದಲ್ಲಿ ಗಂಭೀರ ವಿಚಾರವೂ ವಿಷಯವೂ ಮೂಡಬಹುದು. ಆದರೆ ಅದರ ಶೈಲಿ ಹಗುರವಾಗಿರುತ್ತದೆ. ಪ್ರಸಿದ್ಧ ಆಂಗ್ಲಕವಿ ಅಡೆನ್ (Auden) ಅವರು ಹೇಳುವಂತೆ, ಕವಿಯ ದೃಷ್ಟಿಯೂ ಸಾಮಾನ್ಯ ವ್ಯಕ್ತಿಯ ದೃಷ್ಟಿಯೂ ಒಂದೇ ತೆರನಾಗಿದ್ದರೆ, ತಾನೊಬ್ಬ ಅಸಾಧಾರಣ ವ್ಯಕ್ತಿಯೆಂಬ ಭಾವನೆ ಆ ಕವಿಯಲ್ಲಿ ಮೂಡುವುದಿಲ್ಲ. ಇದರ ಪರಿಣಾಮವಾಗಿ ಆತನ ಶೈಲಿ ಸಾಮಾನ್ಯ ಜನರು ಉಪಯೋಗಿಸುವ ರೀತಿಯಲ್ಲಿಯೇ ಇರುತ್ತದೆ. ಮತ್ತು ಅದರ ಫಲವಾಗಿ ಹಗುರ ಕಾವ್ಯ ಹುಟ್ಟುತ್ತದೆ. ಸಾಮಾಜಿಕ ಪ್ರಶ್ನೆಗಳನ್ನು ಪ್ರತಿಬಿಂಬಿಸಿ ಸಾಮಾನ್ಯ ಜನತೆಗಾಗಿ ಬರೆಯುವ ಕವಿ ಹಗುರ ಶೈಲಿಯನ್ನು ಉಪಯೋಗಿಸುವುದು ಸಹಜ. ಇಂಥ ಶೈಲಿಯನ್ನು ನಾವು ಸರ್ವಜ್ಞ ಕವಿಯ ತ್ರಿಪದಿಗಳಲ್ಲಿ ಕಾಣುತ್ತೇವೆ. ಹಗುರ ಕಾವ್ಯ ಕನ್ನಡಕ್ಕೆ ಹೊಸತಲ್ಲ.

ಮೂರನೇಯದಾಗಿ, ಇಲ್ಲಿಯ ಕವನಗಳ ವಸ್ತುವಿನಲ್ಲಿ ಇತ್ತೀಚಿನ ವಾತಾವರಣವೇ ಹೆಚ್ಚಾಗಿ ಮೂಡಿದೆ. ಜಾಗತಿಕ ವಾತಾವರಣದ ಹೊರತಾಗಿ, ನವ ಮೈಸೂರು ರಾಜ್ಯದ ವಾತಾವರಣವೂ ಬಂದಿದೆ. ಕೇವಲ ಒಂದು ತಾತ್ಕಾಲಿಕ ಸನ್ನಿವೇಶವನ್ನು ಪ್ರತಿಬಿಂಬಿಸುವ ಕಾವ್ಯ ಚಿರಕಾಲ ಬಾಳಲಾರದು. ಕವನದ ಸನ್ನಿವೇಶ ಮಾಯವಾದೊಡನೆಯೇ ಆ ಕವನವೂ ಸಾಯುವುದು. ಹೀಗೆ ಬೇಗನೆ ಸಾಯುವ ಕವನಗಳೂ ಇಲ್ಲಿವೆ.

ನಾಲ್ಕನೇಯದಾಗಿ, ವಿಡಂಬನಾತ್ಮಕ ಕವನಗಳನ್ನು ಈ ಸಂಕಲನದಲ್ಲಿ ನಾವು ಕಾಣಬಹುದು. ಈ ಜಾತಿಯ ಕಾವ್ಯ ಕನ್ನಡಕ್ಕೆ ಅಪರಿಚಿತವಲ್ಲ. ಸರ್ವಜ್ಞನ ಕೆಲವು ತ್ರಿಪದಿಗಳು ಅತ್ಯುತ್ತಮ ವಿಡಂಬನಗಳೂ ಚುಚ್ಚುನುಡಿಗಳೂ ಆಗಿವೆ. ಆತ ಚುಟುಕುಗಳ ಸಾರ್ವಭೌಮ. ಭಾಷೆ ಅತಿ ಸುಲಭವಾಗಿದ್ದರೂ, ಅದು ಹೇಗೆ ಪರಿಣಾಮಕಾರಿಯಾಗಬಲ್ಲದು ಎಂಬುದನ್ನು ಸರ್ವಜ್ಞನ ತ್ರಿಪದಿಗಳು ಚೆನ್ನಾಗಿ ತೋರಿಸುತ್ತವೆ. ಸರ್ವಜ್ಞನ ವಿಡಂಬನವಾಗಲಿ ಶೈಲಿಯಾಗಲಿ ನನಗೆ ಸಾಧ್ಯವಿಲ್ಲ.

ಐದನೇಯದಾಗಿ, ಇಲ್ಲಿಯ ಅನೇಕ ಕವನಗಳಲ್ಲಿ ವಿನೋದವಿದೆ. ವಿನೋದದಿಂದ ಕವನ ಹಗುರವಾಗುತ್ತದೆ. ಈ ವಿನೋದ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ನಾನು ಹೇಳಲಾರೆ. ವಿನೋದವನ್ನು ಮೆಚ್ಚಲಿಕ್ಕೆ ಒಂದು ಬಗೆಯ ಮನೋವೃತ್ತಿಯೂ ಬೇಕಾಗುತ್ತದೆ. ಅತಿ ಗಂಭೀರವಾದ

ಕಾವ್ಯವನ್ನೇ ಓದಿ ಓದಿ ರೂಢಿಯಾದವರಿಗೆ ವಿನೋದದಿಂದ ಒಡಗೂಡಿದ ಲಘುಕವನ ರುಚಿಸದೆ ಇರಬಹುದು. ಕನ್ನಡದಲ್ಲಿ ಗಹನ ಸಾಹಿತ್ಯವೇ ಹೆಚ್ಚಾಗಿದ್ದುದರಿಂದ ಹಗುರ ಪಂಕ್ತಿಗಳನ್ನು ಓದಿ ಸುಖಿಸುವ ಪಂಡಿತರು ಕಡಿಮೆಯಿರಬಹುದು. ಹಳ್ಳಿಗರ ಹಾಗೆ ನಮ್ಮ ವಿದ್ಯಾವಂತರು ಕೂಡ ನಗಲಿಕ್ಕೆ ಹೆಚ್ಚಾಗಿ ಕಲಿಯಲೆಂಬುದೇ ನನ್ನ ಅಪೇಕ್ಷೆ. ಇಲ್ಲಿಯ ಕವನಗಳು ಈ ಮನೀಷೆಯನ್ನು ಸ್ವಲ್ಪ ಮಟ್ಟಿಗಾದರೂ ಈಡೇರಿಸದರೆ ನನಗೆ ತೃಪ್ತಿ.

ಆರನೇಯದಾಗಿ, ಇಲ್ಲಿಯ ಕವನಗಳು ಅಂತ್ಯಪ್ರಾಸಬದ್ಧವಾಗಿವೆ. ಆದಿಪ್ರಾಸವಿಲ್ಲ. ಆದರೆ ಕೆಲವು ಪಂಕ್ತಿಗಳಲ್ಲಿ ಆದಿಪ್ರಾಸವು ನನ್ನ ಅಪ್ಪಣೆ ಪಡೆಯದೆ ತಾನಾಗಿಯೇ ಅಲ್ಲಲ್ಲಿ ಒಳಸೇರಿದೆ. ಕನ್ನಡದಲ್ಲಿ ಮುಕ್ತಛಂದ ಬಳಕೆಗೆ ಬಂದು ಕೆಲವು ವರ್ಷಗಳಾದವು. ಮುಕ್ತಛಂದದಲ್ಲಿ ಯಶಸ್ವಿಯಾಗಿ ಕಾವ್ಯ ರಚಿಸಲಿಕ್ಕೆ ಅಸಾಧಾರಣ ಯೋಗ್ಯತೆ ಬೇಕು. ಉದಾಹರಣೆಗಾಗಿ ಶ್ರೀ ವಿ.ಕೃ.ಗೋಕಾಕರ 'ಪ್ರತಿಜ್ಞೆ'ಕವನದಲ್ಲಿ ಈ ಯೋಗ್ಯತೆಯನ್ನು ನಾವು ಕಾಣಬಹುದು. ಇಂಥ ಸಾಮರ್ಥ್ಯ ನನ್ನಲ್ಲಿಲ್ಲ.

ಪ್ರಾಸದಿಂದ ಕವನಕ್ಕೆ ಒಂದು ಬಗೆಯ ಅಲಂಕಾರ ಪ್ರಾಪ್ತವಾಗುತ್ತದೆ. ಅತಿ ಚೆಲುವೆಯಾದ ರಮಣಿಗೆ ಯಾವ ಅಲಂಕಾರವೂ ಬೇಕಿಲ್ಲ. ಆಕೆ ನಿರಾಭರಣೆಯಾಗಿ ನಿಂತರೂ ನಮ್ಮ ಮನಸ್ಸನ್ನು ಸೆಳೆಯುತ್ತಾಳೆ. ಆದರೆ ಸಾಮಾನ್ಯ ಕವನಗಳ ಮಾತು ಬೇರೆ. ಪ್ರಾಸದ ಉಡಿಗೆ ತೊಡಿಗೆಯಿಂದ ಕಾವ್ಯರಮಣಿ ತಕ್ಕಮಟ್ಟಿಗಾದರೂ ಸುರೂಪಿಯಾಗಿ ಕಾಣಬಹುದು. ನಿಜವಾದ ಆನಂದ ಆತ್ಮದಲ್ಲಿದ್ದರೂ, ಸಾಮಾನ್ಯ ಜನರ ಕಣ್ಣಿಗೆ ರೂಪದ ಮೇಲೆ ಆಸಕ್ತಿ ಹೆಚ್ಚು.

ಏಳನೇಯದಾಗಿ, ಈ ಕವನಗಳಲ್ಲಿ ಅಸ್ಪಷ್ಟವಾವುದೂ ಇಲ್ಲ. ಎಲ್ಲವೂ ನಿಚ್ಚಳವಾಗಿದೆ. ಅರ್ಥವು ಅತಿ ನಿಚ್ಚಳವಾಗಿದ್ದರೆ, ಅದು ಒಂದು ಬಗೆಯ ದೋಷವೆಂದು ಕೆಲ ವಿಮರ್ಶಕರ ಅಭಿಪ್ರಾಯ. ಕವನವು ಒಗಟಿನ ಸ್ವರೂಪವನ್ನು ತಾಳಿದರೆ, ಓದುಗನು ಅದರಿಂದ ಪಡೆಯುವ ಆನಂದ ದ್ವಿಗುಣಿತವಾಗುತ್ತದೆಂಬುದೇ ಅವರ ಪ್ರತಿಪಾದನೆ. ಯಾವದೊಂದು ಒಗಟನ್ನು ಬಿಡಿಸುವುದರಿಂದ ನಮಗೆ ಪರಮಾನಂದವಾಗುತ್ತದೆಂಬುದು ನಿಜ. ಆದರೆ ಒಗಟನ್ನು ಬಿಡಿಸಿ ಸುಖಿಸುವವರು ಎಷ್ಟು ಮಂದಿ ?

ಎಂಟನೇಯದಾಗಿ, ಇತ್ತೀಚಿನ ಆಂಗ್ಲ ಕವಿಗಳು ಕೂಡ ಆಧುನಿಕ ವೈಜ್ಞಾನಿಕ ರೂಪಕಗಳನ್ನೂ, ಕಲ್ಪನೆಗಳನ್ನೂ ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಂಡಿಲ್ಲವೆಂಬ ದೂರು ಕೇಳಿಬರುತ್ತದೆ. ಈ ಆರೋಪ ಇಲ್ಲಿಯ ಕವನಗಳಿಗೆ ಅನ್ವಯಿಸುತ್ತಿದೆಯಾದರೂ, ಆಧುನಿಕ ಶಾಸ್ತ್ರೀಯ ಜ್ಞಾನವನ್ನು ಉಪಯೋಗಿಸಿಕೊಂಡ ಕೆಲವು ಕವನಗಳು ಇಲ್ಲಿವೆ. ಸೂರ್ಯ, ಗಾಳಿ, ಹೊಸ ದೆವ್ವ, ವೈಮಾನಿಕ, ವೃಕ್ಷ, ಆಯ್‌ಸ್ಕ್ರೀಮ್, ಅಮರಶಾಸ್ತ್ರ, ಪ್ರಗತಿಪರ ಮಾನವ, ಮಾರ್ಗದರ್ಶಕರು, ರಾಸಾಯನಶಾಸ್ತ್ರ, ಸಾಸಿವೆಕಾಳು, ಬೊಗಳಾಟ ಕವನಗಳನ್ನು ನೋಡಬಹುದು.

ಒಂಬತ್ತನೆಯದಾಗಿ, ಆಧುನಿಕ ಕವಿಗಳ ಬಗ್ಗೆ ಇನ್ನೊಂದು ಮಾತನ್ನು ಹೇಳಲಾಗುತ್ತದೆ. ಆಧುನಿಕ ಕವಿಗೆ ಇರುವ ಮುಖ್ಯ ಗಂಡಾಂತರ ಕಾವ್ಯರೂಪವನ್ನು ತಾತ್ಸಾರ ಮಾಡುವುದರಲ್ಲಿ ಇರದೆ, ಹೇಳುವ ರೀತಿಯನ್ನು ಅಥವಾ ವಾಕ್ಸರಣಿಯನ್ನು ತಾತ್ಸಾರ ಮಾಡುವುದರಲ್ಲಿ ಇದೆ. ("The chief danger to the modern poet is not indifference to form, but indiference to phrase".) ಈ ಅಭಿಪ್ರಾಯವನ್ನು ಆಂಗ್ಲ ವಿಮರ್ಶಕ ರಾಬರ್ಟ್‌ಲಿಂಡ್ (Robert Lynd) ಅವರು ವ್ಯಕ್ತಪಡಿಸಿದ್ದಾರೆ. ಈ ಅಪವಾದವನ್ನು ಇಲ್ಲಿಯ ಕವನಗಳು ತಪ್ಪಿಸಿಕೊಂಡಿವೆಯೇ ಇಲ್ಲವೇ ಎಂಬುದನ್ನು ಕನ್ನಡ ವಿಮರ್ಶಕರು ಹೇಳಬೇಕು.

ಹತ್ತನೇಯದಾಗಿ, ಹಗುರತೆ ಮತ್ತು ಗಾಂಭೀರ್ಯ ಇವುಗಳ ಸಂಯೋಗ ('alliance of levity and seriousness')ದಿಂದ ಚತುರೋಕ್ತಿಯಲ್ಲಿ ಪರಿಣಮಿಸಿದ ಕಾವ್ಯ ಒಂದು ವಿಶಿಷ್ಟ ಮಾದರಿಯದೆಂದು ಪ್ರಸಿದ್ಧ ಆಂಗ್ಲ ಕವಿ ಟೀ.ಎಸ್.ಇಲ್ಯಟ್ (T. S. Eliot) ಅವರು ಹೇಳುತ್ತಾರೆ. ಇಂಥ ಕಾವ್ಯ ೧೭ನೆಯ ಶತಮಾನದ ತಾರ್ಕಿಕ (metaphysical) ಕವಿಗಳ ಕೃತಿಗಳಲ್ಲಿ ಮೂಡಿದೆ. ಇಂಥ ಕಾವ್ಯ ಆಂಗ್ಲ ದೇಶದ ಆಧುನಿಕ ಕವಿಗಳನ್ನೂ, ರಸಿಕರನ್ನೂ ವಿಶೇಷವಾಗಿ ಆಕರ್ಷಿಸುತ್ತಿರುವ ಸಂಗತಿಯನ್ನು ನಾವು ಗಮನಿಸಬೇಕು. ಇಂಥ ಕಾವ್ಯಗುಣವುಳ್ಳ ಕೃತಿಗಳು ಈ ಸಂಕಲನದಲ್ಲಿ ಬಂದಿರಬಹುದೇ ?

ನವ್ಯಮಾರ್ಗ ಮತ್ತು ಪುರಾತನಮಾರ್ಗ ಇವುಗಳಲ್ಲಿಯ ಅಂತರವು ತೀರ ಕಡಿಮೆಯೆಂದು ನನ್ನ ಎಣಿಕೆ. ನಿಜವಾದ ಕಾವ್ಯ ಎಂದಿಗೂ ಹಳತಾಗುವುದಿಲ್ಲ, ಮಾಸುವುದಿಲ್ಲ, ಅದು ಯಾವಾಗಲೂ ನವ್ಯವಾಗಿಯೇ ಇರುತ್ತದೆ. ಮೂರು ಸಾವಿರ

ವರ್ಷಗಳಾಚೆಗೆ ಹುಟ್ಟಿದ ಕೆಲವು ಚೀನೀ ಕವನಗಳು ನನ್ನ ಮನಸ್ಸನ್ನು ಆಳವಾಗಿ ಆಕರ್ಷಿಸಿದ್ದುಂಟು. ಇಂಥ ಕವನಗಳು ಹಳೆಯ ಪದ್ಧತಿಯ ಕೃತಿಗಳೆಂದು ಹೇಳುವ ಎದೆಗಾರಿಕೆ ನನ್ನಲ್ಲಿಲ್ಲ. ಯಾವನೊಬ್ಬ ಕವಿಯು ಕೇವಲ ಫೆಶನ್ನಿಗಾಗಿ ಯಾವುದೇ ಪದ್ಧತಿಯನ್ನು ಅನುಸರಿಸಬಾರದು. ಹೃದಯದಿಂದ ಸಹಜವಾಗಿ ಮೂಡಿದ ರೀತಿಯಲ್ಲಿಯೇ ಕವನ ಹುಟ್ಟಿ ಬರಲಿ. ಗರ್ಭಕೋಶದಿಂದ ಪಿಂಡವನ್ನು ಎಳೆದು, ಕೂಸನ್ನು ಪಡೆಯುವ ಚಪಲ ಬೇಡ.

ಇಲ್ಲಿಯ ಪ್ರತಿಯೊಂದು ಕೃತಿ ನಿಜವಾಗಿಯೂ ಕಾವ್ಯಮಯವಾಗಿದೆಯೆ ? ಇದೇ ಮುಖ್ಯ ಪ್ರಶ್ನೆ. ಪರಿಚಿತವಾದುದನ್ನೇ ಒಂದು ಹೊಸ ದೃಷ್ಟಿಯಿಂದ ನೋಡಿ, ಅದನ್ನು ಹಿಡಿದು ನಿಲ್ಲಿಸಿದರೇನೆ ಯಶಸ್ವಿಯಾದ ಕವನ ಹುಟ್ಟುತ್ತದೆ. (..........a successful poem is a new way of seeing and apprehending something which is familiar.") ಎಂದು ವಾಲೆಸ್ ಫೌಲಿ (Wallace Fowlie) ಅವರು ಅಭಿಪ್ರಾಯಪಡುತ್ತಾರೆ. ಯಾವ ಪದ್ಧತಿಯಾದರೂ ಕಾವ್ಯವು ಕಾವ್ಯ ಎಂದು ಶ್ರೀ ವಿ.ಕೃ.ಗೋಕಾಕರು ಹೇಳಿದ್ದಾರೆ. ಇವೆರಡೂ ಒರೆಗಲ್ಲುಗಳಿಗೆ ಹಚ್ಚಿಯೇ ವಿಮರ್ಶಕರು ಈ ಕವನ ಸಂಕಲನದ ಬೆಲೆ ಕಟ್ಟಬೇಕು ಮತ್ತು ಅದನ್ನು ಕಟ್ಟುವಾಗ ಯಾವುದೇ ತರಹದ ದಾಕ್ಷಿಣ್ಯಕ್ಕೆ ಬಲಿ ಬೀಳಬಾರದು. ಶ್ರೀಯವರು ಸಾರಿದಂತೆ ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ.

ಪುಸ್ತಕದ ಹೊದಿಕೆಯ ಮೇಲಿನ ಅಂದವಾದ ಚಿತ್ರವನ್ನು ಬರೆದುಕೊಟ್ಟುದಕ್ಕೆ ನನ್ನ ಗೆಳೆಯರಾದ ಕಾರವಾರದ ಶ್ರೀ ಮುರಾರಿ ಪತ್ರೇಕರ್ ಅವರಿಗೆ ನಾನು ಋಣಿಯಾಗಿದ್ದೇನೆ.

ಅಂಕೋಲಾ
೧-೩-೧೯೫೮

ದಿನಕರ ದೇಸಾಯಿ

ದೇವ, ನೀನು ಸತ್ತರೇನು ?

ದೇವ, ನೀನು ಸತ್ತರೇನು ?
ಮತ್ತು ನಾವು ಅತ್ತರೇನು ?
ಲೋಕದಲ್ಲಿ ಬಲು ಅನರ್ಥ,
ನೀನು ಬದುಕಿದರೂ ವ್ಯರ್ಥ !

ಬಾಯಿಗಿಲ್ಲವೆಂದು ತುತ್ತು
ನಿನ್ನ ಕಣ್ಣ ಮುಂದೆ ಅತ್ತು
ಹೋದರೆನಿತು ಮಂದಿ ಸತ್ತು ?
ನೀನು ಸತ್ತರೇನು ಕುತ್ತು ?

ವಿಶ್ವವೆಲ್ಲ ನಿನ್ನ ರಾಜ್ಯ,
ರಾಜ್ಯದಲ್ಲಿ ಕಲಹ, ವ್ಯಾಜ್ಯ;
ಶೂರರೆಂದು ಕ್ರೂರ ಕರ್ಮ !
ಬುದ್ಧರೆಂದು ಯುದ್ಧಧರ್ಮ !
ಶುದ್ಧರೆಂದು ಹದ್ದಿನಂತೆ
ಕೊಳಕು ತಿಂದು ಬದುಕುವಂತೆ
ಇಂದು ನರನ ಬಾಳುವೆ !
ನೀನೆ ಜಗವನಾಳುವೆ !

ನೀನು ಬದುಕಿದರೂ ಕೇಡು !
ದೇವ, ನೀನು ಸತ್ತು ನೋಡು

❖❖

ಎಲ್ಲಿ ಹೋಗಲಿ ನಾನು ?

ಎಲ್ಲಿ ಹೋಗಲಿ ನಾನು ? ಬೇಡ ದೇವರ ಗುಡಿಗೆ.
ಲಂಚ ಕೊಡುವವರೆಲ್ಲ ಭಕ್ತರಂತೆ !
ಧನಕನಕಗಳ ನೀಡಿ, ಹರಿಯ ಹರಕೆಯ ಬೇಡಿ,
ಪುಣ್ಯ ಗಳಿಸಿದರೇನೆ ಮುಕ್ತರಂತೆ !

ಎಲ್ಲಿ ಹೋಗಲಿ ನಾನು ? ಬೇಡ ದೇವರ ಗುಡಿಗೆ.
ದೇವದಾಸಿಯ ನೃತ್ಯ ನೋಡಲೇಕೆ ?
ದೇವನಾದರೆ ಮಿಂಡ ಯಾರು ನಿರ್ಮಲ ಗಂಡ ?
ರಂಡೆಯೇ ಸಂಗೀತ ಹಾಡಬೇಕೆ ?

ಎಲ್ಲಿ ಹೋಗಲಿ ನಾನು ? ಬೇಡ ದೇವರ ಗುಡಿಗೆ.
ಕೋಳಿಕುರಿಗಳ ರಕ್ತ ಸುರಿಸಲಾರೆ
ತೃಪ್ತನಾದರೆ ದೇವ ರಕ್ತದಾಹುತಿಯಿಂದ
ಭಕ್ತನೆಂಬುವ ಬಿರುದ ಧರಿಸಲಾರೆ.

❖❖

೨೦ನೆಯ ಶತಮಾನ

ಈ ನಮ್ಮ ಶತಮಾನ
ಮಾನವನ ಅಪಮಾನ,
ಶೋಷಣಕೆ ಸನ್ಮಾನ
ಪೋಷಣಕೆ ದುಮ್ಮಾನ
ಕೊಂದರೇ ಬಹುಮಾನ !
ಗೆದ್ದರೇ ನಿಜ ಸ್ಥಾನ

ಶಕ್ತಿಯಾಯಿತು ಜ್ಞಾನ
ಜ್ಞಾನವಾಯಿತು ಮ್ಲಾನ !
ಧರ್ಮವಾಯಿತು ಲೀನ !
ದೇವನಾದನು ದೀನ !
ಶ್ರೇಷ್ಠವೆಂದರೆ ಹೀನ !
ಭ್ರಷ್ಟವಾಯಿತು ಶುದ್ಧ ದೃಷ್ಟಿಕೋನ

ಬಂದರೂ ಮಧುಮಾಸ
ದೀನರಿಗೆ ಉಪವಾಸ !
ಒಂದೆಡೆಗೆ ದೌಲತ್ತು !
ಬೇರೆಡೆಗೆ ಬೇಸತ್ತು
ನಿಮಿಷ ನಿಮಿಷಕೆ ಅತ್ತು
ಬದುಕಿದ್ದರೂ ಸತ್ತು
ಶತಮಾನಗಳ ಕುತ್ತು ಕಳೆಯಲಿಲ್ಲ !
ಶಾಸ್ತ್ರಯುಗದಲಿ ಮುತ್ತು ಹೊಳೆಯಲಿಲ್ಲ !

ಸಾಮರ್ಥ್ಯ ಮಧುಪಾನ,
ಸತ್ಯ ಮಸಣಕೆ ದಾನ,
ಐಶ್ವರ್ಯ ಜಗಮಾನ್ಯ,

ಯುದ್ಧವೇ ಪ್ರಾಧಾನ್ಯ
ಪುಣ್ಯವಾಯಿತು ಶೂನ್ಯ !
ಪಾಪವಾಯಿತು ಗಣ್ಯ !
ಎಲ್ಲವೂ ಬರಿ ಬಣ್ಣ,
ಪೃಥಿವಿಯಾಯಿತು ಸಣ್ಣ !

ನಮ್ಮ ಶತಮಾನ
ಅವನ ಅಪಮಾನ !

❖❖

ಭೂದೇವಿ ವರದಿ ಮಾಡಿದ್ದು

೧

ಮೊದಲು ಹುಟ್ಟಿತು ಕಲ್ಲು,
ಸುತ್ತಲೂ ಹಸಿ ಹುಲ್ಲು,
ಆ ಮೇಲೆ ಗಿಡಬಳ್ಳಿ,
ಮರಗಳೂ ಅಲ್ಲಲ್ಲಿ
ಹೂವಾಗಿ ಮಿಡಿಯಾಯ್ತು
ಕಾಯಾಗಿ ಹಣ್ಣಾಯ್ತು
ಹಣ್ಣೊಳಗೆ ಮಕರಂದ,
ಮಣ್ಣಿಗೂ ಆನಂದ

ಹಣ್ಣು ತಿನ್ನಲಿಕೆಂದು
ಕೂಸು ಜನಿಸಿತು ಅಂದು
ರಸವ ಹೀರಲು ಮಗುವು
ಗಿಡಬಳ್ಳಿಗೂ ನಗುವು
ನರನಾಗಿಯೇ ನಿಂತ
ವಿಧಿಗಿಂತ ಬುಧವಂತ
ಮಾನವನು ಗದರಿದನು !
ಬ್ರಹ್ಮನು ಹೆದರಿದನು,
ಹರಿ ಕೂಡ ಕದರಿದನು.

೨

ಒಂದು ನೇಗಿಲ ತರಿಸಿ,
ನನ್ನ ಮೈಯನು ಪರಚಿ
ಮಾಡಿದನು ಮೋಡಿ !
ಏನಾಯ್ತು ನೋಡಿ

ಹುಲ್ಲಿಗೇ ಕಾಳಾಯ್ತು
ಬಳ್ಳಿಗೂ ಹಾಲಾಯ್ತು,
ಮುಳ್ಳಿಗೂ ಹೂವಾಯ್ತು;
ನನ್ನೊಡಲು ಮಾತ್ರ ನೋವಾಯ್ತು
ಬಲು ಬುದ್ದಿವಂತ
ನರ–ಜಾಂಬುವಂತ

ಈಗಂತು ಬಲು ಜಾಣ,
ಭೂಮಿಯನ್ನೇ ಕಾಣಾ.
ನೆತ್ತಿಯಲ್ಲೇ ಕಣ್ಣು
ಕೆಳಗೆ ಇದ್ದರು ಮಣ್ಣು,
ನಭಕೆ ಹಾರುವನಂತೆ.
ಬೆಂಕಿ ಕಾರುವನಂತೆ.
ಓ ನನ್ನ ಅದೃಷ್ಟ !
ಜಾಣರಿಂದಲೇ ಕಷ್ಟ.

❖❖

ಸೂರ್ಯ

ಸೂರ್ಯ ಮುಳುಗಿದನಂತೆ !
ಏನು ಹೇಳಲಿ ಕಂತೆ ?
ಬೆಚ್ಚಗಿಲ್ಲವೆ ರಾತ್ರಿ ?
ಹಚ್ಚಗಿಲ್ಲವೆ ಧಾತ್ರಿ ?

ಸೂರ್ಯ ಮುಳುಗುವುದಿಲ್ಲ;
ನಮ್ಮ ತಲೆ ಸರಿಯಿಲ್ಲ.
ಪೃಥಿವಿ ತಿರುಗುವ ಗತಿಗೆ
ತಲೆ ತಿರುಗುವುದು ಜತೆಗೆ.

ಸೂರ್ಯನೊಬ್ಬನೆ ಸ್ಥಿರನು.
ಅವನೊಬ್ಬನೇ ವರನು.
ಅವನೊಬ್ಬನೇ ಆದಿ,
ವಿಶ್ವಮಾತೆಯ ದಾದಿ.
ಅವನದೇ ಸಂಕಲ್ಪ.
ಎಂದಿಗಿಲ್ಲ ವಿಕಲ್ಪ,
ನಿತ್ಯದಲಿ ಮೂಡುವನು,
ಸತ್ಯದಲಿ ನೋಡುವನು.

ಅವನಿಂದಲೇ ಕಳೆಯು,
ಮೇಘರಾಜನ ಇಳೆಯು,
ಅವನಿಂದಲೇ ಬಾಳು,
ತೆನೆಯ ಒಳಗಿನ ಕಾಳು,
ಅವನಿಂದಲೇ ಹೂವು,
ಅನಬೇಡ 'ನಾವ್ ನಾವು.'

ಅವನಿಂದಲೇ ನಿದ್ದೆ,
ಅವನ ನಮಿಸಲು ಎದ್ದೆ
ಅವನ ಕಣ್ಣೇ ಹಣ್ಣು ವಿಶ್ವಭೋಗಕ್ಕೆ
ಅವನೊಬ್ಬನೇ ಸತ್ಯ
ಉಳಿದುದೆಲ್ಲಾ ಮಿಥ್ಯ
ಬ್ರಹ್ಮಾಂಡವೂ ಸಣ್ಣ ಅವನ ರಾಗಕ್ಕೆ.

❖❖

ಭಕ್ತಿ

ಶಕ್ತಿಯೇತಕೆ ನನಗೆ ? ಭಕ್ತಿ ಭಾವನೆಯಿರಲಿ;
ಬಿರುಗಾಳಿ ಬೇಡಯ್ಯ; ತಂಗಾಳಿಯೇ ಬರಲಿ.

ನದಿನದಂಗಳ ಮಹಾಪೂರವೆಂದರೆ ಶಕ್ತಿ;
ನಲಿದುಲಿದು ತಿಳಿಯಾಗಿ ಹರಿವ ಝರಿಯೇ ಭಕ್ತಿ.

ಭೋರ್ಗರೆದು ಗರ್ಜಿಸುತೆ ಧುಮುಕುವುದೆ ಜಲಶಕ್ತಿ;
ಲೋಕವನೆ ಮುತ್ತಿಡುವ ಮಂಜುಹನಿಯೇ ಭಕ್ತಿ.

ಪ್ರಖರ ಸೂರ್ಯನ ರಶ್ಮಿತೇಜ ಉರಿಯುವ ಶಕ್ತಿ;
ಹುಣ್ಣಿಮೆಯ ಚಂದಿರನು ಮುತ್ತಿಡುವುದೇ ಭಕ್ತಿ.

ಕಾಡ ದಹಿಸುವ ಕಿಚ್ಚು ಅಗ್ನಿದೇವನ ಶಕ್ತಿ;
ಮನೆಯ ನಂದಾದೀಪ ದಿವ್ಯ ಜ್ಯೋತಿಯ ಭಕ್ತಿ.

ಸಾಗರದ ಕ್ರೋಧವೇ ಜಲತರಂಗದ ಶಕ್ತಿ;
ಕ್ರೋಧವಡಗಲು ತೆರೆಯು ನೊರೆಯಾಗುವುದೆ ಭಕ್ತಿ.

ಹೂವಾಗಿ ನಗುವುದೇ ಪ್ರಕೃತಿಮಾತೆಯ ಭಕ್ತಿ
ಭಕ್ತಿಯೇ ನಿಜಶಕ್ತಿ; ಭಕ್ತಿಯಿಂದಲೇ ಮುಕ್ತಿ.

❖❖

ಬಾನುಲಿ

ದೊಡ್ಡವರ ಮಾತುಗಳು ಆಕಾಶದಲಿ ತೇಲೆ
ಚಿಕ್ಕಿಗಳಿಗಾನಂದ ಸ್ವರ್ಗದಲ್ಲಿ
ಚಿಕ್ಕಮಕ್ಕಳ ತೊದಲ ಕೇಳಿ ಸುಖಿಸುವೆ ನಾನು
ಇಲ್ಲಿಯೇ ಹರಿಜನರ ಕೇರಿಯಲ್ಲಿ

ನಭದಿಂದ ಧರೆಗಿಳಿದ ತಾರೆಯರ ಸಂಗೀತ
ದೊಡ್ಡವರ ಸತ್ಕಾರ ಕೂಟದಲ್ಲಿ
ಮರದ ಕಂಠಗಳಿಂದ ಹೊರಸೂಸುತಿಹ ಗಾನ
ಕೇಳಿ ಸುಖಿಸುವೆ ನಾನು ತೋಟದಲ್ಲಿ.

ದೊಡ್ಡವರ ನುಡಿಮುತ್ತು ಸಕಲ ಲೋಕದ ಸುತ್ತು
ಗಾಳಿಯಲಿ ತೇಲಾಡಿ ಕೂಗುತಿರಲಿ
ನಾವು ಬಡವರು ನೀರೆ, ನಮಗೇಕೆ ಬಾನುಲಿಯು ?
ನಮ್ಮ ಪ್ರೀತಿಯ ಮಾತು ನಮಗೆ ಇರಲಿ.

❖❖

ಗಾಳಿ

ಗಾಳಿಗೆಲ್ಲಿದೆ ಗೂಡು ? ಗಡಿನಾಡು ? ಸುಡುಗಾಡು ?
ಅಖಿಲ ಭೂಮಂಡಲವೆ ಅನಿಲ ರಾಜ್ಯ
ಸೃಷ್ಟಿಕರ್ತನ ಗೀತ ಮಾರುತನ ಸಂಗೀತ
ಅದಕಿಲ್ಲ ನಾಡನುಡಿ, ಹಾಳು ವ್ಯಾಜ್ಯ.

ನಕ್ಷವಿಲ್ಲದ ಅಕ್ಷಿ, ರಕ್ಕೆಯಿಲ್ಲದ ಪಕ್ಷಿ
ಅಂತರಿಕ್ಷದ ಮೇಲೆ ಈಸುತಿಹುದು
ದೇಹವಿಲ್ಲದ ಜೀವ, ಹೃದಯದಲ್ಲಿಯ ಭಾವ
ಉಸಿರ ಬೀಸಣಿಕೆಯನು ಬೀಸುತಿಹುದು.

ಮಾರುತನ ಕಾರುಣ್ಯ ನಮ್ಮ ಧರಣಿಗೆ ಮಾತ್ರ;
ತಾರೆಯೂ ಸುಡುತಿಹುದು ಬೆಂದು ಬೆಂದು
ಸೂರ್ಯದೇವನು ಕೂಡ ಸಂತೃಪ್ತನಾಗಿಹನು
ಮಾರುತನ ಸ್ಪರ್ಶ ತನಗಿಲ್ಲವೆಂದು.

ಮಾರುತನ ಸ್ವಾತಂತ್ರ್ಯ, ಸಂತೃಪ್ತಿ ಸಂಪ್ರೀತಿ
ಮಾನವನಿಗೂ ಇರಲಿ ಕೊನೆಯವರೆಗೂ
ಗಾಳಿಮಕ್ಕಳು ನಾವು ಅಳುಮಕ್ಕಳು ಅಲ್ಲ;
ಬಾಳುವೆವು ಚಿರಕಾಲ ಮರಣದೊಳಗೂ

❖❖

ಮಕ್ಕಳ ಅವಲೋಕನ

ಬಾನೇ ಬಿದ್ದರೆ ತಾರಾಮಂಡಳ
ಪಾತಾಳಕೆ ಅಪ್ಪಳಿಸುವುದೆ ?
ಮೂಡುವ ಸೂರ್ಯನು ಮುಳುಗುವನೆಲ್ಲಿಗೆ ?
ಚಂದ್ರನ ಪುಡಿಪುಡಿ ಹಪ್ಪಳವೆ ?

ಬಾನೇ ಬಿದ್ದರೆ ಮೋಡದೊಳಡಗಿದ
ಗುಡುಗುಡು ಗುಮ್ಮನ ಗೋಳಾಟ
ಕಾಮನಬಿಲ್ಲೇ ಭೂಮಿಗೆ ಬಂದರೆ
ಕಂದರಿಗದು ಸೋಜಿಗದಾಟ.

ಬಾನೇ ಬಿದ್ದರೆ ನೆಲ ಮೇಲೆದ್ದರೆ
ಮಕ್ಕಳ ಕನಸಿನ ಸಾಮ್ರಾಜ್ಯ.
ಬಾನೇ ಬಿದ್ದರೆ ಜಲಧಿಯು ಜಿಗಿದರೆ
ಅದಕೇನೆಂಬರು ? ಹೇಳಜ್ಜ.

❖❖

ಅಪಶಕುನ

ಹಾಳಾದ ಅಪಶಕುನ ! ಕಾಣಲಾರದು ಗಗನ
ಕಣ್ಣೆತ್ತಿ ನೋಡಿದರು ಬಾನ ಕಡೆಗೆ !
ಚಂದಿರನು ಬೆಳಗಿದರು ಬೆಳದಿಂಗಳನೆ ಕಾಣೆ !
ಸೂರ್ಯನಾದರು ಇಹನೆ ಲೋಕದೊಳಗೆ ?

ಕುರುಡು ಎರಡೂ ಕಣ್ಣೆ ? ಒಂದಿಷ್ಟು ಹಿಡಿ ಮಣ್ಣೆ
ನಿನ್ನ ಅವತಾರವೂ ಮುಗಿಯಿತೇನು ?
ಸ್ವೇಚ್ಛೆಯಲಿ ನಲಿದಾಡುತ್ತಿದ್ದ ಗಂಗೆಯ ನುಂಗಿ
ಕಲಿಯುಗದ ಕರ್ಕೋಟ ಜಯಿಸಿತೇನು ?

ಬೆಳಕೆ ಕೊಳಕಾಗಿರುವ ಹೆಗ್ಗಣದ ಬಿಲದೊಳಗೆ
ನರನ ತೂರಿದ ಹಾಗೆ ಕನಸು ಬಿತ್ತು
ಚಕ್ರಚಕ್ರದ ನಕ್ರವೊಂದು ಧಿಮಿಧಿಮಿ ಎಂದು
ಮಾನವನ ಮೈಮೇಲೆ ಕುಣಿಯುತ್ತಿತ್ತು

ನೂರೆಂಟು ಅಪಶಕುನ ! ಅರಳಲಾರದ ಕುಸುಮ !
ಮೊಗ್ಗೆಯಿದ್ದಾಗಲೇ ಕಳಚಿ ಬಿತ್ತು
ಮಾನವನ ಭವ್ಯತೆಯ ದಿವ್ಯತೆಯ ಗುಡಿಯೊಳಗೆ
ನಗರಜೀವನವೊಂದು ಒರಲೆಹುತ್ತು

❖❖

ಬೀದಿಯ ಸೂಳೆ

ತೋರಣಕೆ ಕಟ್ಟಿದರು ಎಳೆಯ ಬಾಳೆಯನು,
ಹಬ್ಬ ಮುಗಿಯಲು ಮುಂದೆ ಗಿಡಕೆ ಗತಿಯೇನು ?

ಹಳ್ಳಿಯಲಿ ಬೆಳೆದಿದ್ದ ಹಚ್ಚನೆಯ ಬಾಳೆ
ಪಟ್ಟಣದ ಬೀದಿಯಲಿ ನಾನಾದೆ ಸೂಳೆ !

ಬೀದಿಯಲಿ ಬಂದವರು ನಿಂದವರು ನನ್ನ
ಇಣಕಿ ನೋಡಲು, ಮಂಗಜಾತಿ ಬಲು ಚೆನ್ನ !

ಇವರಿಗೊಂದೇ ಕಣ್ಣು, ಹಣ್ಣಿನಲಿ ಹುಚ್ಚು,
ನನಗೆ ಮೈಯಲಿ ಬೇನೆ, ಹೊರಗೆ ಬಲು ಮೆಚ್ಚು

ದೇಹವೆಂಬುದು ನೋಡು ಕುತ್ತುಗಳ ಕಾಯ,
ಬರಿಯ ತುತ್ತಿನ ಚೀಲವಲ್ಲ, ಮಾರಾಯಾ,

ಚೆಲುವ ಪ್ರಾಯದ ತರುಣ ರೂಪ ಸಂಪನ್ನ
ನನ್ನ ಬೆಡಗಿಗೆ ಸೋತು ಕೆಟ್ಟನವ ಹೊನ್ನ

ನನ್ನ ಕಣ್ಣಿನ ಕಾಂತಿ, ಅಂಗನೆಯ ರೂಪ
ಉತ್ತಮರ ಜೀವನಕೆ ವ್ಯಥೆಯಾಯ್ತು, ಪಾಪ.

ಹಗಲಿರುಳು ನೋಯುವುದು ಮೈ ಬೆನ್ನುಮೂಳೆ,
ಬಡತನದ ಸೂಳೆ ನಾ ಕಡೆತನಕ ಹಾಳೇ ?

❖❖

ಪಟ್ಟಣದ ಶ್ರಮಜೀವಿ

ದುಡಿಯುವೆ ನಾನು,
ಪಡೆಯುವೆ ನೀನು
ದುಡಿತದ ಜೇನಿಗೆ ಧನಿ ನೀನು,
ಚಿಂತೆಯ ಹೇನಿಗೆ ಮನೆ ನಾನು.

೨

ಈ ದಿನ ಕೂಲಿ,
ಮರುದಿನ ಖಾಲಿ;
ಮೂರನೆ ದಿನವೇ ತಲೆಶೂಲಿ
ಅರೆಹೊಟ್ಟೆಯ ದಿನ ಮಾಮೂಲಿ.

೩

ಗರಗರ ಟ್ರಾಮು
ನರನ ಲಗಾಮು;
ಗಡಿಬಿಡಿ ಬಲು ಕೋಲಾಹಲವು.
ಆಕಾಶದ ವರೆಗೂ ನೆಲವು !

೪

ಯಂತ್ರದ ಲೋಕ,
ಮಾನವ ಮೂಕ,
ಗಿರಣಿಯ ಒಳಗೂ ನೆರಳಿಲ್ಲ !
ತರಣಿಯ ಬೆಳಕೂ ನಮಗಿಲ್ಲ !

೫

ಬಾಳುವೆ ಬಾದಿ,
ನಾರುವ ಬೀದಿ,
ಹರಿವ ಗಟಾರಿನ ಅತ್ತರವು;
ಸೊಳ್ಳೆಯ ಕಡಿತದ ನೆತ್ತರವು.

೬

ದುಡ್ಡೇ ಮೇಲು,
ದುಡಿತಕೆ ಸೋಲು ?
ದೊಡ್ಡವರಾದರು ದುಡ್ಡಿಂದ
ಶ್ರಮಜೀವಿಯ ಮೈಬೆವರಿಂದ.

೭

ಬೆವರಿನ ಕ್ರಾಂತಿ
ವಿಶ್ವದ ಶಾಂತಿ;
ಭೂಮಂಡಲವೇ ಬುಡಮೇಲೆ
ಶ್ರಮಜೀವಿಯ ಐಕ್ಯದ ಲೀಲೆ.

❖❖

ಪಟ್ಟಣದ ಕಾರಕೂನ

ಕಾರಕೂನ, ಕಾರಕೂನ,
ಕೇಳು ನಿನ್ನ ವಿಧಿಯ ಗಾನ.

ಕುರ್ಚಿಯಲ್ಲಿ ಕೂತು ಕೂತು
ಮಿದುಳಿಗಾಯ್ತು ಸಣ್ಣ ತೂತು !
ತೂತಿನೊಳಗೆ ರಾಹುಕೇತು
ಕಾಣಬಹುದು ವಿಧಿಯು ಸೋತು !

ನೋಡು ಕನ್ನಡಿಯೊಳು ಮುಂದೆ,
ನೀ ಭ್ರಮಿಷ್ಟನಾಗಿ ನಿಂದೆ.
ನೋಡು, ನಿನ್ನ ಕೈಯ ಬೆರಳು
ಬರೆದು ಬರೆದು ಆಯ್ತು ಹರಳು !
ನಿನ್ನ ರಟ್ಟೆಗಿಲ್ಲ ಶಕ್ತಿ
ನೀ ವಿಚಿತ್ರ ಮನದ ವ್ಯಕ್ತಿ
ನಿನ್ನ ಮನಕೆ ನಿನ್ನ ಬುದ್ಧಿ
ಬಹಳ ತೀವ್ರ ಕರಡು ತಿದ್ದಿ !

ಓದು–ಬರಹ ಬಲ್ಲ ನೀನು
ಕೂಲಿಗಿಂತ ಶ್ರೇಷ್ಠನೇನು ?
ಕೂಲಿ ಸಡ್ಡು ಹೊಡೆಯ ಬಲ್ಲ,
ಸಂಪು ಹೂಡಿ ಕಾದ ಬಲ್ಲ,
ನೀನು ಮಧ್ಯವರ್ಗವೆಂದು
ಅರ್ಥಮರ್ಥ ಮಾತ್ರ ಬೆಂದು
ಕೆಳಗು ಮೇಲು ಇಲ್ಲದಾಗಿ
ನಡುವೆ ಗಾಳಿಯಲ್ಲಿ ತೂಗಿ
ಜೋಲುತಿರುವೆ ಲಟಾಲಟಾ !
ನೀರು ಕುಡಿಯೊ ಗಟಾಗಟಾ !

ನಿನ್ನ ದೌತಿಯಲ್ಲಿ ಮಸಿಯು
ಆರಿದರೂ ನಿನಗೆ ಹುಸಿಯು !
ಯಂತ್ರಯುಗದ ಕಲಿ ಕುಬೇರ
ಮಂತ್ರ ಮಾಡಿದೊಡನೆ ತಂತ್ರ –
ಜಾಲದೊಳಗೆ ಸಿಲುಕಿ ಬಿದ್ದು
ಹಾಲ ನೀರಿನೊಳಗೆ ಅದ್ದು
ಮತ್ತೆ ಮುಳುಗಿ ಮೇಲೆ ಎದ್ದು
ನಿನಗೆ ಸಿಪ್ಪೆ ದೊರೆಯಲು,
ಕಪ್ಪೆಯಂತೆ ಹಾರುವೆ !
ತಲೆಯ ಪಿತ್ತ ಕಾರುವೆ !

ಕಾರಕೂನ, ಕಾರಕೂನ,
ಕೇಳು ನಿನ್ನ ವೀರಗಾನ.

❖❖

ನೀರುದ್ಯೋಗಿಗಳ ಹಾಡು

ಜೇನ್ನೊಣಕ್ಕಿದ್ದರು ಸತತೋದ್ಯೋಗವು
ನಮಗೆ ನಿರುದ್ಯೋಗ.
ನಿರುದ್ಯೋಗವೇ ನವ ಶತಮಾನದ
ಪ್ರಗತಿಯೆಂಬ ರೋಗ.

ದುಡಿಯುವ ಹಕ್ಕೂ ಮನುಜನಿಗಿಲ್ಲೋ ?
ಲೋಕವಾಯ್ತು ಶೂನ್ಯ !
ಲಕ್ಷ ಲಕ್ಷ ಜನಸಂಖ್ಯೆಯ ಪಟ್ಟಣ
ವಿದ್ದರೇನು ಪುಣ್ಯ ?

ಕಾರಖಾನೆಗಳ ಬಾಗಿಲು ಮುಚ್ಚಿವೆ,
ಯಂತ್ರ ತಂತ್ರವೊಳಗೆ
ದಿನ ದಿನ ದಿನವೂ ರೈಲು ನಡೆದರೂ
ಕೆಲಸವಿಲ್ಲವೆಮಗೆ !

ಇದ್ದಲು–ಗಣಿಯಲಿ ಕಬ್ಬು–ಗಿರಣಿಯಲಿ
ಕಬ್ಬಿಣ–ಮನೆಯಲ್ಲಿ
ನರನು ದುಡಿವುದೇ ಬೇಡವೆನ್ನುವರು
ಚಕ್ರ ತಿರುಗುವಲ್ಲಿ !

ಹರಿವ ನೀರಿಗೂ ಮೊರೆವ ಕಡಲಿಗೂ
ನಿರುದ್ಯೋಗವಿಲ್ಲ,
ನಿಸರ್ಗ ನಿಯಮದ ಮೂಲ ತತ್ವವೇ
ನರನಿಗೆ ತಿಳಿದಿಲ್ಲ !

ದುಡಿಮೆಯ ಹಕ್ಕನು ಪಡೆಯುವ ವರೆಗೂ
ಬೆಳಕಿದ್ದರೂ ತಿಮಿರ !
ಮುಖ್ಯಮಂತ್ರಿಗಳ ಬಂಗಲೆಯೆದುರಿಗೆ
ಸತ್ಯಾಗ್ರಹ – ಸಮರ.

❖❖

ಹೊಸ ದೆವ್ವ

ಅದು ಒಂದು ಹೊಸ ದೆವ್ವ !
ನೀ ನೋಡಿ ಬಾರವ್ವ,
ಚಕ್ರ ಚಕ್ರದ ಕಾಲು, ವಕ್ರ ಮೋರೆ.
ಎಲ್ಲವೂ ವಿಪರೀತ, ಕಣ್ಣು ಓರೆ.

ಮೈ ಮುಟ್ಟಿದರೆ ಕಿಚ್ಚು,
ತಲೆಯೊಳಗೆ ಹೊಸ ಹುಚ್ಚು,
ಗಟಗಟನೆ ಕಲ್ಲೆಣ್ಣೆ ಕುಡಿಯುತಿಹುದು.
ಕಟ್ಟಾಳು ಸಟಸಟನೆ ದುಡಿಯುತಿಹುದು.

ನೂರು ಭತ್ತದ ಗೋಣಿ
ಮುಗಿಸಿ ಬಿಟ್ಟಿತು ಪ್ರಾಣಿ
ತಡವಿಲ್ಲ, ಬಿಡುವಿಲ್ಲ, ನಿಮಿಷದೊಳಗೆ
ಭತ್ತ ಕುಟ್ಟುವ ಹುಚ್ಚು ತಲೆಯ ಒಳಗೆ.

ಹಳೆಯ ದೇವರಿಗಿಂತ
ಹೊಸ ದೆವ್ವವೇ ಲೇಸು.
ದೆವ್ವ ಪೂಜಿಸಿದರೇ ನಾಲ್ಕು ದುಡ್ಡು.
ಗುಡಿಯ ಭಟ್ಟರಿಗೇನು ? ಬರಿಯ ಲಡ್ಡು.

❖❖

ಕಲ್ಲು ಕುಟಿಗರು

ಕಲ್ಲು ಕುಟಿಗರು ನಾವು ಕಲ್ಲು ಕಡಿದು
ಅರಮನೆಯ ಕಟ್ಟಿದೆವು ದುಡಿದು ದುಡಿದು
ಕಟ್ಟಿದಾ ಮಂದಿರವು
ಎನಿತೆನಿತು ಸುಂದರವು
ಅನಿತನಿತು ಮಣಿಮಣಿದು ಬೆವರ ಕುಡಿದೂ
ನೀರಡಿಕೆಯೂ ಕೂಡ ಬೆನ್ನು ಬಿಡದು !

ಇಂದ್ರಭವನವ ನಾವು ರಚಿಸಿದರು ದುಡಿದು
ನಮ್ಮ ಗುಡಿಸಲು ಮಾತ್ರ ಸೋರುವುದು ಬಿಡದು
ನೆತ್ತರಿನ ನೀರಾಯ್ತು !
ಅತ್ತರೂ ಬೆವರಾಯ್ತು !
ಸತ್ತರೇ ಪಾರಾಯ್ತು ನಮ್ಮ ಜೀವ !
ನಮ್ಮ ಕಾಯುವನಾರು ? ಯಾವ ದೇವ !

ನಮ್ಮ ಕಾಯುವನಾರು ? ಕೇಳು ಅಂದೆ;
ನಮಗೆ ನಾವೇ ಇನ್ನುಮುಂದೆ ತಂದೆ;
ನಮ್ಮದೇ ಒಕ್ಕಟ್ಟು
ದೇವರಿಗು ಬಿಕ್ಕಟ್ಟು !
ಪೃಥಿವಿಗೋಲಿನ ಕಲ್ಲಗುಂಡ ಕುಟ್ಟಿ,
ಮನೆಯ ಕಟ್ಟಲು ಹೊಟ್ಟೆ ತುಂಬ ರೊಟ್ಟಿ !

❖❖

ಶೂರ ಸಿಪಾಯಿ

ರೂಪ್ಯಾ ಹತ್ತು
ಕೈಯಲಿ ಬಿತ್ತು;
ದೊರೆಯಿತು ಮತ್ತು
ಬಾಯಿಗೆ ತುತ್ತು

ಯುದ್ಧಕೆ ಹೋದೆ,
ಕಲಿ ನಾನಾದೆ;
ಕೋವಿಯ ಸದ್ದು,
ಹಾರಿತು ಮದ್ದು.

ಶೌರ್ಯದ ಕೆಚ್ಚು
ವೈರಿಯ ನುಚ್ಚು;
ವಿಜಯಪತಾಕೆಗೆ
ಹೆಮ್ಮೆಯ ಹುಚ್ಚು.

ಶೂರ ಸಿಪಾಯಿ
ಹಾರ–ತುರಾಯಿ
ದೇಶಕೆ ನಾನು
ಕೀರ್ತಿಯ ಭಾನು.

ವೈರಿಯ ನಿಧನ,
ಮುಗಿಯಿತು ಕದನ;
ನಾಡಿಗೆ ಹರುಷ,
ನಾ ಶಕಪುರುಷ.

ಯುದ್ಧದ ಕೊನೆಗೆ
ನನ್ನನು ಮನೆಗೆ
ಕಳಿಸಿದರಣ್ಣಾ;
ಗಳಿಸಿದ ಪುಣ್ಯ !

ಹೆಗಲ ತುಬಾಕಿ,
ಪಗಡೆಯ ಖಾಕಿ
ಇಡಬೇಕಾಯ್ತು
ಬಿಡಬೇಕಾಯ್ತು.

ಬಂದಿದೆ ಮುಪ್ಪು;
ಪ್ರಾಯದ ಉಪ್ಪು
ಹೋಯಿತು ಕರಗಿ
ಜೀವನ ಸೊರಗಿ.

ತುಂಬದ ಹೊಟ್ಟೆ
ಚಿಂದಿಯ ಬಟ್ಟೆ
ವಿಜಯಪತಾಕೆಯ
ಹರಿದೇ ಬಿಟ್ಟೆ !

❖❖

ಕೋಳೀಮರಿ

ಕರಿ ಕರಿ ಪುಕ್ಕ
ನೋಡೇ ಅಕ್ಕ.
ಕೋಳಿಯ ಮರಿ ಇಲ್ಲಿಹುದಲ್ಲೇ !
ಹುಲ್ಲಿನ ಬಣಬೆಯ ಬುಡದಲ್ಲೇ.

ಊರೊಳಗೆಲ್ಲಾ
ಒಂದೂ ಇಲ್ಲಾ !
ಮದ್ದಿಗೆ ಬೇಕೆಂದರು ಸಿಕ್ಕ;
ಈ ಮರಿಯೊಂದೇ ಇದೆಯಕ್ಕ.

ಜಯಜಯವಂತೆ !
ಸೈನಿಕರಂತೆ !
ಲೂಟಿಯ ಕಳ್ಳರು ಇವರೆಲ್ಲಾ,
ಕೋಳೀಮರಿಗೂ ಸುಖವಿಲ್ಲಾ.

❖❖

ಸಂಜೀವಿ

೧

ನವ ಸಂಜೀವಿ,
ಮಂಜಿನ ಹೂವಿ.

೨

ಹುಟ್ಟುವ ಮುನ್ನ
ಬಯಕೆಯ ಚಿನ್ನ–

೩

ಹುಟ್ಟಿದ ಮೇಲೆ
ತೊಟ್ಟಿಲ ಲೀಲೆ.

೪

ಮೋರೆಯ ಭಂಗಿ
ತಾವರೆ, ತಂಗಿ.

೫

ಚೆನ್ನಿಯ ಕೆನ್ನೆ
ಲಿಂಬೆಯ ಹಣ್ಣೆ ?

೬

ಹಲ್ಲಿನ ತೇಜ
ದಾಡಿಮ ಬೀಜ.

೭

ಮೂಗಿನ ರೀತಿ
ಸಂಪಿಗೆ ಜಾತಿ.

೮

ಕಣ್ಣಿನ ಕಾಂತಿ
ಚಂದ್ರನ ಶಾಂತಿ.

೯

ತುಟಿಗಳ ತೊದಲು
ವೇದಕು ಮಿಗಿಲು

೧೦

ಕಿಲಿಕಿಲಿ ನಗಲು
ಚಿಕ್ಕೆಯ ಮುಗಿಲು.

೧೧

ಮಗು ಮಂದಾರ
ಸವಿ ಸಂಸಾರ.

❖❖

ಕುಸುಮಾಂಗಿ

ಭಾವದ ತೋಟದ ಮಾಟದ ಹೆಣ್ಣೇ,
ಕವಿಗಳ ಕುಸುಮಾಂಗಿ,
ಹೂವಿನಗಿಂತಲು ಕೋಮಲವೇನೇ
ನಿನ್ನದು ಮುಖಭಂಗಿ ?

ನೀ ಹೂವಾದರೆ ನಾ ಮರಿದುಂಬಿಯು.
ನೀನಾದರೆ ತಾರೆ
ಕತ್ತಲೆಯೊಳಗೂ ಗಗನವನೇರುವೆ;
ಬೆನ್ನನು ಬಿಡಲಾರೆ.

ನೀರೊಳು ಮುಳುಗಿದರೂ ಬಿಡಲಾರೆನು,
ನೀನೇ ಮೀನಾಕ್ಷಿ;
ನಾನು ಮುಳುಗುವೆ ಜೊತೆಯೊಳಗಾಡುವೆ
ಬಂದರು ಬಕಪಕ್ಷಿ.

ಕವಿಗಳ ಕಣ್ಣಿಗೆ ನಿನ್ನಾ ತುಟಿಗಳು
ತೊಂಡೆಯ ಹಣ್ಣಂತೆ !
ಹಣ್ಣಿನ ರಸ ಹೀರಲು ಇಣಚಿಯು ನಾ,
ಇನ್ನೇತಕೆ ಚಿಂತೆ ?

ಕವಿಗಳ ಮಾಟಕೆ ಕಪಿಗಳ ಕಾಟಕೆ
ಯಾವುದು ಮಿತಿಯಿಲ್ಲ,
ಕಲ್ಪನೆಯಲಿ ಹಾರಾಡುವ ಜೀವಿಗೆ
ಯಾವುದು ಚ್ಯುತಿಯಿಲ್ಲ.

❖❖

ನೆರೆಮನೆಯ ಹೆಣ್ಣಿಗೆ

ನನಗೆ ಒಂದೇ ಕಣ್ಣು!
ನಮ್ಮ ನೆರೆಮನೆ ಹೆಣ್ಣು,
ಎಲ್ಲಿದ್ದರೂ ನೀನೆ ಕಣ್ಣ ಮುಂದೆ.
ಮನೆಯ ಹಿಂದಿನ ತೋಟ,
ಅಲ್ಲಿ ನೋಡಿದ ನೋಟ
ಇಂದಿಗೂ ವ್ಯಾಮೋಹ ಅಂದಿನಿಂದೆ.

ನಿನ್ನೆ ನಸುಕಿಗೆ ಎದ್ದು
ಏನು ಮಾಡದೆ ಸದ್ದು,
ನೀ ಹಾಲ ಹಿಂಡುವುದು ನೋಡಿ ಬಂದೆ,
ನಿನ್ನ ಪ್ರೀತಿಯ ಬೆಕ್ಕು
ನನ್ನ ಮುದ್ದಿನ ಸೊಕ್ಕು;
ನೀನು ತಬ್ಬಿಗ ಕೊಬ್ಬು ನನ್ನದೆಂಬೆ.

ಮುಡಿಯಲ್ಲಿ ಹೂದಂಡೆ
ಬೇಲಿಯಾಚೆಗೆ ಕಂಡೆ;
ಅರೆನಿಮಿಷದಲಿ ಚಿತ್ರ ತೆಗೆದುಕೊಂಡೆ
ಇದನೆಲ್ಲ ನೀನೊಲ್ಲೆ
ಕಣ್ಣ ಹೊಳಪಿನ ಹುಲ್ಲೆ,
ನನ್ನ ಹೃದಯವ ನೀನೆ ಕದ್ದುಕೊಂಡೆ.

ನಿನ್ನ ಮುಖ ಅರವಿಂದ,
ತುಟಿಯಲ್ಲಿ ಮಕರಂದ;
ಜೇನ ಸವಿಯುವುದೊಂದೆ ನಿತ್ಯ ಧ್ಯಾನ.
ಅಮೃತವೆಂಬುದು ಸುಳ್ಳು,
ಕವಿಯ ಕಲ್ಪನೆ ಪೊಳ್ಳು,
ಪ್ರೇಮಮಕರಂದವೇ ಅಮರಪಾನ.

ತೋಟದಾಚೆಗೆ ಮೊನ್ನೆ
ಮಾಡಿದರು ಕೈಸನ್ನೆ
ಹಿಂದೆ ನೋಡದೆ ಮುಂದೆ ನಡೆದೆ ನೀನು
ಓ ನನ್ನ ಮನದನ್ನೆ
ನೆರಮನೆಯ ನಿನ್ನನ್ನೆ
ದೇವಲೋಕದ ಕನ್ಯೆ ಎನ್ನಲೇನು ?

ದೇವಲೋಕದ ಜಂಬ
ಹೊಡೆವವನು ಬರಿ ಹುಂಬ
ಅವ ನಿನ್ನ ನೋಡಿದರೆ ಒಂದು ಗಳಿಗೆ
ಇಂದ್ರಲೋಕದ ರಂಭೆ
ಬರಿಯ ಆಟದ ಗೊಂಬೆ
ಎಂದು ಸುಳಿದಾಡುವನು ನಿನ್ನ ಬಳಿಗೆ.

❖❖

ಸವಿ ನೆನಪು

ನನ್ನ ಪ್ರೇಮದ ಹುಡುಗಿ,
ಮೋಹ ಮಮತೆಯ ಬೆಡಗಿ,
ನಾ ನಿನ್ನ ಕೈಹಿಡಿದು ಮೂರು ವರುಷ
ಮದುವೆ ಮಂಟಪದೊಳಗೆ
ಪಂಚವಾದ್ಯವು ಮೊಳಗೆ,
ಓರೆಗಣ್ಣಿನ ನೋಟ ಏನು ಹರುಷ.

ನಿನ್ನ ಮಲ್ಲಿಗೆ ದಂಡೆ
ನನ್ನ ಬಾಸಿಗ ಗೊಂಡೆ
ಕೂಡಿ ನಲಿದಾಡಿದವು; ನೆನಪು ಬಂತೆ ?
ಚಿಗುರಿನಂದದ ಸೀರೆ
ಕುಸುರು ಕುಪ್ಪಸ ಬೇರೆ;
ಹಸರು ಬಳೆಗಳ ತೊಟ್ಟು ಎದುರು ನಿಂತೆ.

ಎಲ್ಲವೂ ಹಸುರಾಗಿ
ನೀ ಕಂಡೆ ಲತೆಯಾಗಿ
ನನ್ನ ಬಾಳಿನ ಕುಡಿಯು ಚಿಗುರಿ ಬಂತು.
ನಿನ್ನ ಬಳೆಗಳ ಸದ್ದು
ನನ್ನ ಕಿವಿಯಲಿ ಅದ್ದು,
ನಲಿದು ಕುಣಿಯುತಲಿತ್ತು ಹೃದಯತಂತು.

ನನ್ನ ಅತ್ತೆಯ ಮಗಳೆ,
ಚೆನ್ನೆ, ಮುತ್ತಿನ ಮುಗುಳೆ,
ಹೋಮಾಗ್ನಿಯೇ ಸಾಕ್ಷಿ ನಿನಗೆ ನನಗೆ,
ನಿನ್ನ ಕೆನ್ನೆಯ ಲಾಲಿ
ನನ್ನ ಕಣ್ಣಲಿ ತೇಲಿ
ಮುಗುಳಾಗಿ ಮೂಡಿತ್ತು ಹೃದಯದೊಳಗೆ.

ಅಂದು ಮೂಡಿದ ಅರಳು
ಇಂದಿಗಾದರೂ ಮರುಳು.
ಬಾಡಲಾರದ ಹೂವು ನಿನ್ನ ಮೋರೆ.
ನನ್ನ ಜೀವದ ಗೆಳತಿ
ಇಂದಿಗೂ ಮದವಳತಿ;
ಕನ್ನಡಿಯ ಹಿಡಿಯುವೆನು, ನೋಡು ಬಾರೆ.

❖❖

ನಾವಿಬ್ಬರು

ನೀನಂತೆ ಧ್ರುವತಾರೆ,
ನಿನ್ನ ಜೋಡಿಗೆ ಯಾರೆ ?
ಬಿದಿಗೆ ಚಂದಿರ ನಾನು ಆಗಲೇನು ?
ಅರವಿಂದ ನೀನಾಗಿ
ಮರಿದುಂಬಿ ನಾನಾಗಿ
ಕೆರೆಯ ಸಂಸಾರವದು ಸಾಗದೇನು ?

ಹೂಬಳ್ಳಿ ನೀನಾಗು,
ಅರಳಿ ಮರದಲಿ ತೂಗು,
ನಾನೆ ಮಾಮರವಾಗಿ ಮೆರೆಯಲೇನು ?
ನೀನು ಮಲ್ಲಿಗೆಯಾಗೆ
ನಾನು ತುರುಬಿನ ಹಾಗೆ
ಹೊಸ ದಂಪತಿಯ ರೀತಿ ತಿಳಿಯದೇನು ?

ನೀ ಗುಲಾಬಿಯ ಚಿಗುರು ;
ನಾನು ಗಾಳಿಯ ಉಗುರು,
ನಿನ್ನ ಕೆನ್ನೆಯ ಚಿವುಟಿ ಕಾಡಬೇಕೆ ?
ನಾವಿಬ್ಬರೂ ಕೂಡಿ
ಪಾರಿವಾಳದ ಜೋಡಿ
ನೂರು ಆಟವನಾಡಿ ನೋಡಬೇಕೆ ?

❖❖

ಪ್ರೇಮರಹಸ್ಯ

ಪೃಥಿವಿಯನು ಪ್ರತಿನಿತ್ಯ ಮುತ್ತಿಡುವ ಆತುರಕೆ
ರವಿ ಮೂಡದಿರುವನೇ, ಹೇಳು, ನೀರೆ ?
ಚಂದಿರನ ಮೋಹಕ್ಕೆ ಮರುಳಾದ ಸಾಗರನು
ಉಕ್ಕೇರಿ ಕುಣಿಯನೇ ನೂರು ಸಾರೆ ?

ಮಂದ ಮಾರುತರಾಯ ಸದ್ದು ಮಾಡದೆ ಕದ್ದು
ಚುಂಬನವನೀಯನೇ ಹೂವುಗಳಿಗೆ ?
ಮರವನಾಲಿಂಗಿಸುವ ಹೂಬಳ್ಳಿಗೂ ಹುಚ್ಚು
ನಿನಗಿಲ್ಲವೇ ನಚ್ಚು ಪ್ರೇಮದೊಳಗೆ ?

❖❖

ಪ್ರೇಮ

ನನ್ನ ಪ್ರೇಮದ ರಂಗಿ,
ನಿನ್ನ ಮೋರೆಯ ಭಂಗಿ
ಯಲ್ಲಿ ಮೂಡಿದುದೇನು ? ಯಾವ ಶಕ್ತಿ ?
ನಿನ್ನ ಹೃದಯದ ಹೂವು
ನನ್ನ ಪ್ರೀತಿಯ ಮಾವು;
ಪ್ರೇಮವೇ ಫಲವಾಗೆ ದೈವಭಕ್ತಿ

ಹೃದಯದಾಳದ ಚಿಲುಮೆ
ಉಕ್ಕಿ ಬರಲದು ಮಹಿಮೆ;
ಆರಲಾರದು ಚೆನ್ನಿ ಒಲವಿನೊರತೆ
ಪ್ರೇಮವೊಂದೇ ಸತ್ಯ.
ಉಳಿದುದೆಲ್ಲಾ ಮಿಥ್ಯ.
ಒಲವಿನಾ ಚೆಲುವಿರಲು ಏನು ಕೊರತೆ ?

ಪ್ರೇಮಿಗಳ ಸಂಸಾರ
ಜಗದ ಮೂಲಾಧಾರ.
ಬ್ರಹ್ಮ ಹುಟ್ಟಿದನೇನೆ ಗಾಳಿಯಲ್ಲಿ ?
ಪ್ರೇಮವರಿಯದ ಜಾಣ
ದೇವರನ್ನೇ ಕಾಣ;
ಪ್ರೇಮವೊಂದೇ ಬದುಕು ಬಾಳಿನಲ್ಲಿ.

❖❖

ಮುತ್ತುಗಳು

ಈ ಮುತ್ತು ? ಆ ಮುತ್ತು ?
ಏನು ಬೇಕಾಗಿತ್ತು ?
ಇದು ಸಾಕೆ ? ಅದು ಬೇಕೆ ? ಹೇಳು ಚೆನ್ನಿ
ಗಲ್ಲ ತುಂಬುವ ಮುತ್ತು
ಬೆಲ್ಲ ಬದುಕಿನ ತುತ್ತು;
ಕೊರಳ ತುಂಬುವ ಮುತ್ತು ಬೇರೆ ಅನ್ನಿ–

ಹಾರದೊಳಗಿನ ಮುತ್ತು
ಒಡೆದು ಹೋದರು ಹತ್ತು
ಮತ್ತೆ ತರಬಹುದಂತೆ ಪೇಟೆಯಿಂದೆ
ಹೃದಯದೊಲವಿನ ಮುತ್ತು
ಕಳಚಿ ಬಿದ್ದರೆ ಬಿತ್ತು
ತಿರುಗಿ ಬರಲಾರದದು, ಕೇಳು ಅಂದೆ.

❖❖

ಮುಗುಳು

ಬೆಳಗುತಿದೆ ತಾರೆ,
ಇಲ್ಲಿ ತುಸು ಬಾರೆ
ನೀನೇ ನನ್ನ ನೀರೆ
ಕಮಲಮುಖ ತೋರೆ

ಬೆಳದಿಂಗಳ ಬೀರು,
ಸಮುದ್ರದ ನೀರು
ಕುಣಿವಂತೆ ಕುಣಿ,
ಅಲೆಯಂತೆ ಮಣಿ.

ನಮ್ಮಿಬ್ಬರ ಕರ್ಮ !
ತಿಳಿಯಿತೇ ಧರ್ಮ ?
ಸೂಳೆಯ ಮಗಳಂತೆ !
ಮುಗುಳಿಗೂ ಕಲೆಯುಂಟೆ ?

❖❖

ಭಾವನಿಗೆ

ಕೇಳೋ ಭಾವಾ,
ನಿನಗೀ ಹೂವಾ
ನೀಡಿದರಲ್ಲವೆ ನನ ತಂದೆ ?
ತಾವರೆ ಬಾಡದೆಯಿರಲೆಂದೆ.

ನನ್ನಯ ಜೀವ
ನಿನ್ನದು ಭಾವಾ,
ಅಕ್ಕನ ಮೇಲತಿಶಯ ಪ್ರೀತಿ
ಬೆಕ್ಕಿಗೆ ಹಾಲೆನ್ನುವ ರೀತಿ.

ನಸಿಕಿಗೆ ಬಂದೆ,
ಅಕ್ಕನ ಹಿಂದೆ
ಸುತ್ತುವದೊಂದೇ ನಿನ ಚಿಂತೆ,
ಮುಗಿದಿಲ್ಲವೆ ಪ್ರೀತಿಯ ಕಂತೆ ?

ಜಗದಲಿ ಪ್ರೀತಿ
ಬಗೆ ಬಗೆ ರೀತಿ;
ತುಂಬಿಗೆ ಸವಿ ಸವಿ ಮಕರಂದ,
ಪ್ರೀತಿಯ ಮುಖವೇ ಅರವಿಂದ.

❖❖

ವೈಮಾನಿಕ

ತೊಡೆದುಹಾಕುವೆ, ನೀರೆ, ಮೃತ್ಯುಲೋಕದ ಬಂಧ !
ಮಂಗಳದ ಅಂಗಳಕೆ ಹಾರುವೆನು ಸ್ವಚ್ಛಂದ.

ಮುಗಿಲ ಮಿಂಚನು ಹಿಡಿದು ಕೋಟಿ ದೀಪವ ಬೆಳಗೆ,
ಇರುಳು ಹಗಲಾಗುವುದು ಮೂರು ನಿಮಿಷದ ಒಳಗೆ.

ತರಲೇನು ನಿನಗಾಗಿ ಅರುಣ–ಕಿರಣವ ಹಿಡಿದು ?
ಚಂದ್ರಕುಸುಮವ ತರಲು ತೋರಿಸುವೆಯಾ ಮುಡಿದು ?

ತಾರೆಗಳ ಹಾರವೇ ನಿನಗೆ ಕಂಠಾಭರಣ;
ಹೊಸಯುಗದ ವೀರ ಕಲಿ ನೀನು ವರಿಸಿದ ತರುಣ.

ಕಲಿಯ ಬಾಯಾರಿಕೆಗೆ ಕಾರ್ಮೋಡವೇ ನೀರು;
ನೀರಡಿಕೆಯಲ್ಲಿಯೇ ನವ ಜೀವನದ ಬೇರು.

❖❖

ಮುದುಕರು

ನಾವು ಮುದುಕರು ಎಂದು ನಗಬೇಡ ಓ ಮಗನೆ,
ನಮ್ಮ ತುಟಿಯೊಳಗಿಹುದು ಹರೆಯ ಮುತ್ತು
ಆ ಮುತ್ತು ಈ ಹೊತ್ತು ಕರಗಿ ಉಪ್ಪಿನಕಾಯಿ
ಪ್ರಾಯದವರಿಗೆ ನಿಮಗೆ ಏನು ಗೊತ್ತು ?

ಚೆನ್ನೆಯರ ಕೆನ್ನೆಯಲಿ ತಾವರೆಯ ಕಂಡವರು
ಮಕರಂದವನು ಹೀರೆ ಹರೆಯ ಜೇನು.
ಆ ಜೇನು ದಿನದಿನಕೆ ಮತ್ತಿಷ್ಟು ಸವಿಯಾಗೆ
ವೃದ್ಧಾಪ್ಯಕಾಲದಲಿ ಸಾಲದೇನು ?

ನಮ್ಮ ಕಣ್ಣುಗಳಲ್ಲಿ ಬಾಳ ಕಡಲಿನ ಉಪ್ಪು
ಶುಭ್ರ ಸ್ಫಟಿಕದ ಹಾಗೆ ಹೊಳೆಯುತಿಹುದು
ಚೊಗರಾದ ಹುಳಿಯಾದ ಮಾಮಿಡಿಯು ಹಣ್ಣಾಗೆ
ರಸಪೂರ್ಣ ಮುದ್ರೆಯೇ ಮೂಡಲಿಹುದು.

ನಾವು ಮುದುಕರು ಎಂದು ನಗಬೇಡ ಓ ಮಗನೆ,
ಬರಿಯ ಕಾಮೋದ್ರೇಕ ಹರೆಯ ತುತ್ತು,
ಪ್ರೇಮಾಮೃತವ ಸವಿದ ಹೃದಯಕ್ಕೆ ಮುಪ್ಪಿಲ್ಲ,
ಪ್ರಾಯದವರಿಗೆ ನಿಮಗೆ ಏನು ಗೊತ್ತು ?

❖❖

ಹುಣ್ಣಿಮೆಯ ಚಂದಿರ

ಹೊಲೆಯನಿಗು ಮುತ್ತಿಡುವ
ಹುಣ್ಣಿಮೆಯ ಚಂದಿರನು
ಮಾದಿಗರ ಬೀದಿಯಲಿ
ನಕ್ಕು ನಲಿದಾಡುವನು.

'ಶಶಿಗೆ ನಾಚಿಕೆಯಿಲ್ಲ'
ಅನ್ನುವವರೂ ಉಂಟು,
ಜಗದ ಪರಿಯೇ ಹೀಗೆ,
ನಿಂದೆಗಳು ನೂರೆಂಟು.

❖❖

ಮುಳುಗುವ ಸೂರ್ಯ

ಕಿಂಡಿಯಂತೆ ಕೆಂಪಾಗಿ
ಮುಳುಗಿದನು ಭಾನು.
ಏತಕಯ್ಯಾ ಕೋಪ ?
ನಿನಗಾಯಿತೇನು ?

ಮರದಲ್ಲಿ ಕಾಗೆ
ವಿವರಿಸಿತು ಹೀಗೆ :
ಸೂರ್ಯದೇವನ ಕೋಪದೊಳ
ಗುಂಟು ಗುಟ್ಟು.
ನರನು ನರನಿಗೆ ಕೊಲಲು
ಸೂರ್ಯನಿಗೆ ಸಿಟ್ಟು.

❖❖

ಕನಸು ಮತ್ತು ಮನಸು

ಕನಸು ಕಂಡವರೆಲ್ಲ ನಿಜವನ್ನೆ ಕಾಣುವರು
ಮನಸು ಕಂಡವರೆಲ್ಲ ಧ್ವಜವನ್ನೆ ನೋಡುವರು.

ಕನಸು ಕಂಡವರೆಲ್ಲ ನೆಲವನ್ನೆ ಹುಡುಕಿದರು.
ಮನಸು ಕಂಡವರೆಲ್ಲ ಗಗನಕ್ಕೆ ದುಡುಕಿದರು.

ಕನಸು ಕಂಡವರೆಲ್ಲ ಚಿರಕಾಲ ಬಾಳಿದರು.
ಮನಸು ಕಂಡವರೆಲ್ಲ ಮೂರು ದಿನ ಆಳಿದರು.

ಕನಸು ಕಂಡನು ಬುದ್ಧ; ಕನಸು ಕಂಡನು ಯೇಸು.
ಕನಸು ಕಂಡಾತನೇ ತಾಯ ಮಡಲಿನ ಕೂಸು.

❖❖

ಒಂದು ವಿಚಾರ

ಮಾನವರೇ ನಾವ್ ದಾನವರಾದರೆ
ಬಾನಾಡಿಗಳೇ ಸುರಜನರು !
ಬುದ್ಧನ ಹಳ್ಳಿಗೆ ಯುದ್ಧಗಳಾದರೆ
ಕಾಡಿನ ಪಶುಗಳೆ ಪುರಜನರು !

ತಿನ್ನಲು ಹೊಟ್ಟೆಗೆ, ಮಲಗಲು ಕೊಟ್ಟಿಗೆ,
ಇಲ್ಲಾದವರೇ ಹರಿಜನರು !
ತಿಂದೂ ತೇಗಿದರೂ ಸಾಕಾಗದ
ಧರೆಯ ಕುಬೇರರೆ ಹರಿಹರರು !

❖❖

ಇಂದಿನ ರೀತಿ

ಶಿಲ್ಪವೇ ಉಸಿರೆತ್ತ ಗೊಮ್ಮಟನ ವಿಗ್ರಹವೆ ಪ್ರಾಚೀನ
ಬೀದಿಯಲಿ ಸ್ಥಾಪಿಸಿದ ಮುಖ್ಯಮಂತ್ರಿಯ ಗೊಂಬೆ ಅರ್ವಾಚೀನ.

ಕಲ್ಲಿನಲಿ ನಿಲ್ಲಿಸಿದ ಧರ್ಮಚಕ್ರದ ಸ್ತಂಭ ಪ್ರಾಚೀನ
ನಗರಸಭೆ ಕಟ್ಟಿಸಿದ ಗಡಿಯಾರ ಗೋಪರವೆ ಅರ್ವಾಚೀನ

ಶಿಲೆಯಲ್ಲಿ ರೂಪಿಸಿದ ಬುದ್ಧದೇವನ ಪ್ರತಿಮೆ ಹಿಂದಿನ ನೀತಿ.
ಬೀಡಿಪೊಟ್ಟಣದ ಮೇಲೆ ಮುದ್ರಿಸಿದ ಗಾಂಧಿ ಇಂದಿನ ರೀತಿ !

❖❖

ಆಟದ ಹುಚ್ಚು

ಈ ನೆಲ ಭೂತಲ
ವರ ರಂಗಸ್ಥಲ
ಮೋರೆಗೆ ಬಣ್ಣ
ಬಡಿದರೆ ಸುಣ್ಣ
ಹಚ್ಚಲು ಮೀಸೆ
ಜನಕೆ ತಮಾಷೆ.

ಆಟವನಾಡಿಸಿ
ನೀ ಭಗವಂತಾ,
ಒಳಗಿಂದೊಳಗೇ
ನಗುವೆ, ಅನಂತಾ.
ನಿನ್ನ ವಿನೋದಕೆ
ನಮ್ಮನು ಕಾಡಿ
ಜಗದೊಳಗೆಲ್ಲಾ
ಭೀಕರ ರಾಡಿ.
ನಾಟಕದಲ್ಲೇ
ಜನರಿಗೆ ಮೆಚ್ಚು.
ಭಗವಂತನಿಗೂ
ಆಟದ ಹುಚ್ಚು !

❖❖

ಅಂಗಾಂಗಗಳು

ಇಲ್ಲದೇ ನಾಲಿಗೆಯು
ಮಾತಾಡುವುದು ಎಲೆಯು !

ಇಲ್ಲದಿದ್ದರು ಮೊಗವು
ಹೂವಿಗೆಂದಿಗು ನಗುವು !

ಕಣ್ಣಿಲ್ಲದೇ ತಾರೆ
ಮಿಂಚುವುದು ಮನವಾರೆ !

ಕಾಲಿಲ್ಲದೆ ನೃತ್ಯ
ಕಡಲು ಕುಣಿವುದು ಸತ್ಯ.

ಚಂದ್ರನಿಗೆ ತುಟಿಯೇಕೆ
ಧರೆಯ ಮುತ್ತಿಡಲಿಕ್ಕೆ ?

ಅಂಗಾಂಗಗಳಿಗಿಂತ
ಹೃದಯವೇ ಶ್ರೀಮಂತ.

ಮುಂಜಾವ ಹೂವುಗಳು

ಗಿಡದ ಕಂಠಗಳಿಂದ ಹಕ್ಕಿಗಳು ಹಾಡಿದುವು.
ಹೂಮೊಗ್ಗೆಗಳ ಜತೆಗೆ ನಲಿದು ಕುಣಿದಾಡಿದುವು.

ಸ್ವರದ ಸಂಗೀತದಲಿ ಹೂವುಗಳು ತಲೆದೂಗಿ
ಎಸಳುಗಂಗಳ ತೆರೆದು ನಮಿಸಿದುವು ತಲೆಬಾಗಿ

ಮಂಜುಹನಿಗಳ ಮುತ್ತು ಹೂವುಗಳ ತುಟಿ ತುಂಬ;
ಎಳೆ ಬಿಸಿಲ ನಸುನಗೆಯು ಮೋಹ ಮಮತೆಯ ಬಿಂಬ.

ಆನಂದವೇ ತಾನು ಮೊಗವೆತ್ತಿ ತಲೆದೋರಿ,
ಮೆರೆದಿತ್ತು ಪ್ರಕೃತಿಮಾತೆಯ ತೊಡೆಯ ಮೇಲೇರಿ

ಓ ತಾಯಿ, ನನಗೊಂದು ವರವ ನೀಡುವೆ ಏನು ?
ಹೂವಾಗಿ ಅರಳಿದರೆ ಧನ್ಯನೆಂಬೆನು ನಾನು.

❖❖

ಹೂವಿಗೆ

ಮಂಜುಹನಿ ಮುಸುಕಿದರು
ತುಟಿ ತುಂಬ ಚುಂಬನವು !
ಬಿರುಗಾಳಿ ಬೀಸಿದರು ಕುಣಿಯುತಿರುವೆ !
ನಡುಗದೆಯೆ ಚಳಿಯಿಂದ
ಅರುಳುವೆಯೆ ಸ್ವಚ್ಛಂದ !
ಮಳೆ ನೀರಿನಲೆ ಮಿಂದು ತಣಿಯುತಿರುವೆ !

ಗುಡುಗು ಗದರುತಲಿರಲಿ,
ಸಿಡಿಲು ಕಾರುತಲಿರಲಿ,
ನಲಿವುದೇ ನಿನ್ನ ಜೀವನದ ಮರ್ಮ !
ಎಂದಿಗೂ ನಸುನಗುವೆ,
ಧನ್ಯ, ದೇವರ ಮಗುವೆ,
ನಿನ್ನ ಲಾವಣ್ಯವೇ ವಿಶ್ವಧರ್ಮ.

❖❖

ಹೂವಿನ ಮೊರೆ

ಹಕ್ಕಿ ಬಂದು ಪದವ ಹಾಡಿ
ಮನವ ತಣಿಸಿ ಉಲಿವುದು.
ಇಣಚಿ ಬಂದು ಹಣಕಿ ನೋಡಿ
ಕ್ಷೇಮವಾರ್ತೆ ತಿಳಿವುದು.

ತುಂಬಿ ಬಂದು ಮುತ್ತನೊಂದು
ಸೆಳೆದುಕೊಂಡು ತಣಿವುದು
ಕಣ್ಣಮುಚ್ಚಣಿಕೆಯ ಆಡಿ
ಓತಿಕಾಟ ಕುಣಿವುದು

ಹಾವು ಬಂದು ಕಾಲ ಕೆಳಗೆ
ಸುತ್ತುವರಿದು ಸುಳಿದರೂ
ಭೀತಿಯಿಲ್ಲ; ಕರಡಿ ಹುಲಿಯು
ಸುತ್ತುಮುತ್ತು ಇದ್ದರೂ,

ನನಗೆ ಚಿಂತೆಯೊಂದೆ, ದೇವ,
ನನ್ನ ಮೊರೆಯ ಲಾಲಿಸು,
ಸರ್ವಶ್ರೇಷ್ಠ ನರನ ಹಸ್ತ
ದಿಂದ ನನ್ನ ಪಾಲಿಸು.

❖❖

ಹೂವಿನ ಸಂಕಟ

ಭಗವಂತ, ಇದ ಕೇಳು :
ನರನ ಹಸ್ತವು ಹಾಳು
ಏನು ಹೇಳಲಿ ನನ್ನ ಬಾಳ ಚಿಂತೆ ?
ಇದೆ ಮಾತ್ರ ಮೊಗವೆತ್ತಿ
ನಿಂದಿರಲು, ಈ ಜಟ್ಟಿ
ನನ್ನ ಕೊಲ್ಲಲು ಬಂದ ಮೋಹದಿಂದೆ.

ದೇವರಿಗೆ ಬೇಕಂತೆ;
ಕಾವೇರಿಗೂ ಅಂತೆ.
ಎಲ್ಲರಿಗೆ ಬಲಿಯಾಗಿ ನಾನು ನಿಂತೆ.
ಮೋಹವೆಂಬುದು ಮರಣ !
ನೋಡು, ಚಿವುಟಿದ ಅಮಮ !
ಕೊಯ್ದು ಕೂಡಲೆ ಹೂವು ಬಾಡಿತಂತೆ.

❖❖

ಬೆಳೆ

ಬಿಸಿಲೊಳಗೆಸೆಯುವ ಬೆಳೆ ಬಂಗಾರ,
ಮುಗಿಲಿನ ಚಪ್ಪರದೊಳು ಶೃಂಗಾರ.
ಗಾಳಿಯು ಬೀಸಿ
ತೆನೆಗಳ ರಾಸಿ
ತಲೆಯನು ತೂಗಿ
ಕುಣಿವುದು ಬಾಗಿ.
ಕದಿರಿಗೇ ಕದಿರೇ ಮುತ್ತನು ಕೊಟ್ಟು
ನಲಿದಾಡುವ ಬಗೆ ಮೋಹಕವೆಷ್ಟು ?

ಭೂದೇವಿಗೆ ಬಂಗಾರದ ದಟ್ಟಿ !
ಸೆರಗಿಗೆ ಕದಿರಿನ ಮಣಿಗಳ ಕಟ್ಟಿ
ಮೆರೆವಳು ತಾಯಿ
ಕರುಳಿನ ಮಾಯಿ,
ಅನ್ನಸುಭದ್ರೆ
ಮಂಗಲ ಮುದ್ರೆ
ನೇಗಿಲ ಯೋಗಿಯ ಕರ್ಮರಹಸ್ಯ
ಸ್ವರ್ಗದ ಮೇಲೂ ಕಾಣದ ದೃಶ್ಯ !

❖❖

ಬಂಗಾರ

ಬಯಲೆಲ್ಲ ಬಂಗಾರ,
ಹೊಲವೆಲ್ಲ ಶೃಂಗಾರ;
ತಾಯ ಕೊರಳಿನ ಹಾರ
ಬಾ ನೋಡ ಬಾರೆ

ಗ್ರೀಷ್ಮ ಕಾಲದ ಪರ್ಣ
ಶರದ ಋತುವಿನ ಸ್ವರ್ಣ;
ಬಂಗಾರ ಪರಿಪೂರ್ಣ;
ಬೆಲೆ ಕಟ್ಟಲಾರೆ.

ಪಚ್ಚ–ರತ್ನದ ಹಸಿರು
ಪುಟಹಾಕಿದೊಡೆ ಉಸಿರು
ವಿಶ್ವಕರ್ಮನ ಚದುರು;
ಗಗನದಾವರಣ

ಜೀವಂತವಿದು ಚಿನ್ನ,
ಜೀವಕೋಟಿಯ ಅನ್ನ.
ಭೂಮಿತಾಯಿಗೆ ಬೇಕೆ
ಬೇರೆ ಆಭರಣ ?

❖❖

ಬಂಗಾರ ಬಲು ಭಾರ

ಬಂಗಾರ ಬಲು ಭಾರ.
ಹಗುರ ಹೂವಿನ ಹಾರ.
ಹೃದಯವಾಗಲಿ ಹೂವು.
ಮಧುರವಾಗಲಿ ಮಾವು.

ಬಂಗಾರವೇ ಚಿಂತೆ;
ಶೃಂಗಾರಗಳ ಸಂತೆ.
ಉಲ್ಲಾಸವೇ ಉಕ್ಕಿ
ಹೃದಯವಾಗಲಿ ಹಕ್ಕಿ.

ಬಂಗಾರವೇ ಸೊಕ್ಕು
ಕಣ್ಣು ಕಾಣದ ದಿಕ್ಕು,
ಬಂಗಾರ ಹೊರಮಿರುಗು,
ಅಂತರಾತ್ಮನ ಕೊರಗು.

ಬಂಗಾರ ಬಲು ತುಟ್ಟಿ;
ಕಲ್ಲಿಗಿಂತಲು ಗಟ್ಟಿ !
ಹತ್ತಿಯೇ ಮೃದು ಹೃದಯ
ಬುದ್ಧದೇವನ ಉದಯ.

❖❖

ವೃಕ್ಷ

ತರಣಿ ಧರಣಿಯರೊಲುಮೆಯೇ ಜಗದ ಹಸುರು
ಹಸುರಿಂದಲೇ ಸಕಲ ಜೀವಿಗಳ ಉಸಿರು.

ಎಲೆಯು ಹಣ್ಣಾದರೂ ನಲಿಯುವುದು ಚಿಗುರು.
ಒಪ್ಪಲಾರೆನು ಮುಪ್ಪ ಅನ್ನುವುದು ತಳಿರು

ಮಳೆ ಗಾಳಿ ಚಳಿಯೊಳಗೆ ಹಗಲಿರುಳು ನಿಂದೂ
ನೊಂದಲಾರದು ಜೀವ ಬಿಸಿಲೊಳಗೆ ಬೆಂದೂ.

ತನಗೆ ಬಿಸಿಲಾದರೂ ಅನ್ಯರಿಗೆ ನೆರಳು
ಕಾಯಿ ಹಣ್ಣಾದರೂ ತಿನ್ನುವರು ಪರರು

ತಪಸಿ ಗಳಿಸಿದ ಪುಣ್ಯವೇ ರಸದ ಹಣ್ಣು
ಹಣ್ಣು ಉದುರಿದ ಮೇಲೆ ಬಸಿರಾಯ್ತು ಮಣ್ಣು

ಹೂವಿನಲಿ ನಗುವುಂಟು, ಹಣ್ಣಿನಲಿ ಮೋಕ್ಷ
ಮಾನವನಿಗಿಂತಲೂ ಮಿಗಿಲೆಂಬೆ ವೃಕ್ಷ.

❖❖

ಬಾಳೆಗೆ

ಫಲ ಪಕ್ವವಾದಡೊನೆ ತಲೆಯ ಬಾಗಿಸಿ ನೀನು
ಬಂದ ಅತಿಥಿಗಳನ್ನು ನಮಿಸುತಿರುವೆ.
ನಮ್ರತೆಯ ನಯದೊಳಗೆ ಹುಳಿ ಜಂಬವಿಲ್ಲದಿರೆ
ತನಿವಣ್ಣುಗಳ ಮಾತ್ರ ಪಡೆಯುತಿರುವೆ.

ಫಲವ ನೀಡುವುದೊಂದೆ ಜೀವನದ ಗುರಿಯೆಂಬೆ,
ಕಾಯಿ ಬಲಿತೊಡನೆಯೇ ತೀರಿಕೊಂಬೆ.
ತೀರಿಕೊಂಡರು ಬೇಗ ಅಮಿತವಲ್ಲವೆ ತ್ಯಾಗ ?
ಬಾಳೆಗೊನೆಯೆಂಬುದೇ ಬಾಳ್ವೆಯೆಂಬೆ.

❖❖

ನೀರುಳ್ಳಿಗೆ

ಒಳಗೂ ಹೊರಗೂ
ಸೆರಗಲಿ ಸೆರಗು
ಒಳಗೊಂದಿಲ್ಲಾ
ಹೊರಗೊಂದಿಲ್ಲಾ
ವಂಚನೆಯೆಂಬುದು
ನಿನ್ನೊಳಗಿಲ್ಲಾ.

ಕೊಯ್ದರೆ ನಿನ್ನಾ
ಕಣ್ಣೀರಣ್ಣಾ
ಉಳ್ಳಿಯ ಸಾವು
ಎಲ್ಲರ ನೋವು !

ನೋವಿನ ಮುಂದೆ
ಎಲ್ಲರು ಒಂದೆ.
ಈ ನಿಜ ತತ್ವಾ
ಇದರ ಮಹತ್ವಾ
ಕಲಿಸಿದ ಪುಣ್ಯಾ
ನಿನಗೇ ಅಣ್ಣಾ.

ಎಂದರು 'ಭ್ರಷ್ಟಾ'
ನೀನೇ ಶ್ರೇಷ್ಠಾ.

❖❖

ಕೆಸರು

ನೀರಿನ ಹೊಂಡ
ಕೆಸರಿನ ಕೊಂಡ
ಭರಮಪ್ಪನ ಎಮ್ಮೆಗೆ ಇಷ್ಟ
ಮೈಯಲಿ ರಾಡಿ
ಅಂಟಿದೆ ನೋಡಿ,
ಭಟ್ಟರ ಭಸ್ಮಕು ಇದು ಶ್ರೇಷ್ಠ !

ಕೆಸರಲಿ ತಾವರೆ,
ಹಸುರೆಲೆಗಳ ಪರೆ,
ಕೆಸರಿನ ಹೊಲದೊಳಗಾಯ್ತು ಬೆಳೆ,
ಕೆಸರೆ ಉಸಿರು !
ಉಸಿರಲಿ ಹಸಿರು
ಬೆಳೆಯಲು ಭೂಮಿಗೆ ಜೀವಕಳೆ.

❖❖

ಆತ್ಮವಿಶ್ವಾಸ

ಸತ್ತರೂ ಬದುಕಿರಲಿ ಆತ್ಮವಿಶ್ವಾಸ
ತಪ್ಪದೇ ಮರಳುವುದು ಶ್ರಾವಣ ಮಾಸ.

ಬಾಡಿ ಹೋದರು ಹುಲ್ಲು, ಜೀವಂತವಾಗಿ
ಉಸಿರಾಡುವುದು ನೋಡು ಹಸುರು ಹಸುರಾಗಿ.

ನೆಗೆಯುವುದು ನೆಲದಿಂದ ಸೂರಣದ ದಂಟು.
ಮುದಿ ವೃಕ್ಷವೂ ಕೂಡ ಹೂಬಿಡುವುದುಂಟು

ಚಳಿಗಾಲದಲಿ ನಡುಗಿ ಸತ್ತ ಹೂಬಳ್ಳಿ
ನಲಿದಾಡುತಿದೆ ಮತ್ತೆ ಮಳೆಗಾಲದಲ್ಲಿ.

ಚಿಗುರುವುದು ಬೇಲಿಯಲಿ ಒಣಗಿದ್ದ ಗುಟ್ಟ,
ಕಾಡಗಿಚ್ಚಲಿ ಬೆಂದು ಮಸಿಯಾದ ಬೆಟ್ಟ.

ಒಂದು ದಿನದಲ್ಲಿಯೇ ಬಿಟ್ಟರೂ ಶ್ವಾಸ
ಆಳೆಂಬೆಗೂ ಕೂಡ ಆತ್ಮವಿಶ್ವಾಸ !

❖❖

ಏಡಿ

ಎಂಟು ಕಾಲಿನ ಬಂಟ
ಕಡಲ ತೀರದ ಗುಂಟ
ತಿರುಗಾಡಿದರು ವ್ಯರ್ಥ; ಅರ್ಥವಿಲ್ಲಾ.
ಸಾಗರದ ವಿಸ್ತಾರ,
ಕುಣಿವ ನೊರೆಯ ವಿಹಾರ,
ಕ್ಷಿತಿಜ ಮುಂದಿದ್ದರೂ ಕಾಣಲೊಲ್ಲಾ !

ನೆತ್ತಿಗಿದ್ದರು ಕಣ್ಣು
ಮೈಗೆ ಅಂಟಿದೆ ಮಣ್ಣು
ಬಂಡೆಗಲ್ಲಿನ ಬಿಲವೆ ಸಕಲ ಸೃಷ್ಟಿ.
ಏಡಿಗಿಹುದೇ ಜೋಡಿ ?
ಹೌದು, ಆ ತಿಳಿಗೇಡಿ
ಮಾನವನಿಗೂ ಇಲ್ಲ ದೂರದೃಷ್ಟಿ.

❖❖

ನಕಾಶೆ

ಇದು ನಕಾಶೆ
ಮಾನವನ ಆಶೆ
ಪ್ರಪಂಚದ ಪಟ
ಬೆಳಗುವುದೇ ಮಠ ?

ದೇಶವಿದೇಶ ಕೂಡಿ
ನಕಾಶೆಯಿದು, ನೋಡಿ.
ಪಂಚ ಖಂಡಗಳ ನಕ್ಷೆ
ಆಗಲಿ ಪಂಚಶೀಲದ ರಕ್ಷೆ.

ರಸಿಯಾ ಪೂರ್ವ ಬದಿ,
ಅಮೇರಿಕಾ ಪಶ್ಚಿಮ ತುದಿ
ನಡುವೆ ಭಾರತ, ಚೀನ,
ಯುರೋಪು, ಅರಬಸ್ತಾನ
ಕೆಳಗೆ ಆಫ್ರಿಕ ಖಂಡ
ಬೆಳೆಗೆ ಏನು ಪ್ರಚಂಡ ?

ತ್ರಿವರ್ಣ ಮೂಡಿ ಬಂದು
ಹಸರು, ಹಳದಿ, ಕೆಂದು,
ಸಪ್ತಸಾಗರ ಬುನಾದಿ
ನೀಲಿ ಬಣ್ಣದ ಆದಿ

ಮೇಲೆ ಆಕಾಶ
ಕೆಳಗೆ ಭೂದೇಶ
ಆಗಸವೂ ನೀಲ
ಸದಾ ಸರ್ವಕಾಲ

ತರಂಗ ನೂರಾರು,
ಒಂದೇ ನೀರು.
ಐದು ಭೂಖಂಡ
ಒಂದೇ ಪಿಂಡ.
ಅನಂತ ನಕ್ಷತ್ರ
ಒಂದೇ ಗೋತ್ರ
ಒಂದಲ್ಲವೆ ವಿಶ್ವ ?
ಪಂಚಶೀಲದ ತತ್ವ ?

ಇದು ಭೂಮಾತೆಯ ಪಟ
ಮಾನವನ ಮಠ.
ಪೃಥಿವಿ ಅವಿಭಾಜ್ಯ,
ಎಲ್ಲಿದೆ ವ್ಯಾಜ್ಯ ?
ಇದು ನಕಾಶೆ
ಮಾನವನ ಆಶೆ.

❖❖

ಆಫ್ರಿಕಾ ಖಂಡ

ಕಪ್ಪು ಖಂಡದ ಮೇಲೆ
ಬಿಳಿಯ ಸೂರ್ಯನ ಮೆಚ್ಚು
ಮಿತಿಮೀರಿ ಅತಿಯಾಗಿ,
ಬಿಸಿಲು ಆಯಿತು ಹೆಚ್ಚು !

ಹುಲ್ಲಿಗಿಂತಲು ಹಗುರ
ಅಲ್ಲಿರುವ ಬಂಗಾರ !
ಕಲ್ಲಿಗಿಂತಲು ಕಡಿಮೆ
ವಜ್ರಗಳ ಕೋಠಾರ !

ಕಪ್ಪು ನದಿಗಳ ನೀರು
ಬಿಳಿ ಸಮುದ್ರದ ಸೊತ್ತು,
ನೆಲದ ಕ್ಷಾಲನದಿಂದ
ಜಲದೊಳಾಯಿತು ಮುತ್ತು.

ಅತಿಥಿಯೇ ಯಜಮಾನ !
ಮಾದರಿಯ ಭೂದಾನ !
ಸಾಮ್ರಾಜ್ಯ ಭೂತಂಗೆ
ಭೂಮಾತೆ ಬಲಿದಾನ !

ಕಪ್ಪುಬಿಳಿಗಳ ಭೇದ
ಭಗವಂತನಿಗೆ ಖೇದ.
ಆಫ್ರಿಕೆಯ ಬಿಸಿಲೊಳಗೆ
ಭಸ್ಮವಾಯಿತು ವೇದ.

❖❖

ಭಾಷೆಗಳು

ಗಾಳಿ ಬಂದಾಗೆಲ್ಲ
ಎಲೆಗಳಾಡುವುದೆಲ್ಲ
ಕನ್ನಡವೆ ? ಮಲೆಯಾಳಿ ? ಯಾವ ಭಾಷೆ ?
ಮರದ ಎಲೆಗಳು ಕೂಡ
ಮಾತನಾಡುವ ಗೂಢ
ತಿಳಿವುದಕೆ ಕಾದಿಹುದು ಮನುಜನಾಸೆ.

ಚಂದನದ ತಂಗಾಳಿ
ಬೀಸಿಲದು ಸೊಗಸಾಗಿ,
ಕನ್ನಡದ ಇಂಚರವ ಕೇಳು, ನೀರೆ.
ಕಡಲ ತೀರದ ಗಾಳಿ
ಬೀಸಲದು ಮಲೆಯಾಳಿ
ಎಲ್ಲ ಭಾಷೆಗಳೊಂದು, ರೂಪ ಬೇರೆ.

❖❖

ಬಿರುಗಾಳಿ

ಬಿರುಗಾಳಿಯೇ ಬೇಕು ನಮ್ಮ ಉದ್ಧಾರಕ್ಕೆ
ಪೊಳ್ಳು ಮರಗಳನೆಲ್ಲ ಭೂಮಿಗುರುಳಿಸಲಿಕ್ಕೆ.

ಬೊಡ್ಡೆಯೊಂದಿಗೆ ಅಡ್ಡ ಟೊಂಗೆಗಳನೂ ಸೀಳಿ
ಹುಳಿ ಕಾಯಿಗಳನೆಲ್ಲ ಉರುಳಿಸಲಿ ಬಿರುಗಾಳಿ

ಚಂಡಮಾರುತದಲ್ಲಿ ಹಾರಿ ಹೋಗಲಿ ಬೆಂಡು,
ಸಪ್ತ ಸಾಗರದಾಚೆ ಹರಕು ಚಿಂದಿಯ ಮುಂಡು.

ಸೋರುವಾ ಮಾಡಗಳು ಮುರಿದು ಬಿದ್ದರೆ ಶಾಂತಿ
ನಾರುವಾ ಗೂಡುಗಳು ಕಳಚಿ ಬಿದ್ದರೆ ಕ್ರಾಂತಿ

ದರಗೆಲ್ಲ ದೂರಾಗಿ ಚೊಕ್ಕವಾಗಲಿ ನೆಲವು
ಬಿರುಗಾಳಿಯಲ್ಲಿಯೇ ಬರಲಿ ನರನಿಗೆ ಗೆಲವು.

❖❖

ಜೀವನ ಮತ್ತು ಸಾವು

ಜೀವನ ಜಾಜಿಯ ಹೂವು
ಜೀವನವೇ ಕಹಿ ಬೇವು
ಜೀವನವೆಂದರೆ ಸಂತೆ
ನೀರಿನ ಬೊಬ್ಬುಳ್ಳಿಯಂತೆ.

ಜೀವನವೇ ಸುಖದುಃಖ
ಪಾತರಗಿತ್ತಿಯ ಪಕ್ಕ
ಜೀವನ ಬಿಸಿಲಿನ ಕಾವು
ಶಶಿಯಂತಿರುವುದು ಸಾವು.

❖❖

ನೈಜ ರೀತಿ

ನೀರು ಆರಿದರೇನು ?
ಕೆಳಗೆ ಝುರಿಯಿಹುದು
ಮೇಲೆ ಆಗಸದಲ್ಲಿ
ಹನಿಯಾಗಬಹುದು.

ಹೂವು ಬಾಡಿದರೇನು ?
ಮಿಡಿಯಾಗಿ ಹಣ್ಣು
ಹಣ್ಣಿನೊಳಗಿನ ರಸಕೆ
ಮೂಲವೇ ಮಣ್ಣು.

ಜೀವ ಜಾರಿದರೇನು ?
ಅದು ನೈಜ ರೀತಿ.
ಪಶುಪಕ್ಷಿಗಳಿಗಿದೆಯೆ
ಮೃತ್ಯುವಿನ ಭೀತಿ ?

❖❖

ಒಂದು ಸ್ವಪ್ನ

ಆಕಾಶದಲಿ ಬೆಂಕಿ ತಾರೆಗಳ ಸತ್ತು,
ಪಾತಾಳವೂ ಕೆಳಗೆ ನಡುಗುತ್ತಲಿತ್ತು!
ಯೇಸುಕ್ರಿಸ್ತನು ನೊಂದ ಬುದ್ಧನಿಗೆ ಅಪ್ಪಿ;
ಬುದ್ಧದೇವನು ಕೂಡ ಬಿದ್ದ ಸ್ಮೃತಿ ತಪ್ಪಿ.

ಬರಿಯ ಸ್ವಪ್ನವಿದೆಂದು ಕಣ್ಣುಗಳ ತೆರೆದೆ
ನಿದ್ದೆಗಣ್ಣಲಿ ಸುದ್ದಿಪತ್ರವನು ತೆರೆದೆ,
ಮೂರನೆಯ ಮಹಾಯುದ್ಧ ಬಾಯ್ದೆರೆವ ಭೀತಿ
ಎಲ್ಲೆಲ್ಲಿಯೂ ಅಣುವಿನಂಬುಗಳ ಖ್ಯಾತಿ.

❖❖

ಯುದ್ಧ ಕುಬೇರ

ಹಂದಿಯ ಕೋರೆಯ ದಾಡೆಗಳೆರಡು,
ದಾಡೆಗೆ ಮಿರುಗುವ ಚಿನ್ನದ ತಗಡು.
ಕಾಲಿನ ಕಡಗಕೆ ಕಾಸಿದ ಉಕ್ಕು,
ಕಂಠಾಭರಣಕೆ ವಜ್ರದ ಸೊಕ್ಕು.
ಪಕ್ಕದೊಳೆರಡೂ ಮದ್ದಿನ ಗುಂಡು;
ಜಗವೆನ್ನುವುದೇ ತುಳಿಯುವ ಚೆಂಡು !

ಸೊಕ್ಕೇರಿದ ನರರಾಕ್ಷಸನೇ,
ಮಾನವ–ಸಂಸ್ಕೃತಿ ಭಕ್ಷಕನೇ,
ನಿನಗೂ ದೂಳನು ಮುಕ್ಕಿಸಲು
ನಿನ್ನ ಪರಾಕ್ರಮ ದಕ್ಕಿಸಲು
ನೋಡಿದು ನಿಂತಿದೆ ಕಪಿಸೇನೆ
ಹಸಿದ ಜನಾಂಗದ ಹೊಸ ಬೇನೆ.

ರಾಮಾಯಣದಲಿ ಬರೆದಂತೆ
ರಾವಣನಿಗೆ ಕೊನೆ ಬಂದಂತೆ
ಯುದ್ಧಕುಬೇರನ ಅದೃಷ್ಟ
ಪ್ರಜ್ವಲಿಸುವ ಶಿಖಿಯಲಿ ನಷ್ಟ.

ಮಾನವ ಕೋಟಿಯ ಜಠರಾಗ್ನಿ
ಉರಿಯಲು ತಡೆಯುವರಾರಿಲ್ಲ,
ಅರುಣಾಸ್ತ್ರಕ್ಕೆ ಸಹ ಬಲವಿಲ್ಲ !
ಆಟಂ–ಬಾಂಬಿಗು ಕಳೆಯಿಲ್ಲ !

ಯುದ್ಧಕುಬೇರನ ರಣಕೊಂಬು
ಬುದ್ಧನಿಗಾಗಲಿ ತಲೆದಿಂಬು.

❖❖

ಯುದ್ಧವ ಗೆದ್ದವರು

ಕೀರ್ತನೆಯಲಿ ಹರಿದಾಸರು ನುಡಿದರು;
"ಧರ್ಮದ ಸುಳಿವಿಲ್ಲ;
ಪಾಪಕೃತ್ಯವೇ ಭೂತಲಕಂಟಿದೆ,
ಕರ್ಮದ ತಿಳಿವಿಲ್ಲ.

ದಿನದಿನದಿನವೂ ತಾರಾಗಣವೂ
ಬೇಸತ್ತಿದೆ ಬದುಕಿ;
ಒಂದೊಂದೇ ಉಡು ಅಡಗುವುದಯ್ಯಾ
ಪಾತಾಳಕೆ ಗುದುಕಿ !

ತುತ್ತನು ಕಾಣದೆ ಸಾಯುವರೆನಿತೋ
ಮಾರ್ಗದ ಬದಿಯಲ್ಲಿ !
ದೇವರಿಗೂ ಸಹ ಬೇಸರ ಬಂದಿದೆ
ಸ್ವರ್ಗದ ತುದಿಯಲ್ಲಿ !"

ಕೀರ್ತನೆ ಮುಗಿಯಲು ಭಕ್ತಶಿರೋಮಣಿ
ಪ್ರಶ್ನೆಯ ಕೇಳಿದನು :
"ಏಕಯ್ಯಾ ಹರಿ ಸ್ವರ್ಗದ ತುದಿಯೊಳ
ಗಿನ್ನೂ ಮಲಗಿಹನು ?"

ಭಕ್ತನ ಪ್ರಶ್ನೆಗೆ ಉತ್ತರವೀಯುತ
ಅಂದನು ಹರಿದಾಸ :
"ದೇವನು ಇಂದಿಗೆ ಭೂಮಿಗೆ ಬಂದರೆ
ಆತನಿಗೂ ಕ್ಲೇಶ !

ದೇವನಿಗೂ ಸಹ ನುಂಗೇ ಬಿಡುವರು
ನೂತನ ದಾನವರು !
ಭಲೆ ನರವೀರರು ! ಬಹಳೇ ಶೂರರು
ಯುದ್ಧವ ಗೆದ್ದವರು !"

❖❖

ಆರಿದ ನಂದಾದೀಪ

ದೇವರ ನಂದಾದೀಪವು ನಂದಿ
ಹೋಯಿತು ಪೂಜೆಯ ಹೂವು ಕಂದಿ.

ಊದಿನಕಡ್ಡಿಗೆ ಪರಿಮಳವಿಲ್ಲ,
ಕಪ್ಪುರದಾರತಿ ಉರಿಯುವುದಿಲ್ಲ
ಧೂಪವು ಅಂಟಿನ ರೂಪವ ತಳೆದು
ಒರಲೆಯ ಹುತ್ತೇ ಗುಡಿಯಲಿ ಬೆಳೆದು
ಕತ್ತಲು ಕತ್ತಲು ಕತ್ತಲು ಒಳಗೆ
ಸುತ್ತಲು ಮುತ್ತಲು ಮೇಲೂ ಕೆಳಗೆ.

ನಂದಾದೀಪವು ನಂದಿತು ಹೇಗೆ ?
ವಿಶ್ವದ ಗುಡಿಯಲಿ ತಿಮಿರವಿದೇಕೆ ?
ಎಣ್ಣೆಯ ಬದಲು ನಿರಂಜನದಲ್ಲಿ
ಪನ್ನಗ ವಿಷವೇ ತುಂಬಿರುವಲ್ಲಿ
ನಂದಾದೀಪವು ತೊಳಗುವುದೆಂತು ?
ದೇವನಿಗಾರತಿ ಬೆಳಗುವುದೆಂತು ?

ಮನದಲಿ ತುಂಬಿದೆ ಯುದ್ಧದ ಆಸೆ
ನರಜೀವಿಗೆ ಬಲಿ ಕೊಡುವ ಪಿಪಾಸೆ
ಹೊಸ ಸಾಮ್ರಾಜ್ಯವನಾಳುವ ಕನಸು
ಜಗದಲಿ ನಾಯಕನಾಗುವ ಮನಸು.
ತುಟಿಯಲಿ ಸತ್ಯ ಅಹಿಂಸೆಯ ಮಂತ್ರ
ಕೃತಿಯಲಿ ವಂಚನೆ, ಕಪಟ ಕುತಂತ್ರ.

ರಾಷ್ಟ್ರಸಂಘದೊಳಗೆಲ್ಲರು ಕೂತು
ವಿಶ್ವಕುಟುಂಬದ ಡಾಂಭಿಕ ಮಾತು !

ಒಬ್ಬರಿಗೊಬ್ಬರ ಭರವಸೆಯಿಲ್ಲ,
ತೋಪು ತುಬಾಕಿಯ ಅಬ್ಬರವೆಲ್ಲ,
ಮದ್ದಿನ ಹಸಿ ದುರ್ವಾಸನೆಯಲ್ಲಿ
ಊದಿನಕಡ್ಡಿಗೆ ಪರಿಮಳವೆಲ್ಲಿ ?

ಕತ್ತಲೆ ಮುತ್ತಿದ ದೇವಸ್ಥಾನ
ಶ್ರೀಭಗವಂತನ ಕಬರಸ್ಥಾನ.
ಭೂತಪಿಶಾಚಿಯು ಕಿಸಿದಿತು ಹಲ್ಲು
ಹೆದರಿದ ಬಡ ಪೂಜಾರಿಯು ಗುಲ್ಲು
ವಿಶ್ವದಿಗಂತಕೆ ಮುಟ್ಟಿತು ಮೇಲೆ
ಅದರು ಭೂತ ಪಿಶಾಚಿಯ ಲೀಲೆ
ತಡೆಯುವ ಸಾಹಸ ಜಗದೊಳಗಿಲ್ಲ !
ಮಾನವ ಶಕ್ತಿಗೆ ಮಾದಕವಿಲ್ಲ !

ಯುದ್ಧದ ಭೂತ ಪಿಶಾಚಿಗಳೆದ್ದು
ಜಗದೊಳಗೆಲ್ಲಾ ಗುಂಡಿನ ಸದ್ದು
ದೇವನು ಸತ್ತನು, ಗುಡಿಯಲಿ ತಿಮಿರ,
ದೇವನ ಬದಲು ಪಿಶಾಚಿಯೆ ಅಮರ !

ನರರುಂಡಗಳೇ ಹೂವಿನ ಮಾಲೆ,
ನಂದಾದೀಪವೇ ಮಸಣದ ಜ್ವಾಲೆ !
ಪ್ರೇತದ ಹೊಗೆಯೇ ಪರಿಮಳ ಧೂಪ !
ಭೂತದ ನಗೆಯೇ ದೇವನ ರೂಪ !

ದೇವರ ನಂದಾದೀಪವು ನಂದಿ
ಹೋಯಿತು ಪೂಜೆಯ ಹೂವು ಕಂದಿ !

❖❖

ಆಯ್‌ಸ್ಕ್ರೀಮು

ಬಗೆ ಬಗೆ ಬಣ್ಣದ ಗೋಲು
ಆದರೆ ಒಂದೇ ಹಾಲು !
ಪರಿ ಪರಿ ರಾಗದಿ ಮಿಂದೂ
ಮಾನವ ಸಂಸ್ಕೃತಿಯೊಂದು.

ಯಂತ್ರದೊಳಗಾಲು ಗಟ್ಟಿ
ಹಾಲಾಯಿತು ಬಲು ತುಟ್ಟಿ;
ಬೇಸಗೆಯಲಿ ಸಹ ಬರ್ಫ !
ದುಡ್ಡಿದ್ದವರಿಗೆ ದರ್ಪ.

ಇಂದಿನ ಲೋಕದ ಸುದ್ದಿ
ಆಯ್‌ಸ್ಕ್ರೀಮಾಯಿತು ಬುದ್ಧಿ
ಬಣ್ಣಕೆ ಬಣ್ಣಕೆ ಭೇದ,
ದೇಶಕೆ ದೇಶಕೆ ವಾದ.

ಪೃಥಿವಿಯ ಗೋಲಿನ ರೀತಿ
ಆಯ್‌ಸ್ಕ್ರೀಮಾಯಿತು ನೀತಿ !
ಶೀತಲ ಶೀತಲ ಯುದ್ಧ,
ಸತ್ತನು ಗೌತಮ ಬುದ್ಧ !

❖❖

ಒಂದೇ ಮನೆ

ಎಲ್ಲರಿಗೊಂದೇ
ಭೂತಲವೆಂದೆ
ಎಲ್ಲರಿಗೂ ಭಗ–
ವಂತನು ತಂದೆ.

ಸರ್ವರಿಗೊಂದೇ
ಸೂರ್ಯನ ಕಣ್ಣು,
ವಿಧ ವಿಧ ಸಸ್ಯಕೆ
ಒಂದೇ ಮಣ್ಣು.

ಬಗೆ ಬಗೆಯಾದರು
ದೇಹದ ಬಣ್ಣ
ಎಲ್ಲರ ನಗೆಯೂ
ಒಂದೇ ಅಣ್ಣ.

ಏತಕೆ ಯುದ್ಧವು ?
ಏತಕೆ ಮದ್ದು ?
ಒಂದೇ ಮನೆಯೊಳ
ಗೆಲ್ಲರು ಇದ್ದು ?

❖❖

ಸುಪ್ರಭಾತ

ಸುಪ್ರಭಾತ, ನವಸುಪ್ರಭಾತ,
ಹಾಡು ಕವಿಯೆ, ನವ್ಯಗೀತ,
ದಿವ್ಯ ಕಿರಣ, ಭವ್ಯ ಭರಣ,
ಲೋಕಕೆಲ್ಲ ಬರಲಿ ಕರುಣ.

ತರಣಿ ಚಂದ್ರನಂತೆ ತೋರಿ
ಜತೆಗೆ ತಾರೆಗಳೂ ಸೇರಿ
ನವೋದ್ಭಿನ್ನ ಸುಪ್ರಭಾತ !
ಹಾಡು ಕವಿಯೆ, ಕ್ಷೇಮಗೀತ.

ಕೃಷ್ಣಪಕ್ಷ ಶುಕ್ಲವಂತೆ !
ಜ್ವಾಲೆಯಾಯ್ತು ದೀಪದಂತೆ !
ಉರಿವ ಕೆಂಡ ರಾಗವಾಗಿ
ಇಂದ್ರಚಾಪವಾಯ್ತು ತೂಗಿ.

ಸುಪ್ರಭಾತದಲ್ಲಿ ಚಾಪ ?
ಚಾಪವಲ್ಲ, ಸ್ವಸ್ತಿಲೇಪ.
ಮಡಿದರೆಂದು ರಾಹುಕೇತು,
ಗಗನಭೂಮಿಗೊಂದು ಸೇತು.

ಬೇಟೆಗೆಂದು ಬಂದ ಮಾರ
ನೊಂದು ಬಿಲ್ಲ ತ್ಯಜಿಸೆ, ಧೀರ !
ಹಗಲ ಮೇಲೆ ಮೊಲದ ಸಂತೆ !
ನೆಲದ ಮೇಲೆ ಸ್ವರ್ಗ ಬಂತೆ ?

ಸುಪ್ರಭಾತ ಅಸಮ, ಚೋದ್ಯ !
ಗದ್ಯ ಉಸುರಿದೊಡನೆ ಪದ್ಯ,
ಯುದ್ಧವೆಂದ ಕ್ಷಣಕೆ ಬುದ್ಧ
ವಿಶ್ವವ್ಯಾಪಿಯಾಗಿ ಎದ್ದ.

ಇದುವೆ ದಿವ್ಯ ಸುಪ್ರಭಾತ,
ಇದುವೆ ನವ್ಯ ಭಾವಗೀತ.

❖❖

ಕಾಲನಿಗೆ

ನಿನಗೊಂದು ನಾಡಿಲ್ಲ,
ನಿನಗೊಂದು ಗೂಡಿಲ್ಲ,
ನೀನಂತು ಪದದೇಶಿಯಾದುದಿಲ್ಲ !

ನೀನು ಬಂದಾಗೆಲ್ಲ
ಜೇನು, ಸಕ್ಕರೆ, ಬೆಲ್ಲ,
ನಿನ್ನೊಳಗೆ ಸವಿ ರಸದ ಲೇಶವಿಲ್ಲ !

ಹರಕು ಅಂಗಿಯ ಜೋಗಿ,
ತಿರೆಯ ತಿರುಗುವ ಯೋಗಿ,
ಐಸಿರಿಯ ತಂದಿಡುವೆ ಹಿರಿಯ ಭೋಗಿ !

ಸತ್ರವೊಂದನು ಕಂಡು
ತಣ್ಣನೆಯ ತಣಿದುಂಡು,
ಅದಕೆ ಶಾಪವನೀವೆ ಹೊರಗೆ ಬಂದು !

ಸೊಗ ನಿನ್ನ ಕಣ್ ಮುಂದೆ,
ದುಗುಡ ಬೆನ್ನಿನ ಹಿಂದೆ,
ಜಗವ ಸುತ್ತುವುದೊಂದೆ ಮೊಗದಿ ಚಿಂತೆ !

ಚಿರಕಾಲ ದರವೇಶಿ,
ಬರಗಾಲ ಬಿಕನಾಶಿ,
ವಾಸಿ ಗಾಸಿಗಳಿಬ್ಬರೂ ನಿನಗೆ ದಾಸಿ !

ನಿನ್ನ ರೆಕ್ಕೆಯ ಮೇಲೆ
ಕಾರ್ಮೋಡವೇ ತೇಲಿ,
ಪ್ರಳಯರುದ್ರನ ಲೀಲೆ ಧರೆಯ ಮೇಲೆ.

ಮತ್ತೊಂದು ಪಕ್ಕದಲಿ
ಅಕ್ಕರೆಯ ತೆಕ್ಕೆಯಲಿ
ಮುದ್ದು ಕೃಷ್ಣನು ನುಡಿಸುತಿಹನು ಮುರುಲಿ.

ನೀ ಪುರಾತನ ಮಲ್ಲ,
ನಿನಗೆ ಪೂರ್ವಜರಿಲ್ಲ !
ನೀ ಹುಟ್ಟಿ ಬಂದ ದಿನ ಯಾರು ಬಲ್ಲ ?

ನಿನ್ನೊಳಗೆ ದೃಢ ನಚ್ಚು
ಇಡುವುದೆಂದರೆ ಹುಚ್ಚು;
ನೀರ ಬೊಬ್ಬುಳ್ಳಿಯಂತೆ ನಿನ್ನ ಮೆಚ್ಚು.

ನೀನು ತಣಿದರೆ ಶಾಂತಿ,
ಮತ್ತೆ ಮುನಿದರೆ ವಾಂತಿ;
ಸುತ್ತು ಓಲಾಡಿದರೆ ವಿಶ್ವಕ್ರಾಂತಿ !

ನೀ ಪುರಾತನ ಕಂತೆ,
ನೀನೆ ಹೊಸ ತಳಿರಂತೆ.
ನಿನ್ನ ಹಣೆಬರವೇ ಇತಿಹಾಸವಂತೆ !

❖❖

ಇತಿಹಾಸ

ರಣಭೇರಿಯೇ ವಾದ್ಯ
ವೆಂದು ತಿಳಿಯುವ ರಾಜ
ಯುದ್ಧವೇ ಇತಿಹಾಸ
ವೆಂದು ತಿಳಿವುದು ಸಾಜ.

ಸಾಮ್ರಾಜ್ಯಗಳ ಕೀರ್ತಿ,
ಸಾರ್ವಭೌಮನ ಮೂರ್ತಿ
ಇತಿಹಾಸವೆನ್ನುವುದು
ಧಾರುಣಿಗೆ ಅಪಕೀರ್ತಿ.

ಕಲ್ಲು ಮೂರುತಿಯಲ್ಲ,
ಕಿಚ್ಚು ಆರತಿಯಲ್ಲ,
ಮಾರಿಕಾಂಬೆಯ ರೂಪ,
ಶಿವನ ಪಾರ್ವತಿಯಲ್ಲ.

ಗಂಗೆಯರ ಉಲ್ಲಾಸ,
ಗೌತಮನ ದರಹಾಸ,
ನೇಗಿಲಿನ ಸ್ಪರ್ಶವೇ
ಮಾನವನ ಇತಿಹಾಸ.

❖❖

ಕನ್ನಡ ಒಂದಾಯ್ತು

ಕನ್ನಡದ ಜನವೊಂದು
ಕನ್ನಡದ ಮನವೊಂದು
ಕನ್ನಡದ ವನವೊಂದು
ಒಂದಾಯ್ತು ಒಂದು
ನಾಡೆಲ್ಲ ಗೂಡೆಲ್ಲ ಹಾಡೆಲ್ಲ ಒಂದು.

ನೆಲವೆಲ್ಲ ಬಸಿರಾಗಿ
ಜಲವೆಲ್ಲ ಉಸಿರಾಗಿ
ಹೂಲವೆಲ್ಲ ಹಸುರಾಗಿ
ಒಂದಾಯ್ತು ಒಂದು
ಕನ್ನಡವು ಇಂದು.

ಕನ್ನಡದ ತಾಯಿ,
ಮುನ್ನಡೆಯ ಮಾಯಿ,
ಉನ್ನತದ ಸಹ್ಯಾದ್ರಿ ನೀನಾಗಿ ನಿಂತೆ
ಭಾರತಕೆ ಮಾದರಿಯ ನಾಡಾಗುವಂತೆ.

ಚೆನ್ನಾಗಿ ಹೊನ್ನಾಗಿ ಕನ್ನಡದ ಕುಲವೂ
ಗುಣೆಯಾಗಿ ಮಣೆಯಾಗಿ ಸನ್ನುತರ ಬಲವೂ
ಹಿರಿದಾಗಿ ಬಿರುದಾಗಿ ಭಾರತಕೆ ಕೀರ್ತಿ;
ನವರಾಜ್ಯ ಸೌಭಾಗ್ಯ ನೀನಾಗು ಮೂರ್ತಿ.

ಇಡಿಯಾಗಿ ಮಡಿಯಾಗಿ ಕನ್ನಡದ ಬಾಳು,
ಭಾರತದ ಅಡಿಯಾಗಿ ಮುಡಿಯಾಗಿ ಏಳು,
ಭಾವನೆಯ ಕುಡಿಯಾಗಿ
ಸೇವನೆಯ ಗುಡಿಯಾಗಿ

ಜನಮನದ ನುಡಿಯಾಗಿ ಬಾಳು ತಾಯಿ,
ಮೂಕ ಜನರಿಗು ಕೂಡ ಬರಲಿ ಬಾಯಿ.

ಹೊತ್ತವರ ಕನಸಾಗಿ
ಹೆತ್ತವರ ನನಸಾಗಿ
ಸತ್ತವರ ನೆನಪಾಗಿ ಏಳು ನೀನು,
ನೋಡಿರೋ ಹಾಡಿರೋ, ದಿವ್ಯ ಭಾನು.

ಕರ್ಮದಾ ಕಣಿಯಾಗಿ
ಧರ್ಮದಾ ಅಣಿಯಾಗಿ
ಮರ್ಮದಾ ಮಣಿಯಾಗಿ ಮೂಡಿ ಬರಲಿ,
ನೆಲವೆಲ್ಲ ಜಲವೆಲ್ಲ ಕೂಡಿ ಇರಲಿ.

ಅರೆಯಲ್ಲಿ ಮಣ್ಣಾಗಿ,
ಮರೆಯಲ್ಲಿ ಕಣ್ಣಾಗಿ,
ಮರದಲ್ಲಿ ಹಣ್ಣಾಗಿ ಇಡಿಯ ನಾಡು,
ಹಿಡಿ ತುಂಬಿ ಉಡಿ ತುಂಬಿ ಬೆಳೆಯು ನೋಡು.

ಹರಿಜನರ ಜಡೆಯಾಗಿ
ಕರಿಜನರ ಕೊಡೆಯಾಗಿ
ಪುರಜನರ ಪಡೆಯಾಗಿ ನವ್ಯ ರಾಜ್ಯ
ಕಾಡೊಳಗು ಬೀಡಾಗೆ ಸಕಲ ಭಾಗ್ಯ.

ಮುನ್ನೀರ ನೊರೆಯಂಚು,
ಕೆನ್ನೀರಿನಲಿ ಮಿಂಚು,
ಹೊನ್ನೀರಿನಲಿ ಕುಂಚು ನಿನಗೆ ಅಮ್ಮಾ;
ಮುಂಗಾರಿ ಹಿಂಗಾರಿಯೇ ಮೈಯ ಬಣ್ಣ.

ಚಂದನದ ದೇಗುಲವು ಕಂಪಾಗಿ ಇರಲಿ,
ಚಂದಾಗಿ ಮುಂದಾಗಿ ಕನ್ನಡವು ಬರಲಿ.

❖❖

ಕರ್ನಾಟಕಾಂಬೆಯ ಹೆಸರು

ನೋಡವ್ವ, ನೋಡವ್ವ,
ನೀನಾದೆ ಹೊಸ ದೆವ್ವ !
ನಿನ್ನ ಹೆಸರೇ ನಮಗೆ ಬೇಡವಂತೆ !
ಗತ ವೈಭವದ ತಾಯಿ,
ಹಿತತತ್ವಗಳ ಮಾಯಿ,
ನಿನಗಿಲ್ಲವೇ ಬಾಯಿ ? ಏನು ಕಂತೆ !

ನಿಜವನ್ನೆ ಮರೆಮಾಚಿ,
ತಾಯ ಹೆಸರಿಗೆ ನಾಚಿ,
ರಾಜ್ಯ ಕಟ್ಟುವುದೇಕೆ ನಾವು, ತಾಯಿ ?
ನಮಗೆ ಶಾಪವಿದೇಕೆ ?
ವಿಧಿಯ ರೋಷವಿದೇಕೆ ?
ಮುಂದೆ ಕೇಳಲು ನನಗೆ ಬಾರದು ಬಾಯಿ.

ನಿನ್ನ ಹೆಸರೇ ಬಾಳು
ಕನ್ನಡತ್ವದ ಕಾಳು.
ಯುಗಯುಗಾಂತರದಲ್ಲಿ ಕಣಜ ತುಂಬಿ
ಸಾಕಿ ಸಲುಹಿದೆ ನೀನು;
ಇಂದಿಗೀ ಗತಿಯೇನು ?
ತಾಯ ಮರೆಯುವುದೇಕೆ ? ಯಾರ ನಂಬಿ ?

ಹೇಳಮ್ಮ ಹೇಳಮ್ಮ
ನಿನ್ನ ಸವಿ ಹೆಸರನ್ನ;
ನಿನ್ನ ನಾಮಾಮೃತವೆ ನನ್ನ ಜೀವ
ಕರ್ನಾಟ ಸಂಗೀತೆ,
ಕರ್ನಾಟ ಸಂಪ್ರೀತೆ,
ಬಸವಣ್ಣನಲ್ಲವೇ ನಿನ್ನ ದೇವ ?

ಚಂದನದ ನಿನ್ನ ಗುಡಿ,
ಸಹ್ಯಾದ್ರಿ ನಿನ್ನ ಮುಡಿ,
ಕನ್ನಡದ ವಚನವೇ ನಿನ್ನ ಬಾಯಿ
ನಿನ್ನ ಹೆಸರೇ ಹೆಸರು,
ನನ್ನ ಜೀವದ ಉಸಿರು
ಅದನುಳಿದು ಬಾಳುವೆನೆ ? ಹೇಳು ತಾಯಿ.

❖❖

ಏಕೀಕೃತ ಕರ್ನಾಟಕ

ಬರಿಯ ಬಣ್ಣಗಳ ನಕ್ಷೆಯಲ್ಲವೋ
ನವ್ಯ ಭವ್ಯ ನಾಡು.
ಎರಡು ಕೋಟಿಗಳ ಹೃದಯಲ್ಲಿಯೇ
ಉದಯವಾಯ್ತು ನೋಡು.

ಲಕ್ಷ ತಾರೆಗಳ ಅಕ್ಷಿ ಮಿರುಗುವುದು
ಒಂದೇ ನೋಟದಲ್ಲಿ
ಎಲ್ಲ ಹೂವುಗಳು ಮೆಲ್ಲನರಳಿದವು
ಒಂದೇ ತೋಟದಲ್ಲಿ

ಕರಿಯ ಕಲ್ಲುಗಳು ಕೂಡ ಕೂಡಿದವು
ಗುಡಿಯ ಕಳಸಕಾಗಿ,
ನರನ ಹೃದಯಗಳು ಒಂದುಗೂಡವೇ
ಮಾತೃಭೂಮಿಗಾಗಿ ?

❖❖

ಕಡಲ ಕನ್ನಡ

ಮನವು ನಲಿದಾಡಲಿಕೆ ಕಡಲು ಕುಣಿದಾಡುವುದು
ಹಸುರೆ ಉಸಿರಾಡುವುದು ಎಲ್ಲ ಕಡೆಗೆ
ಗಗನವನೆ ಮುತ್ತಿಡುವ ಉತ್ತುಂಗ ಶಿಖರವೇ
ಕಳಸವಲ್ಲವೆ ನಮ್ಮ ಬಾಳ ಗುಡಿಗೆ ?

ಗಿರಿನಿರ್ಝರದ ಗಾನ ನಮ್ಮ ನುಡಿಯಾಗಿರಲು
ನಮಗೇಕೆ ಸಂಗೀತ ? ಹಾಳು ಹರಟೆ ?
ಕಡಲ ನೊರೆಗಳ ನಗುವು ನಮ್ಮ ಮುದ್ದಿನ ಮಗುವು;
ವೃದ್ಧಾಪ್ಯ ನಮಗಿಲ್ಲ ಕೊನೆಯ ವರೆಗೆ

ಹೊಳೆಹಳ್ಳ ಹೃದಯವನು ತುಂಬಿ ತುಳುಕಾಡಿಸುವ
ಪ್ರೇಮದೌದಾರ್ಯವೇ ಬಾಳ ಜೇನು
ಕಡಲ ತೆರೆ ಧಾರುಣಿಯ ಪಾದ ತೊಳೆಯತಲಿರಲು
ಸದ್ಭಕ್ತಿ ಭಾವನೆಗೆ ಸಾಲದೇನು ?

ಸಾಗರನು ಆಗಸವನಾಲಿಂಗಿಸುವ ಕ್ಷಿತಿಜ
ನಮ್ಮ ಮನೆಯಂಗಳದ ಕೊನೆಯ ರೇಖೆ.
ನಮ್ಮ ಹೃದಯಾಕಾರ ಸಾಗರದ ವಿಸ್ತಾರ,
ಅದರಂತೆ ಆಳವೂ ಆಗದೇಕೆ ?

❖❖

ಬಿ. ಎಂ. ಶ್ರೀಕಂಠಯ್ಯನವರು

ನವ್ಯ ಜೀವನದಯ್ಯ,
ಭವ್ಯ ಶ್ರೀಕಂಠಯ್ಯ
ನಿನ್ನ ನುಡಿ ಅರವಿಂದ,
ಮುತ್ತು ಮಾಣಿಕ, ಚೆಂದ

ನಿನ್ನ ಕವನದ ನಾದ
ಇಂದಿಗೂ ಉನ್ಮಾದ
ನಿನ್ನ ಕನ್ನಡ ಭಕ್ತಿ
ಎಂದಿಗೂ ನವಶಕ್ತಿ

ನೀ ತಂದ ರಸವಂತಿ
ಪಡುವಣದ ಸೇವಂತಿ
ಅರಳಿತ್ತು ಹೊಸದಾಗಿ
ಮಲ್ಲಿಗೆಯ ಹೂವಾಗಿ.

ನಿನ್ನದೇ ಹೊಸ ದೃಷ್ಟಿ
ಯಲ್ಲಿ ತೇಲಿತು ಸೃಷ್ಟಿ
ನೀನು ಬಡಿಸಿದ ಬೋನ
ವೇ ನಮ್ಮ ಮೃಷ್ಟಾನ್ನ.

ನೀನು ಕುಡಿಸಿದ ಪಾನ
ಅಮೃತಪೇಯ ಸಮಾನ;
ನಿನ್ನದೇ ಅಭಿಧಾನ
ಕನ್ನಡಕೆ ಹೊಸ ಮಾನ.

ನಿನ್ನ ಆಶೀರ್ವಾದ
ಎಳೆಯ ಕವಿಗಳ ಮೋದ;
ಹಳೆಯ ಕವಿಗಳ ನಾದ
ನೀನು ಸುರಿದೊಡೆ ವೇದ.

ಶುಭ್ರ ಕೀರ್ತಿಯ ನೂಲು
ನಿನ್ನ ತಲೆಯ ರುಮಾಲು
ನೀ ನೆಟ್ಟ ನಾಡಗುಡಿ
ಬಾನ ಮುಟ್ಟಿತು ನೋಡಿ.

ನಾಲ್ಕು ಗಡಿಗಳ ಸುತ್ತಿ
ಅಭಿಮಾನವನು ಬಿತ್ತಿ
ನೀನು ಬೆಳೆಸಿದ ಬೆಳೆಯು
ಜೀವ ತುಂಬಿದ ಕಳೆಯು.

ನಿನ್ನ ಕನಸಿನ ತಾರೆ
ಮೂಡಿ ಬಾನಲಿ ತೋರೆ,
ನಾಡಿನಲಿ ಹೊಸ ಹರುಷ;
ನೀನೊಬ್ಬ ಶಕಪುರುಷ.

❖❖

ಗಾಂಧಿಯವರ ಸ್ಮಾರಕ !

ನಿನ್ನ ಪ್ರತಿಮೆಯ ನಿಲಿಸಿ
ನಾವು ಮೆರೆವುದು ವ್ಯರ್ಥ.
ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ.

ನಿನ್ನ ಭಸ್ಮಕೆ ಕಾಶಿ
ಗೋಕರ್ಣ ಬೇಕಿಲ್ಲ.
ನಿನ್ನ ಬೂದಿಯ ತ್ರಾಣ
ಪುಣ್ಯಕ್ಷೇತ್ರಕ್ಕಿಲ್ಲ.

ನಿನ್ನ ಕರ್ಮದ ಕಲ್ಪ
ವೃಕ್ಷ ಅಜರಾಮರವು
ನಿನಗೇಕೆ ಪುಣ್ಯತಿಥಿ
ಗಳ ಬಾಹ್ಯ ಜಂಜಡವು ?

ಹುಟ್ಟಿದವರಿಗೆ ಹಬ್ಬ,
ಸತ್ತವರಿಗೇ ತಿಥಿಯು
ನಿನಗೆ ಎರಡೂ ಇಲ್ಲ
ಯಾವುದೂ ಇತಿಮಿತಿಯು.

ನಿನಗೇಕೆ ಸ್ಮಾರಕವು ?
ಶಿಲ್ಪಕೃತಿ ಹೂಮಾಲೆ ?
ಲೋಕವನೆ ಬೆಳಗುತಿದೆ
ನಿನ್ನ ಎಲುಬಿನ ಜ್ವಾಲೆ.

ಭಾವದ ದೃಷ್ಟಿ

ಗೊರಟೆಯು ಇಲ್ಲದ ಮಾವಿನಹಣ್ಣನು
ನೋಡಿದ ಜನವುಂಟೆ ?
ಗೆರೆಟೆಯು ಇಲ್ಲದ ತೆಂಗಿನಕಾಯನು
ಬೇಡಿದ ಮನವುಂಟೆ ?

ಮಾವಿನಹಣ್ಣದು ಹೂವಿದ್ದಾಗಲೆ
ಗೊರಟೆಯು ಹುಟ್ಟಿತ್ತೆ ?
ತೆಂಗಿನ ಬೊಂಡದ ಹೊಟ್ಟೆಯ ಒಳಗೂ
ಗೆರಟೆಯು ಕಟ್ಟಿತ್ತೆ ?

ಹೂವೇ ಪ್ರೇಮವು, ಹಣ್ಣೇ ಕಾಮವು,
ಯಾವುದು ಉನ್ಮಾದ ?
ದೇವನ ಸೃಷ್ಟಿಯೇ ? ಭಾವದ ದೃಷ್ಟಿಯೇ ?
ಯಾವುದು ಆಮೋದ ?

❖❖

ಕವಿ

ಗಾಳಿಯಲಿ ಗೋಪುರವ
ಕಟ್ಟಿದರೆ ಕವಿಯು
ನಕ್ಷತ್ರಗಳ ವರೆಗೆ
ಹಾರುವುದು ಬುವಿಯು.

ಪಾತಾಳದಲಿ ಚಿಗಿಯೆ
ಕವಿ ನೆಟ್ಟ ಬೇರು,
ಧರೆಯ ಕೆರೆಗಳು ಸೋರಿ
ತೋಟಕ್ಕೆ ನೀರು.

ಸಾಗರದ ತೆರೆಗಳನು
ಸೋಸಿದರೆ ಕವಿಯು
ಉಪ್ಪು ನೀರೂ ಕೂಡ
ಆಗುವುದು ಸವಿಯು.

ಮಣ್ಣಿಂದಲೇ ಬ್ರಹ್ಮ
ರಚಿಸಿದನು ಸೃಷ್ಟಿ.
ಕವಿಗೆ ಮಣ್ಣೂ ಬೇಡ,
ಎಲ್ಲವೂ ದೃಷ್ಟಿ.

❖❖

ಭಾವಗೀತ

ಭಾವ ವೃಕ್ಷ,
ಗೀತ ಪುಷ್ಪ
ಹೃದಯತೋಟ ಗಮಗಮಾ,
ಕಂಪಿನಲರು ಅನುಪಮಾ.

ರಸಿಕ ದುಂಬಿ
ಮತ್ತೆ ಬಿಂಬಿ
ರಸವ ಹೀರಿ ಪಾವನಾ
ಕವನವೇ ರಸಾಯನಾ

ಹರಿಯ ಸೃಷ್ಟಿ
ಕವಿಯ ದೃಷ್ಟಿ
ಕವನ ನಿನ್ನ ದರ್ಪಣಾ,
ದೇವ, ನಿನಗೆ ಅರ್ಪಣಾ.

❖❖

ವಿಡಂಬನ ಮತ್ತು ವಿನೋದ

ಗತವೈಭವ

ನಮ್ಮ ಮನೆತನ ದೊಡ್ಡ; ನಮ್ಮ ಅಜ್ಜನ ಗಡ್ಡ
ಹುಲ್ಲು ಬಣಬೆಯ ಹಾಗೆ ಭವ್ಯವಿತ್ತು.
ನಮ್ಮ ಅಜ್ಜಿಯ ತಂದೆ ಯಾವ ಕೆಲಸಕು ಮುಂದೆ;
ಆ ಕಾಲವೇ ಹಾಗೆ ದಿವ್ಯವಿತ್ತು.

ನಮ್ಮ ಗ್ರಾಮದ ಗುಡ್ಡ ಹಿಮಗಿರಿಗು ಬಲು ದೊಡ್ಡ;
ಕೆರೆಯ ಆಳವು ಕೂಡ ಕಡಲಿನಂತೆ,
ಗುಡ್ಡವೇ ಗಿಡ್ಡಾಗಿ ಕೆರೆಯು ಮುಚ್ಚೇ ಹೊಯ್ತು
ಈ ಕಾಲವೇ ಹೀಗೆ ಕತ್ತೆಯಂತೆ.

ನಮ್ಮ ಊರಿನ ಓಣಿ, ವಾಸುಭಟ್ಟರ ಮಾಣಿ,
ಎಲ್ಲರೂ ಸುಖವಾಗಿ ಇದ್ದರಂತೆ.
ಈಗೆ ಓಣಿಗೆ ಭಟ್ಟ, ಎಲ್ಲರಿಗೆ ದುರದೃಷ್ಟಿ;
ಭಟ್ಟರೂ ವ್ಯಸನಕ್ಕೆ ಬಿದ್ದರಂತೆ.

ಊರ ಸಂತೆಯ ದಿವಸ ನೀರುಳ್ಳಿ ತೂಗಲಿಕೆ
ಬಂಗಾರ ತಕ್ಕಡಿಯ ಕಾಲವಿತ್ತು !
ಚಿನ್ನಹುಡಿ ದೂಳಾಗಿ ಕಾಲುವೆಯ ಕೊಳಕಾಗಿ
ಹರಿದು ಹೋಗುವುದೊಂದೆ ಬಾಕಿಯಿತ್ತು !

ನಮ್ಮ ವೈಭವತಾರೆ ಮಿನುಮಿನುಗಿ ಮನವಾರೆ,
ಮಾಯವಾಯಿತು ಕೊನೆಗೆ ಮೋಡದಲ್ಲಿ,
ಕಾಲುವೆಯ ಚಿನ್ನವೇ ಹರಿದು ಹೋಗುವ ಬಗಲು
ಮಿಂಚುಹುಳುವಾಯ್ತಂತೆ ಕಾಡಿನಲ್ಲಿ !

❖❖

ಅಂಜಿಕೆ

ಕನ್ನಡಿಯ ನೋಡಲಿಕೆ ಅಂಜುವೆವು ನಾವು ;
ನಮ್ಮ ಪ್ರತಿಬಿಂಬವೇ ನಮಗೊಂದು ಹಾವು.

ನಮ್ಮ ನೆರಳೇ ನಮಗೆ ಬೆಂಬಿಡದ ಭೂತ;
ಜೀವಂತವಿದ್ದರೂ ಕಾಣುವುದು ಪ್ರೇತ.

ಕೂಗಿಕೊಳ್ಳುವುದಕ್ಕು ವಿಪರೀತ ಭೀತಿ;
ಸೋಗು ಹಾಕಿದರೇನೆ ಎಲ್ಲರಿಗೆ ಪ್ರೀತಿ.

ಮೊಹರಮ್ಮ ಹಬ್ಬದಲಿ ಹುಲಿಗಂಜಿ ಕತ್ತೆ
ನರನಾಗಿ ಮೆರೆಯುವುದು ಹೆಮ್ಮೆಯಲಿ ಮತ್ತೆ.

ಪಿತ್ತವಿರದಿದ್ದರೂ ಓಕರಿಕೆ, ವಾಂತಿ;
ಬಸುರಿಲ್ಲದಿದ್ದರೂ ಅಡ್ಡ–ಬಾಣಂತಿ

ಹೆಜ್ಜೆಹೆಜ್ಜೆಗೆ ಹೆದರಿ ಕಟ್ಟಿದೆವು ಗೆಜ್ಜೆ;
ತಾಳ ಬಾರಿಸಿದರೂ ನಮಗಿಲ್ಲ ಲಜ್ಜೆ.

ನಕ್ಷತ್ರ ನೋಡಲಿಕೆ ಅಂಜಿದರೆ ನಾವು
ಆಕಾಶವೇ ಭೂಮಿಗಪ್ಪಳಿಸಿ ಸಾವು !

❖❖

ಅಮರ ಶಾಸ್ತ್ರ

ಬೇಸಗೆಯ ಸೆಕೆಯಲಿ ಹಿಮಗಿರಿಯ ಶೀತ.
ಹಾಸಿಗೆಯ ಮೇಲೆದ್ದ ಮಲಗಿದ್ದ ಪ್ರೇತ
ಗಿಡವೊಂದು ಹೈನಾಗಿ ಹಾಲಾಗಿ ತುಪ್ಪ.
ಸಂಭೋಗವಿಲ್ಲದೆಯೆ ಆಗುವನು ಅಪ್ಪ.

ಪಾತಾಳದಿಂದಲೇ ಕೈಲಾಸ ಕಂಡೆ,
ಆಕಾಶವಾಣಿಯಲಿ ಹಾಡಿದಳು ರಂಡೆ.
ಸಾಗರದ ಬುಡದಲ್ಲಿ ಮೀನಾಗಿ ಮನುಜ
ಮತ್ಸ್ಯಕನ್ಯೆಯ ತೆರದಿ ವಿಹರಿಪುದು ಸಹಜ.

ಭೂಗೋಲವೇ ಚಂಡು ಆಡಲಿಕೆ ಅಂತೆ !
ಪುಟಿಸಿ ಆಡುವ ಶಕ್ತಿ ಹುಡುಗನಿಗೆ ಬಂತೆ ?
ಭೂವಲಯ ಕಿರಿದಾಗಿ, ಬ್ರಹ್ಮಾಂಡದಲ್ಲಿ
ಹಾರಿದನು ಹನುಮಂತ ಹರನಾಗಿ ಅಲ್ಲಿ.

ನವ ಚಂದ್ರ ನಿರ್ಮಾಣ, ಹೊಸ ಸೃಷ್ಟಿಯಂತೆ !
ಹಳೆ ಪೃಥಿವಿ ಬೇಕಿಲ್ಲ, ಮುದುಕಾಯಿತಂತೆ.
ಅದಕಾಗಿಯೇ ಬಾಂಬು ಮತ್ತೆ ವರುಣಾಸ್ತ್ರ.
ಎಲ್ಲವನು ಸರಿಪಡಿಸುತಿದೆ ಅಮರ ಶಾಸ್ತ್ರ.

❖❖

ಪ್ರಗತಿಪರ ಮಾನವ

ಚಂದಿರನ ಮೈಮೇಲೆ ಬೆಳ್ಳಿಯೇ ತುಂಬಿರಲು
ನಮಗೇಕೆ ಈ ಪೃಥಿವಿ ? ಹಾಳು ಮಣ್ಣು ?
ಒಂದೊಂದು ಚಿಕ್ಕೆಯಲಿ ಕೋಟಿ ಮಣ ಚಿನ್ನವಿರೆ,
ಭೂಗರ್ಭಶಾಸ್ತ್ರವೇ, ನಿನಗೆ ಶರಣು.

ಮೂರು ನಿಮಿಷದ ಒಳಗೆ ಗಗನ ಹಾರುವ ನಮಗೆ
ಚಂದ್ರತಾರಾಲೋಕ ನವ್ಯ ರಾಜ್ಯ.
ಆಫ್ರಿಕಾ ಖಂಡವೇ, ನೀನಾದೆ ಮುದಿ ಸೂಳೆ,
ನಿಗ್ರೋಗಳಿಗೆ ಇರಲಿ ನಿನ್ನ ಭಾಗ್ಯ.

ಸಾಗರದ ಬುಡದೊಳಗೆ ಮೀನುಗಳ ಬೇಯಿಸುವ
ಸಾಮರ್ಥ್ಯವುಳ್ಳವರು ಕಡಿಮೆಯೇನು ?
ನಮ್ಮ ಶಾಸ್ತ್ರದ ಮಂತ್ರತಂತ್ರಗಳ ಬಲೆಯೊಳಗೆ
ಸಿಕ್ಕದಿರನೇ ಸೊಕ್ಕಿಗೆದ್ದ ಭಾನು ?

ಭಾನುರಾಯನು ಇನ್ನು ಒಲೆಯ ರೂಪವ ತಾಳಿ
ಮಾನವನ ಆಳಾಗಿ ದುಡಿಯಲಿಹನು
ಇಂದ್ರದೇವನು ಅಡಿಗೆಭಟ್ಟನಾಗುವ ವರೆಗೆ
ಪ್ರಗತಿಪರ ಮಾನವನು ಸುಮ್ಮನಿರನು.

❖❖

ಮಾರ್ಗದರ್ಶಕರು

ಸ್ವರ್ಗಲೋಕದ ಮೇಲೆ
ಮೊದಲು ಮುಟ್ಟಿತು ಶ್ವಾನ !
ಮಾನವನಿಗೂ ಇಲ್ಲ
ನಾಯಿ ಗಳಿಸಿದ ಮಾನ !

ಕೃತಕ ಚಂದ್ರನ ಮೇಲೆ
ನರನು ತಲುಪುವ ವರೆಗೆ
ಧರೆಯ ಕುನ್ನಿಗಳೆಲ್ಲ
ನಿಜ ಚಂದ್ರಗ್ರಹದೊಳಗೆ.

ನಾಯಿ ಕಪಿ ಪಶುಗಳೇ
ನಿಜ ಮಾರ್ಗದರ್ಶಕರು.
ಪರರ ಜೀವದ ಮೇಲೆ
ಸುಖಿಸುವರು ಮಾನವರು.

❖❖

ರಾಸಾಯನ ಶಾಸ್ತ್ರ

ಸಾಗರದ ಮೀನೆಂಬುದೇ ಸೀಮೆಯೆಣ್ಣೆ !
ಕರಿಯ ಕಲ್ಲಿದ್ದಲೇ, ನೀನಾಗು ಬೆಣ್ಣೆ !

ಪೆಟ್ರೋಲಿನಿಂದಾಯ್ತು ನೀರೆಯರ ಸೀರೆ ?
ಮೂಸಿ ನೋಡಲಿ ಏನೇ ? ಸನಿಯಕ್ಕೆ ಬಾರೆ.

ಎಲ್ಲವೂ ಕಲಬೆರಿಕೆ ಹೊಸ ಶಾಸ್ತ್ರದಂತೆ,
ದೆವ್ವ–ದೇವರು ಕೂಡ ಒಂದಾದರಂತೆ !

❖❖

ನವ್ಯ ರೀತಿ

ಇಂದು ಜಗದೊಳಗೆಲ್ಲ ನವ್ಯ ನೀತಿ;
ಹೂವ ಪರಿಮಳ ಕೂಡ ಬೇರೆ ರೀತಿ !
ಉಡುಪು, ರಂಗಸ್ಥಳವೆ ಮುಖ್ಯವಂತೆ.
ನಟನೆ ಹೇಗಿದ್ದರೂ ಇಲ್ಲ ಚಿಂತೆ.

ಯಕ್ಷಗಾನಕ್ಕಿಂತ ಮಧುರ ಗಾನ
ಕೇಳಿ, ರಂಗಸ್ಥಳಕೆ ಬಂತು ಕೋಣ.
ಕೋಣವೇ ನಟನಾಗಿ ಕುಣಿವ ಭೀತಿ
ಕುಣಿದರೇ ನಾಟಕಕೆ ನವ್ಯ ರೀತಿ.

ನಾಟಕದ ನಾಂದಿಗೇ ಬಂದ ಭೀಮ !
ನೋಡಿ ನಕ್ಕಿತು ಕೂತ ಜನರ ಸ್ತೋಮ.
ಅಂತು ನಾಟಕ ರಮ್ಯ, ನವ್ಯ ರೀತಿ,
ಮಾನವನ ಪೂರ್ವಜನು ಇದ್ದ ಕೋತಿ.

❖❖

ರೈಲು ಗಾಡಿ

ಭುಸ್ ಭುಸ್ ಭುಸ್ !

ರೈಲುಗಾಡಿ ಬಂತು
ಎಲ್ಲವನು ತಂತು.
ಅಕ್ಕಿ, ರಾಗಿ, ಗೋದಿ,
ಬೇಗ ಶಂಖವೂದಿ.

ಡಬ್ಬಿ ತುಂಬ ಕಾಳು;
ಹೊಟ್ಟೆಗಿಲ್ಲ ಕೂಳು !
ರೈಲುಗಾಡಿ ಅಂತೆ
ಬರೀ ಹೊಗೆಯ ಸಂತೆ !

ಭುಸ್ ಭುಸ್ ಭುಸ್ !

❖❖

ಪೆನ್‌ಶನ್ನು

ಸಿಕ್ಕಿದೆ ಪೆನ್‌ಶನ್ನು
ವಿಶ್ರಾಂತಿಯ ಹೊನ್ನು.

ತಿನ್ನು ಬೇಕಾದ್ದನ್ನು
ಉಣ್ಣು ಸಾಕಾದ್ದನ್ನು
ವಿಶ್ರಾಂತಿ ಅನ್ನು.
ಅನ್ನುವುದೇ ಚೆನ್ನು !

ಬಾಗಿದ ಬೆನ್ನು
ಸಾಗಿದೆ ಇನ್ನು
ಪೆನ್‌ಶನ್ನೇ ಕೊಡೆ !
ಸ್ವಲ್ಪ ತಡೆ.

ಮಳೆ ಬಂತು
ಚಳಿ ತಂತು
ತೆರೆಯಿತೇ ಕೊಡೆ ?
ಜತೆಯಲ್ಲೇ ನಡೆ.

ಒದ್ದೆಯಾಯಿತು ಬೆನ್ನು,
ಇದೇ ಪೆನ್‌ಶನ್ನು !

❖❖

ತಾರೆ ಮತ್ತು ನೀರೆ

ನಿನ್ನ ನಗೆ ದೂರಿಂದ
ತಾರೆಯಂದದಿ ಚೆಂದ.
ದೂರದಲ್ಲೇ ನಿಲ್ಲೆ;
ತಾರೆಯಾಗಿರು, ನಲ್ಲೆ.

ಬೆಂಕಿಕೆಂಡವು ತಾನೆ
ನೆಲಕೆ ಬಂದರೆ ತಾರೆ.
ನೀನು ಸಹ ಹಾಗೇನೆ
ಕೋಪ ಬಂದರೆ, ನೀರೆ.

❖❖

ಶ್ರೀಮಂತರ ಸ್ತ್ರೀರಮಣಿಗೆ

ತಾರೆಗಳ ಸಂತಾನ
ದಲ್ಲಿ ಜನಿಸಿದ ಮಾನ
ನಿನಗಿರಲು, ಧರೆಗಳಿದು ಏಕೆ ಬಂದೆ ?
ಚಂದಿರನ ತಂಗಿ ನೀ
ಗಂಧರ್ವ ನಂದಿನೀ,
ಸುರಲೋಕವೇ ನಿನಗೆ ಯೋಗ್ಯವೆಂದೆ.

ನರಲೋಕದಲಿ ದೂಳು,
ಮತ್ತೆ ಕೆಸರದು ಹಾಳು,
ನಿನ್ನ ಚಿನ್ನದ ಸೀರೆ ಮಲೀನವಾಗೆ,
ನಿನ್ನ ಪತಿ ರೇಗುವನು,
ನಮ್ಮನೂ ಬಯ್ಯುವನು
ಸುರಲೋಕಕೇ ನೀನು ತಿರುಗಿ ಹೋಗೆ.

❖❖

ಪ್ರೇಮದ ಬಣ್ಣ

ನನ್ನ ಪ್ರೇಮದ ಬಣ್ಣ
ನಿನ್ನ ತುಟಿಗಳ ತೆರದಿ !
ಇನಿತು ಕೆಂಪಾಗಿರಲು
ಏನು ಕಾರಣ, ಕೆಳದಿ ?

ನೀನು ನಕ್ಕರೆ, ನೀರೆ,
ಕತ್ತಲೊಳಗೂ ಬೆಳಕೆ ?
ನಗೆಯಿಂದ ಬಿಳುಪಾಯ್ತೆ
ನಿನ್ನ ಕೂದಲು ಒಳಗೆ ?

ಬಿಳುಪೇನು ? ಕಪ್ಪೇನು ?
ಬಾಳಿನೊಲವೇ ಚಂದ.
ಹೃದಯದಾಳದ ಪ್ರೇಮ
ಬಣ್ಣವರಿಯದ ಅಂದ.

❖❖

ನವ್ಯ ತಾರೆ

ತುಟಿಯೊಳಗೆ ಕೆಂಬಣ್ಣ,
ಮುಖದೊಳಗೆ ಬಿಳಿ ಸುಣ್ಣ,
ಕಣ್ಣಿನಲಿ ಕಾಡಿಗೆಯ ಕಪ್ಪು ಬೇರೆ.
ಬಣ್ಣ ಬಣ್ಣದ ಬೆಡಗಿ,
ನೀನು ಇದ್ದರು ಅಡಗಿ,
ನಿನ್ನನೇ ಹುಡುಕುವರು ಹತ್ತು ಸಾರೆ.

ಕಮಲಮುಖಿ ನೀನಲ್ಲ !
ಹಳೆಯ ಹೋಲಿಕೆ ಸಲ್ಲ,
ಬೆಂಡುಹೂವಿನ ಹಾಗೆ ಗುಂಡು ಮೋರೆ.
ಚಂದ್ರಮುಖಿಯೂ ಅಲ್ಲ,
ನಿನಗೆ ಲಾಂಛನವಿಲ್ಲ;
ಅಕಲಂಕ ಮೂಡಿಹುದು ನವ್ಯ ತಾರೆ.

ನೀನು ಹರಿಸುವ ಪ್ರೀತಿ
ಹರಿವ ನೀರಿನ ರೀತಿ.
ಮುಕ್ತಛಂದದ ಹಾಗೆ, ಪ್ರಾಸವಿಲ್ಲಾ.
ನಿನಗೆ ಬಂಧನವಿಲ್ಲ;
ಗೊಂದಣಕೆ ಮಿತಿಯಿಲ್ಲ,
ವಿರಹಿಗಳಿಗೇನೊಂದು ತ್ರಾಸವಿಲ್ಲಾ.

❖❖

ಜನತೆಯ ಸೌಭಾಗ್ಯ

ರಂಡೆಯ ತುರುಬಿನ ಬೆಂಡಿನ ಹೂವೊಲು
ಜನತೆಯ ಸೌಭಾಗ್ಯ
ಸಂಸಾರಿಗೆ ಸಹ ಸಂನ್ಯಾಸಿಯವೊಲು
ಬಂದಿದೆ ವೈರಾಗ್ಯ.

ಬೆಳದಿಂಗಳಿಗೂ ವಿರಳತೆಯೆನ್ನುವ
ಜಾಣೆಯು ನೀನಾರೆ ?
ಕಳ್ಳಪೇಟೆಯೊಳಗೆಲ್ಲಾ ದೊರೆವುದು;
ಸಿಗುವುದು ಧ್ರುವತಾರೆ.

ಚಂದ್ರನ ಬಿಂಬದ ಬೆಳ್ಳಿಯ ಕರಗಿಸಿ
ಮಾಡಿದ ರೂಪಾಯಿ
ದೊರಕಿಸಿಕೊಂಡರೆ ಎಲ್ಲಾ ದೊರೆವುದು,
ಹಣ್ಣೂ ಹೂಕಾಯಿ.

ಸಕ್ಕರೆಗೂ ಸಹ ಸವಿಯಿಲ್ಲಾದರೆ
ಕಬ್ಬಿನ ಗುಣವಂತೆ !
ಮಲ್ಲಿಗೆಗೂ ಪರಿಮಳವಿಲ್ಲಾಗುವ
ಕಾಲವು ಬಂದಂತೆ.

ಮಕರಂದವು ಹುಳಿ ಮಜ್ಜಿಗೆಯಾಗಲು
ದುಂಬಿಗೆ ಹೊಸ ಬೇನೆ.
ರಂಡೆಯ ತುರುಬಿನ ಬೆಂಡಿನ ಹೂವೇ
ನಿನಗೇ ಸೋಬಾನೆ.

❖❖

ವೃತ್ತ ಪತ್ರ

ಬಿಸಿ ಬಿಸಿ ಕಾಫಿಯು ಮೈಯೊಳಗೆ,
ವಾರ್ತಾಪತ್ರವು ಕೈಯೊಳಗೆ.
ದೋಸೆಯಗಿಂತಲು ಬಿಸಿ ಸುದ್ದಿ;
ಓದಿದ ಕೂಡಲೆ ತಲೆಶುದ್ಧಿ !
ತಾಸಿಗೆ ತಾಸಿಗೆ ಹೊಸ ಬಣ್ಣ;
ಹಾಸಿಗೆ ಹಿಡಿದರು ಬಿಡದಣ್ಣಾ.

ಬಿಸಿ ಬಿಸಿ ಸುದ್ದಿ
ಮಸಿಯಲಿ ಅದ್ದಿ
ತೊಳೆಯಲು ತಿದ್ದಿ
ಭ್ರಮಿಸಿತು ಬುದ್ಧಿ.

ಮಿದುಳಿಗೆ ತೈಲವು ಹಿತವಾಯ್ತು
ಬುದ್ಧಿ ಭ್ರಮಿಷ್ಠರ 'ಮತ'ವಾಯ್ತು !

ದೇಶಧುರೀಣರ ಭಟ್ಟಂಗಿ
ವೇಶಧಾರಿಗಳ ಕೋಡಂಗಿ
ರಾಜಕಾರಣೆಯ ಹೊಸ ಶಂಖ !
ಶಂಖವನೂದಲು ಜನ ಮಂಕ !

❖❖

ಒಕ್ಕಲಿಗನ ಸುರಲೋಕ

ಈಗಲೇ ಮರಳಿದೆನು ಸುರಲೋಕದಿಂದ,
ಏನು ಹೇಳಲಿ, ಮಗನೆ, ಹೂವುಗಳ ಚೆಂದ !

ನೂರು ಬಣ್ಣದ ಹೂವು ತೇರು ಕಂಡಂತೆ.
ಎಲ್ಲಿ ಹೋದರು ಜಾಜಿ ಮಲ್ಲಿಗೆಯ ಸಂತೆ.

ಎಲ್ಲವೂ ಹೂದೋಟ; ಗದ್ದೆಯೇ ಕಾಣಾ !
ಹೂವ ಮಕರಂದವೇ ಎಲ್ಲವರ ಪ್ರಾಣ.

ಮಕರಂದವನೆ ಕುಡಿದು ಮಲಗುವುದೇ ಸ್ವರ್ಗ.
ಹಸಿವಾದರೂ ಕೂಡ ಬೇರಿಲ್ಲ ಮಾರ್ಗ !

ನನಗಂತು ಹಸಿವಾಗಿ ಸಾಕಾಯ್ತು ಜೀವ.
ನಡುರಾತ್ರಿಗೇ ಎದ್ದು ಪಾರಾದೆ, ದೇವ.

ಸುರಲೋಕ, ವರಲೋಕ ಕಾಣಲಿಕೆ ಚೊಕ್ಕ.
ನಮ್ಮ ಭೂಲೋಕವೇ ಬಾಳುವೆಗೆ ತಕ್ಕ.

❖❖

ರಾಯರು ಮತ್ತು ದೇವರು

ನಮಗೇತಕೆ ಆ ದೇವರ ಸುದ್ದಿ
ನಿಮ್ಮ ಅನುಗ್ರಹವಿದ್ದರೆ, ಬುದ್ಧಿ ?

ರಾಯರ ಹತ್ತರ ಎಲ್ಲಾ ಉಂಟು.
ದೇವರ ಕೈಯೊಳಗಿದೆಯೇ ಗಂಟು ?

ನಾವೇ ಕಾಣಿಕೆ ಕೊಡಬೇಕಂತೆ,
ನಮಗೇತಕೆ ಆ ದೇವರ ಚಿಂತೆ ?

ದೇವರು ದೂರದ ಸ್ವರ್ಗದ ಮೇಲೆ,
ಸನಿಯದೊಳಿಲ್ಲೇ ರಾಯರ ಲೀಲೆ.

ರಾಯರ ಖ್ಯಾತಿಯು ಅಷ್ಟಿಷ್ಟಲ್ಲ,
ದೇವರದೇನೂ ನಡೆಯುವುದಿಲ್ಲ.

ದೇವರು ಜಾತ್ರೆಗೆ ಹೊರಡವುದಕ್ಕೂ
ರಾಯರ ಅಪ್ಪಣೆ ಬೇಕೇ ಬೇಕು.

ನಮಗೇತಕೆ ಆ ದೇವರ ಸುದ್ದಿ
ನಿಮ್ಮ ಅನುಗ್ರಹವಿದ್ದರೆ, ಬುದ್ಧಿ ?

❖❖

ದೇವರ ಕಿಮ್ಮತ್ತು

ಕೊಲೆಯಾಯಿತು ? ಎಲ್ಲಿ ?
ದೇವರ ಗುಡಿಯಲ್ಲಿ !

ಹೇಗಾಯಿತು ? ಹೇಳು.
ಪೂಜಾರಿಯ ಕೇಳು.

ನರಜೀವಿಯ ಪ್ರಾಣ
ಹರನಿಗೆ ಬಲಿದಾನ !

ದೇವರ ಕಿಮ್ಮತ್ತು
ಪೂಜಾರಿಗೆ ಗೊತ್ತು !

❖❖

ತಲೆತಿರುಕನ ಪದ

ತಲೆತಿರುಕನ ತಲೆಯೊಳಗೆ ಸತ್ಯ !
ಜಾಣರು ನುಡಿಯುವುದೆಲ್ಲಾ ಮಿಥ್ಯ !

ಭಗವಂತನು ಬರಿ ಕಲ್ಲಿನ ಕಂಬ,
ಗುಡಿಯಲಿ ಪೂಜಾರಿಯದೇ ಜಂಬ.

ದೇವನಿಗಿಂತಲು ನರನೇ ಶ್ರೇಷ್ಠ !
ದೇವನ ತಲೆ ತಿರುಗುವುದೇ ಕಷ್ಟ.

ತಿರುಗುವದೊಂದೇ ಪೃಥಿವಿಯ ತತ್ವ;
ತಲೆ ತಿರುಗಿದರೇ ನರನ ಮಹತ್ವ !

ತಲೆ ತಿರುಗಲು ಬಲು ವೀರಾವೇಶ,
ಸುಮ್ಮನೆ ಕೂತರೆ ಹೇಡಿಯ ನಾಶ.

ತಲೆ ತಿರುಗಿದರೇ ಜಗದಲಿ ಯುದ್ಧ.
ಪಿತ್ತವಿಕಾರದ ಕಲಿಯೇ ಗೆದ್ದ !

ಯುದ್ಧವ ಗೆದ್ದ ಮಹಾಶಯ ಮೇಲು,
ಭಗವಂತನಿಗೂ ಕೊನೆಯಲಿ ಸೋಲು !

ಭಗವಂತನು ಬರಿ ಕಲ್ಲಿನ ಗೊಂಬೆ,
ದೇವರ ದೊಡ್ಡಸ್ತನ ನಾ ನಂಬೆ.

❖❖

ಸಾಸಿವೆ ಕಾಳು

ವಿಶ್ವಮಂಡಲದೊಳಗೆ
ನಮ್ಮ ಪೃಥಿವಿಯ ಬಾಳು
ಒಗ್ಗರಣೆಗೂ ಸಾಲ
ದೊಂದು ಸಾಸಿವೆಕಾಳು

ಸಾಸಿವೆಯ ಕಾಳಿಗೂ
ಹೊಡೆದಾಟ ಬಡೆದಾಟ !
ವಿಶ್ವದಾಚೆಗೆ ನಿಂತು
ನೋಡಿ ನಗುವನು ಆತ.

❖❖

ಬುದ್ಧದೇವನ ಶಿಲ್ಪ

ಬುದ್ಧದೇವನ ಶಿಲ್ಪ
ಒಡೆಯಿತೇನೋ ಸ್ವಲ್ಪ ?
ಸ್ವಲ್ಪ ಒಡೆದರೆ ಅನಿತು ಚಿಂತೆಯಿಲ್ಲ.
ಗುಡುಗೇನು ? ಸಿಡಿಲೇನು ?
ಮತ್ತೆ ಬಿಸಿ ಮಳೆಯೇನು ?
ಸಿಡಿಲಿಂದ ಮೂರ್ತಿಯೇ ಒಡೆಯಿತಲ್ಲಾ !

ಒಡೆದ ಬಿರುಕಿಗೆ ಸುಣ್ಣ
ತುಂಬಿ ಬಿಡಿ ಬೇಗಣ್ಣ.
ನೋಡಿಕೊಳಿ ಮೂರ್ತಿ ತುಂಡಾಗದಂತೆ.
ಮೂರ್ತಿ ಕಾಯುವುದೊಂದೆ
ನಮ್ಮ ಕೆಲಸವು ಅಂದೆ.
ಊರೆಲ್ಲ ಬೆಂದರೂ ಇಲ್ಲ ಚಿಂತೆ.

❖❖

ಮಾನವ ಪ್ರಗತಿ

ನೋಡಿರಿ ನೋಡಿರಿ, ಭಲರೇ ಭೂಪ !
ಮಾನವ ಪ್ರಗತಿಯ ನೂತನ ರೂಪ.

ಬಾನೊಳಗೂ ಸಹ ನರನುಡ್ಡಯಣ,
ಕಡಲೊಳಗೂ ಸಹ ಬಿಸಿ ಬಿಸಿ ಬಾಣ.

ಗಗನಕೆ ಮುಟ್ಟಲು ಮನುಜನ ಖ್ಯಾತಿ
ತಾರಾಗಣಕೂ ಅನುದಿನ ಭೀತಿ.

ಚಂದಿರನೂ ಸಹ ಹೆದರಿಕೆಯಿಂದ
ಮೋಡದೊಳಡಗಲು, ಜಗವೇ ಅಂಧ.

ಭೂದೇವಿಯು ಸಹ ನಡುಗಿದಳಂತೆ !
ಸಂತಾನವು ಲಯವಾಗುವ ಚಿಂತೆ.

ನೀಲಾಕಾಶವು ಕೆಂಪಗೆ ತೋರೆ
ಗುಡುಗೂ ಸಿಡಿಲೂ ಕಿಡಿಗಳ ಧಾರೆ.

ಜ್ವಾಲಾಮುಖಿಗೂ ಭೀಕರ ನೋಟ,
ಒಂದೇ ನಿಮಿಷಕೆ ಸಾವಿರ ಸ್ಫೋಟ.

ನೋಡಿರಿ ನೋಡಿರಿ, ಭಲರೇ ಭೂಪ !
ಮಾನವ ಪ್ರಗತಿಯ ನೂತನ ರೂಪ.

❖❖

ಹೊಸ ಬೂದಿ

ಡಾರ್‌ವಿನ ಪಂಡಿತ – ಮಂಡಿತ ತತ್ವವು
ಖಂಡಿತವೇನೋ – ವಿಜ್ಞಾನಿ ?
ಮನುಜನ ಪೂರ್ವಜ ಮರ್ಕಟನೆಂಬುದು
ನಿಶ್ಚಿತವೇನೋ, ಸುಜ್ಞಾನಿ ?

ಅಜ್ಜನ ಮುತ್ತಜ್ಜನ ಮುತ್ತಾತ್ತನು
ಹಿಂದಿನ ಕಾಲದ ಕಪಿರಾಜ;
ಮಂಗನ ಏಳಿಗೆ ಮನುಜನ ಪೀಳಿಗೆ
ಎಂಬುವ ಸಿದ್ಧಾಂತವು ಸಾಜ.

ಕೋತಿಗು ನಮಗೂ ಅಂತರವೊಂದೇ :
ಕಪಿಗಿರುವುದು ಸೊಂಟಕೆ ಬಾಲ
ಈ ಭೇದವನೊಂದನು ಬದಿಗಿಟ್ಟರೆ
ಇಬ್ಬರ ವರ್ತನೆ ಸಮತೋಲ !

ಲಂಕೆಯ ದಹಿಸಿದ ಹನುಮನ ಪುಚ್ಛವು
ರಾಮಾಯಣ ಕಾಲದರೀತಿ;
ಇಂದಿನ ಕೋತಿಗೆ ಲಂಕೆಯು ಸಾಲದು
ಇಡಿಯ ಪ್ರಪಂಚಕೆ ಹೊಸ ಬೂದಿ !

❖❖

ನವ ಯುಗ

ನವಯುಗವೆಂಬರು, ಅಣ್ಣಾ
ಏನಿದು ಹೊಸ ಹೊಸ ಬಣ್ಣ ?

ಬಾರಿಸೆ ತಾಳಮೃದಂಗ
ಥಕಥೈ ಕುಣಿವುದು ಮಂಗ.

ಮೇಲ್ಗಡೆ ನಾಟಕರಂಗ,
ಪಡದೆಯ ಒಳಗೆ ಸುರಂಗ.

ಮಾತಿಗೆ ಮಾತಿಗೆ ಮುದ್ದು,
ಕಿಸಿಯೊಳಗೇ ಸಿಡಿಮದ್ದು !

ಮೂಡಣ ಪಡುವಣವೆಂದು
ಸೂರ್ಯನ ಹೆಸರಿಗೆ ಕುಂದು !

ತಿರುಗುವ ಪೃಥಿವಿಯ ಮುಂದೆ
ಸೂರ್ಯನಿಗೆರಡೂ ಒಂದೇ.

ಅಂತರಬೆಂತರ ಸಂಘ
ಯೂನೋ ಹೆಸರಿನ ಮಂಗ !

❖❖

ಹೊಸ ಜಾಹೀರುನಾಮೆ

೧

ಸರಕಾರದ ಹೊಸ ಜಾಹೀರುನಾಮೆ–
ನೀರಿನೊಳಗಿಂದ ಹೊರಗೆ ಬಾರೇ, ಆಮೆ.
ಇನ್ನೂ ಅಡಗುವುದೇಕೆ ನೀ ಬಾವಿಯಲ್ಲಿ ?
ಕಪ್ಪೆಯೂ ಕೂಡ ಮುಂದಾಯ್ತು ಅಲ್ಲಿ.
ನಿನಗೂ ಒಂದು ಕುರ್ಚಿ ಕೊಟ್ಟಿದಾರೆ
ಕೈರಾಟಿಯ ಸೀರೆಯುಟ್ಟು ಬಾರೆ,
ನೀನೇ ನರನ ಮುತ್ತಜ್ಜಿಯಂತೆ !
ಮಂತ್ರಿ ಕರೆಯಲು ನೀ ಭಾಗ್ಯವಂತೆ.
ವಿಶ್ರಾಂತಿ–ವೇತನ ದೊರೆಯುವುದು ಮತ್ತೆ,
ತರುಣನಿಗೆ ಮಾತ್ರ ನಿರುದ್ಯೋಗ ಭತ್ತೆ !

೨

ಎಲೆ ಗೂಬೆ, ನಿನಗೂ ಒಂದು ಸುದ್ದಿ;
ಯಾರಿಗೂ ಇಲ್ಲವಂತೆ ನಿನಗಿದ್ದ ಬುದ್ಧಿ
ಹಗಲಿಗೆ ನೀ ಕಣ್ಣ ಮುಚ್ಚುವಿಯಂತೆ !
ಯಾಕೆ ನೋಡಬೇಕು ಅವಿಚಾರದ ಸಂತೆ ?
ಮನುಜ ಮಲಗಿದ ಮೇಲೆಯೇ ರಾತ್ರಿ
ತುಸುವಾದರೂ ಶುದ್ಧವಲ್ಲವೆ ಧಾತ್ರಿ ?
ನಿನಗೊಂದು ಬಿರುದು ಕೊಟ್ಟಿದಾರೆ.
ಅದನಾದರೂ ಕೇಳಲು ಬೇಗ ಬಾರೆ.
ರಾತ್ರಿಭೂಷಣ ನಿನ್ನ ಬಿರುದು,
ಧಾತ್ರಿಯೊಳಗೇ ಬಲು ಹಿರಿದು.

೩

ಓ ಕತ್ತೆ, ನೀ ನಿರಾಶೆಪಡಬೇಡ,
ನೀನೇ ನಮ್ಮ ಜೀವನಾದರ್ಶ;
ನೀನಿದ್ದರೇ ಸ್ವಾತಂತ್ರ್ಯ ದಿನ

ಸಮಾರಂಭದ ಪೋಷಾಕು ಘನ.
ದೋಬಿಯೊಗೆದ ದರಬಾರು ಡ್ರೆಸ್ಸು
ನೀ ಹೊತ್ತು ತಂದರೇನೇ ಲೇಸು.
ದುಡಿಯಲಿಕ್ಕೆ ಕತ್ತೆ ನೀನು,
ಡ್ರೆಸ್ಸು ಧರಿಸಲಿಕ್ಕೆ ಮಾತ್ರ ನಾನು.
ನೀನೇ ಸರಕಾರದ ನೆಲಗಟ್ಟು;
ನಿನ್ನ ಕಾಯಕದ ಮೇಲೆಯೇ
ಕಂದಾಯ ಗಿಂದಾಯ ಒಟ್ಟು
ನಿನ್ನ ಮಹಿಮೆ ಹಿರಿದು, ನಿನಗೇಕೆ ಬಿರುದು ?

೪

ಅಯ್ಯೊ, ನಿನ್ನ ಮರೆಯುವುದುಂಟೆ ?
ಪ್ರಜಾಸತ್ತೆಯಲಿ ನಿನ್ನದೇ ತಂಟೆ !
ಎಳೆಯ ಬಾಳೇಕಾಯಿ, ಅದಕೂ ನಿನ ಬಾಯಿ !
ಮೊದಲು ನಿನ್ನ ನೈವೇದ್ಯ,
ಆ ಮೇಲೆ ದೇವರಿಗೆ ಖಾದ್ಯ
ನೀನೇ ರಾಮದೇವನ ಬಂಟ,
ಜೈ ಹನುಮಾನನ ನೆಂಟ.
ನಿನಗೆ ಎಲ್ಲಾ ಮಾಫು ! ರಾಮರಾಜ್ಯದ ತೀರ್ಪು.

❖❖

ಹುಬ್ಬಳ್ಳಿ

ಹಳ್ಳಿ ಹೂಬಳ್ಳಿ
ನಗರ ಹುಬ್ಬಳ್ಳಿ.
ಹತ್ತಿ ಉಳ್ಳಾಗಡ್ಡಿ,
ಮತ್ತೆ ಚಕ್ರಬಡ್ಡಿ.
ರತ್ತಲು, ಸೇರು, ಹಣ,
ಹತ್ತು ರೂಪಾಯಿಗೆ ಮಣ.

ಕುಪ್ಪಸದ ಖಣ,
ಚಪ್ಪಲಿಯ ಋಣ
ಮೆಣಸಿನ ತೋರಣ,
ಹುಣಸೆಯ ಆವರಣ,
ಚಕ್ಕಡಿಯ ಮೇಲೆ,
ತಕ್ಕಡಿಯ ಲೀಲೆ,
ತಂಬಾಕಿನ ಹಲ್ಲು,
ಮುಂಬೆಳಕಿನ ಸೊಲ್ಲು,
ಸಲ್ಲಕ್ಷಣ
ಹಿರಿ ಪಟ್ಟಣ.

ಮುಚ್ಚಿದ ಹೊಂಡ
ಎಮ್ಮೆಗೂ ಬರಿ ದಂಡ !
ಕಂಡಕಂಡಲ್ಲಿ ಕಾಲಿಡಬೇಡ,
ಉಂಡಲ್ಲಿ ಉಗುಳಬೇಡ
ಸಡಗರದ ಪಟ್ಟಣ
ಕನ್ನಡ ನಾಡಿಗೆ ಸಮರ್ಪಣ.

ಇದು ಹಳೆಯ ಓಣಿ
ಕೂತಾಳೆ ನೂತನ ರಾಣಿ
ನಸುಗತ್ತಲಲ್ಲಿ ಬಂದ ರಾಜ
ಇಬ್ಬರಿಗೂ ಜೋಡಿ ಸಾಜ.
ಬೆರಳಿನ ಉಂಗುರ
ಸಂಸಾರ ಕ್ಷಣಭಂಗುರ
ಸೆಟ್ಟಿಯೇ ದುಷ್ಯಂತ !
ಶೃಂಗಾರ ಕೊಳ್ಳಬೇಕಂತ !
ಸಡಗರದ ನಗರ
ಎಲ್ಲವೂ ಹಗುರ !

ಹಿಂದಿನ ಹಳ್ಳಿ
ಮಲ್ಲಿಗೆಯ ಬಳ್ಳಿ ?
ಏ, ಹುಚ್ಚಿ, ಮಳ್ಳಿ,
ನಗರ ಹುಬ್ಬಳ್ಳಿ
ಗಮಗಮ ನೀರುಳ್ಳಿ.

❖❖

ಉತ್ತರ ಕನ್ನಡ ಜಿಲ್ಲೆ

ನಮ್ಮ ಕನ್ನಡ ಜಿಲ್ಲೆ
ಬಹಳ ಸುಂದರ, ನಲ್ಲೆ,
ಜೋಗ ಜಲಪಾತವೇ ಕುಣಿವ ಸುಗ್ಗಿ.
ಕುಣಿವ ನೀರಿನ ಮೋಡಿ
ಮುಖ್ಯಮಂತ್ರಿಯ ನೋಡಿ
ಸೌಂದರ್ಯ ಹೀರಿದನು ಹಿಗ್ಗಿ ಹಿಗ್ಗಿ.

ಕಾರವಾರಕೆ ಬಂದು
ಕಡಲ ತೀರಲಿ ನಿಂದು,
ಸುರಲೋಕವೇ ಭೂಮಿಗಿಳಿಯಿತೆಂದು
ಮುಖ್ಯಮಂತ್ರಿಯು ಸಾರಿ
ಹೊಡೆಸಿದನು ಜಯಭೇರಿ
ಸೌಂದರ್ಯವನೆ ತಿಂದು ಬಾಳಿರೆಂದು !

❖❖

ಕಾಗೆಗೆ

ಉದಯವಾಗಿದೆ ನೋಡು
ಚೆಲುವ ಕನ್ನಡ ನಾಡು;
ಹಾಡುತಿವೆ ಹಕ್ಕಿಗಳು ಬೀದಿಯೊಳಗೆ.
ಎಲ್ಲ ಹಕ್ಕಿಗಳಲ್ಲಿ
ಕಾಗೆಯೇ ಬಲು ಗಟ್ಟಿ,
ಅದರ ಚೀರಾಟವೇ ಎಲ್ಲ ಕಡೆಗೆ.

ಎಲೆ ಕಾಗೆ, ನೀ ನಮ್ಮ
ರಾಜಕಾರಣಿಯಾಗು.
ನಿನಗೆ ಬೇಕೇ ಸೋಗು ? ನವಿಲು ನೀನು.
ಹಾರಾಡು, ಚೀರಾಡು,
ದಿನಕೊಂದು ಪದ ಹಾಡು.
ಸಂಜೆಯಾಗುವ ವರೆಗೆ ನೀನೆ ಭಾನು.

ಹಣಕಿ ನೋಡುವ ಧೀರ,
ನಿನ್ನ ಕೊರಳಲಿ ಹಾರ,
ಹೂವು ಬಾಡಿದರೇನು ? ಹಣ್ಣು ಉಂಟು.
ಮಂತ್ರಿಪದವೇ ಹಣ್ಣು !
ಅದರ ಮೇಲೇ ಕಣ್ಣು !
ಇದಕಿಂತ ಮಿಗಿಲುಂಟೆ ಬೇರೆ ಗಂಟು ?

❖❖

ಎಮ್ಮೆ

ನಾವು ಸಾಕಿದ ಎಮ್ಮೆ
ಸಕಲ ಲೋಕದ ಹೆಮ್ಮೆ
ನೀರು ಕುಡಿದರು ಕೂಡ
ಹಾಲು ಕೊಡುವುದು ನೋಡ !

ನೀರಿಂದ ಹಾಲಾಗೆ,
ಕರಭಾರಗಳ ಬೇಗೆ
ದೂರಾಗುವುದು ಖಾತ್ರಿ
ಎಮ್ಮೆಯಾಗಲಿ ಮಂತ್ರಿ.

❖❖

ತಂದೆಯ ಬಯಕೆ

(ಹನ್ನೊಂದನೆಯ ಶತಮಾನದ ಚೀನೀ ಕವನ)

ಚುರುಕು ಬುದ್ಧಿಯ ಕೂಸು ಹುಟ್ಟಲೆಂಬುವ ಬಯಕೆ
ತಂದೆತಾಯ್ಗಳಿಗಿಹುದು, ಆದರೇನು ?
ತೀವ್ರ ಬುದ್ಧಿಯ ನಾನು ಇಡಿಯ ಆಯುಷ್ಯವನು
ಹಾಳುಗೆಡವಿದ ಮಾತು ಸುಳ್ಳು ಏನು ?

ಇನ್ನು ಹುಟ್ಟುವ ಮಗುವು ಮಂದಬುದ್ಧಿಯದಾಗಿ
ಕೀರ್ತಿ ಸುಖ ಶಾಂತಿಗಳ ಪಡೆಯುತಿರಲಿ,
ಮಂದಬುದ್ಧಿಯ ಮಗುವೆ ಮಂತ್ರಿಯಾಗುವನೆಂಬ
ಸತ್ಯವನು ಈ ಜಗವು ಮರೆಯದಿರಲಿ.

❖❖

ಮೈಸೂರು ಮಂತ್ರಿಮಂಡಳ

೧೯೫೬

ಮಳೆಗಾಲ, ಚಳಿಗಾಲ,
ಬೇಸಗೆಯು ಬರುವಂತೆ
ಮೂರು ತಿಂಗಳಿಗೊಮ್ಮೆ
ಹೊಸ ಮಂತ್ರಿಗಳ ಸಂತೆ.

ಋತುಗೊಂದು ಶೃಂಗಾರ
ಭೂದೇವಿಗೂ ಶೋಭೆ.
ಪಂಚವಾರ್ಷಿಕ ದೀರ್ಘ
ಮಂತ್ರಿಮಂಡಳ ಗೂಬೆ.

ಮೈಸೂರು ಮಂತ್ರಿಪದ
ನೀರ ಬೊಬ್ಬುಳಿಯಲ್ಲ.
ಅದಕಿರುವ ಭದ್ರತೆಯು
ಸೂರ್ಯದೇವನಿಗಿಲ್ಲ !

ರವಿ ಮುಳುಗಿದರು ನಿತ್ಯ
ಮಂತ್ರಿ ಮುಳುಗುವುದಿಲ್ಲ !
ಮೂರು ತಿಂಗಳ ವರೆಗೆ
ಯಾವುದೂ ಭಯವಿಲ್ಲ.

❖❖

ನಮ್ಮದೇ ಸರಕಾರ

ನಮ್ಮದೇ ಸರಕಾರ,
ಇನ್ನೇಕೆ ದರಕಾರ ?
ರವಿ ಮೂಡದಿದ್ದರೂ ಚಿಂತೆಯಿಲ್ಲಾ !
ಹುಣ್ಣಿಮೆಯ ಚಂದಿರನು
ಬೆಳಗದಿದ್ದರು ಏನು ?
ಕೋಟಿ ಲಾಂಧ್ರಗಳುಂಟು, ತಿಳಿಯಿತಲ್ಲಾ ?

ಜನರದೇ ಸರಕಾರ,
ಮಂತ್ರಿಗೇ ಅಧಿಕಾರ,
ಮಳೆಯು ಬೀಳುವುದಿಲ್ಲ ಅಂದರೇನು ?
ಮೇಘರಾಜನ ಮುಕುಟ
ಉರುಳಿ ಬೀಳುವುದಕಟ !
ರಾಜಪ್ರಮುಖರ ಕಥೆಯ ಮರೆತೆಯೇನು ?

❖❖

ಮಂತ್ರಿಯ ನಿಧನ

ಮುಖ್ಯಮಂತ್ರಿಗಳಿಂದು ನಿಧನ ಹೊಂದಿದರಂತೆ !
ಅಗಸಕೆ ನಗುವಿಲ್ಲ; ಬಿಸಿಲ ಕಾಣೆ.
ಸೂರ್ಯನಾರಾಯಣನು ಮುಗಿಲುಬಟ್ಟೆಗಳಿಂದ
ಕಣ್ಣೊರಸುತಲಿಹನು ! ದೇವರಾಣೆ.

ಮೇಘರಾಜನಿಗಂತು ಹೇಳಲಾರದ ದುಃಖ;
ಕಣ್ಣೀರ ಹೊಳೆಯಾಯ್ತು ಅತ್ತು ಅತ್ತು
ಇಂದು ರಾತ್ರೆಗೆ ಸೇರಲಿರುವ ತಾರಾಗಣದ
ಅಧಿವೇಶನವು ಕೂಡ ಮುಂದೆ ಬಿತ್ತು

ಮಂತ್ರಿವರ್ಯನ ನಡತೆ ಇಂದ್ರದೇವನ ಹಾಗೆ;
ಸರಿಯಾಗಿ ಸಾಗಿತ್ತು ಕಾರಭಾರಾ.
ಪ್ರತಿವಾರ ಸಂಚಾರ, ಸತ್ಕಾರ, ಪರಿವಾರ,
ಊಟ–ಉಪಚಾರವೇ, ಪುಷ್ಪಹಾರಾ.

ಕಂಬನಿಯ ಬಿಡಬೇಡ; ಹೋದವರು ಬರಲಿಹರೆ ?
ಈ ರೀತಿ ಅಳಬೇಡ, ಹುಚ್ಚಿ ನೀನು.
ಇಂದು ಸಂಜೆಗೆ ಊರ ಜನರೆಲ್ಲರೂ ಸೇರಿ
ಸಭೆಯೊಳಗೆ ಅಳಬೇಕು, ತಿಳಿಯಿತೇನು ?

❖❖

ವಿಧಾನಸೌಧ

ಇಂದ್ರಭವನವೇ ಭೂಮಿಗಿಳಿಯಿತೇ !
ಬೆಂಗಳೂರಿನಲ್ಲಿ ?
ಎಲ್ಲ ಜಿಲ್ಲೆಗಳ ದೇವರೆಲ್ಲರೂ
ಇಂದ್ರಭವನದಲ್ಲಿ.

ದೇವಕಾರ್ಯಗಳು ನಡೆಯುವುದಿಲ್ಲೇ;
ಬೇರೆ ಕಡೆಗೆ ಅಲ್ಲಾ.
ತಿರುಪತಿ ವೆಂಕಟರಮಣನು ಕೂಡಾ
ಬಂದು ಬಿಟ್ಟನಲ್ಲಾ !

ಪಾಪಕರ್ಮವೂ ಪುಣ್ಯವಾಗುವುದು
ದೇವರ ಗುಡಿಯಲ್ಲಿ
ಲೋಪವೆಲ್ಲವೂ ಗಣ್ಯವಾಗುವುದು
ಸೌಧದ ಅಡಿಯಲ್ಲಿ.

ಸೌಧದಿಂದಲೇ ಸ್ವರ್ಗ ಸಿಕ್ಕಿದರೆ
ಬೇರೆ ಭಾಗ್ಯವೇಕೆ ?
ಸೌದೆಯಿಂದಲೇ ಅನ್ನ ಬೇಯಿಸಿರೆ
ಅಕ್ಕಿ ಬೇರೆ ಬೇಕೆ ?

❖❖

ಯೋಜನೆ

ಸರಕಾರಿ ಯೋಜನೆಯ ಭೋಜನವು ಬೇಕೇನು ?
ಯೋಜನೆಯ ಉದ್ದೇಶ ಹಬ್ಬದೂಟ
ಪ್ರತಿನಿತ್ಯ ಸಾರನ್ನ ಮೊದಲು ಸಿಕ್ಕರೆ ಸಾಕು
ಆ ಮೇಲೆ ಪಾಯಸದ ಸವಿಯ ನೋಟ.

ಅಂಕೆಸಂಖ್ಯೆಯ ಗಣಿತ; ಮತ್ತೆ ಡೊಂಬರ ಕುಣಿತ.
ತಿರುಗಿ ಬಂದಿದೆಯಂತೆ ಬೊಂಬೆಯಾಟ,
ಬೊಂಬೆ–ಕುಣಿತವ ಕಂಡು ಆನಂದವನೆ ಉಂಡು,
ಸುಖವಾಗಿ ಮಲಗಿಬಿಡಿ, ಏಕೆ ಕಾಟ ?

ಯೋಜನೆಯ ಸಾಗರವು ತುಂಬಿ ತುಳುಕಾಡಿದರು
ಕುಡಿಯಲಿಕೆ ನೀರಿಲ್ಲ ಅನ್ನಬೇಡ
ದೇವನಿರ್ಮಿತ ಕಡಲ ನೀರು ಉಪ್ಪಾಗಿರಲು,
ಮನುಜನಿರ್ಮಿತ ಕೆರೆಯ ಹಳಿಯಬೇಡ.

ಹವಣಿಕೆಯ ಜಾಲಿಗಿಡ ಚಿಗುರೊಡೆದು ನಿಂದಿರಲು,
ಮೇಯಹೋಯಿತು ಪಾಪ ಕುರಿಯ ಜಾತಿ.
ಎಲೆಗೊಂದು ಮುಳ್ಳಿರಲು ಉಪವಾಸ ಮರಳಿದವು!
ನೋಡಿ ನಕ್ಕಿತು ಮರದ ಮೇಲೆ ಕೋತಿ.

❖❖

ಮದ್ದು

ಲೋಕಸಭೆಯೊಳಗಿಂದು ಪಾಸಾದ ಗೊತ್ತುವಳಿ
ಕ್ರಾಂತಿಕಾರಕವೆಂದು ಹೇಳಬಹುದು
ವಾಂತಿಯಾದರೆ ಇನ್ನು ಹೆದರಬೇಕಾಗಿಲ್ಲ
ನೆತ್ತಿಗೇರಿದ ಪಿತ್ತ ತಾಳಬಹುದು.

ಘೋಷಣೆಯ ಮಾಡಿದರೆ ದುಃಖವನು ತೋಡಿದರೆ
ಜನಕೆ ಭ್ರಾಂತಿಯ ರೋಗ ಹಿಡಿಯಿತೆಂದು
ಸಿಡಿಮದ್ದು ಹಾಕಿಯೇ ಗುಣಪಡಿಸಬೇಕಾಗಿ
ಲೋಕಸಭೆ ನಿರ್ಧಾರ ಮಾಡಿತಿಂದು.

❖❖

ಉಪಮಂತ್ರಿಯ ಉಪದೇಶ

ಅಕ್ಕಿಯಾಗಿದೆ ತುಟ್ಟಿ, ಕೈಯಲ್ಲಿ ಕಾಸಿಲ್ಲ,
ಹೀಗೆಂದು ಕೂಗುತ್ತ ಬೀದಿ ತಿರುಗಿದರೆಲ್ಲ.
ಬಾವುಟವ ಮೇಲೆತ್ತಿ ಬಂಗಲೆಯ ಮುಟ್ಟಿದರು,
ಜಯಘೋಷ ಮಾಡುತ್ತ ಬಾಗಿಲನು ತಟ್ಟಿದರು.

ಒಳಗಿದ್ದ ಉಪಮಂತ್ರಿ ಕೈಮುಗಿದು ತಲೆಬಾಗಿ
ಉಪದೇಶ ಮಾಡಿದನು ಕೈಬೀಸಿ ಜೋರಾಗಿ :
ನಾಡಿನಲಿ ಸಾಕಷ್ಟು ಭತ್ತ ಬೆಳೆಯುವುದಿಲ್ಲ;
ಹಣ್ಣು ಹಂಪಲ ತಿಂದು ಏಕೆ ಬಾಳುವುದಿಲ್ಲ ?

❖❖

ಪ್ರಶ್ನೋತ್ತರ

ಘಟ್ಟದ ಮೇಲಿನ ಬಸಲಿಂಗಪ್ಪನ
ಪ್ರಶ್ನೆಯ ಕೇಳಿದಿರಾ ?
ಕಡಲೊಳು ಬೆಳೆಯುವ ಬದನೆಗೆ ಬೀಜಗ
ಳೆನಿತಿವೆ ? ಹೇಳುವಿರಾ ?

ಜೋಳದ ಹೊಲದೊಳಗೋಡುವ ಮೀನಿಗೆ
ಹಲ್ಲುಗಳಿದ್ದಷ್ಟೇ
ಕಡಲಿನ ಬದನೆಗೆ ಬೀಜಗಳಿರುವುವು !
ಉತ್ತರ ಸರಿಯಷ್ಟೇ ?

❖❖

ಮುದಿ ಹಲಸಿನ ಮರಕ್ಕೆ

ಇಳಿ ಪ್ರಾಯದಲ್ಲಿಯೂ ಯೌವನದ ಹುಚ್ಚು !
ಮುಪ್ಪು ಹೆಚ್ಚಾದಂತೆ ಮಕ್ಕಳೂ ಹೆಚ್ಚು !

ಒಂದೊಂದು ಕಂಕುಳೊಳು ಕೂಸು ಹತ್ತೆಂಟು
ಮೈತುಂಬ ಕೂತಿಹವು ಭರ್ತಿ ನೂರೆಂಟು

ಸಂಸಾರ ಭಾರಕ್ಕೆ ಬೇಸತ್ತ ಹೇಡಿ
ಧೈರ್ಯ ಬಿಡಲಿಕ್ಕಿಲ್ಲ ನಿನ್ನನ್ನು ನೋಡಿ

ಕಾಯಕಲ್ಪವ ನಿನಗೆ ನೀಡಿದವರಾರು ?
ಪ್ರಕಟವಾಗಲಿ ನಿನ್ನ ಇಂಗಿತದ ಜೋರು.

ಯುವಕನಿಗೆ ಸಂತತಿ ನಿಯಂತ್ರಣದ ಚಿಂತೆ.
ಮುದುಕನಿಗೆ ನಿನ್ನಲ್ಲೆ ವಿಶ್ವಾಸವಂತೆ !

❖❖

ತರಕಾರಿ

ಹತ್ತು ಊರಿನ ಕೇರಿ
ಸುತ್ತು ಬಂದೆನು, ನಾರಿ.
ಆದರೂ ಸಿಗಲಿಲ್ಲ
ಯಾವುದೂ ತರಕಾರಿ !

ಹೆಂಗಸರ ಬೆರಳಾಯ್ತು
ಹಸರು ಬೆಂಡೇಕಾಯಿ !
ಅದನು ತಿನ್ನುವುದೆಂತು ?
ಒಪ್ಪಲಾರದು ಬಾಯಿ !

ಡೋಲಿನಾ ಕೋಲಾಯ್ತು
ಮರದ ನುಗ್ಗೇಕಾಯಿ !
ಅದನು ತಿಂದರೆ ನಮ್ಮ
ಹಲ್ಲು ಮುರಿಯದೆ, ತಾಯಿ ?

ಹೊಸ ಕವನ ಓದೋದಿ
ಹೊಸ ಸೃಷ್ಟಿ ತಲೆಯಲ್ಲಿ,
ತರಕಾರಿಯೂ ಕೂಡ
ಸೇರಿ ಬಿಟ್ಟಿದೆ ಅಲ್ಲಿ !

❖❖

ಕಿರು ನುಡಿಗಳು

ಶ್ರೇಷ್ಠವಾದುದು

ಸ್ವರ್ಗ ಭೂ ಕೈಲಾಸಗಿಂತಲೂ ವಿಸ್ತಾರ
ಶ್ರೇಷ್ಠವೂ ಆಗಿರುವುದೇನು ? ಹೇಳು.
ಬುದ್ಧದೇವನ ಹೃದಯ, ಯೇಸುಕ್ರಿಸ್ತನ ಉದಯ
ದೇವಲೋಕಕ್ಕಿಂತ ಮೇಲು ಮೇಲು.

❖❖

ಬಾಳ ಹಣತೆ

ಗಗನವೆಂಬುದು ಸುಳ್ಳು;
ಸ್ವರ್ಗವೆಂಬುದು ಜಳ್ಳು;
ನರಕವೆಂಬುದು ಮುಳ್ಳು, ಹಾಳು ಹರಟೆ.
ಭೂಮಿಯೇ ಮಾನವನ ಬಾಳ ಹಣತೆ.

❖❖

ಮಾನವನ ಬೆರಿಕೆತನ

ಆನೆಯ ಗಾಂಭೀರ್ಯ,
ಶ್ವಾನದ ಸದ್ಭಕ್ತಿ
ಮೃಗರಾಜ ಕೇಸರಿಯ ಮೇಘನಾದ
ಒಂದೊಂದು ಸದ್ಗುಣಕೆ
ಒಂದೊಂದು ಜನಿಸಿರಲು
ಕೊನೆಗೆ ಹುಟ್ಟಿದ ಮನುಜ ಬೆರಿಕೆಯಾದ.

❖❖

ನನ್ನ ಕಾವ್ಯ

(ಆಂಗ್ಲ ಸಾಹಿತ್ಯದಿಂದ)

ನಾನು ರಚಿಸಿದ ಕಾವ್ಯ ರಸಿಕರಿಗೆ ಸೇರುವುದು;
ರುಚಿಸದಿದ್ದರೆ ಏನು ನಮ್ಮ ಕವಿಗಳಿಗೆ ?
ಅತಿಥಿಗಳು ಪಕ್ವಾನ್ನ ತಿಂದು ಮೆಚ್ಚಿದ ಮೇಲೆ
ರುಚಿಸದಿದ್ದರೆ ಏನು ಅಡಿಗೆಭಟ್ಟರಿಗೆ ?

❖❖

ದೊಡ್ಡವರು

ಗಗನ ಹಿರಿದಾದರೂ ಮುಟ್ಟಲಿಕೆ ದೂರ.
ಕಡಲರಾಯನ ಹೃದಯ ಸವಿಯಲ್ಲ, ಕ್ಷಾರ
ದೊಡ್ಡವರ ಸುದ್ದಿಯೇ ಈ ರೀತಿಯಾಗೆ
ಬಡವರನು ನಿಂದಿಸುವ ಜಾಣತನವೇಕೆ ?

❖❖

ಉತ್ಕೃಷ್ಟ

ಬಿದ್ದ ಹಣ್ಣೇ ಹೆಚ್ಚು ಸವಿಯಾದರೂನು
ಕದ್ದು ಕೆಡವಿದ ಕಾಯಿ ತಿನ್ನಲಿಕೆ ಜೇನು !
ನಾನಾಗಿ ಬೇಡಿದರೆ ಸಿಗುವುದೇ ಕಷ್ಟ;
'ಬೇಡ, ಬಿಡು' ಅಂದರೇ ಮುತ್ತು ಉತ್ಕೃಷ್ಟ.

❖❖

ಹಾರಾಟ

ನಭಕೆ ಹಾರುವ ಮುನ್ನ
ಹಸಿವು ತಣಿಯದೆ ನಿನ್ನ !
ರವಿಯ ನುಂಗುವೆಯೇನು, ಹೇಳು, ಹೇಳು ?
ನೋಡು ಭೂಮಿಯ ಮೇಲೆ
ಹಸಿವೆಯೆಂಬುವ ಜ್ವಾಲೆ
ಜಠರಾಗ್ನಿಯನೆ ಮೊದಲು ನುಂಗಿ ಬಾಳು.

❖❖

ನಮ್ಮ ಜಗತ್ತು

ಬಣ್ಣ ಬಣ್ಣದ ಕೋಳಿ ಆದಿಯಲಿ ಮೊಟ್ಟೆ
ಬಿಳಿ ಹತ್ತಿಯಿಂದಲೇ ಬಣ್ಣಗಳ ಬಟ್ಟೆ
ನಮ್ಮ ಜಗವೂ ಕೂಡ ಈ ರೀತಿಯಣ್ಣಾ,
ಬಿಳಿ ಹಿಮವೆ ಮೊದಲಿತ್ತು; ಈಗೆ ಬರಿ ಬಣ್ಣ !

❖❖

ಹಲ್ಲು ಮತ್ತು ನಾಲಗೆ

(ಪ್ರಾಚೀನ ಚೀನೀ ಸಾಹಿತ್ಯದಿಂದ)

ವೃದ್ಧಾಪ್ಯಕಾಲದಲ್ಲಿ ಹಲ್ಲುಗಳು ಬಿದ್ದರೂ
ನಾಲಿಗೆಯು ನಲಿದಾಡುತಿಹುದು, ನೋಡು.
ಗಟ್ಟಿಗಿಂತಲೂ ಮಿದುವೆ ಹೆಚ್ಚು ದಿನ ಬಾಳುವುದು,
ಗಟ್ಟಿಯೆನ್ನುವ ಹೆಮ್ಮೆ ಕುಲಕೆ ಕೇಡು.

❖❖

ರೈತನ ಅನುಭವ

ದಸರೆ ದರ್ಬಾರಕ್ಕೆ ಪ್ರತಿ ವರುಷ ಹೋಗಿ
ಮುದುಕಾದೆ ನಾನೀಗ ಬೆನ್ನೆಲುಬು ಬಾಗಿ,
ದರ್ಬಾರು ಸಮಯಕ್ಕೆ ಜರಿಯ ಸುತ್ತಿದರೂ
ಕೊನೆಗೆ ಉಳಿದದ್ದೇನು ? ಹರಕು ಕಂಬಳಿಯು.

❖❖

ರಾಜಕೀಯ ಚಂದ್ರ

ತನ್ನ ಮೈಯೊಳಗಿದ್ದರೂ ಕಪ್ಪು ಕರೆಯು
ಇಡಿಯ ಆಕಾಶವನು ಬೆಳಗುವನು ಪೆರೆಯು,
ನಮ್ಮ ಮಂತ್ರಿಯು ಕೂಡ ಚಂದ್ರಮನ ಹಾಗೆ,
ಇಡಿಯ ರಾಜ್ಯವ ಬೆಳಗುತಿಹನು ಆಗಾಗ್ಗೆ.

❖❖

ಜಾಹೀರಾತು

ಸತ್ತರೂ ಬದುಕಿರಲು ಮಾರ್ಗವೊಂದುಂಟು.
ಅದನು ಸಾಧಿಸಲಿಕ್ಕೆ ಬೇಕಿಲ್ಲ ಗಂಟು.
ಕಾಲಿದಾಸನ ಹಾಗೆ ರಚಿಸುವುದು ಕವನ
ಕವನ–ಸ್ಫೂರ್ತಿಗೆ ಇಹುದು ಈ ಕಾಫಿ ಭವನ.

❖❖

ರಾಜಕೀಯ

ಉದ್ದುದ್ದ ಸವಿ ನುಡಿಯ ಮಂತ್ರಿಗಳಿಗಿಂತ
ಹುಬ್ಬು ಹಾರಿಸುವವಳು ಲೇಸು, ಹನುಮಂತ
ಓಟು ಬೇಡುವ ನಮ್ಮ ಹುರಿಯಾಳುಗಿಂತ
ಮಾಟಗಾರ್ತಿಯು ಕೂಡ ಬಹಳ ಅಪ್ಪಂತ.

❖❖

ಸೂಳೆಯ ತತ್ವಜ್ಞಾನ

ತಾರುಣ್ಯದಲಿ ಮುತ್ತು ಕೊಟ್ಟರೂ ನೀನು
ಮುಪ್ಪಿನಲಿ ತಬ್ಬುವವ ಬೇಕು ನನಗೆ
ಹಗಲ ಹೊತ್ತಿಗೆ ಜಗವ ಬೆಳಗಿದರು ಭಾನು
ಕೊನೆಗೆ ದೀಪವೇ ಬೇಕು ಕತ್ತಲೊಳಗೆ

❖❖

ಮರಕಾಲು

ಎದ್ದೇಳು, ಎದ್ದೇಳು, ಕಾಳಗದ ವೀರಾ,
ಬೆಳ್ಳಿ–ಪದಕವು ನಿನಗೆ, ಕೊರಳಿನಲಿ ಹಾರ
ಕೆಚ್ಚೆದೆಯ ಬಂಟಾ,
ನೀನೆಲ್ಲೊ ಕುಂಟಾ !
ಜಯ ಬಂತು ನಮಗೆ,
ಮರಕಾಲು ನಿನಗೆ.

❖❖

ವ್ಯಾಖ್ಯೆ

ಗಂಭೀರ ಮುದ್ರೆಯಲಿ ಶಿಕ್ಷಕನು ಕೇಳಿದನು
'ಯುದ್ಧ' ಶಬ್ದದ ವ್ಯಾಖ್ಯೆ ಏನು ಎಂದು
ಹುಡುಗನೊಬ್ಬನು ಎದ್ದು ಕೂಡಲೇ ಹೇಳಿದನು
'ಸರಕಾರಿ ಕೊಲೆ' ಎಂದರೇ ಯುದ್ಧವೆಂದು.

❖❖

ಮಂತ್ರಿಯ ವಚನ

ಮಂತ್ರಿ ನೀಡುವ ವಚನ
ನಕ್ಷತ್ರಗಳ ಗಗನ;
ಬರಿಯ ದಿಟ್ಟಿಸಿ ನೋಡಿ ನಲಿವ ನೋಟ
ಚಂದ್ರನೆಂದರೆ ಬೆಳಕು,
ತಾರೆಯೆಂದರೆ ಥಳಕು,
ರಾಜಕಾರಣವೊಂದು ಥಳಕಿನಾಟ.

❖❖

ಇಂದ್ರಪದ

ಪರಲೋಕದಲಿ ಸಿಗುವ ಇಂದ್ರಪದ ನನಗೇಕೆ
ಇಲ್ಲಿಯೇ ಮಂತ್ರಿಪದ ದೊರೆತ ಮೇಲೆ ?
ಉಪಮಂತ್ರಿಯಾದವನು ಇಂದ್ರನಾಗುವುದೊಳಿತು;
ಈಗಲ್ಲ, ತಿಳಿಯತೇ ? ಸತ್ತ ಮೇಲೆ.

❖❖

ಬ್ರಹ್ಮಚಾರಿ

ಪಾರಿವಾಳದ ಜೋಡಿ
ಬ್ರಹ್ಮಚಾರಿಯು ನೋಡಿ
ಹಿಡಿಯ ಹೋದನು ಹೊಟ್ಟೆಕಿಚ್ಚಿನಿಂದ
ಪಾರಿವಾಳದ ಬಣ್ಣ
ಮೈಗೆ ಅಂಟಿತು ಅಣ್ಣ,
ಬ್ರಹ್ಮಚಾರಿಗೆ ಬೂದಿ ಅಂದಿನಿಂದ.

❖❖

ಹೊಟ್ಟೆಕಿಚ್ಚು

ಹೊಟ್ಟೆಕಿಚ್ಚಿನ ನಾಯಿ
ಬೊಗಳಿದರೆ ಬರಿ ಬಾಯಿ
ಹುಣ್ಣಿಮೆಯ ಚಂದಿರನಿಗಿಲ್ಲ ಕೇಡು.
ಎಷ್ಟು ಬೊಗಳಿದರೇನು ?
ಕಂದುವನೆ ಚಂದಿರನು ?
ಸಾಕಿದವನಿಗೆ ಮಾತ್ರ ನಿದ್ದೆಗೇಡು.

❖❖

ಕರ್ನಾಟಕ ರಾಜ್ಯದ ನಕಾಶೆ

೧-೧೧-೧೯೫೬

ನನಗೆ ಒಂದೇ ಆಶೆ;
ಇರಲಿ ಶುಭ್ರ ನಕಾಶೆ
ಹತ್ತು ಬಣ್ಣಗಳೇಕೆ ?
ಕನ್ನಡಿಗನೇ, ಜೋಕೆ !

❖❖

ಕಾರ್ಯದರ್ಶಿಗೆ ಮಂತ್ರಿಯ ಸೂಚನೆ

ಯಾವುದೇ ಕಾರಣಕೆ ಯಾವ ಜಾತಿಯ ಹೆಸರು
ಸರಕಾರಿ ದಾಖಲೆಯ ಮೇಲೆ ಬೇಡ.
ಯಾವಾತ ಯಾವ ಜಾತಿಗೆ ಸೇರಿದವನೆಂಬ
ಸಂಗತಿಯ ಮಾತ್ರ ನೀ ಮರೆಯಬೇಡ.

❖❖

ಹೊಸ ಕಾಯಿದೆ

ಅರವಿಂದ ದಿನದಿನವು ಮೂಡದೇನೊ ?
ಮೂಡಿದರು ಮಕರಂದ ಕೂಡದೇನೊ ?
ಅರವಿಂದ ಮೂಡಿದರು
ಮಕರಂದ ಕೂಡಿದರು
ಜೇನ್ನೊಣವು ಕೆರೆಯ ಬಳಿ ನುಗ್ಗದಂತೆ
ಹೊಸ ಕಾಯಿದೆಯ ಮಾಡಿ ಬಿಟ್ಟರಂತೆ !

❖❖

ಟೀಕೆಗೆ ಉತ್ತರ

ಸೂರ್ಯಚಂದ್ರರಿಗಿರಲು ಗ್ರಹಣದ ತಗಾದೆ
ನಮ್ಮ ಸರಕಾರಕ್ಕೆ ತಪ್ಪುವುದೇ ಬಾಧೆ ?
ಸುಮ್ಮನೇ ಟೀಕಿಸುವ ಪ್ರತಿಪಕ್ಷದವರು
ರಾಹುಕೇತುಗಳಾಗಿ ಜನ್ಮವೆತ್ತಿಹರು.

❖❖

ಕವಿಯ ಸ್ಥಾನ

ಕಾವ್ಯ ಕೊಳ್ಳುವರಾರು ? ಕವಿಗೆ ಬರಿ ಹುಚ್ಚು.
ಬದನೇಕಾಯಿಗೆ ಕೂಡ ಮಾರಾಟ ಹೆಚ್ಚು
ಸರಕಾರ ಕೊಟ್ಟರೂ ಪ್ರಥಮ ಬಹುಮಾನ
ಕವಿಗೆ ಎಂದೂ ಸಿಗದು ಸಂತೆಯಲಿ ಸ್ಥಾನ.

❖❖

ಅವತಾರಗಳು

ಪ್ರಾಯದವನಿದ್ದಾಗ ಗಗನಕ್ಕೆ ಹಾರಿದೆನು
ವೃದ್ಧಾಪ್ಯ ಕಾಲದಲಿ ಭೂಮಿಗೇ ಜಾರಿದೆನು
ಜೀವಂತವಿದ್ದಾಗ ಕೈಲಾಸ, ವೈಕುಂಠ
ಮರಣ ಹೊಂದಿದ ಮೇಲೆ ಯಾವುದಿಲ್ಲವು ಕಾಟ.

❖❖

ದೇವರು

ಹರಿಯಿನ್ನು ಧರೆಯನ್ನು ಬಿಟ್ಟು ಹೋಗಿಲ್ಲ !
ಅವನ ನೋಡುವ ಶಕ್ತಿ ನಮ್ಮೊಳಗೆ ಇಲ್ಲ.

❖❖

ಕವಿ ಮತ್ತು ವಿಜ್ಞಾನಿ

ಕವಿಯ ಕಣ್ಣಿಗೆ ಚಂದ್ರ ದೇವಲೋಕದ ಚಂಡು
ವಿಜ್ಞಾನಿಗಳಿಗೆಲ್ಲ ಬರಿಯ ಕಲ್ಲಿನ ಗುಂಡು.

❖❖

ಬೊಗಳಾಟ

ಜಗದೊಳಗೆ ಮಾನವನ ಬೊಗಳಾಟ ಅತಿಯಾಗಿ
ಓಡಿ ಹೋಯಿತು ನಾಯಿ ಕೃತಕ ಚಂದ್ರನ ಜೊತೆಗೆ

❖❖

ಪ್ರಗತಿ

ಕುದುರೆಯಾಯಿತು ಕತ್ತೆ;
ಪ್ರಗತಿ ಎಂಬರು ಮತ್ತೆ !

❖❖

ಚುನಾವಣೆ

ಕುಸ್ತಿಯಿಂದೇಳುವುದು ಬರಿಯ ಒಣ ಧೂಳು.
ನೇಗಿಲಿನ ಮೊನೆಯಿಂದಲೇ ನಮಗೆ ಕಾಳು

❖❖

ಪರಿಷತ್ತುಗಳು

ಪರಿಷತ್ತುಗಳ ಪೀಕು ಹದಿನಾರು ಆಣೆ;
ಹೊಲದೊಳಗೆ ಕದಿರುಗಳ ಮಾತ್ರ ನಾ ಕಾಣೆ

❖❖

ಸರಕಾರದ ಸಮರ್ಥನೆ

ಕಡಲ ತೆರೆಗಳು ಸತತ ಎಷ್ಟು ಒದರಿದರೇನು ?
ತನ್ನ ಸ್ಥಳವನು ಬಿಟ್ಟು ಕೆಳಗಿಳಿಯುವುದೇ ಬಾನು ?

❖❖

ಅಧಿಕಾರ ಲಾಲಸೆ

ಕುಡಿದಷ್ಟು ನೀರಡಿಕೆ ಕಡಿಮೆಯಾಗದು ತುಸುವು
ತಿಂದು ತೇಗಿದ ಮೇಲೆ ತೀವ್ರವಾಯಿತು ಹಸುವು.

❖❖

ರಾಜಕಾರಣಿ

ಗುಲ್ಲು ಗದ್ದಲದೊಳಗೆ ರಾಜಕಾರಣಿ ಶ್ರೇಷ್ಠ;
ಗುಲ್ಲು ಅಡಗಿದ ಕ್ಷಣಕೆ ಆತನಾದನು ಭ್ರಷ್ಟ.

❖❖

ಸುಲಭ ಕಾರ್ಯ

ಭೂಮಿಯಲಿ ಕೋಟೆಯನು ಕಟ್ಟುವುದಕಿಂತ
ಗಾಳಿಯಲಿ ಕಟ್ಟುವುದೇ ಸುಲಭ, ಹನುಮಂತ

❖❖

ಪರಿಮಳ

ಉತ್ಕೃಷ್ಟ ಅತ್ತರದ ಬಾಟ್ಲಿ ಬಲು ಸಣ್ಣ
ಪರಿಮಳದ ಹೃದಯಕ್ಕೆ ದಪ್ಪವೇಕಣ್ಣ ?

❖❖

ನಗು

ಮುದುಕನಿಗೆ ನಗುವಿಲ್ಲವೆಂದು ಹೇಳುವ ಜಾಣ
ಹತ್ತಿ ಬೆಳೆಯುವ ಹೊಲವನೆಂದೆಂದಿಗೂ ಕಾಣ.

❖❖

ಕೃತಿ – ಕವನಗಳು

ಅರಸು ಕೊಟ್ಟ ತೀರ್ಪು

(ಉತ್ತರ ಕನ್ನಡದ 'ಹಾಲಕ್ಕಿ' ಜನರ ಗುಮಟೆಯ ಹಾಡು)

೧

ಪೂರ್ವ ಕಾಲದಲಿ ಭರತ ಭೂಮಿಯಲಿ
ಕಡಲ ಸೀಮೆಯೊಳಗೆ
ಭಾಗ್ಯಶಾಲಿಯವ ರಾಜ್ಯವಾಳಿದನು
ಅರಸು ಕ್ಷೇಮದೊಳಗೆ.

ನೃಪನ ಕೀರಿಟದ ಮಧ್ಯ ಭಾಗದೊಳು
ರತ್ನವೊಂದು ಇತ್ತು,
ನ್ಯಾಯನೀತಿಗಳ ಧರ್ಮ ಚಿನ್ಹವದು,
ಕುಂದದಂಥ ಮುತ್ತು.

"ಹೀನ ದೀನ ಜನ ತಮ್ಮ ಕಷ್ಟ ದಿನ
ಕಳೆವ ರೀತಿ ಹೇಗೆ ?
ಸತ್ಯ ಮಾರ್ಗವನು ಕಂಡು ಹಿಡಿವುದೇ
ರಾಜಧರ್ಮ ದೊರೆಗೆ."

ಹೀಗೆ ಹೇಳಿ ನೃಪ ಛದ್ಮವೇಷದಲಿ
ಹಳ್ಳಿ ಪಳ್ಳಿ ಸುತ್ತಿ
ಹಳ್ಳ ದಾಟಿದನು ಕೊಳ್ಳ ಸೇರಿದನು
ಗುಡ್ಡಗಳನು ಹತ್ತಿ.

ಸಕಲ ರಾಜ್ಯದಲಿ ಅರಸು ನೋಡಿದನು
ಹೀನ ದೀನರನ್ನು,
ಸತತ ದುಡಿದರೂ ಹಸಿವು ಹಿಂಗದೇ
ಇದ್ದ ಜೀವಿಗಳನು.

ಮಳೆಯು ಒಲಿದರೂ ನೆಲವು ನಲಿದರೂ
ಹೊಟ್ಟೆಗಿಲ್ಲವೇಕೆ ?
ಪ್ರಶ್ನೆ ಹಾಕಿದನು ರಾಜಶೇಖರನು
ದುಡಿವ ರೈತನೆಡೆಗೆ.

ರೈತ ಹೇಳಿದನು ರಾಜ ಕೇಳಿದನು
ಕಣ್ಣ ನೀರ ತಂದು :
ಎಷ್ಟು ದುಡಿದರೂ ಕಷ್ಟಬಟ್ಟರೂ
ಹೊಟ್ಟೆಗಿಲ್ಲವೆಂದು.

"ಆರು ಮೂಡೆಯಲಿ ಮೂರು ಮೂಡೆಯೇ
ಗೇಣಿಗಾಗಿ ಹೋಯ್ತು,
ಉಳಿದ ಭತ್ತದಲಿ ಊರ ಸೆಟ್ಟಿಗೂ
ಭೂತದೆವ್ವಗಾಯ್ತು.

ಗುಡಿಯ ಭಟ್ಟರೂ ಒಡೆಯ, ಸೆಟ್ಟರೂ
ಅಮಲದಾರರೆಲ್ಲಾ
ಭೂತದೆವ್ವಗಳು, ಮಾಸ್ತಿ ಜಟಕಗಳು,
ಒಂದು ಜಾತಿಯೆಲ್ಲಾ !

ಇದ್ದ ಭೂತಗಳು, ಎದ್ದ ಪ್ರೇತಗಳು !
ಊರ ತುಂಬ ಲೂಟಿ
ನಾಡ ಬೆಳೆಯನೇ ನುಂಗಿ ಬಿಡಲು ಉಪ
ವಾಸ ಜೀವಕೋಟಿ.

ಉಳುವ ರೈತನಿಗೆ ಒಂದು ಕೊಳಗ ಸಹ
ಕೊನೆಗೆ ಉಳಿಯಲಿಲ್ಲಾ !
ತಾಯಿ, ಹೆಂಡತಿಗೆ ಮತ್ತೆ ಮಕ್ಕಳಿಗೆ
ಹೊಟ್ಟೆ ತುಂಬಲಿಲ್ಲಾ."

"ಏನು ಕಷ್ಟವಿದು ? ಏನು ಭ್ರಷ್ಟವಿದು ?"
ಅಂದ ರಾಜಯೋಗಿ.
"ಭೂಮಿಪುತ್ರರಿಗೆ ಶಾಂತಿಯಿಲ್ಲವೇ ?
ಕರಳು ಜ್ವಾಲೆಯಾಗಿ ?"

೨

ರಾಜಧಾನಿಯಲಿ ಅರಸು ಕರೆಸಿದನು
ರಾಜ್ಯ ಸಭೆಯನೊಂದು
ಪ್ರಜೆಗಳೆಲ್ಲರನು ಹೇಳಿ ಕಳುಹಿದನು
ಹಾಜರಾಗಿರೆಂದು.

ಹಿರಿಯ ಒಡೆಯರೂ ಕಿರಿಯ ಸೆಟ್ಟರೂ
ಅಮಲದಾರರೆಲ್ಲಾ
ಜರಿಯ ಸುತ್ತಿದರು, ಕುದುರೆ ಹತ್ತಿದರು.
ಸಭೆಗೆ ಹೋದರೆಲ್ಲಾ.

ಕರೆದು ಮುಂದೆ ನರಪಾಲ ಹೇಳಿದನು :
"ನನ್ನ ಮಾತ ಕೇಳಿ,
ನೆರೆದ ಬುದ್ಧರೇ, ಜ್ಞಾನವೃದ್ಧರೇ,
ಇದರ ಗುಟ್ಟು ಹೇಳಿ.

ನಲಿವ ಭೂಮಿಯಲಿ ಉಳುವ ರೈತನಿಗೆ
ಹೊಟ್ಟೆಗಿಲ್ಲವೇಕೆ ?
ಅನ್ನದಾತನೇ ಅನ್ನವಿಲ್ಲದೆಯೆ
ಬನ್ನಪಡುವುದೇಕೆ ?"

ಹಿರಿಯ ಭಟ್ಟರೂ ನೆರೆದ ಸೆಟ್ಟರೂ
ಭೂಮಿಯೊಡೆಯರೆಲ್ಲಾ
ಮೌನ ಮಾರ್ಗವನೆ ನಂಬಿ ತಂಗಿದರು,
ಮಾತನಾಡಲಿಲ್ಲಾ !

ಒಂದು ನಿಮಿಷ ಎಲ್ಲೆಲ್ಲು ಮೌನವೇ;
ಹತ್ತು ನಿಮಿಷ ಮೌನ.
'ಮುಂದೆ ಬನ್ನಿ, ಮಾತಾಡಿ,' ಅಂದರೂ
ಸಭೆಯು ಶಬ್ದಹೀನ.

ಕೊನೆಗೆ ಮೂಲೆಯಲಿ ಕುಳಿತುಕೊಂಡ ಶಿವು
ಗೌಡ ಎದ್ದು ನಿಂತ.
ಕಡಲ ನಾಡಿನಲಿ ಕೃಷಿಯ ಕಾಡಿನಲಿ
ಅವನೆ ಬುದ್ಧಿವಂತ.

ದುಡಿವ ರೈತನವ ಹಸಿದ ಭೂತನವ
ನಮಸ್ಕಾರ ಮಾಡಿ,
ಹೀಗೆ ಹೇಳಿದನು : "ಎರಡು ಮಾತುಗಳ
ಬಿಡುವೆ ನಾನು ಆಡಿ.

ದೊರೆಯೆ ಕೇಳು, ಈ ಭೂಮಿಯೊಳಗೆ ಹಾ
ಲಕ್ಕಿ ಎಂಬ ಜನರು
ಕಾಡು ಕಡೆದು ನಾಡನ್ನು ಮಾಡಲಿಕೆ
ಮೊದಲು ಹುಟ್ಟಿದವರು.

ಕುಡಿದು ಅಂಬಲಿಯ, ಕಡಿಯೆ ಗುಡ್ಡವನು
ಗದ್ದೆಯಾಯ್ತು ಚಂದ,
ಗದ್ದೆಯಲ್ಲಿಯೇ ಭೂಮಿತಾಯಿಗದು
ಹೂವು, ಹಣ್ಣು, ಗಂಧ.

ಎಲ್ಲ ಒಕ್ಕಲೂ ಮುದ್ದು ಮಕ್ಕಳೂ
ಭರ್ತಿ ಊಟ ಮಾಡಿ,
ಚಂದದಿಂದ ಆನಂದ ಗಳಿಸಿದೆವು.
ಗಮುಟೆ ಪಾಂಗು ಹಾಡಿ.

ಮುಂದೆ ಒಂದು ದಿನ ಒಡೆಯ, ಸೆಟ್ಟಿ, ಸರ
ಕಾರ, ಮೂರು ಬಂದು
ನಮ್ಮ ಗದ್ದೆಯಲಿ ಮೇದು ಮರಳಿದುವು
ಎಲ್ಲ ಬೆಳೆಯ ತಿಂದು.

ಅಂದಿನಿಂದ, ಮಾಸ್ವಾಮಿ, ನಮ್ಮ ಬದು
ಕೆಲ್ಲ ಪರರ ಸೊತ್ತು,
ಹಾಲು ಹೋಗಿ 'ಹಾಲಕ್ಕಿ' ಆದರೂ
ನೃಪನಿಗೇನು ಗೊತ್ತು ?

ಕೇಳು ರಾಜನೇ, ದುಡಿವ ರೈತನೇ,
ಧರೆಯ ಕಾಮಧೇನು,
ದುಡಿವ ರೈತನಿಗೆ ಭೂಮಿ ಕೊಡಿಸಿದರೆ
ಧರೆಗೆ ಹಾಲು, ಜೇನು !"

ಹೀಗೆ ಹೇಳಿ ಶಿವುಗೌಡ ಎಲ್ಲರಿಗೆ
ನಮಸ್ಕಾರ ಮಾಡಿ
ಕಚ್ಚೆಯಿಂದ ಬೆವರನ್ನು ಒರಸಿದನು
ಮುಗಿಲ ಕಡೆಗೆ ನೋಡಿ.

೩

ರಾಜ್ಯ ಸಭೆಯ ಮುಂಭಾಗದಲ್ಲಿ ವೈ
ಕುಂಠ ಕಾಮ್ತಿ ಎದ್ದು
ಊಳುವ ರೈತನಿಗೆ ಪ್ರಶ್ನೆ ಹಾಕಿದನು
ದೊಡ್ಡ ದನಿಯಗೈದು :

"ಗೇಣಿ ತಿನ್ನುವುದು ನಿಮ್ಮ ಧರ್ಮವೇ ?
ಹೇಳು ಸತ್ಯವಾಗಿ
ರೈತ ಸಂಘವನು ಕಟ್ಟಿ ಕುಣಿಯುವಿರಿ
ಹಗಲ ಲೂಟಿಗಾಗಿ.

ಗೇಣಿ ತಿನ್ನುವವ ನರಕದಲ್ಲಿ ಬೀ
ಳುವುದು ಖಾತ್ರಿ, ನೋಡಾ.
ಹೊಟ್ಟೆಗಿಲ್ಲವೇ ? ಸುಳ್ಳು ಹೇಳುವಿರಿ,
ಇಂಥ ಮೋಸ ಬೇಡ.

ಉಳುವ ರೈತನಿಗೆ ಭೂಮಿ ಸಿಗಲು ಅದು
ಯಾರ ಪಿತನ ಆಸ್ತಿ ?
ಕೇಳು ರಾಜನೇ, ದುಡಿವ ರೈತನಿಗೆ
ಏಕೆ ಅನ್ನ ಜಾಸ್ತಿ ?

ಜಾಸ್ತಿ ತಿಂದರವ ಕಮ್ಮಿ ದುಡಿಯುವನು
ಮತ್ತೆ ಕೆಟ್ಟು ಹೋಗಿ
ಅಖಿಲ ರಾಜ್ಯದಲಿ ಕ್ಷಾಮ ಬೀಳುವುದು
ಭೂಮಿ ಬಂಜರಾಗಿ.

ನ್ಯಾಯ ನೀತಿಯಲಿ ರಾಜ್ಯ ನಡೆಸಲಿಕೆ
ಇಂಥ ಸಭೆಯು ಸಲ್ಲಾ
ಕಪಟಿ ರೈತರನು ಅರಸು ನಂಬಿದರೆ
ನ್ಯಾಯ ನೀತಿಯಿಲ್ಲಾ.

ಕೇಳು ರಾಜನೇ, ನಾವು ಬ್ರಾಹ್ಮಣರು,
ಬರಿಯ ಒಡೆಯರಲ್ಲಾ
ರೈತ ಜಾತಿ ಬಲು ಠಕ್ಕು, ತಿಳಿಯತೇ ?
ಕೀಳು ಶೂದ್ರರೆಲ್ಲಾ.

ನಂಬು ಬ್ರಾಹ್ಮಣರ, ತುಂಬು ಪುಣ್ಯವನು
ಧರ್ಮ–ಕಣಜದೊಳಗೆ
ಠಕ್ಕ ರೈತರನು ನಂಬಿ ಧರ್ಮವನು
ತುಳಿಯ ಬೇಡ ಕೆಳಗೆ."

ಸಭಾಕಾರ್ಯ ಮುಗಿಸುತ್ತ ಹೇಳಿದನು
ಅರಸು ಪ್ರೀತಿಯಿಂದ :
"ಯಾರು ಧರ್ಮಿಗಳು ? ಯಾರು ಕಪಟಿಗಳು ?
ತಿಳಿವೆ ಹಿಂದಿನಿಂದ.

ನನ್ನ ತೀರ್ಪು ಹೊರಬರುವ ವರೆಗೆ ನೀ
ವೆಲ್ಲ ಶಾಂತರಾಗಿ
ವರ್ಗ ಕಲಹಗಳ ಬೀಜ ಬಿತ್ತದೆಯೆ
ಬಾಳಿ ಸೌಖ್ಯವಾಗಿ"

೪

ಮೂರು ತಿಂಗಳೂ ಆರೂ ತಿಂಗಳೂ
ಮುಗಿದರೂನು ಸುದ್ದಾ
ತನ್ನ ನಿರ್ಣಯವ ಪ್ರಕಟಪಡಿಸದೇ
ರಾಜ ಸುಮ್ಮನಿದ್ದ.

ಒಂದು ಬೆಳಗಿನೊಳು ರಾಜವೈದಿಕರು
ವಾದ್ಯದವರ ಜತೆಗೆ
ಅಖಿಲ ರಾಜ್ಯದಲಿ ಸುದ್ದಿ ಸಾರಿದರು
ಹಳ್ಳಿ–ಪಳ್ಳಿಯೊಳಗೆ.

ಕೆಟ್ಟ ಸುದ್ದಿಯನು ಕೇಳಿದೊಡನೆ ಜನ
ಹೂವಿನಂತೆ ಬಾಡಿ,
ಖಿನ್ನವಾಗಿ ತಲೆ ಕೆಳಗೆ ಬಾಗಿಸಿತು
ಕಣ್ಣು ಒದ್ದೆಯಾಗಿ.

"ಕೇಳಿ, ಪ್ರಜೆಗಳೇ, ಏನು ಹೇಳುವುದು !
ಧರೆಯ ರಾಜಶ್ರೇಷ್ಠ
ಹಿಡಿದ ಹಾಸಿಗೆಯ ಬಿಡದೆ ಮಲಗಿಹನು;
ಜನಕೆ ಬಂತು ಕಷ್ಟ.

ಕೆಟ್ಟ ರೋಗವದು ವಾಸಿಯಾಗಲಿಕೆ
ದುಗ್ಧಯಾಗ, ನೋಡಾ.
ವಿಪ್ರರೆಲ್ಲರೂ ಯಾಗ ಮಾಡಿದರೆ
ಬೇರೆ ಮದ್ದು ಬೇಡಾ.

ಬರುವ ಹುಣ್ಣಿಮೆಗೆ ಸಕಲ ವಿಪ್ರಜನ
ಯಾಗ ಮಾಡಬೇಕು
ಗ್ರಾಮ ದೇವತೆಯ ಪುಣ್ಯ ದರುಶನಕೆ
ಬಿಡದೆ ಹೋಗಬೇಕು.

ಗುಡಿಯ ಮುಂದುಗಡೆ ಹಾಲ ಹಂಡೆಯನು
ವಿಪ್ರ ತುಂಬಬೇಕು.
ಒಬ್ಬ ವಿಪ್ರ ಒಂದೊಂದು ಸೊಲಿಗೆ ಹಾ
ಲನ್ನು ಹಾಕಬೇಕು."

ಹೀಗೆ ಡಂಗುರವ ಸಾರಿ ಮೂರು ಸಲ
ಸಕಲ ರಾಜ್ಯದೊಳಗೆ
ರಾಜದೂತರೊಟ್ಟಾಗಿ ಮರಳಿದರು
ರಾಜಧಾನಿಯೆಡೆಗೆ

ಹಂಡೆ ಬಾಯಿಯನು ಮುಚ್ಚಿ, ಮೇಲುಗಡೆ
ಇತ್ತು ತೂತು ಸಣ್ಣ,
ತೂತಿನಲ್ಲಿಯೇ ಹಾಲ ಸುರಿವುದೇ
ದುಗ್ಧಯಾಗ, ಅಣ್ಣಾ.

೫

ದುಗ್ಧಯಾಗ ದಿನ ಸಕಲ ವಿಪ್ರಜನ
ತಣ್ಣನೀರ ಮಿಂದು
ಹಾಲ ಗಿಂಡಿಯನು ಹಿಡಿದು ಸಾಗಿದರು
ಕ್ಷೇಮವಾಗಲೆಂದು.
ಶ್ಯಾಮ ಭಟ್ಟರೂ ಸೋಮ ಭಟ್ಟರೂ
ಕೆಂಪು ಮುಡಿಯನುಟ್ಟು
ಭಸ್ಮಪಟ್ಟೆಗಳ ಧರಿಸಿ ಸಾಗಿದರು
ಹಣೆಗೆ ಹಚ್ಚಿ ಬೊಟ್ಟು,

ರಾಮರಾಯರೂ ಭೀಮರಾಯರೂ
ತೊರ್ಕೆ ಗೋಪಿನಾಥ,
ಪಾಂಡು ಪೈಗಳೂ ಭಾಗ ವಹಿಸಿದರು
ಕರ್ಕಿ ವಿಶ್ವನಾಥ.

ದೊಡ್ಡ ಹೆಗಡೆರೂ ಸಣ್ಣ ಒಡೆಯರೂ
ಚಿಕ್ಕ ಪುಟ್ಟ ಮಾಣಿ,
ಬಾಳ ಭಟ್ಟರೇ ತಾಳ ಬಾರಿಸಲು
ತುಂಬಿ ಹೊಯ್ತು ಓಣಿ.

೬

ದುಗ್ಧಯಾಗ ದಿನ ಸಾವಿರಾರು ಜನ
ಭಾಗ ವಹಿಸಿತಂತೆ.
ಆದರೇನು ? ಬಲು ಚೋದ್ಯ ಕಾಣಿಸಿತು
ಹಂಡೆಯೊಳಗೆ ಅಂತೆ.

ಒಂದು ಹಂಡೆಯಲಿ ಒಂದು ಗುಟುಕು ಸಹ
ಹಾಲು ಕಾಣಲಿಲ್ಲಾ !
ಹಂಡೆಯಲ್ಲಿ ಬರಿ ನೀರೆ ಕಾಣಿಸಲು
ಚಂದ್ರ ಬೆಳಗಲಿಲ್ಲಾ !

ತಾನು ಒಬ್ಬನೇ ನೀರ ಹಾಕಿದರೆ
ತಿಳಿಯಲಾರದೆಂದು
ವಿಪ್ರರೆಲ್ಲರೂ ನೀರ ಚೆಲ್ಲಿಯೇ
ಮನೆಗೆ ಹೋದರಂದು.

೭

ಖಿನ್ನನಾಗಿ ನರಪಾಲ ಹೇಳಿದನು :
"ಇದುವೆ ಆತ್ಮಹತ್ಯೆ
ಯಾರು ಕಪಟಿಗಳು, ಯಾರು ಧರ್ಮಿಗಳು
ಹೇಳಬೇಕೆ ಮತ್ತೆ ?"

❖❖

ಚಿನ್ನ ಕಂಡರೆ ?

(ಪ್ರಾಚೀನ ಚೀನೀ ಸಾಹಿತ್ಯದಿಂದ)

ಚಿನ್ನ ಕಂಡರೆ ಮುಂದೆ ಏನು ಕಾಣದ ಮನುಜ
ನಮ್ಮ ಧರೆಯೊಳಗಿದ್ದ ಪುಣ್ಯವಂತ.
ಒಂದು ದಿನ ಪುಣ್ಯಾತ್ಮ ಚಿನ್ನದಾಭರಣಗಳ
ಅಂಗಡಿಯ ಕಂಡು ಬಲು ಹಿಗ್ಗಿ ನಿಂತ.

ಭರದಿಂದ ಅಂಗಡಿಯ ಒಳನುಗ್ಗಿ ಕ್ಷಣದೊಳಗೆ
ಆಭರಣಗಳ ಕಿತ್ತುಕೊಂಡನಂತೆ
ಅಕ್ಕಪಕ್ಕದ ಜನರು ಅವನ ಅಲ್ಲಿಯೆ ಹಿಡಿದು
ಅಧಿಕಾರಿಗಳ ಕಡೆಗೆ ಒಯ್ದರಂತೆ.

ತುಂಬಿದಂಗಡಿಯಲ್ಲಿ ಯಾರನ್ನು ಲೆಕ್ಕಿಸದೆ,
'ಕದ್ದ ಕಾರಣವೇನು ? ಹೇಳು' ಎನಲು
'ನನಗೆ ಜನವೂ ಕೂಡ ಕಾಣಿಸದು', ಅವನೆಂದ,
ಚಿನ್ನದೊಡವೆಯು ಕಣ್ಣ ಮುಂದೆ ಇರಲು.

❖❖

ನಮ್ಮ ಸಾಲೆಯ ಪೆದ್ದ

೧

ನಮ್ಮ ಸಾಲೆಯ ಪೆದ್ದ
ಕೈ ಕಾಲು ಮೈ ಉದ್ದ
ಪಾಸಾಗದಿದ್ದರೂ
ತಂಟೆ ಮಾಡುತಲಿದ್ದ.

೨

ಅವನ ಕೂದಲು, ನೋಡು,
ಕರಡ ಬೆಳೆಯುವ ಬೇಣ,
ನೀಟಾಗಿ ನಿಂತಿಹುದು
ತಿಂದು ಹೋಗಲಿ ಕೋಣ.

೩

ಅವನ ಕಿಸೆಯೊಳಗೇನು ?
ಅವಲಕ್ಕಿ, ಹುರಿಗಡ್ಲೆ,
ಸಾಲೆಯೊಳಗೂ ಕೂಡ
ತಿನ್ನುವನು ನೆಲಗಡ್ಲೆ.

೪

ಹಾರಾಟ, ಚೀರಾಟ,
ಸಾಲೆಯೆಂದರೆ ಸಂತೆ.
ಗುದ್ದಾಟದಲ್ಲಿಯೇ
ಮುದ್ದು ಮಾಡುವನಂತೆ !

೫

ನಮ್ಮ ಸಾಲೆಯ ಪೆದ್ದ
ಯಾವ ಕೆಲಸಕು ಸಿದ್ಧ
ನಾಗರನ ಹೆಡೆಯೊಳಗೆ
ಇದ್ದ ರತ್ನವ ಕದ್ದ !

೬

ಪೆದ್ದನೆಂದರೆ ಪ್ರಾಣ
ಹೆಣ್ಣು ಮಕ್ಕಳಿಗೆಲ್ಲ
ತಾವರೆಯ ಕೆರೆಯೊಳಗೆ
ಮೊಸಳೆಗಂಜುವನಲ್ಲ.

೭

ಪೆದ್ದನಿಗೆ ಹೊಸ ಹುಚ್ಚು
ಅದನು ತಡೆಯುವರಾರು ?
ಕುಯ್ದು ತರಬೇಕಂತೆ
ತಾರೆಗಳನೈದಾರು !

೮

ಸವಿ ಮಾವಿಗಿಂತಲೂ
ಮಕ್ಕಳಿಗೆ ಹುಳಿ ಅಪ್ಪೆ
ಪೆದ್ದನಿಲ್ಲದ ಸಾಲೆ
ಯಾವಾಗಲೂ ಸಪ್ಪೆ.

❖❖

ಮೂರು ಭಾವಚಿತ್ರಗಳು

(ಒಂದು ರಶಿಯನ್ ಕವನದ ಹೆಜ್ಜೆಯಲ್ಲಿ ರಚಿತವಾದದು)

ಒಕ್ಕಣ್ಣ ಒಕ್ಕೈಯ ಚಕ್ರವರ್ತಿಯ ಬಯಕೆ
ಇಡಿಯ ಭೂಮಂಡಲವ ಬೇಡುತ್ತಿತ್ತು,
ಉತ್ತಮೋತ್ತಮ ಭಾವಚಿತ್ರವೊಂದನು ತೆಗಿಸ
ಬೇಕೆಂಬ ಹಂಬಲವು ಕಾಡುತ್ತಿತ್ತು.

ವಿಖ್ಯಾತ ಚಿತ್ರಗಾರನ ಕರೆದು ಹೇಳಿದನು :
ಯುದ್ಧ ಮಾಡುವ ಚಿತ್ರ ಬೇಕು ಎಂದು;
ಒಂದು ಕೈಯಲಿ ಖಡ್ಗ, ಒಂದು ಕೈಯಲಿ ಡಾಲು;
ಅಪ್ರತಿಮ ರಣಧೀರ ಕಾಣಲೆಂದು.

ಚಿತ್ರಗಾರನು ಚಿತ್ರ ತಂದು ತೋರಿಸಿದೊಡನೆ
ಎರಡು ಕಣ್ಣೂ ಎರಡು ಕೈಯ ನೋಡಿ,
'ಕೃತಕವನು ಚಿತ್ರಿಸಿರೆ ವಾಸ್ತವತೆ ಎಲ್ಲಿಹುದು ?'
ಎಂದು ಬೈದನು ಅರಸು ಸಿಟ್ಟು ಮಾಡಿ.

ಗೈದ ಅಪರಾಧಕ್ಕೆ ಚಿತ್ರಗಾರನು, ಪಾಪ,
ರಾಜ್ಯ ಬಿಡಬೇಕೆಂಬ ಆಜ್ಞೆಯಾಯ್ತು.
ಇನ್ನೊಬ್ಬ ಚಿತ್ರಗಾರನ ತಂದು ನೇಮಿಸಲು
ವಾಸ್ತವದ ಚಿತ್ರಪಟ ಸಿದ್ಧವಾಯ್ತು.

'ವಾಸ್ತವದ ಹೆಸರಿನಲಿ ಅಪಶಕುನ ತಂದೆಯಾ ?'
ಕೋಪದಿಂದುಸುರಿದನು ಚಕ್ರವರ್ತಿ.
'ನನಗೆ ಒಂದೇ ಭುಜವೆ ? ನನಗೆ ಒಂದೇ ಕಣ್ಣೆ ?
ಲೋಪವಾಯಿತೆ, ಹೇಳು ನನ್ನ ಕೀರ್ತಿ ?'

ಗೈದ ಅಪರಾಧಕ್ಕೆ ದೇಹದಂಡನೆ ಶಿಕ್ಷೆ;
ಚಿತ್ರಗಾರನ ಪ್ರಾಣ ತೀರಿತಂದು.
ಮತ್ತೊಬ್ಬ ಚಿತ್ರಗಾರನ ಕರೆದು ಹೇಳಿದನು :
'ನಿನಗಾದರೂ ಬುದ್ಧಿ ಬರಲಿ ಇಂದು'.

ಹೊಸ ಚಿತ್ರಗಾರನವ ಕೈಕಾಲು ನಡುಗುತ್ತ
ಭಾವಚಿತ್ರವ ತಂದು ತೋರಿಸಿದನು.
ಆ ಚಿತ್ರವನು ನೋಡಿ ಹರುಷಗೊಂಡನು ಅರಸು;
'ನಿನ್ನ ಕಲೆಯೇ ಸತ್ಯ' ಅಂದನವನು.

ಮುಖದ ಒಂದೇ ಭಾಗ ಪೂರ್ಣ ಕಾಣುವ ಹಾಗೆ
ಪಾರ್ಶ್ವನೋಟದ ಚಿತ್ರ ಚೆಂದವಿತ್ತು,
ಬಲಗಣ್ಣು, ಬಲಭುಜವು ಭಾವಚಿತ್ರದ ಒಳಗೆ
ಬೇರೆ ಕಾಣದ ಹಾಗೆ ಅಡಗಿ ಇತ್ತು.

ಎಡಗೈಯ ಡಾಲನ್ನು ನೋಡಿದರೆ ಬಲಗೈಲಿ
ಖಡ್ಗವಿರಬೇಕೆಂದು ಅನಿಸುತ್ತಿತ್ತು,
ಮುದಿಯ ಹದ್ದಿನ ಹಾಗೆ ಎಡಗಣ್ಣು ವಟವಟನೆ
ಬಂದಬಂದವರನ್ನೆ ನೋಡುತಿತ್ತು.

ಚಕ್ರವರ್ತಿಯ ಮೆಚ್ಚು ಮೀತಿಮೀರಿ ಅತಿಯಾಗಿ
ಹೊಸ ಚಿತ್ರಗಾರನಿಗೆ ದೊಡ್ಡ ಗಂಟು
ಮುಖದ ಒಂದೇ ಭಾಗ ಚಂದ ಕಾಣುವ ಹಾಗೆ
ಚಿತ್ರಿಸುವ ಕಬ್ಬಿಗರು ನಮ್ಮಲುಂಟು !

❖❖

೨

ದಾಸಾಳ

೧೯೮೨

ಮೊದಲ ಮಾತು

ಬಹಳ ವರ್ಷಗಳ ಹಿಂದೆ ನಾನು ಬರೆದ ಕವನಗಳು ಈ ಸಂಕಲನದಲ್ಲಿವೆ. ಇಂದಿಗೂ ಸಹ ಸಹೃದಯರು ಇವುಗಳನ್ನು ಮೆಚ್ಚುವರೆಂದು ನಾನು ಆಶಿಸುತ್ತೇನೆ.

ಈ ಗ್ರಂಥದ ಪ್ರೂಫುಗಳನ್ನು ತಿದ್ದಲು ಅಂಕೋಲೆಯ ಪಿ.ಎಮ್.ಹೈಸ್ಕೂಲಿನ ಶಿಕ್ಷಕರಾದ ಶ್ರೀ ಮಹದೇವ ನಾಯ್ಕ ಅವರು ಸಹಾಯ ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ಉಪಕೃತನಾಗಿದ್ದೇನೆ. ಅಂಕೋಲೆಯ ಗೋಖಲೆ ಸೆಂಟನರಿ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ವಿ.ಆರ್.ವೆರ್ಣೇಕರ ಇವರು ಈ ಪುಸ್ತಕಕ್ಕೆ ಅಂದವಾದ ಮುಖಪುಟವನ್ನು ಬರೆದು ಕೊಟ್ಟಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ಅಲ್ಲದೆ ಈ ಹೊತ್ತಿಗೆಯನ್ನು ಸುಂದರವಾಗಿ ಮುದ್ರಿಸಿದ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದ ಮುದ್ರಣಾಲಯದ ವ್ಯವಸ್ಥಾಪಕರಿಗೆ ನಾನು ಆಭಾರಿಯಾಗಿದ್ದೇನೆ.

ಮುಂಬಯಿ ದಿನಕರ ದೇಸಾಯಿ

೩೧-೮-೧೯೮೨

ಪ್ರಕಾಶಕರ ನುಡಿ

ದಿ. ಡಾ॥ ದಿನಕರ ದೇಸಾಯಿಯವರು ಬರೆದ ಅರವತ್ತು ಕವನಗಳು 'ದಾಸಾಳ' ಸಂಕಲನದಲ್ಲಿವೆ. ಇಲ್ಲಿಯ ೨೨ಕವನಗಳು ಈಗ ಮೊದಲ ಬಾರಿಗೆ ಬೆಳಕು ಕಾಣುತ್ತಲಿವೆ. ಉಳಿದವು ಈ ಹಿಂದೆ 'ಜನಸೇವಕ' ವಾರಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಕವನಗಳ ಅಡಿಯಲ್ಲಿ ಅವು ಪ್ರಕಟವಾದ ವರ್ಷವನ್ನು ಸೂಚಿಸಿದೆ.

ಚುಟುಕುಬ್ರಹ್ಮರೆಂದು ಕನ್ನಡನಾಡಿನಲ್ಲಿ ಮನೆಮಾತಾಗಿರುವ ಡಾ॥ ದಿನಕರ ದೇಸಾಯಿಯವರು ಬರೆದ ಕವನಗಳು ಕೂಡ ಭಾವನಿರ್ಭರತೆ, ನೇರತೆ ಮತ್ತು ಸಹಜಾಭಿವ್ಯಕ್ತಿಗಳನ್ನು ಹೊಂದಿರುವುದನ್ನು ಸಹೃದಯರು ಗಮನಿಸಬಹುದು. ವಿಡಂಬನೆಯನ್ನು ತಮ್ಮ ಸಫಲ ಆಯುಧವಾಗಿ ಕವಿ ದೇಸಾಯಿಯವರು ಬಳಸಿಕೊಂಡು ಬಂದಿದ್ದಾರಷ್ಟೆ; ಇದಕ್ಕೆ ಹಲವು ನಿದರ್ಶನಗಳು ಇಲ್ಲಿಯ ಕವನಗಳಲ್ಲೂ ಕಾಣಸಿಗುತ್ತವೆ.

ದೇಸಾಯರ ಈ ಹಿಂದಿನ 'ಕವನಸಂಗ್ರಹ' ಹಾಗೂ 'ಹೂಗೊಂಚಲು'ಗಳ ಮಾದರಿಯಲ್ಲಿ 'ದಾಸಾಳ' ಸಂಕಲನವೂ ರಸಿಕರನ್ನು ರಂಜಿಸುವದೆಂದು ನಂಬಿರುವೆವು. ದಾಸಾಳ, ಅದರಲ್ಲೂ ಕೆಂಪು ದಾಸಾಳ ಈ ಕವಿಗೆ ತುಂಬಾ ಪ್ರಿಯವಾದ ಹೂವು. ಸಾಮಾನ್ಯ ಹೂ ಜಾತಿಯಾದ ದಾಸಾಳದಲ್ಲಿ ಕವಿ ತನ್ನ ಜೀವನದ ರೀತಿಯನ್ನು ಕಂಡುಕೊಂಡಿರುವುದು (ದಾಸಾಳದ ಎರಡನೆಯ ಪದ್ಯ)

ದಾಸಾಳ ಸಂಕಲನ ಮುದ್ರಣವಾಗುತ್ತಿದ್ದಾಗ ಡಾ॥ ದಿನಕರ ದೇಸಾಯಿಯವರು ನಮ್ಮನ್ನು ಅಗಲಿದರು. (೬ ನವೆಂಬರ, ೧೯೮೨) ಕವಿಯ ಚಿರಸ್ಮರಣೆಯಲ್ಲಿ ಭಾರವಾದ ಹೃದಯದಿಂದ ಈ ಗ್ರಂಥವನ್ನು ಓದುಗರ ಕೈಗಿಡುತ್ತಿದ್ದೇವೆ. ದೇಸಾಯರ ಇತರ ಕೃತಿಗಳಂತೆ ಸಹೃದಯರು ಇವನ್ನೂ ಬರಮಾಡಿಕೊಳ್ಳುವರೆಂದು ನಂಬಿರುವೆವು.

ಪ್ರಕಾಶಕರು

ಈ ಸಂಕಲನದ ಮುಖಪುಟವನ್ನು ಸೊಗಸಾಗಿ ಮುದ್ರಿಸಿದ ಶಿರಸಿಯ ಸ್ಕ್ರೀನ ಆರ್ಟ್‌ದ ಒಡೆಯರಿಗೆ ಕೃತಜ್ಞತೆಗಳು.

ಚಿರಸ್ಮರಣೆ

ಐದು ವರ್ಷಗಳ ಹಿಂದೆ ಅಂಕೋಲೆಯಲ್ಲಿ ಕೆನರಾ ವೆಲ್‌ಫೇರ್ ಟ್ರಸ್ಟಿನವರು ಏರ್ಪಡಿಸಿದ ಸಮಾರಂಭವೊಂದರಲ್ಲಿ ಶ್ರೀ ದಿನಕರ ದೇಸಾಯಿಯವರ ೨೫೦೦ ಮುಕ್ತಕಗಳ ಮಾಲೆ "ದಿನಕರನ ಚೌಪದಿ"ಯನ್ನು ಬಿಡುಗಡೆ ಮಾಡುವ ಗೌರವ ನನ್ನದಾಗಿದ್ದಿತು. ಈ ಚೌಪದಿಗಳ ಚಕ್ರವರ್ತಿ ಇಂದು ನಮ್ಮನ್ನಗಲಿ ಎಂಟು ತಿಂಗಳಾಯಿತು. ಅವರ ಕಣ್ಮುಂದೆಯೇ ಮುದ್ರಣಗೊಂಡಿದ್ದರೂ 'ದಾಸಾಳ' ಕವನ ಸಂಕಲನ ಅವರ ಕೊನೆಯ ಕಾಣಿಕೆಯೆಂಬಂತೆ, ಅವರು ಕಣ್ಮರೆಯಾದ ಮೇಲೆ ಕನ್ನಡಿಗರ ಕೈಸೇರುತ್ತಿದೆ. ದಿನಕರ ದೇಸಾಯಿಯವರ ಮಾನಸ ಪುತ್ರರೆಂದೇ ನಾನು ಭಾವಿಸಿರುವ, ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನ ಪ್ರಾಚಾರ್ಯರೂ, ಆತ್ಮೀಯ ಸ್ನೇಹಿತರೂ ಆದ ಶ್ರೀ ಕೆ.ಜಿ.ನಾಯಕ ಅವರು ಈ ಸಂಕಲನಕ್ಕೆ ನಾನು ಮುನ್ನುಡಿ ಬರೆಯಬೇಕೆಂದು ಕೇಳಿಕೊಂಡಿದ್ದಾರೆ. ನಾನು ಮೆಚ್ಚಿಕೊಂಡ ಈ ಹಿರಿಯ ಕವಿಯ ಬಗೆಗಿರುವ ನನ್ನ ಆದರ ಗೌರವಗಳ ಪ್ರತೀಕವಾಗಿ ಕೆಲವು ಮಾತುಗಳನ್ನು ಇಲ್ಲಿ ಸಂತೋಷದಿಂದ ಬರೆಯುತ್ತಿದ್ದೇನೆ. ಇದು ಹೆಗ್ಗಳಿಕೆಯ ಮುನ್ನುಡಿಯಾಗಿರದೆ ಕವಿಯ ಅಗ್ಗಳಿಕೆಯನ್ನು ಅರಿತುಕೊಂಡು ಆನಂದ ಪಡುವ ಚಿರಸ್ಮರಣೆಯ ಹಣತೆಯಾಗಿದೆಯೆಂದು ನಮ್ರತೆಯಿಂದ ನುಡಿಯ ಬಯಸುತ್ತೇನೆ.

ತಮ್ಮ ವಿಶಿಷ್ಟವಾದ ಕಾವ್ಯಶಕ್ತಿಯನ್ನು ಚುಟುಕಗಳ ಮೂಲಕ ಅದಷ್ಟು ಸಮಗ್ರವಾಗಿ ಅಭಿವ್ಯಕ್ತಿಗೊಳಿಸಿದ ದೇಸಾಯಿಯವರು ಭಾವಗೀತೆಯ ರಸಾರ್ದ್ರತೆಯನ್ನು ಕೈಬಿಡದೆ, ವಿಡಂಬನೆಯ ತೀಕ್ಷ್ಣತೆಯನ್ನು ಸಹ್ಯಗೊಳಿಸಿದುದು ಕನ್ನಡ ಕಾವ್ಯಪ್ರಪಂಚದಲ್ಲಿ ಅನ್ಯಾದೃಶವೆಂದೇ ಹೇಳಬೇಕು. ಈ ಬಗೆಯ ತಮ್ಮ ಬರವಣಿಗೆ ಪ್ರಾರಂಭವಾದದ್ದು, ೧೯೫೬ರಿಂದ ಎಂದು ಅವರೇ ಹೇಳಿದ್ದಾರೆ. ಆದರೆ ೧೯೩೭ರಿಂದಲೇ ಅವರು ಭಾವಗೀತೆಗಳ ರಚನೆಗೆ ತೊಡಗಿದರು. ೧೯೫೦ರಲ್ಲಿ ಪ್ರಕಟವಾದ 'ಕವನ ಸಂಗ್ರಹ' ಹಾಗೂ ೧೯೫೮ರಲ್ಲಿ ಹೊರಬಂದ 'ಹೂಗೊಂಚಲು' ಗಳಲ್ಲಿ ಅವು ಸಂಕಲನಗೊಂಡಿವೆ. ೧೯೫೬ರಿಂದ ೧೯೭೪ರ ವರೆಗೆ ಬರೆದ ಅರವತ್ತು ಕವನಗಳು ಪ್ರಸ್ತುತ ಸಂಕಲನದ ಮೂಲಕ ನಮಗೆ ದೊರೆತಿವೆ. ಅಂದರೆ ಈ ಮೂರು ಸಂಗ್ರಹಗಳಲ್ಲಿ ಅವರು ಕೊಟ್ಟಿರುವ ಕವನಗಳು ಅವರ ಚುಟುಕುಗಳಷ್ಟೇ ವೈಶಿಷ್ಟ್ಯಪೂರ್ಣವಾದವುಗಳಾದುದರಿಂದ

ಕಾವ್ಯಪ್ರೇಮಿಗಳು ಅವುಗಳ ಮಹತ್ವವನ್ನು ಕಡೆಗಣಿಸಲಾರರೆಂದು ನಾನು ಭಾವಿಸಿದ್ದೇನೆ. ಜೊತೆಗೆ ಅವರ ಮಕ್ಕಳ ಪದ್ಯಗಳ ಸೊಬಗನ್ನೂ ಗಮನಿಸದೆ ಇರುವಂತಿಲ್ಲ.

೧೯೫೦ರಲ್ಲಿ 'ಕವನ ಸಂಗ್ರಹ'ಕ್ಕೆ ಬರೆದ 'ಕೆಳೆನುಡಿ'ಯಲ್ಲಿ ಶ್ರೀ ಗೋಕಾಕರು ದೇಸಾಯರ ಕಾವ್ಯದ ಪ್ರಮುಖ ಲಕ್ಷಣಗಳಾದ ಭಾವ ನಿರ್ಭರತೆ, ನೇರತೆ, ಸಹಜಾಭಿವ್ಯಕ್ತಿ ಹಿತಮಿತಶೈಲಿ–ಛಂದ, ಉದಾತ್ತ ವಿನೋದ ಸಂಸ್ಕಾರ, ಸಮತೆಯೆಡೆಗೆ ಕುದುರಿದ ಸಮಾಜಿಕ ಪ್ರಜ್ಞೆ, ವಿಚಾರ ಪೂರ್ಣತೆ, ಸಮಾಜ ಸೇವೆಯ ಉದಾತ್ತ ಪ್ರೇರಣೆ ಮೊದಲಾದವುಗಳನ್ನು ಸಮಗ್ರವಾಗಿ ಗುರುತಿಸಿ ಇವುಗಳ 'ಒಂದು ಸಹಜ, ಮಧುರ, ಗಮ್ಯ ಸಮನ್ವಯವನ್ನು ಕವಿಯ ವ್ಯಕ್ತಿತ್ವವು ಸಾಧಿಸಿದೆ' ಎಂದಿದ್ದಾರೆ. 'ದಾಸಾಳ'ದಲ್ಲಿಯೂ ಅವೇ ಗುಣಲಕ್ಷಣಗಳು ಪ್ರಧಾನವಾಗಿರುವದನ್ನು ಕಾಣಬಹುದು. ಪಂಪ, ಮಾರ್ಗ ಮತ್ತು ದೇಸಿಯನ್ನು ತನ್ನ ಕಾವ್ಯದಲ್ಲಿ ಒಡಂಬಡಿಸಲು ಪ್ರಯತ್ನಿಸಿದಂತೆ ದೇಸಾಯರು ಕಾವ್ಯ ಮತ್ತು ಸಮಾಜ ಸೇವೆಗಳನ್ನು ಪ್ರತ್ಯೇಕವಾಗಿ ಎಣಿಸದೆ ಅವೆರಡನ್ನೂ ಒಡಂಬಡಿಸಿ ಯಶಸ್ವಿಯಾಗಿದ್ದಾರೆ.

ಈ ಸಂಗ್ರಹದ ಹನ್ನೊಂದು ಕವನಗಳು ಚುಟುಕುಗಳಾಗಿವೆ. ಆದರೆ ವಾಡಿಕೆಯಂತೆ ಕವಿಯ ಭಾವ–ವಿಚಾರ ಇಲ್ಲಿ ಒಂದೇ ಚೌಪದಿಯಲ್ಲಿ ಮುಗಿಯದೆ ಎರಡೆರಡು ಚೌಪದಿಗಳನ್ನೊಳಗೊಂಡು ಒಂದಕ್ಕೊಂದು ಪೂರಕ–ತಾರಕವೆನಿಸುವಂತಿದೆ. ವಿಮರ್ಶೆ ಎಂಬ ಕವನವನ್ನು ಅದಕ್ಕೆ ಇಲ್ಲಿ ಉದಾಹರಿಸಬಹುದು :

ಆ ವಿಮರ್ಶಕ ಶ್ರೇಷ್ಠರೆಲ್ಲರೂ ಸೇರಿ
ತ್ರಿಪುರ ಸುಂದರಿಯೆಂದು ಮೊಳಗಿದರು ಭೇರಿ.
ಅರ್ಧ ಶತಮಾನ ಕಳೆಯಲು ಕಾಲರಾಯ
ಹೇಳಿದನು : ಬಾಡಿ ಹೋಯಿತು ಅವಳ ಪ್ರಾಯ.

ಆ ವಿಮರ್ಶಕ ಶ್ರೇಷ್ಠರೆಲ್ಲರೂ ಕೂಡಿ
ಈ ಮುದುಕಿಯನು ಹೊರಗೆ ಹಾಕಿದರು ದೂಡಿ.
ಅರ್ಧ ಶತಮಾನ ಕಳೆಯಲು ಕಾಲರಾಯ
ಹೇಳಿದನು: ಕಂಗೊಳಿಸುತಿದೆ ಇವಳ ಪ್ರಾಯ.

ಈ ಸಂಗ್ರಹಕ್ಕೆ ಹೆಸರು ತಂದಿರುವ ದಾಸಾಳ ಅದರಲ್ಲೂ ಕೆಂಪು ದಾಸಾಳ ಕವಿಗೆ ಪ್ರಿಯವಾದ ಹೂವು. ಎಲ್ಲರೂ ಮಲ್ಲಿಗೆಯನ್ನೇ ಹೊಗಳುತ್ತಿರುವಾಗ ಸಾಮಾನ್ಯ ಜನರಂತಿರುವ ದಾಸಾಳ ತನ್ನ ಕಾವ್ಯದ ಸ್ಫೂರ್ತಿಯೆಂದೂ, ತನ್ನ ಜೀವನದ ರೀತಿಯೆಂದೂ ಹೇಳಿರುವುದರಲ್ಲಿಯೇ ದೇಸಾಯರ ಕಾವ್ಯದ ರೀತಿ–ನೀತಿಗಳು ಅಡಗಿವೆ. ಒಂದೊಂದು ನುಡಿಯಲ್ಲಿಯೂ ಯಾವುದೇ ದೌಲತ್ತು, ಪೇಟೆಯ ಕಿಮ್ಮತ್ತೂ ಇಲ್ಲದ ಪ್ರದರ್ಶನದೊಳಗೆ ಬಹುಮಾನ ಪಡೆಯದ, ಟೊಂಗೆಯನ್ನು ನೆಟ್ಟರೂ ಬದುಕಿಕೊಳ್ಳುವ, ಹನ್ನೆರಡು ತಿಂಗಳು ಬಿರಿದರೂ ಬಿರುದು ಬಯಸದ, ಆದರೆ ಮಂಗಲದ ಸಂಕೇತವಾಗಿರುವ (ಕೆಂಪು ಬಣ್ಣ) ಅದರ ಗುಣ ವಿಶೇಷವನ್ನು, ಆದರೆ ಉಳಿದವರ ದೃಷ್ಟಿಯಲ್ಲಿ ತೀರ ಸಾಮಾನ್ಯವೆನ್ನಿಸಿರುವದನ್ನು ಯಾವ ಅತಿಶಯೋಕ್ತಿಯೂ ಇಲ್ಲದೆ, ವಾಸ್ತವವನ್ನೇ ತೆರೆದು ತೋರಿಸುತ್ತ, ಕವಿ ತನ್ನ ಜೀವನದಲ್ಲಿ ತಾನು ನಂಬಿರುವ ಮೌಲ್ಯಗಳೊಡನೆ ಸಮೀಕರಿಸುತ್ತ –

ರಕ್ತದೊಳಗಿನ ನೋವು
ಸಂವೇದನೆಯ ಹೂವು
ಇದಕ್ಕಿಲ್ಲ ಕಾಮ ಹುಟ್ಟಿಸುವ ಕಾವು

ಎಂದು ಕೊನೆಯಲ್ಲಿ ಅದರ ಸಾಂಕೇತಿಕತೆಯನ್ನೇ ಕಾವ್ಯದ ಹೂವಾಗಿಸುತ್ತಾನೆ. 'ಮುಳ್ಳುಗಳಿಗೆ' ಕವಿತೆ ಈ ಮಟ್ಟಕ್ಕೆ ಬರದದ್ದಿರೂ ಇದೇ ಜಾತಿಗೆ ಸೇರಿದೆ.

ನಿಸರ್ಗ ಹಾಗೂ ಜನಜೀವನ ಒಡವರೆದೆ ಪ್ರಾದೇಶಿಕತೆಯ ಸೊಗಡನ್ನು, ಚೆಲುವನ್ನು ದೇಸಾಯರಂತೆ ಜನಜೀವನದ ತೀವ್ರಾಸಕ್ತಿಯೊಡನೆ ಕವಿತೆಯಲ್ಲಿ ಸೆರೆಹಿಡಿದವರು ವಿರಳ. 'ಕರಾವಳಿಯ ಕಮಲೆಗೆ', 'ಅಲಗೇರಿಯ ಸಿದ್ಧ', 'ಬೆಂಗಳೂರಿನ ದಾರಿಯಲ್ಲಿ', ಮೊದಲಾದ ಕವನಗಳಲ್ಲಿಯ ಭಾವ–ಭಾಷೆ ಒಂದಕ್ಕೊಂದು ಹೆಗಲೆಣೆಯಾಗಿ ಬೆಳವಣಿಗೆ ಪಡೆಯುವುದರಿಂದ ಅವುಗಳನ್ನು ಇಡಿಯಾಗಿಯೇ ಓದಿ ಸವಿಯಬೇಕು. ವಾಸ್ತವತೆಯೊಂದಿಗೆ ವಿನೋದವನ್ನು ಬೆರೆಸುವಲ್ಲಿ ಈ ಕವಿಯ ಸಿದ್ಧಿ ಹೆಚ್ಚಿನದು. 'ಕಳ್ಳನ ಅನುಭವ', 'ಮಾದರಿ ಮಾದಪ್ಪ', 'ನನ್ನ ತಂದೆಯವರಿಗೆ' ನನ್ನ ಪರಿಚಯ – ಇವೇ ಮೊದಲಾದ ಕವಿತೆಗಳು ಇದಕ್ಕೆ ಉದಾಹರಣೆಯಾಗಿವೆ. ಆದರೆ 'ಅಣ್ಣಪ್ಪ ಬಾಳಿಗಾ', 'ಸಣ್ಣಪ್ಪ ಗಾಂವಕರರಿಗೆ' ಶ್ರದ್ಧಾಪೂರ್ಣ ಕವನಗಳು.

ಹಿಮಗಿರಿಯ ಎತ್ತರವೆ ಭಾರತೀಯರದಾಗಿ
ಇಡಿಯ ಭೂಮಂಡಲವ ಮೇಲಕೆತ್ತಿ
ತಾರೆಗಳ ಗಳಿಸಿದರೆ ಈ ಪ್ರಜಾರಾಜ್ಯ ದಿನ
ಬೆಳಗಿಸಲು ಬೇಕೇನು ಮೇಣಬತ್ತಿ ?

ಎಂಬ ಆದರ್ಶಾಕಾಂಕ್ಷೆ 'ಪ್ರಜಾರಾಜ್ಯ ದಿನ'ದಲ್ಲಿ ಸೂಚಿತವಾಗಿದ್ದರೆ, 'ಬಿರುಗಾಳಿ' ಮತ್ತೆ ರಾಜಕೀಯದ ವಾಸ್ತವಕ್ಕೆಳೆಯುತ್ತದೆ. 'ಗೋವೆಯ ವಿಮೋಚನೆ' ಮುಕ್ತ ಮನಸ್ಸಿನ ಉತ್ಸಾಹ ಗಾಥಾ ಆಗಿದ್ದರೆ, 'ಗಾಂಧೀಜಿಯಲ್ಲಿ ಬಿನ್ನವತ್ತಳೆ', ರಾಜಕಾರಣಿಯ ಆತ್ಮವಿಶ್ಲೇಷಣೆಯೊಂದಿಗೆ, ಮನಸ್ಸನ್ನು ಸೆಳೆಯುತ್ತದೆ. 'ರಾಷ್ಟ್ರೀಯ ಯೋಜನೆ', ಯೋಜನೆಗಳ ಕಟು ವಿಮರ್ಶೆ ಈ ಗುಂಪಿನಲ್ಲಿ 'ನೆಹರೂ ಆಡಳಿತ' ವಿಶಿಷ್ಟವಾದದ್ದು. ರಾಜಕೀಯ ಕಾವ್ಯದಲ್ಲಿ ಬೇಗ ಕರಗುವ ವಸ್ತುವಲ್ಲವಾದರೂ ಕವಿಯ ರಾಜಕೀಯ ತಜ್ಞತೆ ಹಾಗೂ ಜೀವನಾನುಭವದಿಂದ ದೇಶದ ಆಗು ಹೋಗುಗಳ ವಸ್ತುನಿಷ್ಠ ವಿಮರ್ಶೆ ಈ ದೀರ್ಘಕವನದಲ್ಲಿ ಹರಳುಗೊಂಡಿದೆ.

ಭೂಮಿ ಇಳಿಜಾರು
ಜಾರಿದನು ನೆಹರು
ಮಾಡಿಯೂ ತ್ಯಾಗ
ಹಾಕಿದನು ಲಾಗ

ಹೀಗೆ ಕೊನೆಗೊಳ್ಳುವ ಈ ಕವಿತೆಯ ಛಂದವೂ ಒಂದು ಹೊಸ ಪ್ರಯೋಗವೆನಿಸಿದೆ. ಒಂದೊಂದು ಚರಣದಲ್ಲಿ ಐದು ಹಾಗೂ ಮೂರು ಮಾತ್ರೆಗಳನ್ನೊಳಗೊಂಡ ಅಂಥ ನಾಲ್ಕು ಚರಣಗಳ ನುಡಿ, ಎರಡೆರೆಡು ಸಾಲುಗಳಲ್ಲಿಯೂ ಅಂತ್ಯಪ್ರಾಸ ವನ್ನೊಳಗೊಂಡು, ಹಸಿಗೋಡೆಯಲ್ಲಿ ಹರಳು ಒತ್ತಿದಂತೆ ಮನಸ್ಸಿನಲ್ಲಿ ನೆಲೆಯೂರಿ ನಿಲ್ಲುತ್ತದೆ.

ಕವಿತೆಯ ವಸ್ತು ರೂಪ ಯಾವುದೇ ಇರಲಿ, ಅದನ್ನು ಸರಸವಾಗಿ, ಸರಳವಾಗಿ, ಮಾನವೀಯ ಭಾವನೆಯೊಂದಿಗೆ ಮುನ್ನಡೆಸುವ ನಿರೂಪಣಾ ಶಕ್ತಿ ದೇಸಾಯರ ಕಾವ್ಯಶೈಲಿಗಿದೆ. ಪ್ರಾಸಮೋಹ ಹೆಚ್ಚು ಎಂದು ಕೆಲವರಿಗನಿಸ ಬಹುದಾದರೂ ಪ್ರಾಸಗಳು ಇವರ ಕಾವ್ಯದಲ್ಲಿ ಹೇಳಿ ಕಳಿಸಿದ ಹಾಗೆ ಬರುತ್ತವೆ. ಆಡುವ ಭಾಷೆಯಲ್ಲಿಯೇ ಆಧುನಿಕ ಪ್ರಜ್ಞೆಯನ್ನೂ ಪ್ರಗತಿಶೀಲತೆಯನ್ನೂ ಇವರು ಮೆರೆಯಬಲ್ಲರು. ದ್ವಿಪದಿಗಳಲ್ಲಿ ಈ ಕವಿಗಿರುವ ಹಿಡಿತ ಅಸಾಧಾರಣವಾದದ್ದು.

ಛಂದಸ್ಸಿನ ನಿಯಂತ್ರಣದಿಂದ ಕಾವ್ಯಕ್ಕೆ ಒಂದು ಹಿಡಿತ ಬರುವದೆಂಬ ನಂಬಿಕೆಯಿಂದ ಅವರು ಎಂದೂ ದೂರ ಸರಿದಂತಿಲ್ಲ. ಲವಲವಿಕೆಯಿಂದಲೂ, ವಿವರಗಳ ವೈವಿಧ್ಯದಿಂದಲೂ ಕೂಡಿದ ವಿಲಕ್ಷಣವಾದ ಕಥನಶೈಲಿ ಇವರ ಕೆಲವು ಉತ್ತಮ ಕವನಗಳ ವೈಗುಣವಾಗಿದೆ. 'ತೆರಿಗೆ ಅಧಿಕಾರಿಗಳಿಗೆ ಕವಿಗಳ ಮನವಿ' ಹಾಗೂ 'ಕೋಟಿ ರತ್ನಗಳ ಕಥೆ'ಯ ಲಘುವಾದ, ನವಿರಾದ ಹಾಸ್ಯದಂತೆಯೇ 'ಚಹಾಪಾನದ ಕಥೆ'ಯಂತೆ ಗಂಭೀರವಾದ ಭಾವವನ್ನೂ ರುಚಿಗೊಳಿಸಿ ಕೊಡಬಲ್ಲರು.

ದೇಸಾಯರ ಕಾವ್ಯದ ಸಕಲ ಲಕ್ಷಣ ಸಂಪನ್ನತೆಯೊಂದಿಗೆ, ತನ್ನ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಸೂರೆಗೊಂಡಿರುವ ಪದ್ಯ 'ಸ್ವರ್ಗದ ಗೆಳಯನಿಗೆ ಪತ್ರ', ಹನ್ನೊಂದು ಭಾಗಗಳ, ಮೂರು ನೂರ ಅರವತ್ತು ಸಾಲುಗಳಲ್ಲಿ ಓತಪ್ರೋತವಾಗಿ ಒಡಮೂಡಿದ ವಿವಿಧ ಬಗೆಯ ಸಾಮಾಜಿಕ ಪ್ರಜ್ಞೆ, ಸೂಕ್ಷ್ಮ ವಿಡಂಬನೆ, ವ್ಯಕ್ತಿ ಊರು, ನಾಡು, ದೇಶವನ್ನೆಲ್ಲ ವ್ಯಾಪಿಸಿಕೊಂಡು, ಸಮಕಾಲೀನ, ಜೀವನದ ನಾನಾಮುಖಗಳನ್ನು ಪ್ರತಿಬಿಂಬಿಸಿರುವ ರೀತಿ ದಂಗುಬಡಿಸುವಂತಿದೆ. ಕನ್ನಡದಲ್ಲಿ ಸಮಕಾಲೀನ ಪ್ರಜ್ಞೆಯಿಂದ ಜೀವನವನ್ನು ವಿಮರ್ಶಿಸುವ ಇಂಥ ಪದ್ಯ ಬಹುಶಃ ದೇಸಾಯರ ಲೇಖನಿಗೇ ಮೀಸಲಾದಂತಿದೆ.

ಸುಮಾರು "ಮೂವತ್ಮೂರು ವರುಷಗಳ ಹಿಂದೆ ಶ್ರೀ ಗೋಕಾಕರು ಹೇಳಿದರು : ಕನ್ನಡಕ್ಕೆ ಇಂದಿಗೂ ಒಬ್ಬನೆ ದಿನಕರನೆಂದು ಹೇಳದೆ ಗತಿಯಿಲ್ಲ. ಅವರಂತೆ ಇನ್ನಾರೂ ಹಾಡಿಯೇ ಇಲ್ಲ". ಈ ಮಾತು ಇಂದಿನ ಸಂದರ್ಭದಲ್ಲಿಯೂ ನನಗೆ ನಿಜವೆಂದೇ ತೋರುತ್ತದೆ. ಮಕ್ಕಳಿಂದ ಮುದುಕರವರೆಗೂ ಮೆಚ್ಚುಗೆ ಪಡೆಯಬಲ್ಲ, ಬಹುಶಃ ಅಂದು–ಇಂದನ್ನದೇ ಎಂದೆಂದಿಗೂ ಸಲ್ಲುವ ಸಮಾಜವಾದಿ ಕವಿ ಶ್ರೀ ದಿನಕರ ದೇಸಾಯಿಯವರು ಕನ್ನಡಕ್ಕೆ ಸಲ್ಲಿಸಿದ ಕಾಣಿಕೆ ಅನನ್ಯವಾದದ್ದು.

ಚೆಂಬೆಳಕು, ಕಲ್ಯಾಣನಗರ
ಧಾರವಾಡ
೧೪-೭-೧೯೮೩

ಚೆನ್ನವೀರ ಕಣವಿ

ಆದಿ ಪಂಪನಿಗೆ

ಜನ್ಮ ಜನ್ಮಾಂತರಕೆ ಬನವಾಸಿ ನಾಡು,
ನಂದನದಿ ಮರಿದುಂಬಿಯನ್ನಾಗಿ ಮಾಡು,
ಎಂದು ಹಾಡಿದ ನಿನ್ನ ಆ ಹೃದಯದೊಲುಮೆ
ಇಂದಿಗೂ ನಮ್ಮ ನಾಡಿನ ಮಹಾ ಮಹಿಮೆ.

ಎಲ್ಲ ಸಾಮ್ರಾಜ್ಯಗಳು ಉರುಳಿದರು, ನಿನ್ನಾ
ಕಾವ್ಯ ಲಕ್ಷ್ಮಿಗೆ ಚ್ಯುತಿ ಬರಲಿಲ್ಲವಣ್ಣಾ,
ಕನ್ನಡದ ನುಡಿವೆಣ್ಣು ಬದುಕಿರುವ ವರೆಗೆ
ಆದಿ ಪಂಪನ ದಿವ್ಯ ಸಂದೇಶ ಧರೆಗೆ

❖❖

ಜುಲೈ ೧೯೫೯

ಕೆಂಪು ದಾಸಾಳ

೧

ಐದು ತುಟಿದಳ ನಡುವೆ
ಉದ್ದ ನಾಲಿಗೆಯುಳ್ಳ
ದಾಸಾಳವೇ ನನ್ನ ಕಾವ್ಯ ಸ್ಫೂರ್ತಿ.
ಮಲ್ಲಿಗೆಯ ಹೊಗಳದಿರು ನೂರು ಸರ್ತಿ.

೨

ಇದಕಿಲ್ಲ ದೌಲತ್ತು
ಪೇಟೆಯಲಿ ಕಿಮ್ಮತ್ತು
ಇದಕಿಲ್ಲ ಯಾರ ಎಂಜಲಿನ ಮುತ್ತು
ಮತ್ತೆ ಕೊರಳಿಗೆ ಇಲ್ಲ ನಾರಸುತ್ತು

೩

ಹೂ ಪ್ರದರ್ಶನದೊಳಗೆ
ಇದಕಿಲ್ಲ ಬಹುಮಾನ.
ವೇಶ್ಯೆಯರ ಮುಡಿಯೊಳಗೆ ಇಲ್ಲ ಸ್ಥಾನ.
ಈಶ್ವರನ ಗುಡಿಯೊಳಗೆ ಇದಕೆ ಮಾನ.

೪

ಟೊಂಗೆಯನು ನೆಟ್ಟರೂ
ಬದುಕಿಕೊಳ್ಳುವ ಜಾತಿ
ಸಾಮಾನ್ಯ ಜನರಂತೆ ಇದರ ರೀತಿ.
ನೀರೆರೆಯದಿದ್ದರೂ ಇಲ್ಲ ಭೀತಿ.

೫

ತೋಟದಂಚಿನ ವರೆಗೆ
ದಿಟ್ಟಿ ದಿಟ್ಟಿಸಿ ನೋಡಿ
ಗಿಡಗಳನು ಕಾಯುವುದು ಇದರ ಕೆಲಸ
ಹೀಗೆ ದುಡಿಯುವನಾರು ಇಡಿಯ ದಿವಸ ?

೬

ಸಾಮಾನ್ಯ ಹೂ ಜಾತಿ,
ಬೇಕಿಲ್ಲ ಪ್ರಖ್ಯಾತಿ
ದಾಸಾಳ ನನ್ನ ಜೀವನದ ರೀತಿ.
ಇದಕಿಲ್ಲ ಮಾರಾಟ ಕರದ ಭೀತಿ.

೭

ದಾಸಾಳದೊಳಗುಂಟು
ನನ್ನ ಜೀವದ ಗಂಟು.
ಹನ್ನೆರಡು ತಿಂಗಳೂ ಬಿರಿದು ಬಿರಿದೂ,
ಇದಕೆ ಬೇಕಾಗಿಲ್ಲ ಯಾವ ಬಿರುದೂ.

೮

ದೇವ ದೇವನ ಕೂಡ
ಮಾತಾಡಲಿಕೆ ಗೂಢ
ದಾಸಾಳದೆಸಳೆ ಬೇಕೆಂಬರಣ್ಣ,
ಮಂಗಲದ ಸಂಕೇತ ಕೆಂಪು ಬಣ್ಣ

೯

ಮಲ್ಲಿಗೆಯ ನರುಗಂಪು
ದಾಸಾಳಕ್ಕಿಲೆಂದು
ಖಿನ್ನನಾಗುವ ಕವಿಗೆ ಒಂದು ಮಾತು :
ರಕ್ತದೊಳಗಿನ ನೋವು
ಸಂವೇದನೆಯ ಹೂವು,
ಇದಕಿಲ್ಲ ಕಾಮ ಹುಟ್ಟಿಸುವ ಕಾವು.

❖❖

ಎಪ್ರಿಲ್ ೧೯೬೨

ರಾಜಧಾನಿಗೆ

ಬೆಂಗಳೂರಿಗೆ ಹೋಗಿ ಏನೇನು ತಂದೆ ?
ಮಂತ್ರಿಗಳು ಸಿಗಲಿಲ್ಲ, ಹಾಗೆಯೇ ಬಂದೆ.
ನಿನ್ನ ಸಂಗಡ ಹನುಮ ಇರಲಿಲ್ಲವೇನು ?
ಜೊತೆಯಲ್ಲಿ ಯಾರಿಲ್ಲ, ಒಬ್ಬನೇ ನಾನು,
ನೆನಪಿಲ್ಲವೇ ಮೊನ್ನೆ ಹೇಳಿದ್ದು ಅಜ್ಜ ?
ಹನುಮ ಬೇಕೇಬೇಕು; ಇದು ರಾಮರಾಜ್ಯ.

❖❖

ಅಕ್ಟೋಬರ್ ೧೯೬೨

ನಮ್ಮ ಕಡಲಧ್ವನಿ

ನಮ್ಮ ಕಡಲಧ್ವನಿಗೆ ಕನ್ನಡದ ದೇಸಿ
ನಲಿಯುತಿದೆ ಗಿರಿ ಶಿಖರಗಳ ಮೇಲೆ ಬೀಸಿ.
ಗಿರಿ ನಿರ್ಝರದ ಗಾನವೂ ಪುಟಿದು ಹಾರಿ
ಸಂತಸದ ಭಾವೈಕ್ಯ ಕಡಲೊಳಗೆ ಸೇರಿ

ನಮ್ಮ ಕಡಲಧ್ವನಿಗೆ ಕನ್ನಡದ ಗಾನ,
ಚಿರಕಾಲ ನುಡಿಯುವುದು ನೂರು ಶತಮಾನ
ಇದನು ನುಡಿಸುವ ತಂತಿಯೇ ಕ್ಷಿತಿಜ ರೇಖೆ.
ಎಂಬುದನು ಪುನಹ ಪುನಹಾ ಹೇಳಬೇಕೆ ?

❖❖

ಮಾರ್ಚ ೧೯೬೫

ಪ್ರಜಾರಾಜ್ಯದ ದಿನ

ಹಿಮಗಿರಿಯ ಎತ್ತರವೆ ಭಾರತೀಯರದಾಗಿ
ಇಡಿಯ ಭೂಮಂಡಳವ ಮೇಲಕೆತ್ತಿ
ತಾರೆಗಳ ಗಳಿಸಿದರೆ ಈ ಪ್ರಜಾರಾಜ್ಯ ದಿನ
ಬೆಳಗಿಸಲು ಬೇಕೇನು ಮೇಣಬತ್ತಿ ?

ಭೂಲೋಕ ಮಿಂಚಿಸಲು ಪಾತಾಳ ಧುಮುಕಿಡುವ
ಕನ್ನಡ ಶರಾವತಿಯ ತ್ಯಾಗ ಬುದ್ಧಿ
ಭಾರತೀಯರದಾಗಿ, ಜನಶಕ್ತಿ ರಂಜಿಸಲಿ
ವಿದ್ಯುದಾಗರದಲ್ಲಿ ಅದ್ದಿ ಅದ್ದಿ

ಗಂಗೆ ಯಮುನೆಯ ಕೃಷ್ಣೆ ತುಂಗ ಭದ್ರೆಯ ಮೇಳ
ಒಂದೆ ಶರಧಿಯ ಸೇರುವಂತೆ ಕೊನೆಗೆ
ದಕ್ಷಿಣೋತ್ತರ ಪೂರ್ವ ಪಶ್ಚಿಮದ ಹೊನಲುಗಳು
ಬಂದು ಕೂಡಲಿ ಒಂದೆ ಹೃದಯದೊಳಗೆ

ಈ ಪ್ರಜಾರಾಜ್ಯ ದಿನ ಅಸುರ ವೃತ್ತಿಯ ಮಥನ;
ಬೂದಿಯಾಗಲಿ ಕದನ ಇನ್ನು ಮುಂದೆ.
ಬುದ್ಧ ದೇವನ ಹೃದಯದಿಂದ ಗಾಂಧಿಯ ಉದಯ
ಹೊಸ ಯುಗಾದಿಯ ನಾಂದಿ ಇಂದಿನಿಂದೆ

❖❖

ಜನೆವರಿ ೧೯೫೫

ಕರಾವಳಿಯ ಕಮಲೆಗೆ

ವರಿಸುವೆಯಾದರೆ ಬೇಗನೆ ಹೇಳು ?
ಊಟಕ್ಕಿದೆ ಕೊರಸಕ್ಕಿಯ ಕಾಳು.

ಎರಡೂ ಹೊತ್ತಿಗೆ ಮೀನಿನ ಪಳದಿ,
ಕೊರಳಿಗೆ ತುಸು ಬಂಗಾರದ ಹಳದಿ.

ಕರಿ ಮೆಣಸಿನ ಹಸಿ ಗೊಂಚಲು ನತ್ತು,
ಕಂಗೊಳಿಸಲು ಕೊಡುವೆನು ಬಿಸಿ ಮುತ್ತು.

ಬೆಂಡೋಲೆಗೆ ಹಾಗಲ ಬಲು ಚೆಂದ.
ಅಲುಗಾಡಲು ಕಿವಿ ಮಿಗಿಲಾನಂದ.

ಮುಡಿಯುವ ದಂಡೆಗೆ ಬಾಡದ ನಾರು.
ಕುಡಿಯುವ ಪಾನಕ ನಿಂಬೆಯ ನೀರು.

ಕಡಲಿನ ನೊರೆ ಸಂಸಾರದ ಬಿರುಗು
ತೆರೆಗಳ ಕುಣಿತಕೆ ಹಾರಲಿ ಸೆರಗು

ಕೆನ್ನೆಗಳೆರಡೂ ಟೊಮೆಟೋ ಹಣ್ಣು
ಅಕ್ಕರೆ ಹಿಡಿಸುವ ಬೆಕ್ಕಿನ ಕಣ್ಣು.

ನಾಸಿಕವೆಂಬುದು ಹೀರೇ ಕಾಯಿ
ಯಾವಾಗಲೂ ತಾಂಬೂಲದ ಬಾಯಿ.

ಕೈ ಮೈ ಆಕಳಿನಂತಿದೆ ಗಿಡ್ಡ
ಇದಕಾಗಿಯೆ ಕುಂಕುಮ ತುಸು ದೊಡ್ಡ

ವರು–ವರುಷಕೆ ಹುಟ್ಟಿದರೂ ಕೂಸು
ನಿನಗಾಗದು, ಸಖಿ, ಯಾವುದು ತ್ರಾಸು

ಚಳಿಗಾಲದ ಥಂಡಿಗೆ ಬಿಸಿ ದೋಸೆ
ಕಂಬಳಿಯಂತಿದೆ ಗಂಡನ ಮೀಸೆ.

ಪೂರಾ ಹುಡುಕದಿರೂ ಬ್ರಹ್ಮಾಂಡ
ಸಿಗಲಾರನು ನನ್ನಂತಹ ಗಂಡ.

ನನಗೂ ಸಿಗಲಾರಳು ಸವಿ ಹೆಣ್ಣು
ನೀನೆಂದರೆ ಸಖಿ ಹಲಸಿನ ಹಣ್ಣು.

ವರಿಸುವೆಯಾದರೆ ಬೇಗನೆ ಹೇಳು,
ಬಾಳಾಗಲಿ ಯಾಲಕ್ಕೀ ಕಾಳು.

❖❖

ಅಕ್ಟೋಬರ್ ೧೯೬೧

ಬಿರುಗಾಳಿ

ಕಿಟಕಿಯ ಕದಗಳೆನೆಲ್ಲಾ ಭದ್ರವಾಗಿ ಮುಚ್ಚು.
ವಿಧಾನಸೌಧದ ಸುತ್ತಲು ಬಿರುಗಾಳಿಯೇ ಹೆಚ್ಚು.

ರಾಜ್ಯದ ಆದ್ಯಂತ ನಡೆದಿದೆ ದೊಡ್ಡ ಒಳಸಂಚು !
ಹಾರಿ ಹೋದವು ಕಚೇರಿಯ ಮೇಲಿನ ಎಲ್ಲಾ ಹಂಚು.

ಸುರಿಯ–ಹತ್ತಿದೆ ಒಂದೇ ಸವನೆ ವಿಪರೀತ ಮಳೆ
ಎರಡೂ ದಂಡೆಗಳ ಕೊಚ್ಚಿಕೊಂಡು ಹೋಯಿತು ಹುಚ್ಚು ಹೊಳೆ.

ಮಹಾಸಾಗರನಿಗೂ ಬಂದು ಬಿಟ್ಟಿದೆ ಅತೀವ ಸಿಟ್ಟು;
ಮೀನು ಸಹ ಸಿಗದೆ ತೀವ್ರವಾಗಿದೆ ಆಹಾರದ ಬಿಕ್ಕಟ್ಟು.

ಆಕಾಶದಲ್ಲೂ ಹಬ್ಬಿಕೊಂಡಿದೆ ತಾರೆಗಳ ಅಶಾಂತಿ !
ಗುಡುಗೂ ಸಿಡಿಲೂ ಕೂಡಿಯೇ ಹೂಡಿವೆ ಕ್ರಾಂತಿ.

ಅಪೂರ್ವವಾಗಿದೆ ನಿಸರ್ಗದ ಈ ಅಸಹಕಾರ
ಇಂಥ ಪರಿಸ್ಥಿತಿಯಲ್ಲಿ ಬದುಕುವುದೆ ನಮ್ಮ ಸರಕಾರ ?

❖❖

ಅಕ್ಟೋಬರ್ ೧೯೫೮

ಬಂಡೆಗಲ್ಲಿಗೆ

ಬಂಡೆಗಲ್ಲೇ, ನಿನಗೆ ಇಲ್ಲೇನು ರಟ್ಟೆ?
ಮೈ ತುಂಬ ಕಾಣುವುದು ಬರಿ ದೊಡ್ಡ ಹೊಟ್ಟೆ.
ಸಿಟ್ಟಾಗ ಬೇಡಯ್ಯ, ನಾನು ಅಜ್ಞಾನಿ
ನಿನ್ನ ಕತೆ ಹೇಳಿದನು ಮೊನ್ನೆ ವಿಜ್ಞಾನಿ.

ಬ್ರಹ್ಮಾಂಡದೊಡಲಿಂದ ನೀ ಮೂಡಿ ಬಂದೆ,
ಭೂಖಂಡಗಳ ಪಿಂಡವನೆ ಸವಿದು ನಿಂದೆ
ಕೋಟಿ ಶತಮಾನಗಳ ಹಿಂದೆ ಭೂಗರ್ಭ
ಜ್ವಾಲೆಯಾಗಲು ನಿನಗೆ ಬಂತೆ ಸಂದರ್ಭ ?

ಹನುಮ ಭೀಮರಿಗಿಂತ ನೀ ಮೊದಲೆ ಹುಟ್ಟಿ
ಚಿರಜೀವಿಯಾದೆ ಗಿರಿ ಶಿಖರಗಳ ಮೆಟ್ಟಿ
ಯುಗ ಯುಗಾಂತರಗಳನು ಬೇರಿಜು ಮಾಡಿ
ಲೆಕ್ಕ ಹಾಕುವ ಕಲಿಯೆ, ನಿನಗಿಲ್ಲ ಧಾಡಿ.

ಕಾಲನಿಗೆ ನೀನೊಬ್ಬ ಹಳೆ ಕಾರಕೂನ.
ನಿನ್ನ ಧಪ್ತರದೊಳಗೆ ನಾನಾ ಪುರಾಣ.
ನೀ ಕಂಡ ವಿಪ್ಲವಕೆ ತರತರದ ಮೋರೆ,
ಮೊಂಡ ಕೊಡಲಿಯ ಹಿಡಿಗೆ ಅಣುಯುಗದ ಧಾರೆ

❖❖

ಮಾರ್ಚ ೧೯೬೨

ಸೋಜಿಗದ ಪಟ್ಟಣ

ಸೋಜಿಗದ ಪಟ್ಟಣವ ನೋಡಲಿಕೆ ಹೋಗೋಣ,
ಶಾರದಾ ರಾಣಿಯರ ವಾಸಸ್ಥಾನ.
ವಿಸ್ತಾರದಲಿ ನಗರ ಚಿಕ್ಕದಾದರೂ ಕೂಡ
ಕೀರ್ತಿಯಲಿ ಅದಕಿಲ್ಲ ಸರಿ ಸಮಾನ,

ಪ್ರತಿಯೊಂದು ಕಟ್ಟಡಕೆ ಏಳೆಂಟು ಮಹಡಿಗಳು,
ಸೋಪಾನಗಳ ಕಾಣಲಾರೆ, ಕಂದ,
ಬಾಗಿಲಿಗೆ ಕದವಿಲ್ಲ, ಬೀಗ ಹಾಕುವುದಿಲ್ಲ;
ಇಣಕಿ ನೋಡುವರು ಜನ ಹೊರಗಿನಿಂದ,

ಈ ಪಟ್ಟಣದ ಜನರು ಎಷ್ಟು ಮಾತಾಡಿದರು
ನೀರವತೆ ನಿಶ್ಶಬ್ದ, ಗಾಢ ಮೌನ,
ಅದರ ನಾಲಗೆ ಬಹಳ ತೆಳುವೆಂದು ಹೇಳುವರು
ಆದರೂ ಅದಕಿಲ್ಲ ಯಾವ ಊನ.

ಐನೂರು ವರುಷಗಳ ಮುತ್ತಾತ್ತರಿದ್ದರೂ
ಅವರ ಮುಖದಲಿ ಮುಪ್ಪು ಕಾಣಲಾರ,
ಅವರ ತುಟಿಯಿಂದ ಹೊರಸೂಸುವುದು ಸಂಗೀತ,
ಎಲ್ಲವೂ ಸೋಜಿಗವು, ಹೇಳ ತೀರ.

ಸತ್ತವರು ಜೀವಂತರಾಗಿ ನಿಲ್ಲುವ ನಗರ !
ಮಿಂಚುತಿದೆ ಪೂರ್ವಜರ ದಿವ್ಯ ಜ್ಯೋತಿ,
ಅಂಜಬೇಡಲೆ, ಮಗನೆ, ಭೂತದೆವ್ವಗಳಲ್ಲ
ನಮ್ಮಂತೆಯೇ ಅವರು ನರನ ಜಾತಿ.

ಬೀದಿ ಬೀದಿಯ ಗುಂಟ ಜ್ಞಾನ ಪ್ರಣತೆಯ ಬೆಳಕು
ಸಾಮಾನ್ಯ ಸ್ಥಳವಲ್ಲ, ಪುಣ್ಯಭೂಮಿ
'ಗ್ರಂಥಭಂಡಾರ'ವೇ ಈ ಪಟ್ಟಣದ ಹೆಸರು.
ನೋಡಲಿಕೆ ಹೋಗೋಣ ಬನ್ನಿ, ಸ್ವಾಮಿ

❖❖

ಜುಲೈ ೧೯೬೨

ಮುತ್ತಜ್ಜ ಹೇಳಿದ್ದು

ಸುಖವಾಗಿ ಸಾಗಿತ್ತು ನಮ್ಮ ಸಂಸಾರ
ಆ ಕಾಲದೊಳಗಿತ್ತು ರಾಣಿ ಸರಕಾರ,
ಆ ಕಾಲವೇ ಹಾಗೆ; ಅದು ಒಂದು ಕನಸು
ಬಲು ಅಗ್ಗವಾಗಿತ್ತು ಪ್ರತಿಯೊಂದು ಜಿನಸು,
ನೂರು ತೆಂಗಿನ ಕಾಯಿ ಒಂದು ಮಣ ಅಕ್ಕಿ.
ವೀಳ್ಯೆದೆಲೆ ತಂಬಾಕು ಮೆಣಸು ಯಾಲಕ್ಕಿ,
ನನಗೊಂದು ಪರಕಾಳೆ, ಸೀರೆ ಹೆಂಡತಿಗೆ
ಎಲ್ಲವೂ ಬರಿ ಒಂದು ರೂಪಾಯಿಯೊಳಗೆ !

❖❖

ಅಕ್ಟೋಬರ್ ೧೯೬೨

ನನ್ನ ತಂದೆಯವರಿಗೆ

೧

ಪಡುವ ದಿಕ್ಕಿಗೆ ಮೂಡಿ ಬಂದರೂ ಭಾನು
ಅಲಗೇರಿ ಬಿಟ್ಟು ಕದಲುವುದಿಲ್ಲ ನೀನು.
ಈ ಹಳ್ಳಿಯೇ ನಿನಗೆ ಏಶಿಯಾ ಖಂಡ.
ಅಲಗೇರಿಯೊಳಗುಂಟು ಅಖಿಲ ಬ್ರಹ್ಮಾಂಡ.

೨

ಹಗಲಿರುಳು ನೀನು ತೆಂಗಿನ ಮರದ ಬುಡಕೆ.
ತೆಂಗು ಲೇಸೆಂದು ತಿನ್ನುವುದಿಲ್ಲ ಅಡಕೆ.
ಎಂದಿಗೂ ಮೂಸಿ ನೋಡಿಲ್ಲ ತಂಬಾಕು.
ಎರಡು ಹೊತ್ತಿಗೆ ಊಟ ಸಿಕ್ಕಿದರೆ ಸಾಕು.

೩

ಸುತ್ತಲಿನ ಗಿಡಬಳ್ಳಿಗಳು ನಿನ್ನ ಬಳಗ.
ಕೈಯೊಳಗೆ ನವಧಾನ್ಯಗಳ ಸಿಕ್ಕೆ–ಕೊಳಗ.
ಸಣ್ಣ ಸಸಿಗಳಿಗೆಲ್ಲ ನೀನೆ ಮುತ್ತಜ್ಜ.
ಹಸುರಾಗಿ ಎಸೆಯುತಿದೆ ನಿನ್ನ ಸಾಮ್ರಾಜ್ಯ.

೪

ದನಗಳೆಂದರೆ ನಿನಗೆ ಜನನಿಗಳ ಪ್ರೀತಿ.
ಈ ಪ್ರೀತಿ ಎನ್ನುವುದು ಹಾಲಿನ ಫಜೀತಿ,
ಹಾಲು ಕೊಡದಂಥ ಆಕಳ ಸಂಖ್ಯೆ ಜಾಸ್ತಿ
ಈ ಜಾಸ್ತಿಯೇ ನಿನ್ನ ಜೀವನದ ಆಸ್ತಿ

೫

ಯಾರ ಮನ ನೋಯಿಸದೆ ಬಾಳಿದವ ನೀನು
ನಿನ್ನ ನಡತೆಗೆ ನಿತ್ಯ ಮೆಚ್ಚುವನು ಭಾನು
ಸತ್ಯವೆಂಬುದು ತಲೆಗೆ ಸುತ್ತಿದ ರುಮಾಲು
ಬೆತ್ತ ಕಬ್ಬಿನ ಕೋಲು; ನಿನಗಿಲ್ಲ ಸೋಲು

೬

ಶೀಲವೆಂಬುದು, ಮಗನೆ, ಜೀವನದ ಜೇನು,
ಎಂಬ ಕಾಗುಣಿತ ಕಲಿಸಿದೆ ನನಗೆ ನೀನು
ನೀನು ಕಲಿಸಿದ ವರ್ಣಮಾಲೆಯ ಸುವರ್ಣ
ಬಂಗಾರಗಿಂತಲೂ ಶ್ರೇಷ್ಠ, ದತ್ತಣ್ಣ.

೭

ದತ್ತಣ್ಣ, ನಿನ್ನ ಹೃದಯದ ಹಣೆ ವಿಶಾಲ.
ನಾನು ತೀರಿಸಲಾರೆ ನೀನಿತ್ತ ಸಾಲ.
ಪ್ರತಿಯೊಂದು ಹಳ್ಳಿಯಲಿ ನಿನ್ನಂಥ ವ್ಯಕ್ತಿ
ಹುಟ್ಟಿ ಬಂದರೆ ಮಾತ್ರ ಭಾರತಕೆ ಮುಕ್ತಿ.

❖❖

ಜುಲೈ ೧೯೬೪

ದಸ್ಕುತ್ತು

ಸಹಿ ಅನ್ನುವರು ಕೆಲರು
ರುಜು ಅನ್ನುವರು ಹಲರು
ದಸ್ಕತ್ತು ಅನ್ನುವರು ಮೈಸೂರಿನವರು
ಕನ್ನಡದ ವಿವಿಧತೆಗೆ ಇದು ಒಂದು ಕುರುಹು

ಬ್ಯಾಂಕಿನೊಳಗಿನ ಗಂಟು
ದಸ್ಕತ್ತಿನೊಳಗುಂಟು
ಸಹಿ ಮಾಡಿದರೆ ಸಾಕು, ಕಾಗದದ ತುಂಡು
ಜೀವಂತವಾಗುವದು ಚೇತರಿಸಿಕೊಂಡು.

ಶ್ರೀಮಂತರಿಗೆ ಹುಂಡಿ
ಬಡವರಿಗೆ ಒಣ ಹಿಂಡಿ
ಬಡವ ಸಹಿ ಮಾಡಿದರೆ ಮಸಿ ಕೂಡ ವ್ಯರ್ಥ
ಸರಿಯಾಗಿ ತಿಳಿದಿರಲಿ ಈ ಮಾತಿನರ್ಥ.

ಒಮ್ಮೊಮ್ಮೆ ದಸ್ಕತ್ತು
ತರಬಹುದು ಆಪತ್ತು
ಜಾಗರೂಕತೆಯಿಂದ ಇರಬೇಕು, ನೋಡ
ಅಮಲು ತಲೆಗೇರಿದರೆ ಸಹಿ ಮಾಡಬೇಡ.

ಎಡಗೈಯ ಹೆಬ್ಬೆಟ್ಟು
ದಸ್ಕತ್ತಿನ ನೆಲಗಟ್ಟು
ಕೈಯೊಳಗೆ ಲೆಕ್ಕಣಿಕೆ ನಡೆಯದಿದ್ದಾಗ
ಹೆಬ್ಬೊಟ್ಟಿಗೂ ಉಂಟು ಬೇಕಷ್ಟು ಜಾಗ

ಓ ನನ್ನ ದಸ್ಕತ್ತೆ
ರೇಗಿದಳು ನನ್ನತ್ತೆ
ಈ ತರದ ಲಘು ಕವನ ಬರೆವುದನು ಬಿಟ್ಟು
ಹೆಂಡತಿಯ ರಮಿಸೆಂದು ಮಾಡಿದಳು ಸಿಟ್ಟು

❖❖

ಮೇ ೧೯೮೧

ನನ್ನ ಭಿಕ್ಷಾ ಪಾತ್ರೆ

ಭಿಕ್ಷೆ ಬೇಡುವುದು ನನಗೊಂದು ಅಭ್ಯಾಸ
ಲಕ್ಷ ದಶಲಕ್ಷ ಕೂಡಿಸುವ ಹವ್ಯಾಸ.
ಈ ಭಿಕ್ಷೆಯಿಂದ ಬಡ ಮಕ್ಕಳಿಗೆ ವಿದ್ಯೆ
ಒದಗಿದಾಕ್ಷಣ ನನಗೆ ಕಣ್ತುಂಬ ನಿದ್ದೆ.

ಈ ನಿದ್ದೆಯಿಂದ ನಾನೇಳುವುದು ಬೇಡ
ನೂರು ಶತಮಾನಗಳ ಕಳೆದರೂ ಕೂಡ,
ನಾ ಬೇಡಿ ತಂದದ್ದು ಬರಿ ಒಂದು ತೊಟ್ಟು
ನಿಶ್ಚಿಂತ ಮಲಗುವೆನು ನಿಮಗಿದನು ಕೊಟ್ಟು

❖❖

ನವಂಬರ್ ೧೯೬೩

ಅಜ್ಜನ ದೀಪಾವಳಿ

ಹಾಕಮ್ಮ ಹಾಕು ಮಂಗಳದ ರಂಗೋಲಿ
ಸ್ವಲ್ಪವೂ ಜಾಗ ಬಿಡಬೇಡಮ್ಮ ಖಾಲಿ
ಎಲ್ಲೆಲ್ಲಿಯೂ ಹಣತೆಯಲಿ ದೀಪ ಹಚ್ಚು,
ದೀಪಗಳ ನೋಡುವುದು ನನಗೊಂದು ಹುಚ್ಚು

ಇನ್ನೆಷ್ಟು ದಿನ ನೋಡುವೆನೊ ! ಯಾರು ಬಲ್ಲಾ !
ಬನ್ನಿ, ಮಕ್ಕಳೆ, ತಿನ್ನಿ ಅವಲಕ್ಕಿ ಬೆಲ್ಲ
ನನಗಾಯ್ತು ಎಂಬತ್ತು ! ಕರೆಯುತಿದೆ ಮಣ್ಣು !
ಮರಿಮಕ್ಕಳನು ನೋಡಿ ಮುಚ್ಚುವೆನು ಕಣ್ಣು

❖❖

ನವಂಬರ್ ೧೯೬೪

ಕುಡುಕ

ಅಡವಿಯೊಳಗಿನ ಹೂವುಗಳನೆಲ್ಲ ಮುಡಿದು
ಕುಡುಕನಾಗುವೆ ನಾನು ಮಕರಂದ ಕುಡಿದು
ಉದ್ಯಾನದೊಳಗಿರುವ ವೃಕ್ಷಗಳನ್ನಪ್ಪಿ
ಗರಿಕೆ ಹಸೆಯಲಿ ಬೀಳುವೆನು ಧ್ಯಾನ ತಪ್ಪಿ.

ಚಿಟ್ಟೆ ಪಾತರಗಿತ್ತಿಗಳ ಬೆನ್ನನೇರಿ
ಹೂವಿಂದ ಹೂಗಳಿಗೆ ಭೃಂಗದೊಲ ಹಾರಿ
ಜೇನು ದುಂಬಿಯ ಜತೆಗೆ ರಮ್ಯ ಮೇಲಾಟ
ಮಕರಂದ ಸೇವನೆಯ ದೊಡ್ಡ ಸೆಣಸಾಟ

ಪಾನ ಪ್ರತಿಬಂಧವನು ಪೂರ್ಣ ತಡೆಹಿಡಿದು
ಕುಡುಕನಾಗುವೆ ನಾನು ಜೇನ ಕುಡಿ ಕುಡಿದು
ಮದ್ಯ ಸತ್ಯಾಗ್ರಹದ ಈ ವಿಜಯ ಭೇರಿ
ಸತ್ತವರನೆಬ್ಬಿಸಲಿ ಅಮಲು ತಲೆಗೇರಿ.

❖❖

ಜುಲೈ ೧೯೫೬

ಗೋವೆಯ ವಿಮೋಚನೆ

ಗೋಮಂತ ಪರ್ವತದ ದುಗ್ಧ–ಸಾಗರದಿಂದ
ಧೀಮಂತ ಜಯದೂತ ಮೇಲಕೆದ್ದ
ಐದು ಶತಮಾನಗಳ ಬೈದು ಹೊಲಗೆಡಿಸಿದವ
ಸಾಮ್ರಾಜ್ಯವಾದಿ ಮುಗ್ಗರಿಸಿ ಬಿದ್ದ.

ಕೊಂಕಣದ ವೃಷಭಗಳು ಹೆಗಲ ನೊಗವನು ಬಿಸುಡಿ
ಟೊಂಕ ಕಟ್ಟಲು ಮೇಲೆ ಕುಳಿತ ದೆವ್ವ.
ಉರುಳಿ ಬೀಳಲು ಕೆಳಗೆ, ಸಪ್ತಸಾಗರದಾಚೆ
ಪೊರಕೆಯಿಂದಟ್ಟಿದಳು ಮಸಣದೆವ್ವ.

ಅಂಜದೀವದ ನಂಜು ಅಂಜಿ ಕಡಲೊಳಗಿಳಿಯೆ
ಪಂಜು ಹಿಡಿದವು ಮೀನು ಹುಡುಕಲೆಂದು;
ಕಡಲ ಬೆಳ್ಳಕ್ಕಿಗಳು ಮುಳುಗಿ ನಂಜನು ನುಂಗೆ
ಪರಿಶುದ್ಧವಾಯ್ತು ಭಾರತದ ಸಿಂಧು,

ಮೂರು ದಿಕ್ಕಿಗೆ ಮುಕ್ತಿಸೇನೆ ರಾರಾಜಿಸಲು
ಆರು ಸಾವಿರ ಮೈಲು ದೂರದಲ್ಲಿ
ಸಾಮ್ರಾಜ್ಯವಾದಿಗಳ ಮುದಿ ಗೂಬೆ ತಲ್ಲಣಿಸೆ,
ಪೋರ್ತುಗಾಲದ ಹಣೆಯ ಮೇಲೆ ಹಲ್ಲಿ,

ಗೋಮಂತಕದ ಗೋವು ತಾಯ್ನಾಡ ಕೊಟ್ಟಿಗೆಗೆ
ಹಿಂದಿರುಗಿದೊಡನೆ ಕಾನನವ ದಾಟಿ,
ಹೂಮಾಲೆಯನು ಹಾಕಿ ಕುಂಕುಮವ ಲೇಪಿಸಲು
ಚಪ್ಪಾಳೆ ತಟ್ಟಿದರು ನೆರೆದ ಕೋಟಿ.

ಐನೂರು ವರುಷಗಳ ಮೇಲೆ ತವರೂರ್ ಸೇರೆ
ಕೇರಿ ಕೇರಿಗಳಿಂದ ಬಳಗ ಬಂದು
ಊರ ಮಗಳಿಗೆ ಸ್ವಾಗತವ ಕೋರಿ ಹರಸಿದರು
ಬಾ ಮುಗುದೆ, ಬಾ ಮಗಳೆ, ಬಾರೆ ಎಂದು.

ಪಾರಿವಾಳಗಳೆಲ್ಲ ಪಾರಿಜಾತವ ಮುಡಿದು
ಆಗಸದ ದಶದಿಕ್ಕುಗಳಿಗೆ ಹಾರಿ
ಮುಕ್ತಿಸಂದೇಶವನು ಬೀರಿ ಮರಳಿದ ಬಳಿಕ
ಏಶಿಯದ ದೆಸೆದೆಸೆಗೆ ವಿಜಯ ಭೇರಿ.

ತೆಂಗು ಮಾವಿನ ತೋಟ, ಲಲಿತ ಕಲೆಗಳ ನೋಟ
ಗುಡಿ ಇಗರ್ಜಿಯ ಮಾಟ ನಮ್ಮ ಗೋವೆ.
ಕೊಂಕಣದ ಸಂಪತ್ತು, ಕೊಂಕಣೆಯ ನುಡಿಮುತ್ತು
ತೆಂಕಣದ ಭಾರತಕೆ ವರದ ನಾವೆ.

ಭಾರತೀಯ ಮಂಟಪಕೆ ಮತ್ತೊಂದು ರಸಬಾಳೆ
ಚಪ್ಪರಕೆ ಇನ್ನೊಂದು ಇನಿಯ ಹಣ್ಣು
ಆರತಿಯ ತೋರಿಸಲು ಕಮನೀಯ ನಾರಿಯರು
ಧನ್ಯವಾಯಿತು ನೋಡಿದಂಥ ಕಣ್ಣು.

ಗೋಮಂತಕದ ತಾಯಿ ಹೇಮಂತದಲಿ ತೊಟ್ಟ
ಮುಕ್ತಿ ಪೀತಾಂಬರದ ಶುಭ್ರ ಬಣ್ಣ
ಕೊನೆಯವರೆಗೂ ಕಡಲ ನೊರೆಯಾಗಿ ಉಕ್ಕೇರಿ
ಸ್ವಾತಂತ್ರ್ಯ ಲಹರಿಗಳ ಕುಣಿಸಲಣ್ಣ.

❖❖

ಜನೆವರಿ ೧೯೬೨

ನಮ್ಮ ಅಂಕೋಲೆಯವ

೧

ಇವನು ಹುಟ್ಟಿದ ಊರು ನಮ್ಮ ಅಂಕೋಲೆ.
ಕೈ ಕಾಲಿಗಿರಲಿಲ್ಲ ಯಾವ ಸಂಕೋಲೆ.
ಇವನ ವಿದ್ಯಾಭ್ಯಾಸ ಆದದ್ದು ಇಲ್ಲಿ
ಮತ್ತೆ ಗುದ್ದಾಡಿದ್ದು ಗುಡಗಾರ ಗಲ್ಲಿ.
ಪೂರ್ಣ ಕಲಿಯದೆ ನಡುವೆಯ ಸಾಲೆ ಬಿಟ್ಟು
ಓಡಿ ಹೋದನು ಅಣ್ಣನಿಗೆ ದಗಾ ಕೊಟ್ಟು.

೨

ಹುಬ್ಬಳ್ಳಿಯಲ್ಲಿದ್ದ ಒಂದೆರಡು ವರುಷ.
ಇವನ ಮನಸಿಗೆ ಆಗ ಇರಲಿಲ್ಲ ಹರುಷ.
ತಾಪದಾಯಕ ಕೆಲಸ ವರಮಾನ ಕಡಮೆ.
ಮೇಲಾಗಿ ಕಂಪನಿಯ ಮಾಲಿಕನ ಜುಲುಮೆ.
ಒಂದು ದಿನ ಕಾಣೆಯಾದನು ಇಲ್ಲ ಪತ್ತೆ,
ಎಷ್ಟು ಹುಡುಕಾಡಿದರು ಸಿಗಲಿಲ್ಲ ಮತ್ತೆ

೩

ಎಂಟು ತಿಂಗಳ ಮೇಲೆ ಬಂತಂತೆ ಸುದ್ದಿ;
ಸಂಪೂರ್ಣ ಕೆಟ್ಟು ಹೋಗಿದೆ ಎಂದು ಬುದ್ಧಿ.
ಕೆಟ್ಟು ಹೋದರು ಬುದ್ಧಿ ರೇಶಿಮೆಯ ಕೋಟು.
ಕಿಸೆಯೊಳಗೆ ನೂರು ರೂಪಾಯಿಗಳ ನೋಟು.
ಒಬ್ಬ ಗುಜರಾತಿ ಹೆಂಗಸು ಗಂಟು ಬಿದ್ದು.
ಇವನ ಮನ ಬಂದಂತೆ ನಡೆದಿತ್ತು ಮುದ್ದು.
ಎಲ್ಲ ತರದಿಂದಲೂ ಐಶಆರಾಮು.
ಚಿಂತೆಯೆಂಬುದು ಇಲ್ಲ, ಇದ್ದ ಭೇಪಾಮು.

೪

ದಿನ ಹೋದ ಹಾಗೆಲ್ಲ ಏರಿದನು ಮೇಲೆ.
ಆ ಕೃಷ್ಣ ಪರಮಾತ್ಮ ! ಅವನದೇ ಲೀಲೆ !
ವ್ಯಾಪಾರಿಯಾದ, ಕಮಿಶನ್ನ, ಏಜಂಟು.
ಕೂತಲ್ಲಿಯೇ ಇವನ ಕಿಸೆಯೊಳಗೆ ಗಂಟು.
ಗೋದಾಮುಗಳ ತುಂಬ ತರ ತರದ ಮಾಲು.
ದೊಡ್ಡದಾಯಿತು ಇವನ ಹೊಟ್ಟೆ ಕೈ ಕಾಲು.
ಸಕ್ಕರೆ ಸಿಮೆಂಟು ಸಿಗರೇಟು ಮುಂತಾದ್ದು
ಇತ್ಯಾದಿ ಇತ್ಯಾದಿ ಏನು ಬೇಕಾದ್ದು.

೫

ಅಷ್ಟರೊಳಗೇ ಬಂತು ಆ ಮಹಾಯುದ್ಧ.
ನಮ್ಮ ಅಂಕೋಲೆಯವ ಸಂಪೂರ್ಣ ಗೆದ್ದ.
ಧನಲಕ್ಷ್ಮಿ ಕಳ್ಳ ಪೆಟ್ಟಿಗೆಯೊಳಗೆ ಕೂತು.
ಇವನೆಡೆಗೆ ಬಂದು ಮುಟ್ಟಿದಳು ಸಾಬೀತು.
ದಾಂಡೇಲಿಯಲಿ ತೆಗೆದ ಹೊಸ ಕಾರಖಾನೆ.
ತುಂಬಿ ಹೋಯಿತು ಭರ್ತಿ ಈತನ ಖಜಾನೆ.

೬

ಮಂತ್ರಿಗೂ ಇವನಿಗೂ ವಿಪರೀತ ದೋಸ್ತಿ
ಇಬ್ಬರಿಗು ಅನುಕೂಲ ಹೆಚ್ಚಾಯ್ತು ಪ್ರಾಪ್ತಿ
ಈಗೆ ಈತನ ಹತ್ರ ನಾಕ್ಕೈದು ಕಾರು
ಟ್ರಕ್ಕುಗಳ ಮಿತಿಯಿಲ್ಲ; ಏನು ದರಬಾರು !
ಒಂದು ಕಂಕುಳದೊಳಗೆ ಪೋಲೀಸು ಖಾತೆ.
ಇನ್ನೊಂದು ಕಂಕುಳಕೆ ರೆವಿನ್ಯೂ ಇಲಾಖೆ.
ಕಾರಿನಲಿ ಯಾವಾಗಲೂ ಬಾಟ್ಲಿ ಕೂಜೆ.
ಮಧ್ಯ ರಾತ್ರಿಯ ತನಕ ಭೈರವನ ಪೂಜೆ.

೭

ಕಾಂಗ್ರೆಸ್ಸು ಮಂಡಳಿಕೆ ಇವನೆ ಅಧ್ಯಕ್ಷ.
ಪ್ರತಿಯೊಂದು ಕೆಲಸದಲಿ ಮಿತಿ ಮೀರಿ ದಕ್ಷ;
ದಸರೆ ದರಬಾರಿನಲಿ ಈತನಿಗೆ ಮತ್ತೆ
ಹನ್ನೆರಡು ಮೆಡಲುಗಳು ದೊರೆತದ್ದು ಗೊತ್ತೆ?
ನಮ್ಮ ಬಡ ಅಂಕೋಲೆಗೂ ಬಂತು ಖ್ಯಾತಿ.
ಮತ್ತಿಷ್ಟು ಅಗಲವಾಯಿತು ಇವನ ಮೂತಿ.
ನಮಗೆಲ್ಲರಿಗೆ, ಮಗನೆ, ಇವನೇ ಪುಢಾರಿ.
ಇವನ ವಿನಹಾ ದೇಶ ಬೀಳುವುದು ಜಾರಿ.

❖❖

ಜನೆವರಿ ೧೯೬೩

ವಿಮರ್ಶೆ

ಆ ವಿಮರ್ಶಕ ಶ್ರೇಷ್ಠರೆಲ್ಲರೂ ಸೇರಿ
ತ್ರಿಪುರ ಸುಂದರಿಯೆಂದು ಮೊಳಗಿದರು ಭೇರಿ
ಅರ್ಧ ಶತಮಾನ ಕಳೆಯಲು ಕಾಲರಾಯ
ಹೇಳಿದನು; ಬಾಡಿ ಹೋಯಿತು, ಅವಳ ಪ್ರಾಯ.

ಆ ವಿಮರ್ಶಕ ಶ್ರೇಷ್ಠರೆಲ್ಲರೂ ಕೂಡಿ
ಈ ಮುದುಕಿಯನು ಹೊರಗೆ ಹಾಕಿದರು ದೂಡಿ.
ಅರ್ಧ ಶತಮಾನ ಕಳೆಯಲು ಕಾಲರಾಯ
ಹೇಳಿದನು, ಕಂಗೊಳಿಸುತಿದೆ ಇವಳ ಪ್ರಾಯ.

❖❖

ಡಿಸೆಂಬರ್ ೧೯೬೪

ಸೇತುವೆ

ಕಲ್ಲೂ ಇಟ್ಟಿಗೆ ಯಾವುದು ಇಲ್ಲಾ
ಆದರು ಸೇತುವೆ ಕಟ್ಟಿದರಲ್ಲಾ !
ಭೂಮಿಗೆ ಗಗನ
ಗಗನಕೆ ಭೂಮಿ
ಕೂಡಿಸಿ ಕೊಟ್ಟಿತು
ಸೇತುವೆ ಸ್ವಾಮಿ
ಟ್ರಕ್ಕೂ ಕಾರು ಎತ್ತಿನ ಗಾಡಿ
ಮಂಗಳ ಲೋಕಕೆ ತಲುಪಿತು ನೋಡಿ
ಸೇತುವೆಯಿಂದ
ಇಂದ್ರನು ಬಂದ
ಜತೆಯಲಿ ರಂಭೆಯ
ಭೂಮಿಗೆ ತಂದ.
ಕಲ್ಲೂ ಇಟ್ಟಿಗೆ ಇಲ್ಲದೆ ಸಂಕ !
ಕಾಮನ ಬಿಲ್ಲದು ತಿಳಿಯಿತೆ ಮಂಕ ?

❖❖

ಡಿಸೆಂಬರ್ ೧೯೬೦

ವಿಶ್ವೇಶ್ವರಯ್ಯನವರಿಗೆ

ಜೊತೆಯಲ್ಲಿ ನೀನಿರಲು, ವಿಶ್ವೇಶ್ವರಯ್ಯ,
ಭಗವಂತನಿಗೆ ಕೂಡ ಮತ್ತಿಷ್ಟು ಧೈರ್ಯ.
ಕ್ಷಾರ ಸಾಗರದಿಂದ ಸವಿ ನೀರ ನಾಲೆ.
ಧರೆಯ ಕೊರಳಿಗೆ ಕೋಟಿ ತಾರೆಗಳ ಮಾಲೆ.

ಸಿಡಿಮಿಂಚು ನಮ್ಮ ಮನೆಯೊಳಗಾಯ್ತು ದೀಪ,
ಮಕ್ಕಳಿಗೆ ಜೋತಾಡಲಿಕೆ ಇಂದ್ರಚಾಪ.
ಗುಡುಗಾಯ್ತು ಜಯಘೋಷಗಳ ಕ್ರಾಂತಿ ವಾದ್ಯ.
ವರಶಿಲ್ಪಿಯೇ, ನಿನಗೆ ಯಾವುದು ಅಸಾಧ್ಯ ?

❖❖

ಸೆಪ್ಟೆಂಬರ್ ೧೯೬೦

ಪ್ರಜಾರಾಜ್ಯದ ದೀಪಾವಳಿ

ಈ ವರುಷವೂ ನಮಗೆ ಶುಭವಾಗಲೆಂದು
ದುಷ್ಟ ನರಕಾಸುರನ ಇನ್ನೊಮ್ಮೆ ಕೊಂದು
ಆಚರಿಸುತ್ತಿದ್ದೇವೆ ಈ ಹಬ್ಬವನ್ನ
ಇನ್ನೇನು ! ಸಕಲರಿಗೆ ಸಿಗಲಿ ಮೊಸರನ್ನ !

ಅಭ್ಯಂಗ ಸ್ನಾನವಂತೂ ಬೇಕು ತಾನೆ ?
ಹಗುರವಾಗುವುದು ಜೀವನದ ತಲೆಬೇನೆ ?
ಹನ್ನೆರಡು ತಿಂಗಳೂ ಮೈತಿಂದೆ ಧೂಳು
ಇಲ್ಲದಂತಾಗಿ ಶುಚಿಯಾಗುವುದು ಬಾಳು,

ದೀಪಾವಳಿಯ ದಿವಸ ನಾನಾ ಮಿಠಾಯಿ
ಸಕ್ಕರೆಯ ಹೊರತು ಸವಿಯಾಗುವುದೆ ಬಾಯಿ ?
ತಿನ್ನಲಿಕೆ ಸಿಗದಿದ್ದರೂ ತಿಂಡಿ ತೀರ್ಥ
ಮರುಗಬಾರದು ಎಂಬುದೇ ಇದರ ಅರ್ಥ,

ಒಂದು ಸಂಗತಿಯ ನಾ ಹೇಳಲಿಕೆ ಮರೆತೆ,
ಈ ವರುಷ ನಮಗುಂಟು ಸಕ್ಕರೆಯ ಕೊರತೆ
ಆದರೂ ನಮ್ಮ ದೀಪಾವಳಿಯ ಹಣತೆ
ಬೆಳಗ ಬೇಕೆನ್ನುತಿದೆ ಭಾರತದ ಜನತೆ,

ಕೋಟಿ ಹಣತೆಗಳಿಂದ ರಂಜಿಸಲು ದೀಪ
ದೂರಾಗುವುದು ಕಾಳಸಂತೆಗಳ ಶಾಪ,
ಪಾತಾಳಕಿಳಿಯುವನು ಬಲಿ ಚಕ್ರವರ್ತಿ,
ಆಮೇಲೆ ಬಡವರೂ ತಿನ್ನುವರು ಭರ್ತಿ,

ಎಲ್ಲದ್ದಕ್ಕೂ ಲಕ್ಷ್ಮಿ ಪೂಜೆ ಬಲು ಮುಖ್ಯ
ಯಾವಾಗಲೂ ನಮಗೆ ಬೇಕಿವಳ ಸಖ್ಯ
ಲಕ್ಷ್ಮಿಯೊಲಿದರೆ, ಕೊನೆಗೆ, ಧನಕನಕ ಎಲ್ಲಾ,
ಮಣ್ಣು ಬಚ್ಚಿಟ್ಟರೂ ಆಗುವುದು ಬೆಲ್ಲ.

ಅಬ್ಬರಿಸಿ ಮೊಳಗಲಿ ಚಟಾಕಿಗಳ ಸದ್ದು,
ಅಂತರಿಕ್ಷಕೆ ಹಾರಬೇಕು ಸಿಡಿಮದ್ದು.
ಸೂರ್ಯ ಚಂದ್ರಾದಿಗಳು ತಪ್ಪಿ ಕಂಟ್ರೋಲು
ಭೂಮಿಗಪ್ಪಳಿಸಿದರು ನಮಗಿಲ್ಲ ಸೋಲು.

ಇದಕೆನ್ನುವರು ಪ್ರಜಾರಾಜ್ಯದ ದಿವಾಳಿ
ಆಚರಿಸಿದರೆ ಬೀಸುವುದು ದಿವ್ಯಗಾಳಿ,
ಆಮೇಲೆ ಅಣುಬಾಂಬು ಸಿಡಿದರೂ ಕಂದ,
ಗುಣಹೊಂದುವುದು ಲೋಕ ಈ ಗಾಳಿಯಿಂದ.

❖❖

ಡಿಸೆಂಬರ್ ೧೯೬೩

ಮೂರು ಕಲ್ಲುಗಳು

ಬಂಡೆಗಲ್ಲಿನ ಮೇಲೆ ಪದವ ಹಾಡಿದೆನೆಂದು
ಬೈಸಿಕಲ್ಲಿಗೆ ಬಂತು ದೊಡ್ಡ ಸಿಟ್ಟು
ಓ ನನ್ನ ಕಾಲ್ಗಾಡಿ, ನೀನೆ ರಸ್ತೆಯ ಲೇಡಿ
ಎಂದು ಸಂತೈಸಿದೆನು ಮುತ್ತು ಕೊಟ್ಟು

ಅನಿತರಲಿ ಹರಕಂತ್ರ ಮೀನುಗಾರತಿ ಬರಲು
ಬುಟ್ಟಿಯಲಿ ಕಾಣಿಸಿತು ಚಿಪ್ಪೆಕಲ್ಲು,
ಚಿಪ್ಪೆಕಲ್ಲಿನ ಮೇಲೆ ಪದವ ಹಾಡಿದೆನೆಂದು
ಕಾವ್ಯ ಸಾಮ್ರಾಜ್ಯದಲಿ ದೊಡ್ಡಗುಲ್ಲು.

❖❖

ಜುಲೈ ೧೯೬೨

ನನ್ನ ಪರಿಚಯ

ನನ್ನ ತಲೆಯಲಿ ಹುಚ್ಚು ! ಮತ್ತೆ ಹೊಸ ಬೂದಿ
ಈ ಬೂದಿಯಿಂದಲೇ ಬೆಳೆಯುವುದು ಗೋದಿ.

ನನ್ನ ಕಿವಿಯಲಿ ತೂತು ಬೀಸಿದರೆ ಗಾಳಿ
ಚಂದ್ರ ಲೋಕದವರೆಗು ನೆಗೆಯುವುದು ಗೂಳಿ.

ಭದ್ರವಾಗಿದೆ ಭೂಮಿಯಲಿ ನನ್ನ ಕಾಲು
ನಿತ್ಯವೂ ಕುಡಿಯುವೆನು ಕಾಡೆಮ್ಮೆ ಹಾಲು.

ನನ್ನ ಮೋರೆಯ ಮೇಲೆ ಕಾಣಿಸದು ಮೀಸೆ.
ಆದರೂ ಗಡ್ಡ ಬಿಡಬೇಕೆಂಬ ಆಸೆ.

ಅತ್ಯಂತ ಓರೆಯಾಗಿದೆ ನನ್ನ ಹಲ್ಲು !
ಹೀಗಾಗಿ ನಾನು ತಿನ್ನುವುದಿಲ್ಲ ಹುಲ್ಲು.

ನನಗೆ ಹಿಡಿದಿದೆ ಚುಟುಕ ರಚನೆಗಳ ರೋಗ.
ನನ್ನ ಬಾಯಿಗೆ ಬೀಳಬೇಕೆಂತೆ ಬೀಗ.

ನನ್ನ ಹೊಟ್ಟೆಗೆ ಕೂಳು ಸ್ವಲ್ಪವೇ ಸಾಕು.
ಹಗಲೆಲ್ಲ ನೂರು ಸಲ ಚಾ ಮಾತ್ರ ಬೇಕು.

ನನ್ನ ಕಂಕುಳದೊಳಗೆ ಉಂಟು ಕಬ್ಬೆಕ್ಕು
ಯಾರ ಮಾತನು ಲಾಲಿಸದು ಮುದ್ದು ಸೊಕ್ಕು.

ಮತ್ತೊಂದು ಕಂಕುಳಲಿ ಉಂಟು ಕರಿನಾಯಿ
ಕಡಿವ ಚಟ ಅದಕಿಲ್ಲ, ಬರಿ ದೊಡ್ಡ ಬಾಯಿ.

ನನ್ನ ತೋಟದ ಗಿಡಕೆ ಸೋಜಿಗದ ಹೂವು,
ಮೂಸಿದರೆ ಹಾರಿ ಹೋಗುವುದು ತಲೆ ನೋವು.

ನಾ ತೋಟದಲಿ ಕುಳಿತು ಹಾಡಿದರೆ, ಮಗನೆ,
ಭಾವನೆಯ ಗಿಡ ಹುಟ್ಟಿ ತಲೆಯೊಳಗೆ ಬದನೆ.

ಬದನೆಗಿಂತಲು ಸ್ವಲ್ಪ ಉರುಟಾದ ಮೋರೆ.
ಕಾಲ ಕಾಲಕೆ ವೇಷ ತಾಳುವುದು ಬೇರೆ.

ಒಮ್ಮೆ ಕುರಿಯಾಗುವುದು, ಮತ್ತೊಮ್ಮೆ ಆಡು.
ಕೆಮ್ಮು ಬಂದರೆ ಕತ್ತೆಯಾಗುವುದು ನೋಡು.

ಕೋಪ ಬಂದರೆ ಕಷ್ಟ, ಕಂಪೇರಿ ಮೂತಿ
ಸಂಪೂರ್ಣ ಬದಲಾಗಿ, ಕಿರುಚುವುದು ಕೋತಿ.

ನನಗೆ ಸೊಂಡಿಲವಿಲ್ಲ, ಸಾಮಾನ್ಯ ಮೂಗು,
ಉದ್ದವಾಗಲು ಮೂಗು ಧರಿಸುವೆನು ಸೋಗು.

ನನ್ನ ವೇಷವ ಕಂಡು ರೇಗಿದಳು ಅತ್ತೆ,
ನಾನೊಬ್ಬ ಅಳಿಯನೆಂಬುದು ನಿಮಗೆ ಗೊತ್ತೆ?

ನನ್ನ ಹಂಡತಿ ಕವಿತೆ, ನಾನವಳ ಗಂಡ.
ನನ್ನ ವನಿತೆಯ ಹೆಸರು ಅಖಿಲ ಬ್ರಹ್ಮಾಂಡ.

❖❖

ಮಾರ್ಚ ೧೯೬೨

ಒಂದು ಗುಂಜಿ

ಒಂದು ಗುಂಜಿ ತೂಕ ಚಿನ್ನ
ಮಿರುಗಿದರೂ ಸಾಕು ತಮ್ಮ

ಆಳ ಆಳ ಆಳ ಅಗೆದು
ಗರ್ಭವನ್ನೆ ಹುಡುಕಿ ತೆಗೆದು
ಅದಿರನೆಲ್ಲ ಉಜ್ಜು ಉಜ್ಜು;
ಬದಿಗೆ ಇರಲಿ ಮಣ್ಣುಗೊಜ್ಜು
ಉಜ್ಜಲಿಕ್ಕೆ ಹೃದಯವೆಂಬ
ಸಾಣೆಕಲ್ಲು ಮಾತ್ರ ಬೇಕು,

ಚೊಕ್ಕವಿರಲಿ ತೆಗೆದ ಲೋಹ;
ಭಾವವನಿಗೆ ತೆಗದುವೆ ಜೀವ,
ಬೆರೆತು ಕೊಳಲು ಇನಿತು ಕೆಸರು
ವ್ಯರ್ಥವೆಂಬ ಕವಿಯ ಹೆಸರು,
ಒಂದು ಗುಂಜಿ ತೂಕ ಚಿನ್ನ
ಮಿರುಗಿದರೂ ಸಾಕು, ತಮ್ಮ

❖❖

ಮಾರ್ಚ ೧೯೬೧

ಮುಂಬಯಿಯ ಮನೆ

ಇದು ನನ್ನ ಮನೆ ಮತ್ತು ಕೋಣೆ
ಬಾಳ ಮಿಡಿಸುವ ವೀಣೆ !
ಕೂಸು ಅತ್ತರೆ ತಾನೆ
ಸಂಗೀತವೂ ಉಂಟು.
ಉಂಟೆಂಬುದೇ ಗುರಿಯು
ನಳವುಂಟು ನೀರಿಲ್ಲ,
ನಾಲ್ಕು ಗೋಡೆಯ ಒಳಗೆ
ಎಲ್ಲವೂ ಇದೆಯಲ್ಲ !
ಹೌದು –
ಮೊಂಡ ಕಸಬರಿಗೆ, ಒಡಕು ಟಿನ್ನು,
ಹರಕು ಬೂಟು,
ಹಣ್ಣುಗಳ ಜೀರ್ಣ ಬಾಸ್ಕೇಟು

ಆದರೆ ಹಣ್ಣಿಲ್ಲ, ಬರೀ ಖಾಲಿ –
ತುಂಬಿದ್ದರೂ ಖೋಲಿ,
ಬೂಚುರಹಿತ ಬಾಟ್ಲಿಗಳುಂಟು;
ಬೆಣ್ಣೆವಿರಹಿತ ಮಜ್ಜಿಗೆಯುಂಟು
ಬೂಟಿನ ಬದಿಗೆ
ಮೇಲೆ ಗೋಡೆಗೆ ತೂಗ ಹಾಕಿದೆ
ಇಡೀ ವಸ್ತುಸಂಗ್ರಹಾಲಯ;
ಕಿರಿದಲ್ಲ ಈ ಭೂವಲಯ;
ಬಾ ಮಗನೆ ಕಣ್ ತುಂಬ ನೋಡು.
ಈ ಬಾಳ ಮಹಿಮೆಯ ಹಾಡು.
ಇದು ಮಾನವನ ಮನೆ !
ಮಾವ – ಅಳಿಯಂದಿರ ಊಟದ ಮಣೆ,
ಆರು ಅಡಿ ಅಗಲ

ಮೂರು ಅಡಿ ಉದ್ದ
ತಂದೆಯೂ ಕೂಡ ಇಲ್ಲಿಯೇ ಇದ್ದ
ಈ ಮನೆಯೇ ಅಂಗಳ, ತೋಟ;
ಇಲ್ಲಿಯೇ ಬೆಳದಿಂಗಳ ಊಟ;
ನೆಲ್ಲೆಯೊಲವಿನ ಪಾಟ;
ಮರಿ ಮಕ್ಕಳ ಆಟ;
ಚಟಾಕಿಯ ಸ್ಫೋಟ;
ಮಡದಿಯ ಬೇಟ;
ಗಂಡನ ನೋಟ;
ನೆಂಟರ ಕಾಟ;
'ಕೂವು ಜಗ್ ಜಗ್ ಪುವ್ವೀ, ಟೂವಿಟ್ಟವೂ!'
ಇದೇ ಸಂಸಾರದ ಕಾವು
ಕೊನೆಗೆ ಇಲ್ಲಿಯೇ ಸಾವು.

❖❖

ಡಿಸೆಂಬರ್ ೧೯೫೮

ಅಲಗೇರಿಯ ಸಿದ್ಧ

೧

ಕಡಲ ಕನ್ನಡದಲ್ಲಿ, ಅಲಗೇರಿ ಹಳ್ಳಿ
ತೆಂಗು ಹಲಸಿನ ಹಣ್ಣು ಮಲ್ಲಿಗೆಯ ಬಳ್ಳಿ
ಮಾವುಗಳ ಕಾನು
ಹೂವುಗಳ ಜೇನು
ರಮ್ಯ ಗುಡ್ಡದ ಮೇಲೆ ಸಣ್ಣಮ್ಮ ಬೊಮ್ಮ
ಇಬ್ಬರೂ ಊರ ಕಾಪಾಡುವರು, ತಮ್ಮ
ಸುತ್ತಲೂ ಗದ್ದೆ
ಸುಖ ರೂಪ ನಿದ್ದೆ.

೨

ಊರ ಮಧ್ಯದ ಹಲಸು ಮರ ಮಾತ್ರ ಪೊಳ್ಳು
ಮರದಡಿಯ ಗದ್ದೆಯಲಿ ಕದಿರೆಲ್ಲ ಜಳ್ಳು
ಚಾವುಂಡಿ ದೆವ್ವ
ತಿನ್ನುವವು, ಅವ್ವ.

೩

ಹತ್ತು ಶತಮಾನಗಳ ಪ್ರಾಚೀನ ಕತೆಯು
ಇಂದಿಗೂ ಕೇಳಿದರೆ ಅತಿಶಯದ ವ್ಯಥೆಯು.
ಬಡ ರೈತ ಸಿದ್ದ
ಉಪವಾಸ ಬಿದ್ದ
ತಾಳಲಾರದೆ ಹೊಟ್ಟೆಯಲಿ ಬಿದ್ದ ನೋವ
ಒಂದು ಹಲಸಿನ ಹಣ್ಣ ಕದ್ದನವ, ದೇವ.
ಅಪರಾಧವೆಂದು
ಕೈಕಟ್ಟಿ ತಂದು
ಶೂಲಕೇರಿಸಿ ಹಿಂಡಿದರು ಪ್ರಾಣವನ್ನ
ಮಡದಿ ಮಕ್ಕಳು ಬಂದು ಪ್ರಾರ್ಥಿಸುವ ಮುನ್ನ

೪

ಮರುದಿವಸ ಸುದ್ದಿ
ಗಾಳಿಯಲಿ ಅದ್ದಿ
ಹತ್ತು ದಿಕ್ಕಿಗೆ ಹೋಯ್ತು ಅಲಗೇರಿಯಿಂದ
ಕೋಟಿ ಜನ ಸೇರಿದರು ನೂರು ಕಡೆಯಿಂದ
ಬಡ ರೈತ ಸಿದ್ದ
ನಮಗಾಗಿ ಬಿದ್ದ
ಹೀಗೆಂದು ನೆರೆದ ಜನ ಕಂಬನಿಯ ಸುರಿಸಿ
ಅಂತ್ಯಕ್ರಿಯೆಗೈದು ಹೊರಟರು ಕಣ್ಣೊರಸಿ

೫

ಕಲ್ಲು ಕುಟಿಗಾರಾ
ತಂದು ಅಂಗಾರಾ
ಕೆತ್ತಿದನು ಕತ್ತಲಲಿ ಎತ್ತರದ ಮೂರ್ತಿ
ಕಾಯೊಡೆದು ಹೂವಿಡಲು ಬೆಳಗಾಯ್ತು ಕೀರ್ತಿ
ಕೂಡಲೇ ಸಿದ್ಧ
ಕಲ್ಲಾಗಿ ಎದ್ದ.
ಊರ ಹೆಂಗಸರೆಲ್ಲ ಮಾಡಿದರು ಆರ್ತಿ
ಕರ್ಪೂರಗಳ ಹಚ್ಚಿ ಹದಿನೆಂಟು ಸರ್ತಿ
ಬರಿ ಒಂದು ಹಣ್ಣು!
ಮುಚ್ಚಿದನು ಕಣ್ಣು?
ಹೀಗೆಂದು ಈಗಲೂ ಮಂಗಳವ ಹಾಡಿ
ಸಿದ್ಧ ದೇವನ ಪೂಜಿಸುವುದೊಂದು ರೂಢಿ.

❖❖

ಜನೆವರಿ ೧೯೬೦

ಬಲು ದೂರ

ಬಲು ದೂರ ಬಲು ದೂರ ಬಲು ದೂರ ಹೋದೆ.
ಮಾನವನ ಸಹವಾಸದಿಂದ ಪಾರಾದೆ.
ಬಣ್ಣ ಬಣ್ಣದ ಹೂವ ಪರಿಮಳವನುಂಡೆ
ಉರಿ ಬಿಸಿಲ ಬೆಳದಿಂಗಳಾದುದನು ಕಂಡೆ.

ಇಣಚಿ ಮೊಲ ಜಿಂಕೆಮರಿ ನೀಡಿದುವು ಮುತ್ತು
ನವಿಲು ಪಾತರಗಿತ್ತಿಗಳು ಮೈಯ ಸುತ್ತು
ತೃಪ್ತವಾಯಿತು ನನ್ನ ಜೀವನ ಪಿಪಾಸೆ.
ಕಿವಿಗೆ ಕೇಳಿಸಲಿಲ್ಲ ಮಾನವನ ಭಾಷೆ.

❖❖

ಫೆಬ್ರುವರಿ ೧೯೬೦

ಬೆಳದಿಂಗಳಲ್ಲಿ

ಜಾಜಿ ಮಲ್ಲಿಗೆ ಬಕುಲ ಹೂದೋಟದೊಳಗೆ
ಮುಡಿಯಲಿಕೆ ಇದ್ದಾಳೆ ನನ್ನಾಕೆ ಒಳಗೆ.

ಹಿಟ್ಟು ತಿಂಗಳ ಬೆಳಕು, ಬೊಟ್ಟು ಗಗನಕ್ಕೆ
ಬಿಳಿ ಸೀರೆಯುಟ್ಟು ಬಾ, ಸೋಲುವುದು ಚಿಕ್ಕೆ.

ಮೇಲೆ ರಂಭೆಯ ಲೋಕ, ಧರೆಯೊಳಗೆ ನೀನು.
ನಿನ್ನ ತುಟಿ ಹೂವಿನೊಳು ಜೇನು ಹುಳು ನಾನು

ಬಾನೊಳಗೆ ಮುಗಿಲಾಟ ಚಂದಿರನ ಸುತ್ತು
ಮನೆಯ ಅಂಗಳದೊಳಗೆ ಮಕರಂದ ಮುತ್ತು

ಗಗನವೇರಲು ನನಗೆ ಸಿಗಬಹುದು ತಾರೆ
ಆ ತನಕ ನೀ ನನ್ನ ಬಿಡಬೇಡ, ನೀರೆ.

❖❖

ಸೆಪ್ಟಂಬರ್ ೧೯೫೫

ತೆರಿಗೆ ಅಧಿಕಾರಿಗಳಿಗೆ ಕವಿಗಳ ಮನವಿ

೧

ಹೇ ಮಹಾಪ್ರಾಣಿಗಳೆ, ನಿಮ್ಮ ಸನ್ನಿಧಿಯಲ್ಲಿ
ಅರ್ಪಿಸುತ್ತೇವೆ ಈ ಸಣ್ಣ ಅರ್ಜಿ
ನಮ್ಮ ನಿಲುಮೆಯ ನಾವು ಸ್ಪಷ್ಟ ಪಡಿಸಿದ್ದೇವೆ.
ಕೊನೆಗೆ ನಿರ್ಣಯ ಮಾತ್ರ ನಿಮ್ಮ ಮರ್ಜಿ.

೨

ಕಾವ್ಯ ವ್ಯವಸಾಯಕ್ಕೆ ಆದಾಯ ಬಲು ಕಡಮೆ
ನಷ್ಟವಿದೆಯೆಂದರೂ ಇಲ್ಲ ಅಡ್ಡಿ.
ನಾವು ವಿನಿಯೋಗಿಸಿದ ಬಂಡವಾಳಿಗೆ ಕೂಡ
ಸರಿಯಾಗಿ ಸಿಗದು ಪ್ರತಿಫಲದ ಬಡ್ಡಿ.

೩

ಕವಿತೆ ಆರ್ಥಿಕ ಕ್ಷೇತ್ರದೊಳಗೆ ಕುಂಬಳ ಕಾಯಿ,
ಮತ್ತೆ ಲೆಕ್ಕಾಚಾರದೊಳಗೆ ಸೊನ್ನೆ,
ಕವಿ ಚಕ್ರವರ್ತಿಯೂ ಬಿಕ್ಕೆ ಬೇಡಿದ್ದುಂಟು.
ಈ ಘಟನೆ ನಡೆದದ್ದು ಮೊನ್ನೆ ಮೊನ್ನೆ.

೪

ಇದನೆಲ್ಲ ಮನವರಿಕೆ ಮಾಡಿ ಕೊಡಬೇಕೆಂದು
ಜೊತೆಯೊಳಗೆ ಜೋಡಿಸಿದೆ ಲೆಕ್ಕಪತ್ರ
ನಖ–ಶಿಖಾಂತದ ವರೆಗೆ ಚೆನ್ನಾಗಿ ನೋಡಿಕೊಳಿ
ಸ್ವಲ್ಪವೂ ನಫೆಯಿಲ್ಲ ನಮ್ಮ ಹತ್ರ.

೫

ಕವಿಯ ಕೀರ್ತಿಯ ಹಡಗ ನಭದೊಳಗೆ ತೇಲಿದರು
ಅವನ ಕಿಸೆಯೊಳಗಿಲ್ಲ ಯಾವ ಗಂಟು
ಕವಿಯ ಉದ್ಯೋಗಕ್ಕೆ ಅಂಟಿಕೊಂಡಿಹ ರಗಳೆ
ಒಂದಲ್ಲ, ಎರಡಲ್ಲ, ನೂರು ಉಂಟು.

೬

ಒಂದು ಪಂಕ್ತಿಗೆ ಹತ್ತು ತಾಸು ಹಿಡಿಯುವುದುಂಟು.
ಬರಡು ವ್ಯವಸಾಯವಿದು ಕವಿಯ ಕಸುಬು.
ಕೈಯೊಳಗೆ ಲೇಖನಿಯ ಹಿಡಿದರೂ ಒಮ್ಮೊಮ್ಮೆ
ಕಾಗದದ ಮೇಲೆ ಏಳುವುದು ಉಸುಬು.

೭

ಒಂದು ಬಂಗಾಲಿ ಮಣದಷ್ಟು ಕವಿ ಬರೆದರೂ
ಬಂಗಾರವೆನ್ನುವುದು ತೀರ ಕಡಿಮೆ
ಬೆಳ್ಳಿಯೂ ಅತ್ಯಲ್ಪ, ಹಿತ್ತಾಳೆಯೇ ಹೆಚ್ಚು.
ಲಾಭದಾಯಕವಲ್ಲ ನಮ್ಮ ದುಡಿಮೆ

೮

ಶ್ರೇಷ್ಠ ಕವಿತೆಗೆ ಕೂಡ ಅಲ್ಲಿಷ್ಟು ಇಲ್ಲಿಷ್ಟು
ಅಂಟಿಕೊಳ್ಳುವುದುಂಟು ಮಣ್ಣು ಕೆಸರು
ಇದನೆಲ್ಲ ತೊಳೆತೊಳೆದು ಸರಿಪಡಿಸಬೇಕಲ್ಲ
'ಶಬ್ದಕೋಶವೆ' ನಮ್ಮ ಗಣಿಯ ಹೆಸರು.

೯

ಪ್ರಾಸವೆಂದರೆ ತ್ರಾಸ. ಹೊಂದಿಕೊಳ್ಳದು ಪಿಳ್ಳೆ.
ಎಷ್ಟು ಒದ್ದಾಡಿದರು ಗೈಮೆ ವ್ಯರ್ಥ
ಒತ್ತಾಯದಿಂದ ಒಳಗಡೆಗೆ ತೂರಿದರಂತು
ಉಸುರಡಗಿ ಪ್ರಾಣ ಬಿಡಬಹುದು ಅರ್ಥ.

೧೦

ಹೀಗಾದ ಪಕ್ಷದಲ್ಲಿ ಮೃತನ ಮರಿ ಮಕ್ಕಳಿಗೆ
ತುಂಬಿ ಕೊಡಬೇಕಲ್ಲ ಪೂರ್ಣ ಹಾನಿ
ಇಂಥ ತಾಪತ್ರಯದ ಹಾಳು ವ್ಯವಸಾಯಕ್ಕೆ
ಅಂಟಿಕೊಳ್ಳುವರಾರು ? ಹೇಳಿ, ಸ್ವಾಮಿ.

೧೧

ಯಾವ ದಂಧೆಗು ಇಲ್ಲ ಈ ತರದ ಬಿಕನಾಸಿ.
ಇದನು ಗಮನಿಸ ಬೇಕು ಪೂರ್ತಿಯಾಗಿ.
ಇದನೆಲ್ಲ ಆಧಾರ ಸಹಿತ ಬಿಂಬಿಸಲಿಕ್ಕೆ
ಮಂತ್ರಿಗಳ ವರೆಗೆ ಬರಬೇಕೆ ಹೋಗಿ ?

೧೨

ಗಣಿಯೊಳಗೆ ಇರಬಹುದು ಒಂದು ಸಾವಿರ ಟನ್ನು
ಎಲ್ಲವೂ ನಮ್ಮ ಕೆಲಸಕ್ಕೆ ಬಾರ
ಒಂದು ಸಾವಿರದೊಳಗೆ ಒಂದೆರಡು ಸಿಗಬಹುದು
ಹೀಗುಂಟು ಕವಿಯ ನಾಲಗೆಯ ಖಾರ.
ಭಾವನೆಯ ಹರಳುಗಳು ಸಾರಣಗೆಯಲಿ ಸೋಸಿ
ಆರಿಸಾರಿಸಿ ಕಟ್ಟಬೇಕು ಪದ್ಯ.
ಕಾವ್ಯ ರಚನೆಯ ಅಮಲು ಒಮ್ಮೆ ತಲಗೇರಿದರೆ
ನೆತ್ತಿಯಲಿ ತುಳುಕಾಡಿದಂತೆ ಮದ್ಯ

೧೪

ಸ್ನಾನಕ್ಕೆ ಹೋದರೂ ಬೆನ್ನು ಹತ್ತುವುದುಂಟು
ಬಚ್ಚಲಲ್ಲೂ ನಮ್ಮ ಕಾರ್ಯಸಿದ್ಧಿ.
ಒಮ್ಮೊಮ್ಮೆ ಹಗಲೆಲ್ಲ ಹಣೆಗೆ ಬಡಕೊಂಡರೂ
ಕೆಲಸ ಮಾಡದು ನಮ್ಮ ಕಾವ್ಯ ಬುದ್ಧಿ.

೧೫

ಈ ಪರಿಸ್ಥಿತಿಯೊಳಗೆ ಕವಿಗೆ ಸಿಗಬೇಕೇನು ?
ಮತ್ತೆ ಕೊಡಬೇಕೇನು ? ನೀವೆ ಹೇಳಿ,
ಕವಿ ಸಾರ್ವಭೌಮನಿಗೆ ಬಿರುದುಗಳು ಇದ್ದರೂ
ಆತ ತಿನಬೇಕು ಬರಿ ಬಿಸಿಲು ಗಾಳಿ.

೧೬

ಬಾಣಂತಿತನದೊಳಗೆ ಪ್ರಸವವೇದನೆಯುಂಟು
ಇದಕಿಂತಲೂ ತೀವ್ರ ಕವಿಯ ನೋವು
ವೇದನೆಯ ಸಂಕಟದ ಮೊದಲೆ ಮಗು ಹುಟ್ಟಿದರೆ
ತಾಯಿಗೂ ಬರಬಹುದು ಕೆಟ್ಟ ಸಾವು.

೧೭

ವಸ್ತುಸ್ಥಿತಿ ಹೀಗಿರಲು ಕವಿಯ ಜೀವನದಲ್ಲಿ
ಆರೋಗ್ಯ ರಕ್ಷಣೆಯ ಖರ್ಚು ಹೆಚ್ಚು
ಈ ವೆಚ್ಚವನು ವಜಾ ಹಾಕಿದರೆ ಕವಿ ತೆರಿಗೆ
ಕೊಡಬೇಕು ಎನ್ನುವುದು ಶುದ್ಧ ಹುಚ್ಚು

೧೮

ಜ್ಞಾನಿ ಹೇಳಿದ ಹಾಗೆ ಪ್ರತಿಯೊಬ್ಬ ಸಾಹಿತಿಗೆ
ಭಾವನೆಯ ಸಾಮ್ರಾಜ್ಯ ದೊಡ್ಡ ಆಸ್ತಿ
ಈ ಆಸ್ತಿಯಿಂದಲೂ ವರಮಾನ ನಮಗಿಲ್ಲ
ರಾಜ್ಯ ಕಾಪಾಡಲಿಕೆ ಶ್ರಮವೆ ಜಾಸ್ತಿ

೧೯

ಭಾವನೆಯ ರಾಜ್ಯದಲಿ ಆಡಳಿತ ದೆಸೆಯಿಂದ
ಸಂಚರಿಸಲಿಕೆ ಖರ್ಚು ಬಲು ದುಬಾರಿ
ಸಂಚಾರಿ ಭತ್ತೆಯೂ ನಮಗೆ ದೊರಕುವುದಿಲ್ಲ
ಸಾಮ್ರಾಜ್ಯವೆನ್ನುವುದು ರಿಣದ ಮಾರಿ.

೨೦

ಕವಿಯ ಸಂಚಾರಕ್ಕೆ ಯಾವುದೂ ಮಿತಿಯಿಲ್ಲ
ಕ್ಷಣದೊಳಗೆ ಸ್ವರ್ಗ ಪಾತಾಳಲೋಕ.
ಈ ಪ್ರವಾಸದ ವೆಚ್ಚ ಎಷ್ಟಾಗಬಹುದೆಂದು,
ನೀವೇನೆ ಹಾಕಬಹುದಲ್ಲ ಲೆಕ್ಕ.

೨೧

ನಿಜವಾದ ಕವಿಗೆ ಸಾಲದ ಭಾರವೂ ಉಂಟು;
ಕಿರಿಯ ಕಬ್ಬಿಗ ಅವನ ಸಾಲಗಾರ,
ತಂದ ಸಾಲವ ಬಡ್ಡಿ ಸಹಿತ ಕೊಡಬೇಕಲ್ಲ,
ಇಲ್ಲದಿರೆ ಮುಗಿಯುವುದೆ ಸಂಚಕಾರ ?

೨೨

ಕವಿವರನ ಉದ್ಯಮಕೆ ಬಂಡವಾಳಿನ ಶಕ್ತಿ
ಪೂರ್ಣ ಬೇಕೆನ್ನುವುದು ಅಲ್ಲ ಸುಳ್ಳು,
ತರ ತರದ ಕಾವ್ಯ ವಸ್ತುಗಳ ಕವಿ ಕೊಳ್ಳದಿರೆ
ಇಡಿಯ ರಚನೆಯೆ ಆಗ ಬಹುದು ಜಳ್ಳು.

೨೩

ಮತ್ತೊಂದು ಮಾತು ಬಲು ಮುಖ್ಯವಾದುದು, ಸ್ವಾಮಿ;
ಯಾವಾಗಲೂ ಕಷ್ಟ ಕಾಲ ನಮಗೆ.
ಬಂಡವಾಳವ ತಂದು ಹಗಲಿರುಳು ದುಡಿದರೂ
ಮಾರು ಪೇಟೆಯ ಪ್ರಶ್ನೆ ಉಂಟು ಕೊನೆಗೆ.

೨೪

ಸುಖ ಜೀವಿ ವಸ್ತುಗಳ ಈ ಸತ್ಯ ಯುಗದೊಳಗೆ
ಕವಿಯ ಕಷ್ಟವ ಕೊಳ್ಳುವವರು ಯಾರು?
ತರುಣ ಕವಿ ಬರೆ ಬರೆದು ಮುದಕನಾಗುವ ವರೆಗೆ
ಖರ್ಚಾಗಬಹುದು ಪ್ರತಿ ಒಂದು ನೂರು.

೨೫

ಉತ್ತಮೋತ್ತಮ ಭಾವಗೀತೆಗಳ ಹೆಣೆದರೂ
ಹೆಣವಾಗಿ ಬೀಳುವುದು ಪೇಟೆಯೊಳಗೆ;
ಹುಣಸೆ ಕಾಯಿಯ ಅರ್ಧದಷ್ಟು ಖರ್ಚಾದರೂ
ನಾವು ಕೊಡಬಹುದಿತ್ತು ಪೂರ್ಣ ತೆರಿಗೆ.

೨೬

ಪಠ್ಯ ಪುಸ್ತಕದೊಳಗೆ ಒಂದೆರಡು ಇಣಕಿದರು
ಒಜ್ಜೆಯಾಗದು ನಮ್ಮ ಕಿಸೆಯ ಕೋಟು.
ಈ ಹಣದ ವಾರ್ಷಿಕ ಸರಾಸರಿಯ ನೋಡಿದರೆ
ಕಿಸೆಯ ಒಳಗಡೆಗಿಲ್ಲ ಯಾವ ನೋಟು,

೨೭

ಸಾಹಿತ್ಯ ಅಕಡೆಮಿಯ ಬಹುಮಾನ ಸಿಕ್ಕಿದರೆ
ಐದು ಸಾವಿರ ನಗದು ! ಹೌದು ಸತ್ಯ.
ಒಬ್ಬನಿಗೆ ಸಿಕ್ಕಿದರೆ ಸಾಕೇನು ಈ ಗಂಟು ?
ಸಿಕ್ಕಿದವನಿಗೆ ಕೂಡ ಸಾಕೆ ನಿತ್ಯ ?

೨೮

ಕಾವ್ಯ ವಾಚನಕೆಂದು ಕರೆದರೂ ನಮ್ಮನ್ನು
ಒಂದು ನಯಪೈಸೆಯೂ ಸಿಗದು, ಸ್ವಾಮಿ
ಮೂರು ಗಂಟೆಯ ಕಾಲ ಹೊಯ್‌ಕೊಂಡರೂ ವ್ಯರ್ಥ
ಎಲ್ಲಾದರೂ ಉಂಟೆ ಇಂಥಾ ಹರಾಮಿ ?

೨೯

ಬಾನುಲಿಯ ರಸಬಾಳೆ ಕೆಲವೊಮ್ಮೆ ಸಿಗಬಹುದು
ಉಳಿದ ವೇಳೆಗೆ ಸಿಪ್ಪೆ, ಪೂರ್ಣ ಖಾಲಿ
ಮತ್ತೆ ಈ ರಸಬಾಳೆ ಚಟ್ನಿಗೂ ಸಾಕಾಗ,
ಹೀಗೆ ಮಾಡುವುದುಂಟೆ ಕವಿಯ ಗೇಲಿ

೩೦

ಕವಿಯ ಸಂಸಾರಕ್ಕೆ ಮತ್ತೆ ಕರಭಾರಕ್ಕೆ
ಯಾವುದೂ ಸಂಬಂಧವಿಲ್ಲ, ಸ್ವಾಮಿ
ಯಾವ ಕಡೆ ಆಕರಣೆ ? ಯಾವ ಕಡೆ ಸೀಕರಣೆ ?
ಎಲ್ಲಿ ಸಾಗಿದೆ ನಮ್ಮ ಭರತ ಭೂಮಿ ?

೩೧

ಯಾವ ಬದಿಯಿಂದಲೂ ಯಾವ ಕಡೆಯಿಂದಲೂ
ಯಾವ ಸರಕಾರ ಹಾಕಿದರು ಲೆಕ್ಕ,
ಸರಕಾರವೇ ಕವಿಗೆ ಸಂದಾಯ ಕೊಡಬೇಕು
ಪ್ರತಿ ವರುಷ ಅವನ ಯೋಗ್ಯತೆಗೆ ತಕ್ಕ.

❖❖

ಜುಲೈ ೧೯೬೨

ಅಣ್ಣಪ್ಪ ಬಾಳಿಗಾ

ಅಡವಿಯಲಿ ಸರಸತಿಯ ನವಿಲು ಕುಣಿದಾಡಿ
ನಿಂತೊಡನೆ ಬಂತು ವಿದ್ಯಾನಿಧಿಯ ಗಾಡಿ.

ಈ ಗಾಡಿಯಿಂದಿಳಿದು ದುಡಿ ದುಡಿದು ಇವರು
ಚಳಿಗಾಲದಲಿ ಕೂಡ ಸುರಿಸಿದರು ಬೆವರು.

ಈ ಬೆವರು ಹನಿಯಾಗಿ ತಣಿದದ್ದರಿಂದ
ನೆಲವೆಲ್ಲ ಹಸುರಾಗಿ ಬೆಳೆ ಬಂತು ಕಂದ.

ಈ ಬೆಳೆಯ ತೆನೆಯೊಳಗೆ ಸರಸತಿಯ ಕಾಳು
ಹೂವ ಪರಿಮಳದಂತೆ ಉಂಡವನ ಬಾಳು.

ಸರಸತಿಯ ಹರಿವಾಣದೊಳಗೆ ಸಣ್ಣಕ್ಕಿ
ಇದಕೆನ್ನುವರು, ಮಗನೆ, 'ಬಾಳಿಗಾ ಅಕ್ಕಿ !'

ಈ ಅಕ್ಕಿ ಮಿನುಮಿನುಗಿ ಕೊನೆಗಾಯ್ತು ಚಿಕ್ಕಿ
ನಿತ್ಯವೂ ಮಿಂಚುತಿದೆ ಕಾಂಚನವ ಮಿಕ್ಕಿ

ಅಣ್ಣಪ್ಪ ಬಾಳಿಗಾ, ಕನ್ನಡದ ಕೀರ್ತಿ
ಬರಿ ಕೀರ್ತಿಯಲ್ಲ, ಮಗು, ನಮಗೊಂದು ಸ್ಫೂರ್ತಿ

❖❖

ಅಕ್ಟೋಬರ ೧೯೬೪

ಶೋಧನೆ

ಏಳು ಗೋಪುರವುಳ್ಳ ದೇಗುಲದ ಮುಂದೆ
ಬೋಳು ತಲೆಯುಳ್ಳ ಭಟ್ಟರ ನೋಡಿ ಬಂದೆ,
ಅಲ್ಲಿಯೂ ಇರಲಿಲ್ಲ ಕನಕಾಂಗಿ ಚಿಟ್ಟೆ.
ಮತ್ತೆ ಮಠದಲಿ ಕಂಡೆ ಬರಿ ಕಾವಿ ಬಟ್ಟೆ.

ತೋಟದೊಳಗೋಡಿದೆನು ತಲೆಗೇರಿ ಹುಚ್ಚು
ಹೂವಿತ್ತು ಹಣ್ಣಿತ್ತು ಬಲು ಅಚ್ಚು ಮೆಚ್ಚು
ಹಕ್ಕಿಗಳ ಹಾರಾಟ ಚಿಕ್ಕೆಗಳ ನೃತ್ಯ
ದೇವರಿದ್ದಾನೆನ್ನುವುದು ಪೂರ್ಣ ಸತ್ಯ.

❖❖

ಎಪ್ರಿಲ್ ೧೯೫೫

ತಾಯಿಯ ಕನಸು

ಓ ಮಗನೆ, ಕೆಟ್ಟ ಕನಸನು ಕಂಡೆ ನಾನು
ರತ್ನ ಸಿಂಹಾಸನದಿ ಕುಳಿತಿದ್ದೆ ನೀನು.

ನಿನ್ನ ತಲೆಯೊಳಗಿತ್ತು ವಜ್ರಗಳ ಮುಕುಟ;
ತಲೆಭಾರವಾದ ಕ್ಷಣ ನಿನಗಾಯ್ತು ಕಷ್ಟ.

ಹಗುರ ಹೂವೂ ಭಾರವಾಗಿರಲು ನಿನಗೆ
ವಜ್ರ ವೈಡೂರ್ಯಗಳ ಸಹಿಸುವುದು ಹೇಗೆ ?

'ಬೇಡಯ್ಯ ಕಂದಾ, ನಿನಗೇಕೆ ರಾಜ್ಯ
ನನ್ನ ಮಗನಿಗೆ ಇರಲಿ ಬಡವಿಯದೆ ಭಾಗ್ಯ'.

ಎಂದು ಚೀರಿದೆ ನಾನು; ಮೈನಡುಗಿತಣ್ಣಾ
ಹೆದರಿ ಕಣ್‌ಗಳ ತೆರೆಯೆ ಬೆಳಗಾಯಿತಣ್ಣಾ.

❖❖

ನವಂಬರ್ ೧೯೫೮

ಮುಂಬಯಿ ನಗರ

ಕಾನನವ ಸಿಂಗರಿಸಿ ನಲಿದಾಡೆ ಹರಿಯು
ನಗರ ಸಿಂಗರಿಸಿದನು ನರನೆಂಬ ನರಿಯು
ಮುಗಿಲ ಮುಟ್ಟಿದ ಹತ್ತು ಮಾಳಿಗೆಯ ಭವನ.
ಆದರೂ ಬಲು ದೂರದಲ್ಲಿಯೇ ಗಗನ;

ಬೀದಿ ಬೀದಿಯ ರಸ್ತೆಗೂ ಕಪ್ಪು ಟಾರು
ಕಪ್ಪು ಕಲೆಯಿದ್ದರೇ ಅದು ದೊಡ್ಡ ಊರು.
ಈ ಪಟ್ಟಣದ ಸಂಖ್ಯೆ ಏಳು ದಶಲಕ್ಷ
ಜನರಿಗಿಂತಲು ಮಗನೆ ಸಂಖ್ಯೆಯೇ ಮುಖ್ಯ.

ಸನಿಯದೊಳಗಿದ್ದರೂ ನೂರು ಬಿಲ್ಡಿಂಗು
ನೆರಮನೆಯ ಸಹವಾಸವೇ ಇಲ್ಲ, ಲಿಂಗು.
ಲಕ್ಷ ಜನರಿದ್ದರೂ ಪಟ್ಟಣದ ಬೀದಿ
ಏಕಾಂತದಲಿ ಸಾಯಲಿಕೆ ಒಳ್ಳೆ ಹಾದಿ

ಅಸ್ತಿ ಪಂಜರದೊಳಗೆ ಕಟ್ಟಡ – ಬುನಾದಿ
ರಕ್ತನಾಳಗಳಲ್ಲಿ ಕುದಿಯುತಿವೆ ಬೀದಿ
ಒಳ ಚರಂಡಿಯ ಮೇಲೆ ನುಣುಪಾದ ರಸ್ತೆ
ನರಕವನು ಮುಚ್ಚಿಡಲು ನೂತನ ವ್ಯವಸ್ಥೆ.

ಉರಿ ಶಕೆಗೆ ಬಿಸಿ ಕಾಫಿ ಚಳಿಗೆ ಆಯ್‌ಸ್ಕ್ರೀಮು
ಬಾಳಕಂಬಿಯ ಮೇಲೆ ಗರಗರನೆ ಟ್ರಾಮು
ಇಹಲೋಕದೊಳಗಿರಲು ಡಾಂಬರದ ಮಾರ್ಗ
ಪರಲೋಕದಲಿ ನಮಗೆ ಲಭಿಸುವುದು ಸ್ವರ್ಗ.

❖❖

ಮಾರ್ಚ ೧೯೫೫

ಪತ್ರಾವಳಿ

ಸ್ಟೇನ್‌ಲೆಸ್ ಸ್ಟೀಲ್ ತಾಟು ಬಂದು
ಹಾರಿತು ಪತ್ರಾವಳಿ
ಆದರೆ ಅದೇ ಸಾರು ಅದೇ ಅನ್ನ
ಅದೇ ಆಕಾಶವಿದ್ದಂತೆ
ಅದೇ ಹುಳಿ
ಅಷ್ಟೇ ತಿಳಿ
ಪತ್ರಾವಳಿಯೊಂದಿಗೆ
ಚಿತ್ರಾಹುತಿಯೂ ಲೇದು
ಈಗ ಉಳಿದಿದೆ
ಬರಿ ಪ್ಲೇಟಿನ ಉಮೇದು
ಹೊಸದು ಬಂದರೆ ಹಳೆಯದು ಎಲ್ಲಿ ?
ಎನ್ನುವಿಯಾ ? ಕೇಳು ಇಲ್ಲಿ :
ಸಕ್ಕರೆಯು ಬಂದರೂ
ಉಂಟು ಕರಿ ಬೆಲ್ಲ
ಭಟ್ಟಿ ಕುದಿಯುವ ವರೆಗೆ
ಅದಕೆ ಭಯವಿಲ್ಲ

'ಸ್ಟೇನ್‌ಲೆಸ್' ಯುಗದೊಳಗೆ
ಹೊಟ್ಟೆಯ 'ಸ್ಟೇನು' ಹೋಗಿಲ್ಲ !
ಜೀವದ ಜೇನು ಮಾಗಿಲ್ಲ !
ಪತ್ರಾವಳಿ ಹೋಗಲಿ, ಇರಲಿ
ಮೊಸರನ್ನ ಮಾತ್ರ ಬರಲಿ.

❖❖

ಏಪ್ರಿಲ್ ೧೯೫೮

ಗಿಡಗ ಹಾರುತಿದೆ ನೋಡಿದಿರಾ ?

(ಬೇಂದ್ರೆಯವರ ಹಕ್ಕಿ ಹಾರುತಿದೆ ನೋಡಿದಿರಾ ಕವನದ ಅಣಕವಾಡು)

೧

ಕತ್ತಲೆಯಲ್ಲೊ ದಿನ ದಿನ ಬೆಳಗೆ
ಸುತ್ತು ಮುತ್ತಲೂ ಮೇಲಕೆ ಕೆಳಗೆ
ಮುಖ್ಯ ಮಂತ್ರಿಗಳ ಮೇಜಿನ ಮುಂದೆ
ಸಂತಸವುಕ್ಕುವ ಬಂಗಲೆಯೊಳಗೆ
    ಗಿಡಗ ಹಾರುತಿದೆ ನೋಡಿದಿರಾ ?

೨

ಬಿಳಿ ಬಿಳಿ ಬಣ್ಣದ ಪುಚ್ಚಗಳುಂಟು
ಹೊಳೆಯುವ ಕರಿ ಕಂತ್ರಾಟುಗಳುಂಟು
ಕಾಮನ ಬಿಲ್ಲಿನ ಬಣ್ಣ ಬಣ್ಣಗಳು
ಖಾದಿಯ ಟೋಪಿಯ ಒಳಗಡೆ ಉಂಟು
    ಗಿಡಗ ಹಾರುತಿದೆ ನೋಡಿದಿರಾ ?

೩

ನೀಲ ಮೇಘ ಮಂಡಲ – ಸಮ ಬಣ್ಣ
ವೇದಿಕೆಯೇರಲು ಕತೆ ಕೇಳಣ್ಣಾ;
ರೆಕ್ಕೆಗಳೊಡೆಯಲು ಸಿಕ್ಕ ಸಿಕ್ಕ ಜನ
ಕೊರಳಿಗೆ ಮಾಲೆಯ ಸಿಗಿಸಿದರಣ್ಣಾ
    ಗಿಡಗ ಹಾರುತಿದೆ ನೋಡಿದಿರಾ ?

೪

ರಾಜ್ಯದ ಯೋಜನೆಗಳ ಒಳ ಹೊಕ್ಕಿ
ನೋಟುಗೀಟುಗಳ ಗಡಗಡ ಮುಕ್ಕಿ
ತೇಲಿಸಿ ಮುಳುಗಿಸಿ ಲಕ್ಷ ಲಕ್ಷಗಳ

ಕೋಟಿ ಜನತೆಗಳ ನೆತ್ತಿಯ ಕುಕ್ಕಿ
    ಗಿಡಗ ಹಾರುತಿದೆ ನೋಡಿದಿರಾ ?

೫

ಗಾಂಧೀಜಿಯ ಹಣೆ ಬರಹವ ಒರಸಿ
ಅರ್ಧಾಂಗಿಯ ಸೌಭಾಗ್ಯವ ತೆರೆಸಿ
ರಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಮರಿ ಮಕ್ಕಳ ಹರಸಿ
    ಗಿಡಗ ಹಾರುತಿದೆ ನೋಡಿದಿರಾ ?

೬

ಕಳ್ಳ ಭಟ್ಟಿಗಳು ಮೇರೆಯ ಮೀರಿ
ಬೀದಿ ಬೀದಿಗಳ ಸಂದಿಗೆ ಸೇರಿ
ಆಡಲು ನಲಿದಾಡಲು, ಪೋಲೀಸರು
ನಿಂತರು ಮಂಗಳಲೋಕವ ನೇರಿ
    ಗಿಡಗ ಹಾರುತಿದೆ ನೋಡಿದಿರಾ ?

೭

ಮುಟ್ಟಿದೆ ದಿಗ್ಮಂಡಲಗಳ ಅಂಚ !
ಬ್ರಹ್ಮಾಂಡದ ತುದಿಗೇರಿದೆ ಲಂಚ
ನವ ಭಾರತವನು ಒಡೆಯಲು ಎಂದೋ
ಬಲ್ಲರು ಯಾರೊ ಹಾಕಿದ ಹೊಂಚ ?
    ಗಿಡಗ ಹಾರುತಿದೆ ನೋಡಿದಿರಾ ?

❖❖

ಮಾರ್ಚ ೧೯೬೪

ಒಂದು ಕನಸು

ಮೀನ ಪೇಟೆಗೆ ಹೋಗಿ ಮರಳಿದ್ದೆ ಮಾತ್ರ
ಕೈ ಚೀಲದೊಳಗಿತ್ತು ಮೀನು ಬಲು ಗಾತ್ರ

ಅಷ್ಟರಲ್ಲಿಯೆ ಶಿವನು ಕೈಲಾಸದಿಂದ
ನಮ್ಮನೆಗೆ ಬರಬೇಕೆ ಬಲು ಪ್ರೀತಿಯಿಂದ

'ಊಟಕ್ಕೆ ನಿಲ್ಲುವೆನು' ಅಂದ ಬಳಿಕಂತೂ
ತಲ್ಲಣವಗೊಂಡಿತ್ತು ಈ ಜೀವಜಂತು.

ಶಿವನ ಜೊತೆಯಲಿ ಮೀನ ತಿನ್ನುವುದು ಹೇಗೆ ?
ಅತಿಥಿಯಾದರೆ ಶಿವನು ಭಕ್ತರಿಗೆ ಬೇಗೆ.

ಈ ವಿಚಾರವು ಬರಲು ನನ್ನ ತಲೆಯೊಳಗೆ
ಮಾಯವಾದನು ಶಿವನು ಅರಗಳಿಗೆಯೊಳಗೆ

ನನಗಾದ ಸಂತೋಷ ಗಗನವೇರಿತ್ತು
ಪ್ರತಿಯೊಂದು ತಾರೆ ಮೀನಾಗಿ ಮಿಂಚಿತ್ತು

❖❖

ಮಾರ್ಚ ೧೯೫೫

ನೆಹರೂ ಆಡಳಿತ

೧

ಇವನಾರು ? ನೆಹರು
ಭಾರತದ ಮೇರು
ಇವನ ಆಡಳಿತ
ಲೋಕ ಪ್ರಖ್ಯಾತ

೨

ಮೊದಲನೆ ಪ್ರಧಾನಿ
ಬಹಳ ಅಭಿಮಾನಿ
ಮಾಡಿ ಆರಂಭ
ನಿಲಿಸಿದನು ಕಂಬ.

೩

ಕಂಬಗಳು ಅತರಾ
ಮೇಲಿಲ್ಲ ಶಿಖರ
ಅಡಿಗಲ್ಲು ಹಾಕಿ
ಗೋಡೆಗಳು ಬಾಕಿ

೪

ನೂತನ ಸ್ವರಾಜ್ಯ
ಕೂತಲ್ಲಿ ವ್ಯಾಜ್ಯ
ಭಾಷೆಗಳ ತಂಟೆ
ನಾಳೆಗೂ ಉಂಟೆ ?

೫

ಯೋಜನೆಯ ಕರಡು
ತಲೆಯಾಯ್ತು ಬರಡು
ಕೋಟಿ ಖರ್ಚಾಗಿ
ದೇಶ ಬೈರಾಗಿ.

೬

ಹೇಳಲಿಕೆ ಮರೆತೆ
ಕಾಳಿಗೂ ಕೊರತೆ
ಎಣ್ಣೆಗೂ ಕ್ಷಾಮ
ಹೇ ರಾಮ ರಾಮಾ !

೭

ನಿತ್ಯ ಬರಗಾಲ
ಅಮೇರಿಕದ ಸಾಲ
ಕೊಡಲಿಲ್ಲ ಬಡ್ಡಿ
ಮಾಡಿದರು ಅಡ್ಡಿ

೮

ಪಾನ ಪ್ರತಿಬಂಧ
ಬೀದಿಗಳು ಚೆಂದ
ಭಟ್ಟಿಯಲಿ ಕಳ್ಳು
ಕುಡಿದದ್ದು ಸುಳ್ಳು

೯

ಖಾದಿ ಭಂಡಾರ
ಇಡ್ಲಿ ಸಂಬಾರ
ಕಿಸೆಯೊಳಗೆ ನೋಟು
ಖುಷಿಯಾಯ್ತು ಕೋಟು

೧೦

ರೂಪಾಯಿ ಕೋಟಿ
ಮಾಡಿದರು ಲೂಟಿ
ಆಡಳಿತ ಚೊಕ್ಕ
ಇಡಲಿಲ್ಲ ಲೆಕ್ಕ.

೧೧

ಕಟ್ಟಿದರು ಒಡ್ಡು
ಖರ್ಚಾಯ್ತು ದುಡ್ಡು
ಬಿರುಕು ಅಲ್ಲಲ್ಲಿ
ದುಡ್ಡು ನೀರಲ್ಲಿ

೧೨

ಮಾಡಿದರು ರಸ್ತೆ
ಇದು ಅವ್ಯವಸ್ಥೆ
ಒಂದು ಫರ್ಲಾಂಗು
ಸರಿಯಾಗಿ ನುಂಗು

೧೩

ಕಂಪನಿಯ ದುಡ್ಡು
ಸಚಿವರಿಗೆ ಬ್ರೆಡ್ಡು
ಅಳಿಯನಿಗೆ ಹುದ್ದೆ
ಕುರ್ಚಿಯಲಿ ನಿದ್ದೆ

೧೪

ಜನಕೋಟಿಗಳಿಗೆ
ಒಂದೊಂದು ಸೊಲಿಗೆ
ಸಿಗಲಿಲ್ಲ ಅಕ್ಕಿ
ಸೈತಾನ ಸೊಕ್ಕಿ.

೧೫

ಬಂತು ಕಂಟ್ರೋಲು
ಸರಕಾರಿ ಕೋಲು
ಮರೆಯಾಯ್ತು ಜಿನಸು
ಕರಿಯಾಯ್ತು ಕನಸು.

೧೬

ಜೋರಾಗಿ ತೆರಿಗೆ
ಮನೆಯಲ್ಲಿ ಹೆರಿಗೆ
ಹೆಚ್ಚಾಗಿ ದಮ್ಮು
ಸೋಷಾಲಿಸಮ್ಮು

೧೭

ಬೆಲೆಯೇರಿ ಗಗನ
ರೂಪಾಯಿ ಪತನ
ತಕಧಿನ್ನ ತನನ
ಸಚಿವರಿಗೆ ನಮನ

೧೮

ಉಬ್ಬರದ ಗೂನು
ರಬ್ಬರ್ ಬಲೂನು
ಕಳ್ಳ ಬಾಜಾರ
ಸುಳ್ಳು ಸರಕಾರ

೧೯

ನಾನಾ ಸಮಸ್ಯೆ
ಬಹುಳ ಅಮವಾಸ್ಯೆ
ಬಗೆ ಹರಿಯಲಿಲ್ಲಾ
ದೇವರೇ ಬಲ್ಲಾ !

೨೦

ಆ ಕಡೆಗೆ ಚೀನು
ಈ ಕಡೆಗೆ ಪ್ಲಾನು
ಮಧ್ಯದಲಿ ಸಿಕ್ಕಿ
ಪುಡಿಯಾಯ್ತು ಹಕ್ಕಿ.

೨೧

ಕಾಶ್ಮೀರ ಜಮ್ಮು
ಹಗಲಿರುಳು ಕೆಮ್ಮು
ಜ್ವರ ಮತ್ತೆ ಪಿತ್ತ
ಸರಿಯಿಲ್ಲ ಚಿತ್ತ

೨೨

ಬುಸುಗುಡಲು ನಾಗಾ
ಇನ್ನೊಂದು ರೋಗ
ರೋಗಕ್ಕೆ ಮದ್ದು
ಕೊಡಲಿಲ್ಲ ಇದ್ದೂ

೨೩

ಲಾಮಾ ತಿಬೆಟ್ಟು
ವಾವೋಗೆ ಕೊಟ್ಟು
ಮಾಡಿ ಒಪ್ಪಂದ
ಹಣೆಗೆ ಶ್ರೀಗಂಧ.

೨೪

ಈ ಪಂಚಶೀಲ
ಯಾರಿಗನುಕೂಲ ?
ನೊರೆಯಾಗಿ ಪ್ರೀತಿ
ನೆಹರೂ ಫಜೀತಿ.

೨೫

‘ಶಾಂತಮ್ಮ ಬರಲಿ’
ಊದಿದನು ಮುರಲಿ
ಬಂತು ಹೆಡೆ ಹಾವು !
ಓಡಿದೆವು ನಾವು !

೨೬

ಹಿಮಗಿರಿಯ ಗೋಡೆ !
ನಮ್ಮ ತಲೆ ಬುರುಡೆ
ನುಗ್ಗಿದರು ಒಳಗೆ
ಯಾರ ತಲೆ ಕೆಳಗೆ ?

೨೭

ಭಾಷಣದ ಬಂಟ
ಈ ನೀಲಕಂಠ
ಆಡಳಿತದಲ್ಲಿ
ಮಿದು ಮಧುರ ಜೆಲ್ಲಿ

೨೮

ಹದಿನೇಳು ವರುಷ
ಬಿತ್ತಿದನು ಹರುಷ
ಬೆಳೆ ನೋಡಿದಾಗ
ತೆನೆಯೊಳಗೆ ರೋಗ

೨೯

ಮುರಿದರೂ ಗಾಣ
ಲೋಕ ಕಲ್ಯಾಣ
ಸಾಧಿಸುವೆನೆಂದು
ಹೆಣಗಿದನು ಬಂಧು

೩೦

ಭೂಮಿ ಇಳಿಜಾರು
ಜಾರಿದನು ನೆಹರು
ಮಾಡಿಯೂ ತ್ಯಾಗ
ಹಾಕಿದನು ಲಾಗ

❖❖

ಸೆಪ್ಟೆಂಬರ ೧೯೬೮

ವಿಜ್ಞಾನಿಯ ನಿರ್ಧಾರ

ಸೂರ್ಯ ರಶ್ಮಿಗಳನು ಒಂದೆಡೆಗೆ ಕಟ್ಟಿ
ಮೋಡಗಳ ಗುಡಿಸುವೆನು ಗ್ರಹಗಳನು ಮೆಟ್ಟಿ
ಕಾಳ ರಾತ್ರಿಯು ತೊಟ್ಟ ತಾರೆಗಳ ಮುತ್ತು
ಗಳನೆಲ್ಲ ವಶಗೊಳಿಸಿ ಧಾರಿಣಿಗೆ ಇತ್ತು,
ಗುಡುಗನ್ನು ಸದೆ ಬಡಿದು
ಸಿಡಿಲನ್ನು ಸೆರೆಹಿಡಿದು
ಭೂಮಿಗೆಳೆತಂದ
ಆ ಮಿಂಚಿನಿಂದ
ರಾತ್ರಿಯನು ತೊಳೆಯುತ್ತ
ಧಾತ್ರಿಯನು ಬೆಳಗುತ್ತ
ಹೊಸ ಯುಗದ ಕಲ್ಯಾಣ ತೊಟ್ಟಿಲನು ತೂಗಿ
ಈ ಜಗವ ಕಟ್ಟುವೆನು ಮಾನವತೆಗಾಗಿ,
ಈ ಮಹಾ ಮಾರುತನ ಒಳನಾಭಿಯನ್ನು
ಒಳನುಗ್ಗಿ ತಂದ ಆ ಅಣುಶಕ್ತಿಯನ್ನು
ಆ ಮಹಾಕಾಳಿ ಚಂಡಿಯ ಕೈಯಲಿಡದೆ
ಶಿವನ ಜಡೆಯೊಳಗಿಟ್ಟು ಯುದ್ಧವನು ತಡೆವೆ
ಜಡೆಯ ಒಳಗಿಂದಲೇ ಅದು ಕಮಲವಾಗಿ
ನಳನಳಿಸಿ ಅರಳುವುದು ಮಾನವತೆಗಾಗಿ

❖❖

ಜನೆವರಿ ೧೯೫೫

ಬೆಂಗಳೂರಿನ ದಾರಿಯಲ್ಲಿ

ಅಲಗೇರಿಯಲಿ ಕುಡಿದೆ ಎಳನೀರು ತಾಜ
ಅಂಕೋಲೆಯಲಿ ತಿಂದೆ ಹಸಿಗೇರು ಬೀಜ
ಇಡಗುಂಜಿಯಲಿ ಸವಿದೆ ರಸಬಾಳೆ ಹಣ್ಣು
ಕಲಘಟಗಿ ರಸ್ತೆಯಲಿ ಬರಿ ಧೂಳು, ಮಣ್ಣು,
ಹುಬ್ಬಳ್ಳಿಯನು ಸೇರೆ ಬೆಳ್ಳುಳ್ಳಿ ಊಟ;
ರಾತ್ರಿ ಹಾಸಿಗೆಯಲ್ಲಿ ಸೊಳ್ಳೆಗಳ ಕಾಟ.
ಮುಂದೆ ಹೋಗಲು ಬಂತು ಹಾವೇರಿ ಊರು
ಕಾರ ಮೆಣಸಿನಕಾಯಿ ಪುಡಿಗೆ ತವರೂರು
ಕಾರ ತಿನ್ನಲು ರೆಟ್ಟೆಯಲಿ ಬಲು ಜೋರು
ಹೊಟ್ಟೆಯಲಿ ಬಿಸಿಯಾಯ್ತು ನಾ ಕುಡಿದ ನೀರು
ತುಂಗಭದ್ರೆಯ ದಾಟಿ ಹರಿಹರವು ಬರಲು
ಇಡ್ಲಿ–ದೋಸೆಯ ತಿಂಡಿ ಹುರುಪನ್ನು ತರಲು
ಅಖಿಲ ಕನ್ನಡ ನಾಡು ಒಂದಾದ ಬಣ್ಣ
ಎದ್ದು ಕಾಣುತ್ತಿತ್ತು ಮೋರೆಯಲಿ , ಅಣ್ಣ
ಅಷ್ಟರಲ್ಲಿ ನೆನಪಾಯ್ತು ಹಸಿ ಮೀನು ಪಳದಿ
ಅಲ್ಲಿಂದಲೇ ಮನೆಗೆ ಮರಳಿದೆನು, ಕೆಳದಿ.

❖❖

ಅಕ್ಟೋಬರ್ ೧೯೫೮

ಕನ್ನಡ ನಾಡಿನ ಪದ

ಕನ್ನಡ ನಾಡಿನ ಪದವನು ಹಾಡುವೆ
ಬೇಸರ ಬಂದಾಗ
ಕೋಟಿ ಕೋಟಿ ಜನ ಕೇಳಲು ಬಂದರೆ
ಸಿಗಲಾರದು ಜಾಗ

ಕೋಟಿ ಕೋಟಿ ಜನ ಬರುವುದು ಹೇಗೆ ?
ಸಾಕಾಗದು ರೈಲು
ಬಾನುಲಿಯಲಿ ಬಿತ್ತರಿಸಿದರಣ್ಣಾ
ಸಾವಿರಾರು ಮೈಲು

ತೇಲಿ ತೇಲಿ ಪದ ಹಿಮಗಿರಿಯಾಚೆಗೆ
ತಲುಪಿತು ಸಾಬೀತು
ರಷ್ಯಾ ದೇಶದ ಬೀದಿ ಬೀದಿಯಲಿ
ಕನ್ನಡಿಗನ ಮಾತು.

ಹತ್ತು ದಿಕ್ಕಿಗೂ ಮನ್ನಣೆ ಪಡೆಯಲು
ಆಕಾಶದ ವಾಣಿ
ಕನ್ನಡ ನಾಡಿನ ಸಕ್ಕರೆ ತಿಂದಳು
ಇಂಗ್ಲಂಡಿನ ರಾಣಿ

ದೂರ ದೂರದಲಿ ಬಾನಂಚಿನ ಬಳಿ
ನಿರ್ಜನ ನಡುಗಡ್ಡೆ
ಪದವ ಲಾಲಿಸಲು ಚಿಗುರಿತು ನೋಡಾ
ಮೋಟು ಮರದ ಬೊಡ್ಡೆ

ಮುಂದೆ ಸಾಗಲದು ಕ್ಯೂಬಾ ದಂಡೆಗೆ
ತಂಬಾಕದ ಭೂಮಿ
ಪದವ ಕೇಳಿ ಹೊಗೆ ಸೊಪ್ಪಿನ ಗುಡಿ ಗುಡಿ
ಜಿಗಿದಾಡಿತು ಸ್ವಾಮಿ

ಪೇರು, ಮೆಕ್ಸಿಕೋ, ಹವಾಯಿ, ಜಾವಾ
ದೇಶಗಳನು ದಾಟಿ
ಕಡಲ ತರಂಗಕೆ ಕಲಿಸಿತು ಕನ್ನಡ
ಸಂಗೀತದ ದಾಟಿ

ಪೃಥಿವಿ ಪ್ರದಕ್ಷಿಣೆ ಗೈದು ಮೂರು ಸಲ
ವ್ಯೋಮ ಮಾರ್ಗದಿಂದ
ಧಾರವಾಡದಲಿ ಬಾನುಲಿ ಕೇಂದ್ರಕೆ
ಹಿಂತಿರುಗಿತು ಕಂದ

ಕನ್ನಡದಲಿ ಪದ ಹಾಡುವೆನಯ್ಯಾ
ಬೇಸರ ಬಂದಾಗ
ಯಾವ ಭಾಷೆಯಲಿ ಹಾಡಿದರೂ ಕವಿ
ಪೃಥಿವಿ ತುಂಬ ರಾಗ.

❖❖

ಜುಲೈ ೧೯೬೨

ಸಣ್ಣಪ್ಪ ಗಾಂವಕಾರರಿಗೆ

ಕರಣಾಳು ಸಣ್ಣಪ್ಪ, ನೀ ಗೈದ ಪುಣ್ಯ
ವಿದ್ಯಾರ್ಥಿಗಳ ಲೋಕದಲಿ ಅಗ್ರಗಣ್ಯ
ನಿನ್ನ ನೆರಳಲಿ ಬೆಳೆದ ವಿದ್ಯಾರ್ಥಿ ವೃಂದ
ನೋಡಿ ಸರಸತಿಗೆ ಕಣ್ತುಂಬ ಆನಂದ
ಕವಿಯಾಗಿ ತಾಯ್ನುಡಿಯ ಉನ್ನತಿಗೆ ಶ್ರಮಿಸಿ
ಧನ್ಯತೆಯ ಪಡೆದೆ ನೀ ರಸಿಕರನು ರಮಿಸಿ
ರವಿಯ ಗೀತಾಂಜಲಿಯ ಕನ್ನಡಕೆ ನೀಡಿ
ಮಕರಂದವನೆ ಕುಡಿದೆ ಮನದಣಿಯೆ ಹಾಡಿ,
ಸಣ್ಣಪ್ಪ ನೀನಲ್ಲ ಬರಿ ಒಂದು ವ್ಯಕ್ತಿ
ಕನ್ನಡದ ಕುವರರಿಗೆ ಮೈ ತುಂಬ ಶಕ್ತಿ
ನನ್ನಂಥ ಕಿರಿಯರಿಗೆ ಪ್ರೇರಣೆಯ ಸ್ಥಾನ
ಕನ್ನಡ ಕರಾವಳಿಗೆ ಹಿರಿಯ ಅಭಿಮಾನ
'ಸಣ್ಣಪ್ಪ'ನೆಂದು ಕರೆಯುವದೊಂದು ತಪ್ಪು
'ದೊಡ್ಡಪ್ಪ'ನೆಂದು ಕರೆದರೆ ಮಾತ್ರ ಒಪ್ಪು
ನಿನ್ನ ದೊಡ್ಡಸ್ತನಕೆ ತಲೆಬಾಗಿ ನಾವು
ನಮಿಸುವೆವು ನಿನ್ನ ಕೈಯೊಳಗಿಟ್ಟು ಹೂವು.

❖❖

ನವಂಬರ್ ೧೯೬೯

ಪಾತರಗಿತ್ತಿ

ಪಾತರಗಿತ್ತಿಗೆ ಉದ್ಯಾನ
ನಮಗೆ ಬೇಕು ಖುರ್ಚಿಯಲಿ ಸ್ಥಾನ

ಪಾತರಗಿತ್ತಿಗೆ ಮಕರಂದ
ನಮಗೆ ಮದ್ಯದ ಛಂದ

ಪಾತರಗಿತ್ತಿಗೆ ಸದಾ ಹಾರಾಟ
ನಮಗೆ ನುಂಗುವ ಹೋರಾಟ

ಪಾತರಗಿತ್ತಿಗೆ ಬರೀ ಹುಚ್ಚು
ನಮಗೆ ಜಾಣತನ ಹೆಚ್ಚು

❖❖

ಸೆಪ್ಟೆಂಬರ್ ೧೯೫೮

ಕೋಟಿ ರತ್ನಗಳ ಕತೆ

ಕಡಲ ನಾಡ ರಮಣೀಯ ತೀರದಲಿ
ಮಂಗಳೂರು ನಗರ
ಹಡಗ ದೋಣಿಗಳು ಅಲ್ಲಿ ತಲುಪಿದರೆ
ಹೂವಿಗಿಂತ ಹಗುರ !

ಸೋಮು ಸೆಟ್ಟಿ ಎಂಬಾತ ವರ್ತಕನ
ಹಡಗು ಮಾತ್ರ ಬೇರೆ
ಕೋಟಿ ರತ್ನಗಳ ನೂರು ಚೀಲಗಳು
ಕಾಂತಿಯಿಂದ ತೋರೆ

ಕೋಟಿರತ್ನಗಳ ಅಮಿತ ಸಂಪದವು
ಹೇಗೆ ದೊರೆಯಿತೆಂದು
ಸಾವಿರಾರು ಜನ ಪ್ರಶ್ನೆ ಹಾಕಿದರು
ಕಡಲ ತಡಿಗೆ ಬಂದು

ಹಡಗದಲ್ಲಿ ಬಲು ಹೆಮ್ಮೆಯಿಂದ ನಿಂ
ತಿದ್ದನೊಬ್ಬ ಪುರುಷ
ಉದ್ದ ತೋಳುಗಳ ಭವ್ಯ ಪುರುಷನಿಗೆ
ಮೋರೆ ತುಂಬ ಹರುಷ

ಕೋಟಿ ರತ್ನಗಳ ಕತೆಯ ಹೇಳುವೆನು
ಗುಲ್ಲು ಮಾಡಬೇಡಿ
ಕಡಲ ತೀರದೊಳಗಿರುವ ಕಲ್ಲು ಸಹ
ಕೇಳ ಬೇಕು, ನೋಡಿ

ಕ್ಷುಬ್ಧ ಕಡಲಿನಲಿ ದಿಕ್ಕು ತಪ್ಪಿ ಈ
ಹಡುಗು ಗಾಳಿಯುಂಡು
ಲಂಕೆಯಾಚೆ ಬಲು ದೂರ ದೂರದಲಿ
ಹೋಯ್ತು ತೇಲಿಕೊಂಡು

ಮೂರು ತಿಂಗಳಿಗೆ ಚಂದ್ರ ಬೆಳಗಿದನು
ನಿಮ್ಮ ಪುಣ್ಯದಿಂದ
ಸಿಡಿಲು ಗುಡುಗು ಕಾರ್ಮೋಡವೆಲ್ಲವೂ
ನಿಂತು ಅಂದಿನಿಂದ.

ಉದ್ದಕುದ್ದಕೂ ನೀರ ಮಧ್ಯದಲಿ
ಇತ್ತು ದ್ವೀಪವೊಂದು
ಅಲ್ಲಿ ವಾಸಿಸುವ ಜನರ ನೋಡಿದರೆ
ಇಲ್ಲ ಹಿಂದು ಮುಂದು

ಎಂದು ಹುಟ್ಟಿದರು ? ಎಂದು ಕಟ್ಟಿದರು
ಇದ್ದ ರಾಜ್ಯವನ್ನ ?
ಯಾವ ಪ್ರಶ್ನೆಗೂ ಪ್ರಶ್ನೆ ಹಾಕದೆಯೇ
ಇತ್ತು ಅವರ ಜನ್ಮ.

ಮರಳ ದಂಡೆಯನು ಸೇರಿದಾಕ್ಷಣಕೆ
ಅರಸು ಮುಂದೆ ಬಂದು
ಕರೆಸಿ ಹರಸಿದನು, ಊಟ ತರಿಸಿದನು
ಹೊಟ್ಟೆ ತಣಿಯಲೆಂದು

ಅಂದ ತಟ್ಟೆಯಲಿ ದೋಸೆಯಂತೆ ಬಿಸಿ
ತಿಂಡಿಯೊಂದು ಇತ್ತು
ಅಂದು ಕಂಡ ಮೃಷ್ಟಾನ್ನ ಭೋಜನಕೆ
ಜಿಹ್ವೆ ಕುಣಿಯುತಿತ್ತು.

ಅರಸು ಮತ್ತು ನಾ ಮಣೆಯ ಮೇಲೆ ಸರಿ
ಕೂಡ್ರುವಷ್ಟರಲ್ಲಿ
ಗೋಡೆಯಿಂದ ಕೆಳಗಿಳಿದು ಮುಂದುಗಡೆ
ಬಂತು ಒಂದು ಹಲ್ಲಿ

ಅನಿತರೊಳಗೆ ನೂರಾರು ಕೊಬ್ಬಿದಿಲಿ
ತಂಡವಾಗಿ ಬಂದು
ತಾಟಿನಲ್ಲಿಯೇ ಊಟ ಮಾಡಿದವು
ಎಲ್ಲವನ್ನು ತಿಂದು

ಕ್ಷಮಿಸಬೇಕು ಎಂದರಸು ಹೇಳಿದನು
ಇಲಿಯ ಕಾಟದಿಂದ
ಊಟ ಮಾಡುವುದು ಕೂಡ ಕಷ್ಟವೈ
ಏನು ಹೇಳಲೆಂದ ?

ಇಲಿಯ ಕೊಲ್ಲಲಿಕೆ ಪಟ್ಟೆ ಹುಲಿಯನೂ
ತಂದೆ ಬೆಟ್ಟದಿಂದ
ಇಲಿಯ ಮುಂದೆ ಆ ವ್ಯಾಘ್ರ ಶಕ್ತಿಯೂ
ವ್ಯರ್ಥವಾಯ್ತು ಅಂದ.

ಇಲಿಯ ಕೊಲ್ಲಲಿಕೆ ಹುಲಿಯ ಹಲ್ಲುಗಳೆ ?
ಏನು ಬಂತು ಕರ್ಮ ?
ಅವರ ಕೆಲಸವನು ಅವರೆ ಮಾಡಿದರೆ
ಭೂಮಿಯೊಳಗೆ ಧರ್ಮ.

'ಬೆಕ್ಕು ಇಲ್ಲವೆ ?' ಎಂದು ಕೇಳಿದೆನು
ಸಹಜವಾಗಿ ನಾನು
ಕಣ್ಣನರಳಿಸುತ ಅರಸು ಕೇಳಿದನು
'ಬೆಕ್ಕು ಅಂದರೇನು ?'

ಹುಲಿಯ ಬಳಗದಲ್ಲಿ ಹುಟ್ಟಿದಂಥ ಮರಿ,
ತೀರ ಚಿಕ್ಕ ಪ್ರಾಣಿ
ರೂಪಿನಲ್ಲಿಯೂ ಚೆಂದ ಕಾಣುವುದು;
ಬೆಕ್ಕು ಮನೆಯ ರಾಣಿ

ಕೇಳು ಭೂಮಿಪತಿ, ನನ್ನ ಹಡಗದಲಿ
ಉಂಟು ಒಂದು ಬೆಕ್ಕು
ಮೂರು ನಿಮಿಷದಲಿ ನೂರು ಮೂಷಕನ
ಮುರಿಯ ಬಹುದು ಸೊಕ್ಕು

ಹೀಗೆ ನುಡಿದು ನಾ ಹಡಗವೇರಿದೆನು
ಮ್ಯಾಂವು ಅಂತು ಮುದ್ದು
ನಾನು ಹೇಳಿದೆನು : ಕೇಳು ಮುದ್ದು ಮಣಿ
ಇಲಿಯ ಮೈಯ ಗುದ್ದು

ಬೆಕ್ಕು ಇಳಿದು ಅರಮನೆಯ ಮುಂದುಗಡೆ
ಆಟವಾಡಲಾಗಿ
ಇಲಿಗಳೋಡಿದವು, ಬಿಲವ ಸೇರಿದವು
ಜೀವದಾಸೆಗಾಗಿ

ಅರಸು ನೋಡಿ ಕುಣಿದಾಡಿ ಹಾಡಿದನು
ಹರುಷ ಭರಿತನಾಗಿ,
ಕೋಟಿ ರತ್ನಗಳ ನಿಧಿಯ ನೀಡಿದನು
ಒಂದು ಬೆಕ್ಕಿಗಾಗಿ

❖❖

ಜನೆವರಿ ೧೯೬೧

ಸತ್ತವರ ಸಾಮ್ರಾಜ್ಯ

ಸತ್ತ ಜೀವಿಗಳೆಲ್ಲರೂ ಒಂದು ರಾಜ್ಯ
ಸತ್ತವರ ಸಾಮ್ರಾಜ್ಯದೊಳಗಿಲ್ಲ ವ್ಯಾಜ್ಯ
ವಿಮಲ ವಾತಾವರಣ ಸೌಹಾರ್ದ ಶಾಂತಿ
ಪ್ರೇತಗಳ ರಾಜ್ಯದಲಿ ಸ್ವಪ್ನಮಯ ಕ್ರಾಂತಿ

ಸತ್ತವರ ಸಾಮ್ರಾಜ್ಯದೊಳಗಿಲ್ಲ ಯುದ್ಧ
ಇಂದಿಗೂ ಜೀವಂತವಾಗಿಹನು ಬುದ್ಧ
ಯಾವ ಖಡ್ಗದ ಧಾರೆಗೂ ಇಲ್ಲ ಸ್ಥಾನ
ಹೋರಾಟದೊಳಗಿಲ್ಲ ದೇಶಾಭಿಮಾನ

ಸತ್ತವರ ಸಾಮ್ರಾಜ್ಯದೊಳಗಿಲ್ಲ ಹಸಿವು
ನಗ್ನ ಬೇತಾಳರಿಗೆ ಅಗ್ನಿಯೇ ಕಸುವು
ಇವರಿಗೆನಿತೂ ಇಲ್ಲ ಯಾರ ದರಕಾರ
ಇವರನಾಳುವದಿಲ್ಲ ಯಾವ ಸರಕಾರ

ಸತ್ತವರ ಸಾಮ್ರಾಜ್ಯದೊಳಗಿಲ್ಲ ಭೇದ
ನೂರಾರು ಸ್ವರವಿಲ್ಲ, ಬರಿ ಏಕನಾದ
ಪ್ರೀತ ಜನ್ಮ ಸತ್ತರೂ ಸತ್ತಿಲ್ಲ ಪ್ರೀತಿ
ಪ್ರೇತಗಳೆ ಎತ್ತಿ ಹಿಡಿದವು ಧರೆಯ ನೀತಿ.

❖❖

ಎಪ್ರಿಲ್ ೧೯೬೧

ಕಳ್ಳನ ಅನುಭವ

ಒಯ್ದರಣ್ಣಾ ಕೈಗೆ ಹೆಡಮುರಿಗೆ ಕಟ್ಟಿ
ಆದರೂ ಎರಡು ಸಲ ಬಡಿಸಿದರು ರೊಟ್ಟಿ.

ಇಷ್ಟು ರುಚಿಕರ ರೊಟ್ಟಿ ಮನೆಯೊಳಗೆ ಕಾಣೆ
ಈ ಮಾತು ಸುಳ್ಳಲ್ಲ ನಿನ್ನ ಕೊರಳಾಣೆ.

ಈಗ್ಗೆ ನನಗಿಲ್ಲ ಜೈಲಿನ ಭೀತಿ ತುಸುವು
ಮೈಯೊಳಗೆ ಬಂದು ಬಿಟ್ಟಿದೆ ಭರ್ತಿ ಕಸುವು

ಲಜ್ಜೆಯೇತಕೆ ಬೇಡಿ ಹಾಕಿದರೆ ಕೈಗೆ ?
ಶುಭ್ರ ಖಾದಿಯ ಬಟ್ಟೆ ತೊಡಿಸಿದರು ಮೈಗೆ.

ಜೈಲಿನೊಳಗಿನ ಕೋಣೆಯೂ ಬಹಳ ಚಂದ,
ಅದಕಿಲ್ಲ ಹೊಲಸು ವಸ್ತಿಗಳ ದುರ್ಗಂಧ.

ಜೈಲಿನೊಳಗಿನ ಹವಾ ಬಲು ಚೊಕ್ಕ ತಾನೆ
ಹೀಗಾಗಿ ಒಮ್ಮೆಯೂ ಬರಲಿಲ್ಲ ಬೇನೆ.

ಜೊತೆಗಿದ್ದ ಕಳ್ಳರಂತೂ ಒಳ್ಳೆ ಮಂದಿ.
ನಾನು ಹೇಳುವುದೆಲ್ಲವೂ ಸುಳ್ಳು ಅಂದಿ.

ನಿಜವಾಗಿಯೂ ಮಗನೆ, ಸುಳ್ಳಲ್ಲ ಮಾತು
ಕಳ್ಳರಾದರು ಕೂಡ ನಡತೆ ಸಾಬೀತು.

ಒಳಗೊಂದು ಹೊರಗೊಂದು, ಹೀಗಿಲ್ಲ ಕೊಂಚ
ರಾಜಕಾರಣಿಗೆ ಕೊಟ್ಟವರಲ್ಲ ಲಂಚ

ಜೈಲಿನಲಿ ನಾನು ಕಲಿತೆನು ಒಳ್ಳೆ ಶಿಸ್ತು
ಸದ್ಯಕೆ ಇದು ಬಹಳ ಅಪರೂಪ ವಸ್ತು

ಈ ಪ್ರಜಾರಾಜ್ಯದಲಿ ಜೈಲು ಮನೆ ವಾಸಿ
ಎಂಬುದನು ಕಿವಿಗೊಟ್ಟು ಕೇಳು, ಬಿಕನಾಸಿ.

❖❖

ಜನವರಿ ೧೯೭೪

ಮುಳ್ಳುಗಳ್ಳಿಗೆ

ಪರಿಮಳದ ಹೂಗಳಿದ್ದರು ತೋಟದಲ್ಲಿ
ಅಂದವಲ್ಲವೆ ಬೇಲಿಯಲಿ ಮುಳ್ಳುಗಳ್ಳಿ ?

ಎಲ್ಲರೂ ಹಾಡುವರು ಮಲ್ಲಿಗೆಯ ಸ್ತೋತ್ರ
ಮುಳ್ಳೆ, ನಾ ಹಾಡುವೆನು ನಿನ್ನ ಕುಲಗೋತ್ರ.

ಕುರಿಯ ಸಾಕುವ ವೃತ್ತಿ ಪ್ರಬಲವಾಗಿರಲು
ತೋಟಗಳ ರಕ್ಷಣೆಗೆ ನಿನ್ನದೇ ಒಡಲು

ಯಾರ ಕುರಿಯಾದರೂ ನಿನಗಿಲ್ಲ ಭೇದ;
ಎಲ್ಲರನು ಚುಚ್ಚುವುದೆ ನಿನಗೊಂದು ಮೋದ.

ನಿನಗೆ ಯಾರೂ ಬೇಡ ಹನಿಸಲಿಕೆ ನೀರು,
ತಾನಾಗಿ ಹಬ್ಬುವುದು ಭೂಮಿಯಲಿ ಬೇರು.

ಪಂಚವಾರ್ಷಿಕ ಯೋಜನೆಯು ಕೂಡ ಬೇಡ;
ಸ್ವಾವಲಂಬನದಲ್ಲಿ ನೀನೊಬ್ಬ ನೋಡ

ಹೂಮಾಲೆಗಳ ಮಹಾಶಯರನ್ನು ನೀನು
ಮೈ ಚುಚ್ಚಿದರೆ ಪಿತ್ತ ಕೆಳಗಿಳಿಯದೇನು ?

ನೀ ಬರಿಯ ಮುಳ್ಳಲ್ಲ ನೀನೊಂದು ಶಕ್ತಿ
ನೀನರಳಿದರೆ ರುಕ್ಷ ಭೂಮಿಗೂ ಮುಕ್ತಿ.

❖❖

ನವಂಬರ್ ೧೯೫೮

ಚಹಾ ಪಾನದ ಕಥೆ

೧

ಚಾ ಕುಡಿಯಲಿಕೆ ನಾನು ಕುಳಿತು ಕೊಂಡರೆ, ಮಗನೆ,
ಒಂದಲ್ಲ ಎರಡಲ್ಲ ಮೂರು ಕಪ್ಪು.
ನನಗಿಂತಲೂ ಹೆಚ್ಚು ಕುಡಿಯುವವರಿದ್ದಾರೆ;
ಇದಕಾಗಿಯೇ ತುಟ್ಟಿ ಚಹದ ಸೊಪ್ಪು.

೨

ತುಟ್ಟಿಯಾದರು ಕೂಡ ನಿತ್ಯವು ಬುಟ್ಟಿಗಳ
ತುಂತುಂಬಿ ತುಂಬುವರು ತಳಿರಿನಿಂದ
ಚಹದ ಚಿಗುರಿನ ತೋಟ ದೇವಲೋಕದ ನೋಟ
ಎಂದು ಬಣ್ಣಿಸಿದ ಕವಿ ನಾನೆ, ಕಂದ.

೩

ನೋಡು ಆ ಹುಡುಗಿಯರು ನಮಗಾಗಿ ದುಡಿಯುವರು
ಒಂದೊಂದು ಚೆಂದುಟಿಯ ಚಿವುಟಿ ಚಿವುಟಿ
ಕೋಟಿ ಗಿಡಗಳ ಚಿಗುರು ಪೇಟೆ ಪೇಟೆಗೆ ಬರಲು
ಒಂದೊಂದು, ಕಪ್ಪಿನಲಿ ಒಂದು ಚಿಮಟಿ.

೪

ಈ ಚಿಮಟಿಯೊಳಗುಂಟು ದುಡಿದ ಕೈ ಬೆರಳುಗಳು
ಮೈಯ ಬೆವರೂ ಉಂಟು, ಹುಡುಕು, ಕಂದ,
ದುಡಿದವರ ಫಲವೆಂದು ಮತ್ತಷ್ಟು ಕುಡಿಯುವೆನು
ಕುಡಿಯದಿದ್ದರೆ ನನ್ನ ಕಣ್ಣು ಮಂದ.

೫

ದುಡಿದವರು ಪಡೆದವರು ಮತ್ತೆ ಮುನ್ನಡೆದವರು
ಸಕಲರಿಗೆ ಸಿಗಬೇಕು ಲೋಕಪಾನ
ಶತಮಾನಗಳ ಪಾತ್ರೆಯೊಳಗೆ ಧರ್ಮವ ತುಂಬಿ
ಬೌದ್ಧ ಭಿಕ್ಷುಕನು ಧರೆಗಿತ್ತ ದಾನ.

೬

ಕಥೆಯ ಲಾಲಿಸು ಕಂದ. ಆಲಿಸಲಿ ಜನವೃಂದ
ಎಲ್ಲರೂ ಬರಬೇಕು ಕೇಳಲಿಕ್ಕೆ
ಬೋಧಿ ಧರ್ಮನ ಬಕುತಿ ಗಿಡವಾಗಿ ನಿಂದಿರಲು
ಇಂದಿಗೂ ನೀರೆರೆಯುತಿಹವು ಚಿಕ್ಕೆ.

೭

ಲೋಕವನೆ ಸುತ್ತಾಡಿ ಗುಡಿಗೆ ಮರಳಿದ ಭಿಕ್ಷು
ಕೈ ಮುಗಿದು ಪ್ರಾರ್ಥನೆಗೆ ಕುಳಿತು ಕೊಳಲು
ಮಧ್ಯರಾತ್ರಿಗೆ ಚಂದ್ರ ಪೂರ್ಣ ನೆತ್ತಿಗೆ ಬರಲು
ಗುಡಿಯ ಅಂಗಳದೊಳಗೆ ಹಾಲು ಬೆಳಕು.

೮

ಹಗಲೆಲ್ಲ ಸಂಚಾರ ಗೈದ ಆಯಾಸದಲಿ
ಬೋಧಿಧರುಮಗೆ ಬಂತು ಜೋಮು ಸ್ವಲ್ಪ
ಪ್ರಾರ್ಥನೆಯ ಸಮಯದಲಿ ತೂಕಡಿಕೆ ಬಂತಲ್ಲ !
ಚ್ಯುತಿಯೆಂದು ಭಾವಿಸಿದ ಬೌದ್ಧ ಭಿಕ್ಷು.

೯

ಓ ನನ್ನ ನೇತ್ರಗಳೆ, ನಿಮ್ಮ ಪಾತ್ರತೆಯಲ್ಲಿ ?
ಪ್ರಾರ್ಥನೆಯ ತೊಡೆಯೇರಿ ಬಂತೆ ನಿದ್ದೆ !
ಅಂತರಾತ್ಮನು ಹಾಕಿಕೊಟ್ಟ ಮೇರೆಯ ಮೀರಿ
ಪತಿತನಾದೆನು ದೇವ, ಜಾರಿ ಬಿದ್ದೆ !

೧೦

ಹೀಗೆಂದು ಭಿಕ್ಷು ಮುನಿ ಕಣ್ಣುಗಳ ಕತ್ತರಿಸಿ
ನೆಲಕೊಗೆದು ನಮಿಸಿದನು ಶಿರವಬಾಗಿ
ನನಗೆ ಪ್ರಾಯಶ್ಚಿತ್ತ ನಿಮಗಲ್ಲ ನೇತ್ರಗಳೆ,
ಎಂದು ಸಂತೈಸಿದನು ಪರಮಯೋಗಿ.

೧೧

ಸೋಜಿಗವ ನೋಡಯ್ಯ, ಸೋಜಿಗವ ನೋಡಯ್ಯ
ಬಸಿಯಲಿಲ್ಲವೊ ತುಸುವು ರಕ್ತಧಾರೆ
ಕತ್ತರಿಸಿದರು ಕಣ್ಣು ನೆತ್ತರಿಲ್ಲವೊ ಮಗನೆ !
ಮಿರು ಮಿರುಗಿ ಮಿಂಚಿದವು ಕೋಟಿ ತಾರೆ.

೧೨

ಕತ್ತರಿಸಿ ನೆಲ ಕೊಗೆದ ಕಣ್ಣು ರೆಪ್ಪೆಗಳಿಂದ
ಕುಡಿಯೊಡೆದು ಮೂಡಿದವು ಎರಡು ಕೊನರು
ಒಡನೆ ಎಲೆ ಎಲೆಯಾಗಿ ಗಿಡವಾಗಿ ಬಲಿತೊಡನೆ
ಕೈ ಮುಗಿದು ಬಾಗಿದರು ಭಕ್ತ ಜನರು.

೧೩

ರೆಂಬೆ ರೆಂಬೆಗಳಲ್ಲಿ ಕೆಂದಳಿರ ಮೊಗವೆತ್ತಿ
ನಗುತ ಆ ಗಿಡಗಳನು ನೋಡಿ ನೋಡಿ
ಬೋಧಿಧರುಮಗೆ ನಲಿವು, ಕರ್ಮಯೋಗಿಗೆ ಗೆಲವು
ಹಕ್ಕಿಗಳಿಗೂ ಹರುಷ ಹಾಡಿ ಹಾಡಿ.

೧೪

ಗಿಡಗಳೂ ಕೈ ಮುಗಿಯೆ ಭಿಕ್ಷು ಮುನಿ ಹರಸಿದನು;
ಅಚ್ಚುಕಟ್ಟಾಗಿ ವರ್ಧಿಸಲಿ ಭಕ್ತಿ
ಪ್ರಾರ್ಥನೆಯ ಸಮಯದಲಿ ನಿದ್ದೆ ಬಾರದ ಹಾಗೆ
ನಿಮ್ಮ ನರದೊಳಗಿರಲಿ ದಿವ್ಯ ಶಕ್ತಿ

೧೫

ಕೇಳಿರೋ ಕೇಳಿರೋ ನನ್ನ ಸಂಗಾತಿಗಳೆ,
ಜನ ಕೋಟಿಗಳಿಗೆಲ್ಲ ಹೇಳಿ ಹೇಳಿ :
ದೇವ ಲೋಕದ ಹೆಂಡ ದೇವ ಲೋಕದೊಳಿರಲಿ
ಭೂಲೋಕದಲಿ ಬೇಡ ಅದರ ಗಾಳಿ.

೧೬

ದುಡಿ ದುಡಿದು ದಣಿದವರು ಆಯಾಸ ಪಡೆದವರು
ಚಿಗುರೆಲೆಯ ಕುಡಿ ಕುಡಿದು ತಂಗಿ ತಂಗಿ
ಮುಟ್ಟ ಬೇಡಿರಿ ಸುರರ ಭಟ್ಟಿಯೊಳಗಿನ ಮದವ
ಲೋಕಪಾನವ ಕುಡಿದು ಶ್ರಮವ ನುಂಗಿ

೧೭

ಚಾ ಕುಡಿಯಲಿಕೆ ನಾನು ಕುಳಿತು ಕೊಂಡರೆ, ಮಗನೆ
ಒಂದಲ್ಲ ಎರಡಲ್ಲ ಮೂರು ಕಪ್ಪು
ಭೋಧಿಧರುಮನ ಭಕುತಿ ಗಿಡವಾಗಿ ನಿಂದಿರಲು
ತೃಷೆಯ ನೀಗಿಸಲಿಕ್ಕೆ ಚಹದ ಸೊಪ್ಪು

❖❖

ಮೇ ೧೯೬೨

ಅರ್ಥ ಮಂತ್ರಿಯ ಹೇಳಿಕೆ

ಮರದ ಭಾರವು ಹೇಗೆ ಈ ವಸುಂಧರೆಗೆ
ಹಾಗೆಯೇ ಕರಭಾರ ನರಜೀವಿಗಳಿಗೆ
ಮರ ಭಾರದಿಂದಲೇ ಧರೆಯೊಳಗೆ ಹಸುರು
ಕರಭಾರದಿಂದಲೇ ಪ್ರಜೆಗಳಿಗೆ ಮೊಸರು.

❖❖

ಅಗಸ್ಟ್ ೧೯೫೮

ಕಾನೂನು

ಹರಿಯಂತೆ ಕಾನೂನು ವರ್ಣಾನಾತೀತ
ಕೋರ್ಟಿನಲಿ ಹಗಲಿರುಳು ಕೂತಿರುವ ಭೂತ

ಸತ್ತರೂ ಬೆನ್ನು ಹತ್ತುವುದು ಈ ಮಾರಿ
ಕೂಡ್ರುವುದು ಸತ್ತವನ ಆಸ್ತಿಯನ್ನೇರಿ

ಕಳ್ಳರಿಗೆ ಮಳ್ಳರಿಗೆ ಕಾನೂನು ವೈರಿ
ಸುಳ್ಳರಿಗೆ ಡೊಳ್ಳರಿಗೆ ಬಹಳ ಉಪಕಾರಿ

ಕಾನೂನಿನವತಾರ ನಾನಾ ನಮೂನೆ
ಈ ಹೊತ್ತು ನರಿಯಾಗಿ ನಾಳೆ ಮದ್ದಾನೆ

ಕಾನೂನು ಯಾವಾಗಲೂ ನಿಯಮ ಬದ್ಧ
ಹೊಟ್ಟೆಯಲಿ ದುರ್ಗಂಧ, ರಟ್ಟೆಯಲಿ ಶುದ್ಧ

ಕಾನೂನು ಕಾಲರಾಯನ ರಾಜದಂಡ
ಕಾನೂನು ಅಧಿಕಾರಿಗಳು ಕುಡಿವ ಹೆಂಡ

ಕಾನೂನು ಸಾಮ್ರಾಜ್ಯವಾದಿಗಳ ಬಚ್ಚಾ
ಕೋರ್ಟಿನ ವಕೀಲರಿಗೆ ಅದು ಬಹಳ ಅಚ್ಚಾ

ಸಾಮ್ರಾಜ್ಯ ಅಳಿದರೂ ಕಾನೂನು ಉಂಟು
ಕಾನೂನಿಂದಲೇ ಕಟ್ಟಿದರು ಗಂಟು

ಹೆಂಗಸರು ಸೀರೆ, ಸನ್ಯಾಸಿ ಕೌಪೀನು
ಧರಿಸಬೇಕೆಂಬ ವಿಧಿ ನರನ ಕಾನೂನು
ನಿಜವಾಗಿಯೂ ನಾವು ಕಾನೂನಿನಂತೆ
ನಡೆಯದಿದ್ದರೆ ದೇವರಿಗೆ ದೊಡ್ಡ ಚಿಂತೆ

ಗಿಡಬಳ್ಳಿ ಹೂ ಬಿಡುವ ಬಯಕೆ ಕಾನೂನು
ಮಕ್ಕಳಾಗುವ ನಿಯಮ ದೊಡ್ಡ ಕಾನೂನು

ನಕ್ಷತ್ರಗಳು ಇರುಳು ಬರೆದ ಕಾನೂನು
ಸಂಪೂರ್ಣ ಬರೆಯಲಿಕೆ ಸಾಕಾಗ ಬಾನು

ಕಾನೂನು ಅಲ್ಲ ಮಾನವ ಬರೆದ ಗದ್ಯ
ವಿಶ್ವವ್ಯಾಪಕವಾಗಿ ಹರಿ ಬರೆದ ಪದ್ಯ

ಕೊನೆಗೆ ಉಳಿಯುವದೊಂದೆ ಅವನ ಕಾನೂನು
ನಾವು ಕಟ್ಟಿದ ಕಾಯ್ದೆ ನೊರೆಯ ಸಾಬೂನು.

❖❖

ಅಗಸ್ಟ್ ೧೯೬೨

ಮಾದರಿ ಮಾದಪ್ಪ

ಮಾದರಿ ಮಾದಪ್ಪನ ಸದ್ಬುದ್ಧಿ
ಕನ್ನಡ ನಾಡಿಗೆ ಹೆಮ್ಮೆಯ ಸುದ್ದಿ

ಹುಟ್ಟಿದ ಲಾಗಾಯತು ಬಲು ಜಾಣ
ವಿದ್ಯಾಭ್ಯಾಸವೇ ಆತನ ಪ್ರಾಣ

ಪಾಸಾದನು ಅತ್ಯುತ್ತಮ ರೀತಿ
ಕಾಲೇಜಿಗೆ ತಂದನು ಪ್ರಖ್ಯಾತಿ.

ನೌಕರಿಗೇರಲು ಅರಳಿತು ಆಸೆ
ಬೇಕೆಂದನು ಬರಿ ತುಪ್ಪದ ದೋಸೆ

ಕೈವಶವಾಗಲು ಮೇಲಿನ ಹುದ್ದೆ
ಎರಡೂ ಕೈಯಲಿ ಲಂಚದ ಮುದ್ದೆ

ಎಷ್ಟು ತಿಂದರೂ ಇಲ್ಲ ಅಜೀರ್ಣ
ಬಡಿಸಿದ ಎಲೆ ಚೊಕ್ಕಟ ಪರಿಪೂರ್ಣ.

ಊಟಕೆ ಕೂತರೆ ತಂಬಿಗೆ ಮೊಸರು
ಹತ್ತೂ ದಿಕ್ಕಿಗೆ ಹಬ್ಬಿತು ಹೆಸರು

ಊಟದ ನಂತರ ದಕ್ಷಿಣೆ ಬೇರೆ
ಯಾವಾಗಲು ಉಲ್ಲಾಸದ ಮೋರೆ

ನೂತನವೆಂಬರು ಈತನ ರೀತಿ
ನವ ಶತಮಾನಕೆ ಹೊಂದುವ ಜಾತಿ

ಜೇಬುಗಳೆರಡೂ ತುಂಬಲು ಭರ್ತಿ
ದಿಲ್ಲಿಯವರೆಗೂ ಹಬ್ಬಿತು ಕೀರ್ತಿ

ಪದ್ಮ ವಿಭೂಷಣನಾದನು ಕೊನೆಗೆ
ಗೌರವ ಕನ್ನಡ ನಾಡಿನ ಜನಕೆ.

❖❖

ಅಕ್ಟೋಬರ್ ೧೯೬೨

ಸಮುದ್ರ

ಪೃಥವಿಮಾತೆಗೆ ಅಂಟಿಕೊಂಡಿರುವ ಬಾಲೆ;
ಒದ್ದಾಡುತಿದೆ ನೋಡು ಹಾಸಿಗೆಯ ಮೇಲೆ.
ಸಾಗರನಿಗೂ ಉಂಟು ಬಂಧನದ ಶಾಪ.
ಕೇಳಿಸುವದಿಲ್ಲವೇ ಆತನ ಪ್ರತಾಪ ?
ತೆರೆಯ ತೋಳುಗಳೆತ್ತಿ ಜಿಗಿಯಲೆಣಿಸಿದರೂ
ಆಗಸವನಾಲಿಂಗಿಸನು ಕೊನೆಯವರೆಗೂ,
ತಗ್ಗಿನಲಿ ಮುಗ್ಗರಿಸಿಬಿದ್ದ ಕ್ಷಣದಿಂದ
ಏಳಲಾರನು ಮೇಲೆ ಜಡ ದೇಹದಿಂದ.
ರೋಷದಲಿ ಭೋರ್ಗರೆದು ನೊರೆಯ ಕಾರಿದರೂ
ಕಡಲ ಬಂಧನವನ್ನು ನೀಗಿಸುವರಾರು ?
ಯಾರಿಗೂ ತರವಲ್ಲ ಸ್ವಚ್ಛಂದ ಛಂದಃ
ಇಡಿಯ ವಿಶ್ವವೆ ಒಂದು ನಿಯಮಗಳ ಬಂಧ.

❖❖

ಜುಲೈ ೧೯೫೮

ಭಗ್ನ ಮನೋರಥ

(ಪ್ರಾಚೀನ ಚೀನಿ ಕವನದ ಹೆಜ್ಜೆಯಲ್ಲಿ)

ಎಂದಿನಂತೆಯೆ ಹಳ್ಳ ತುಂಬಿ ಹರಿಯುತ್ತಿತ್ತು
ನೀರ್‌ಕೋಳಿಗಳ ಕೂಗು ಕೇಳುತ್ತಿತ್ತು.
ನನ್ನ ಕೂದಲು ದುಂಡು ಮುಡಿಯಾಗಿ ಕಟ್ಟಿತ್ತು
ಆ ಕ್ಷಣಕೆ ನೀ ಬಂದೆ, ಸಂಜೆಹೊತ್ತು.

ಜರತಾರಿ ಸೀರೆಗಳ ಮಾರಾಟ ಮಾಡಲಿಕೆ
ಹಳ್ಳಿ ಹಳ್ಳಿಯ ನೀನು ತಿರಗುತಿದ್ದೆ.
ಆ ಹೊತ್ತು ಮಾತ್ರ ನೀ ತಾರಿ ದಾಟಿದ ಬಳಿಕ
ನನ್ನ ಹಿಂಬಾಲಿಸಿಯೆ ಬರುತಲಿದ್ದೆ.

ನಸುಗತ್ತಲಾಗಿತ್ತು, ಹುಲ್ಲು ಹಸಿಯಾಗಿತ್ತು,
ಕಪ್ಪೆಗಳ ಒದರಾಟ ನಡೆದೆ ಇತ್ತು.
ನಾವಿಬ್ಬರೂ ಕೂಡಿ ನಕ್ಕು ನಡೆದವು ಹಾದಿ;
ನೆನಪಿಲ್ಲವೇ ನೀನು ಕೊಟ್ಟ ಮುತ್ತು ?

ನನ್ನ ದಾರಿಯ ಬಿಟ್ಟು, ನಿನ್ನ ದಾರಿಯ ಹಿಡಿದೆ,
ತಾರಿಯನ್ನೂ ದಾಟಿ ಬಂದು ಬಿಟ್ಟೆ
ನಾನು ನೀನೂ ಕೂಡಿ ಸಂಸಾರ ಹೂಡಬೇ
ಕೆಂದು ಹೇಳಲು ನೀನು ಮಾತುಕೊಟ್ಟೆ.

ಯಾವಾಗ ನಾನರಿಯೆ, ನಿನ್ನ ಕಣ್ಣುಗಳೊಮ್ಮೆ
ತಣ್ಣಗಾದವು ನೋಡು ! ಅಂದಿನಿಂದ
ಮೂರು ಮಳೆಗಾಲಗಳು ಕಳೆದರೂ, ಪ್ರಾಣೇಶ
ಪ್ರಾಯದಲ್ಲೇ ನಾನು ಮುದುಕಿಯಾದೆ.

❖❖

ಜುಲೈ ೧೯೫೮

ಪ್ರಾಣಿ ಶಾಸ್ತ್ರಜ್ಞನ ವರದಿ

ಬೆಕ್ಕು ನಾಯಿಮರಿ ಎಮ್ಮೆ ಕೋಣ ಕುರಿ
ಸಕಲ ಪ್ರಾಣಿ ವೃಂದ
ಯಾವ ತರದ ಸಂಸ್ಕಾರವಿಲ್ಲದೆಯೆ
ವ್ಯರ್ಥವಾಯ್ತು, ಕಂದ.
ಧರ್ಮನೀತಿಗಳ ಯಾವ ಭೀತಿಯೂ
ಇಲ್ಲ ಪ್ರಾಣಿಗಳಿಗೆ.
ಹೊಟ್ಟೆಗಷ್ಟು ಬರಿ ತಿಂದು ತೇಗುವವು;
ಇಲ್ಲ ಮೇಲು ಕಳೆಗೆ.
ಯಾವ ತತ್ವವೂ ಯಾವ ಸೂತ್ರವೂ
ತಲೆಗೆ ಹಿಡಿಸದಣ್ಣ,
ದೇವ ದೆವ್ವರೊಳಗಿರುವ ಭೇದವೂ
ತಲೆಯ ಕೆಡಿಸದಣ್ಣ.
ಜಾತಿ ಪಂಥ ಕುಲ ಪಕ್ಷ ಪಂಗಡವ
ಪ್ರಾಣಿಯೊಳಗೆ ಕಾಣೆ
ಪಾಪ, ಪುಣ್ಯಗಳ ವಾದ ಚರ್ಚೆಯೂ
ಇಲ್ಲ, ದೇವರಾಣೆ.
ಧನಿಕ ಬಂದರೂ ಕನಕ ತಂದರೂ
ನಮಸ್ಕಾರವಿಲ್ಲ,
ಪ್ರಾಣಿಲೋಕದಲಿ ಚಕ್ರವರ್ತಿಗೂ
ಸ್ಥಾನಮಾನವಿಲ್ಲ.
ಇಲ್ಲ ಮಂತ್ರಿಗಳು ರಾಜ್ಯ ತಂತ್ರಿಗಳು
ಇಲ್ಲ ಪಾರ್ಲಿಮೆಂಟು.
ಪ್ರಾಣಿ ಲೋಕದೊಳಗಿರುವ ಯುಕ್ತಿಗಳು
ನರನ ಬಳಿಗೆ ಉಂಟು.
ಬೆಕ್ಕು ನಾಯಿಮರಿ ಎಮ್ಮೆ ಕೋಣ ಕುರಿ
ಸಕಲ ಪ್ರಾಣಿ ವೃಂದ,
ಯಾವ ತರದ ಸಂಸ್ಕಾರವಿಲ್ಲದೆಯೆ
ವ್ಯರ್ಥವಾಯ್ತು, ಕಂದ.

❖❖

ಏಪ್ರಿಲ್ ೧೯೬೧

ಕಟಕೂ ಪಕ್ಷಿ

(ಪ್ರಾಚೀನ ಚೀನಿ ಕವನದ ಹೆಜ್ಜೆಯಲ್ಲಿ)

ಮಲೆನಾಡಿನಿಂದ ಕಾಣಿಕೆಯಾಗಿ ಬಂದಿದೆ
ಈ ಅನುಪಮ ಪಕ್ಷಿ
ಅದರ ಪಕ್ಕ ಹಚ್ಚನೆ ಹಸುರು
ಹೊಸದಾಗಿ ಚಿಗುರಿದ ಬಿದಿರು
ಚುಂಚು ನಸುಗೆಂಪು
ಆಲದ ಹಣ್ಣಿನ ಸೊಂಪು
ರಹಸ್ಯಪೂರ್ಣ ಮಹತ್ವ ಪೂರ್ಣ ಅದರ ಮಾತು;
ಅರಮನೆಯ ಪಂಡಿತನೂ ಬಿಡಬಹುದು ಸೋತು
ಕೋಗಿಲೆಯಂತೆ ಅಲ್ಲ ಬರಿ ಗಾಯಕ.
ನಿಜವಾಗಿಯೂ ಪಕ್ಷಿಗಳ ನಾಯಕ,
ದೇಶದ ಪ್ರತಿಭಾವಂತ ನಾಯಕರನು
ಅರಸು ನಡೆಸಿಕೊಳ್ಳುವಂತೆಯೇ
ಈ ಪಕ್ಷಿಯ ಭಾಗ್ಯ;
ಕಬ್ಬಿಣದ ಪಂಜರದೊಳಗೆ ಇಟ್ಟು
ಸಾಕಿ ಸಲಹುವರಯ್ಯಾ.

❖❖

ಸೆಪ್ಟೆಂಬರ್ ೧೯೫೮

ಬಾಲ್ಯದ ನೆನಪು

ಮಳೆ ಬರಲು ಆಡಲಿಕೆ ಕಾಗದದ ಡೋಣಿ,
ಬೇಸಗೆಯ ಬಿಸಿಲೊಳಗೆ ಪ್ರತಿಯೊಂದು ಓಣಿ,
ಚಳಿಗಾಲ ನಸುಕಿನೊಳು ತರಗೆಲೆಯ ಜ್ವಾಲೆ
ಹಸುರು ಬೆಟ್ಟವೆ ನಮಗೆ ಆಗಿತ್ತು ಶಾಲೆ.

ಮರದಿಂದ ಹುಲ್ಲು ಬಣಬೆಯ ಮೇಲೆ ಹಾರಿ
ಅಲ್ಲಿಂದ ಸರಸರನೆ ಗರಗರನೆ ಜಾರಿ,
ಪೂರ್ಣ ಕಲಿಯಲು ನಾನು ಕೋತಿಗಳ ವಿದ್ಯೆ
ಸರಿಯಾಗಿ ಬರುತ್ತಿತ್ತು ಇಡಿ ರಾತ್ರಿ ನಿದ್ದೆ.

ಮರದಲ್ಲಿ ಹಕ್ಕಿ ಕಟ್ಟಿದ ಗೂಡು ಹುಡುಕಿ
ಅದರೊಳಗೆ ಬಿಳಿ ಡಾಂಬರದ ಗುಳಿಗೆ ಹಾಕಿ
ತೋರಿಸಲು ತತ್ತಿ ನೋಡಿದಳೆಂದು ತಾನು
ಅಜ್ಜಿ ನಂಬಲು ನಾವು ನಗಲಿಲ್ಲವೇನು ?

ಕೋಲ ನಿಲ್ಲಿಸಿ ಅದಕೆ ಚಾಚಿದೆನು ಬುಟ್ಟಿ
ಒಂದು ತುದಿಯಲಿ ಉದ್ದ ಹಗ್ಗವನು ಕಟ್ಟಿ
ಒಳಗೆ ಭತ್ತವ ಬೀರಿ ಮಾಡಿದೆನು ಮಾಟ
ಹೀಗೆ ಕೋಳಿಯ ಹಿಡಿಯೆ ನನಗಾಯ್ತು ಆಟ.

ಕಣಜದಲಿ ಮಲಗಿತ್ತು ರಬ್ಬರದ ಹಾವು !
ಅದಕಂಜಿ ನಾಗಮ್ಮ ಚೀರಿದೊಡೆ ನಾವು,
ನಕ್ಕು ನಲಿದಾಡಿದೆವು, ಏನೇನೊ ಆಟ !
ಎಂದಿಗೂ ಮರೆಯಾಗದಂಥ ಆ ನೋಟ.

ಗುಬ್ಬಿ ಗೂಡನು ಮಾಡಿ ಹೂಡಿಟ್ಟ ಮಣ್ಣು
ಗೇರು ಗಿಡಗಳನೇರಿ ತಿಂದ ಆ ಹಣ್ಣು
ಎಷ್ಟೆಂದು ಲೆಕ್ಕವಿಟ್ಟವರು ಯಾರಿಲ್ಲ,
ಲೆಕ್ಕವರಿಯದ ಬಾಲ್ಯವೇ ಮಧುರ ಬೆಲ್ಲ.

❖❖

ಮಾರ್ಚ ೧೯೫೫

ರಾಷ್ಟ್ರೀಯ ಯೋಜನೆ

೧

Poetry is condemned as 'political' when we disagree with the politics - T. S. Eliot.

ರಾಷ್ಟ್ರೀಯ ವಿಸ್ತರಣ ಯೋಜನೆ
ಹೇಗೆ ಸಾಗಿದೆ ನೋಡು ಬಾ ಮಗನೆ
ರಾಷ್ಟ್ರದ ವಿಸ್ತರಣವಾಗಿ
ಅರಬೀಸಮುದ್ರವೂ ತಕ್ಕಮಟ್ಟಿಗೆ ಹಿಂದೆ ಸರಿಯಿತು
ಕಡಿಮೆಯಾಗಲಿಲ್ಲ ಕಡಲ ಆಳ
ಇಡಿ ಸಾಗರಕೆ ಹಾಕಿದೆವು ಗಾಳ
ಮೇಲಾಗಿ ಮಣ್ಣಿನಿಂದ ಮುಚ್ಚಿಹೋಯಿತು ಬಂದರ
ಯೋಜನೆ ಬಲು ಸುಂದರ.

೨

ಇದು ಸಮಾಜ ವಿಕಾಸ ಯೋಜನೆ
ರಾಷ್ಟ್ರಕ್ಕಾಗಿ ನಡೆದಿದೆ ಭಕ್ತರ ಭಜನೆ
ಕೆಲವರ ಕೈಯಲಿ ತಾಳ
ಹಲವರ ಕಾಲಲಿ ಗೆಜ್ಜೆ;
ಎತ್ತಿ ಇಡುತಲಿದೆ ಭಾರತ ಮುಂದಿನ ಹೆಜ್ಜೆ
ಎಳೆಯುವವರಿಗೆ ಸರಿಯಾಗಿ ರಾಗ
ಹಾಕುವವರಿಗೆ ಸರಿಯಾಗಿ ಲಾಗ
ಹಂಚಲಾಯಿತು ಸಾಧನೆಯ ಪ್ರಸಾದ
ಯಶಸ್ವಿಯಾಯಿತು ಯೋಜನೆಯ ಪ್ರಯೋಗ.
ಇದು ಆಹಾರ ಹೆಚ್ಚಳದ ಯೋಜನೆ
ಈ ಬಾಳೆಗೆ ಇನ್ನೂ ಬಂದಿಲ್ಲ ಗೊನೆ
ಸವಿ ನೀರಿನ ಮಹಾಸಾಗರ
ದನಗಳ ವಿನಃ ಮಾಡಿದ ಗೊಬ್ಬರ

ಕೃಷಿತಜ್ಞ ಪದವೀಧರರ ಭತ್ತೆ ಪಗಾರ,
ಉತ್ತಮ ಹೋರಿಗಳ ನಾನಾ ಪ್ರಕಾರ
ಸತ್ತವರೂ ಎದ್ದು ನಿಂತರು ನೋಡಲಿಕೆ ದೇಶದ ಉದ್ಧಾರ !

ಮುಂದೇನು ಪರಿಸ್ಥಿತಿ ?
ಕೇಳು ಈ ಚಮತ್ಕೃತಿ –
ಯೋಜನೆಯ ಬಾಳೆಗೆ ಎಲೆಗಳೇ ದೊಡ್ಡ
ಬಲು ಜೋರಾಗಿ ಬೆಳೆದಿವೆ ಅಡ್ಡ–ತಿಡ್ಡ
ಬರಲಿಲ್ಲ ಮಾತ್ರ ಬಾಳೇ ಗೊನೆ
ಈ ಬಾಳೆಯ ಜಾತಿಯೇ ಹೊಸ ನಮೂನೆ.

❖❖

ಜುಲೈ ೧೯೫೮

ಗಾಂಧೀಜಿಯವರಲ್ಲಿ ಬಿನ್ನವತ್ತಳೆ

ಎಲ್ಲರೂ ಹಂಚಿಕೊಳಿ ಎಂದು ನೀ ಕೊಟ್ಟೆ
ಎಲ್ಲರಿಗೆ ಹಂಚಿಯೇ ನಾ ತಿಂದು ಬಿಟ್ಟೆ
ಇತರರಿಗೆ ಕೊಟ್ಟಿದ್ದು ಅತಿ ಕಡಿಮೆ ಅಲ್ಲಾ;
ನನಗೆ ಸಿಕ್ಕಿದ್ದೂನು ಬಹಳ ಹೆಚ್ಚಲ್ಲ
ಅಡಗಿ ಬಚ್ಚಿಟ್ಟು, ನಾ ತಿನಬಾರದಿತ್ತು
ಸರಕಾರಿ ಹಣವೆಂದು ನನಗೆ ಗೊತ್ತಿತ್ತು
ಏನೆಂದರೂ, ತಂದೆ, ನಾನಿನ್ನು ಸಣ್ಣ;
ಚಿಕ್ಕವನಿಗೆ ಮಂತ್ರಿಪದ ಕೊಟ್ಟರಣ್ಣ
ಮೇಲಾಗಿ ನನಗಿಲ್ಲ ಅನುಭವವು ಹೆಚ್ಚು
ಅದಕಾಗಿಯೇ ನನಗೆ ಈ ಕೆಟ್ಟ ಹುಚ್ಚು
ನಾ ಹಿಂದೆ ಜೇಲಿಗೂ ಹೋದದ್ದು ಇಲ್ಲಾ;
ಆದರೂ ನನ್ನನ್ನೆ ನಿಲ್ಲಿಸಿದರಲ್ಲಾ !
ನಿನ್ನ ಹೆಸರಲ್ಲಿಯೇ ಸಿಕ್ಕಿದವು ಓಟು,
ಓಟುಗಳ ಹೊರತಾಗಿ ಹಣ್ಣುಗಳ ತಾಟು.
ನಾಲಗೆಯ ಮೇಲಿಟ್ಟ ರಸಬಾಳೆ ಹಣ್ಣು;
ಕರಗಿ ಹೋದರೆ ದೊಡ್ಡ ತಪ್ಪಾಯಿತೇನು ?
ರಾಜಕಾರಣದಲ್ಲಿ ಹುಡುಗ ನಾನಂದೆ
ಅದಕಾಗಿಯೇ ಸಿಕ್ಕಿ ಬಿದ್ದದ್ದು, ತಂದೆ.

❖❖

ಜೂನ್ ೧೯೫೮

ಮುಖ್ಯಮಂತ್ರಿಯ ಹೇಳಿಕೆ

ನನ್ನಲ್ಲಿಯೇ ನೀವು ಪೂರ್ಣ ವಿಶ್ವಾಸ
ಇಡದೆ ಹೋದರೆ ಸ್ವಾಮಿ ಜನತೆಗೇ ತ್ರಾಸ
ಮೂರು ವಾರಕ್ಕೊಂದು ಸರಕಾರ ಕಟ್ಟಿ
ಸುಟ್ಟು ಕೊಳ್ಳುವರವರು ಅವರವರ ರೊಟ್ಟಿ

ರಾಜ್ಯಭಾರದ ಕೆಲಸ ಬಲು ದೊಡ್ಡ ತಾಪ
ಸರಿಯಾಗಿ ನಡೆಸದಿದ್ದರೆ ಹರಿಗೆ ಕೋಪ
ಕೋಪ ತಪ್ಪಿಸಲಿಕ್ಕೆ ಜನತೆ ಕಣ್ಮುಚ್ಚಿ
ಮಂತ್ರಿ ಮಂಡಳವನ್ನು ಬಿಡಬೇಕು ಮೆಚ್ಚಿ.

❖❖

ಮೇ ೧೯೫೮

ವ್ಯಾಖ್ಯೆಗಳು

೧

ಈಶ್ವರನ ಸಿಟ್ಟು
ಮಾನವನ ಹುಟ್ಟು
ಈಶ್ವರನ ಕರುಣ
ಮೈದೋರೆ ಮರಣ.

೨

ಕಂಗೊಳಿಸೆ ಕಾಳು
ಕಂದರದೆ ಬಾಳು
ಹಸುರಾಗೆ ಬಯಕೆ
ಹಸಿವೆ ನೀರಡಿಕೆ

೩

ಮಳೆಗಾಲ ಚುಕ್ಕಿ
ಇಳೆಗಿಲ್ಲ ಅಕ್ಕಿ
ಬೇಸಗೆಯ ಜೊನ್ನ
ಬೇಯಿಸಿದ ಅನ್ನ

೪

ನಡುಗಿದರೆ ಮುಗಿಲು
ಅಡಗುವುದು ಹಗಲು
ಮಾಣಿದರೆ ನೋವು
ಕಾಣುವುದು ಸಾವು.

❖❖

ಜೂನ್ ೧೯೬೧

ಸ್ವರ್ಗದ ಗೆಳೆಯನಿಗೆ ಬರೆದ ಪತ್ರ

೧

ನಿನ್ನ ಪತ್ರದ ಹಾದಿ ನೋಡಿ ನಾ ಬೇಸತ್ತೆ
ಈಗಾದರೂ ಒಂದು ಪತ್ರ ಕಳಿಸು,
ಹೇಗಿದ್ದಿ ? ನಿನಗೆ ಹೊಸ ಗೆಳತಿ ಸಿಕ್ಕಿದಳೇನು ?
ಎಲ್ಲವನ್ನೂ ಬೇಗ ಬರೆದು ತಿಳಿಸು.
ನಿನ್ನ ಊಟದ ಬಗ್ಗೆ ಯಾವ ಏರ್ಪಾಡುಂಟು
ಕಾಫಿ ತಿಂಡಿಯ ವಿಷಯ ಬರೆದು ಹಾಕು
ಅಲ್ಲಿಯೂ ಉಡುಪಿ ಬ್ರಾಹ್ಮಣನಿಟ್ಟ ಹಾಟೇಲು
ಬೀದಿ ಬೀದಿಯ ಗುಂಟ ಇರಲೇಬೇಕು.
ಬಿರಿಯಾನಿ ಸೇವಿಸುವ ನಿನ್ನ ಆ ನಾಲಗೆಗೆ
ಪೀಯೂಷವನೆ ನಿತ್ಯ ಕುಡಿದು ಕುಡಿದು
ಸ್ವರ್ಗದೊಳಗಿನ ಬಾಳು ಬೇಡೆಂದು ಅನಿಸಿದರೆ
ಈಗಲೇ ಬಂದು ಬಿಡು ಶರಣು ಹೊಡೆದು
ಬೂಟು ಚಪ್ಪಲಿಗಳನು ಸ್ವರ್ಗದೊಳಗೊಯ್ಯಲಿಕೆ
ಪರ್ಮಿಟ್ಟು ಸಿಗಲಾರದೆಂದು ನೀನು
ಇಲ್ಲಿಯೇ ಬಿಟ್ಟು ಹೋದದ್ದು ಜ್ಞಾಪಕವಿದೆಯೇ ?
ಪರವಾನೆ ಸಿಕ್ಕಿದರೆ ಕಳಿಸಲೇನು ?
ಅಮರಲೋಕದ ಮಂದಿ ಪ್ಯಾಂಟು ಧರಿಸುವರೇನು ?
ಹಾಕುವರೆ ಬುಶ್ ಕೋಟಗಳನು ಕೂಡ ?
ದೇವಲೋಕದ ಡ್ರೆಸ್ಸು ಯಾವ ರೀತಿಯದೆಂದು
ಬರೆಯಲಿಕೆ ಸರ್ವಥಾ ಮರೆಯಬೇಡ.
ಎಲ್ಲರೂ ಪೀತಾಂಬರವನುಟ್ಟು ನಲಿಯುವರೆ ?
ತಲೆಗೆ ಟೋಪಿಯ ಬದಲು ಮುಕುಟವೇನು ?
ಈ ಡ್ರೆಸ್ಸು ನಿನ್ನ ರೂಪಿಗೆ ಬಹಳ ಒಪ್ಪುವುದು
ಕಾಮದೇವನ ಹಾಗೆ ಕಾಂಬೆ ನೀನು.
ಪ್ರತಿಯೊಬ್ಬನೂ ತಲೆಗೆ ಜುಟ್ಟು ಬಿಟ್ಟಿರಬಹುದೇ ?
ಮತ್ತೆ ಬೆಳೆಸಿರಬಹುದು ಗಲ್ಲಮೀಸೆ

ಎಲ್ಲರೂ ಯಕ್ಷಗಾನದ ಮೇಳದವರಂತೆ
ಸಿಂಗರಿಸಿದರೆ, ಗೆಳೆಯ ಬಲು ತಮಾಷೆ.

೨

ಚಿಕ್ಕ ತೋಳಿನ ಬ್ಲಾವ್‌ಸು ಹಾಕಿ ಮಿರಿ ಮಿರಿ ಮೆರವ
ಆಧುನಿಕ ಹುಡುಗಿಯರು ಅಲ್ಲಿ ಉಂಟೆ ?
ಮತ್ತೊಂದು ಜಾತಿಯಲಿ ಮದುವೆಯಾದರೆ ಹುಡುಗಿ
ಸ್ವರ್ಗದಲ್ಲೂ ಉಂಟೆ ವಾದ ತಂಟೆ ?
ಮೂವತ್ತು ಮೂರು ಕೋಟಿಗೆ ಮಿಕ್ಕ ಸುರರಲ್ಲಿ
ಯಾವ ಜಾತಿಯ ಜನರ ಸಂಖ್ಯೆ ಹೆಚ್ಚು ?
ಸ್ವರ್ಗದಲ್ಲೂ ಕೂಡ ಮುಸಲರಿದ್ದಾರೆಂದು
ಗ್ರಹಿಸಿದರೆ, ಆಗಬಹುದೇನು ತಪ್ಪು ?
ಉಂಟೇನು ಸ್ವರ್ಗದಲಿ ಹೊಲೆಯ ಬ್ರಾಹ್ಮಣ ಭಂಗಿ
ಚಮಗಾರ ಚಲವಾದಿ ನೂರು ಜಾತಿ ?
ಸುರಕುಲದ ಆರಂಭದಿತಿಹಾಸ ಹೇಗುಂಟು ?
ಅಲ್ಲಿಯೂ ಜನಿಸಿತ್ತೆ ಮೊದಲು ಕೋತಿ ?
ಕೈಲಾಸ ಎನ್ನುವುದು ಒಂದು ಕೇರಿಯ ಹೆಸರೆ ?
ವೈಕುಂಠ ವೈಷ್ಣವರ ಓಣಿಯೇನು ?
ಕ್ರಿಸ್ತಿ ಮುಸಲರು ಪಾರ್ಸಿ ಯಾವ ಬೀದಿಯಲಿಹರು ?
ಎಲ್ಲಿಹನು ನಮ್ಮೂರ ಹೊಲೆಯ ಜಾನು ?
ವೀರಶೈವರು ಲಿಂಗ ಕಟ್ಟಿಕೊಳ್ಳುವರೇನು ?
ವೈಷ್ಣವರು ಹಚ್ಚುವರೆ ಹಣೆಗೆ ನಾಮ ?
ಗೌಡ ಸಾರಸ್ವತರು ಮೀನು ಸೇವಿಸಿದರೂ
ಪೂಜ್ಯವೆನಿಸಿರಬೇಕು ಸ್ವರ್ಗಧಾಮ.

೩

ಸ್ವರ್ಗದಲಿ ಮುಪ್ಪಿಲ್ಲವೆಂಬ ಹೇಳಿಕೆ ನಿಜವೆ ?
ಇದರ ಸರಿಯಾದರ್ಥ ನನಗೆ ತಿಳಿಯ
ಅರವತ್ತು ವರುಷ ಪ್ರಾಯದ ಮುದುಕಿ ಸ್ವರ್ಗದಲಿ
ನವ ತರುಣಿಯಾಗಿ ಕಾಣುವಳೆ, ಗೆಳೆಯ ?
ಈ ಸನ್ನಿವೇಶದಲಿ ನಿನಗೊಂದು ಮುದಿಗೊಡ್ಡು

ಸಿಕ್ಕಿದರು ನಡೆದೀತು, ಅಲ್ಲವೇನು ?
ನನ್ನ ಈ ಗ್ರಹಿಕೆಯಲಿ ದೋಷವಿದ್ದರೆ ಕ್ಷಮಿಸು
ಸ್ವರ್ಗಲೋಕದ ರೀತಿ ಬಲ್ಲೆ ನೀನು.
ಇನ್ನೊಂದು ಪ್ರಶ್ನೆ ಕೇಳಿದರೆ ಕೋಪಿಸ–ಬೇಡ;
ಈ ಲೋಕದಲಿ ಸತ್ತ ಮುದಕ ಮಂದಿ
ಸ್ವರ್ಗವೇರಿದ ಬಳಿಕ ಯೌವನವ ಗಳಿಸುವರೆ ?
ಇಂಥ ಪ್ರಶ್ನೆಯ ಕೇಳಬೇಡ ಅಂದಿ,
ಪ್ರಶ್ನೆಗಳ ಕೇಳಲಿಕೆ ಒಂದು ಕಾರಣವುಂಟು;
ಕೇಳದಿದ್ದರೆ ನನಗೆ ಇಲ್ಲ ತೃಪ್ತಿ
ನರೆಮುಪ್ಪು ಕಾಲಪುರುಷನ ಶಾಪವೆನ್ನುವರು;
ಸ್ವರ್ಗದೊಳಗಿಲ್ಲಂತೆ ಇವನ ವ್ಯಾಪ್ತಿ
ಯಾವಾಗಲೂ ಸ್ವರ್ಗದೊಳಗೆ ಯೌವನವಿರಲು
ಕಾಮದೇವನ ಮಹಿಮೆ ಶ್ರೇಷ್ಠವೆಂಬೆ
ಇಂದ್ರದೇವನಿಗಿಂತ ಕಾಮದೇವನ ಮಹಿಮೆ,
ಕಡಿಮೆ ಎಂದರೆ ಅದನು ನಾನು ನಂಬೆ.
ಇಬ್ಬರನ್ನು ನೀನು ಭೇಟಿಯಾಗಿರಬಹುದು;
ಓಲಗದೊಳಿದ್ದನೇ ಇಂದ್ರದೇವ ?
ರಂಭೆ ಮೇನಕೆ ಊರ್ವಶಿಯರ ನೃತ್ಯವ ಕಂಡು
ತೃಪ್ತಿ ಹೊಂದಿರಬೇಕು ನಿನ್ನ ಜೀವ
ದೇವಲೋಕದ ಸಂಭ್ರಮದ ಸೊಗಸು ಹೇಗುಂಟು ?
ಇಂದ್ರದೇವನ ಥಾಟು ಯಾವ ರೀತಿ ?
ಎಷ್ಟು ಆನೆಗಳುಂಟು ? ಮತ್ತೆ ಒಂಟೆಗಳೆಷ್ಟು ?
ಮೆರವಣಿಗೆಯೊಳಿಗತ್ತೆ ಕೆಂಪು ಕೋತಿ ?
ಇಂದ್ರದೇವನ ದರುಶನದ ಲಾಭ ನಮಗಿಲ್ಲ,
ನಮ್ಮ ಪಾಲಿಗೆ ಬರೀ ನಾಡ ಹಬ್ಬ
ದೇವತೆಯ ಜಂಬೂಸವಾರಿ ನೋಡಿದ ಮನುಜ
ಕನ್ನಡದ ವಸುಧೆಯಲಿ ನೀನೆ ಒಬ್ಬ !

೪

ಕನ್ನಡದ ವಸುಧೆಯೊಳಗಿರುವ ಎಲ್ಲಾ ಚೈನಿ
ಐಶ್ – ಆರಾಮಗಳು ಅಲ್ಲಿ ಉಂಟೆ ?
ಮತ್ತೆ ಇವುಗಳ ಜೊತೆಗೆ ತಲೆ ನೋವು ಹುಟ್ಟಿಸಲು
ಉಂಟೇನು ಸಾಕಷ್ಟು ಜಗಳ ತಂಟೆ ?
ಸ್ವರ್ಗದೊಳಗೂ ಇದೆಯೆ ಮೈಸೂರು ಮಂಗ್ಳೂರು
ಧಾರ್ವಾಡ ಮುಂತಾದ ಪ್ರಾಂತ ಭೇದ ?
ಬೆಳಗಾಂವಿ ನಿಪ್ಪಾಣಿ ಗಡಿ ಪ್ರಶ್ನೆಗಳ ಬಗ್ಗೆ
ಹಗಲೆಲ್ಲ ಉಂಟೇನು ಜಗಳ ವಾದ ?
ಗಗನ ಲೋಕದ ಮೇಲೆ ಇರುವ ಕನ್ನಡ ಮಂದಿ
ಎಷ್ಟಾಗಬಹುದೆಂಬ ಲೆಕ್ಕ ಉಂಟೆ ?
ಇಲ್ಲದಿದ್ದರೆ ಲೆಕ್ಕ, ಜನಗಣತಿ ಕಾಲಕ್ಕೆ
ಮೇಲಕೇಳಲಿ ದೊಡ್ಡ ಜಗಳ ತಂಟೆ,
ಉಗ್ರ ಆಂದೋಲನವ ಹೂಡಿದರೆ ಮಾತ್ರವೇ
ಕನ್ನಡದ ಬಾವುಟವು ಸ್ವರ್ಗದಲ್ಲೂ
ಹಾರಾಡಿ ಹೋರಾಡಿ ಗೆಲಬಹುದು ನಿಲಬಹುದು,
ಯಾವುದಕ್ಕೂ ಬೇಕು ಬೊಬ್ಬೆ ಗುಲ್ಲು,
ದೇವಲೋಕದ ಭಾಷೆ ಮಂತ್ರದಂತಿದೆ ಏನು ?
ಸಂಪೂರ್ಣ ಬಾಯ್ ಕಿಸಿದು ಕೂಗಬೇಕೇ ?
ಗಂಡ ಹೆಂಡಿರ ಸರಸ ಸಲ್ಲಾಪವೂ ಕೂಡ
ಮಂತ್ರದ ಮುಖಾಂತರವೇ ಸಾಗಬೇಕೆ ?
ನಮ್ಮ ಕನ್ನಡ ಮಾತು ರಸಬಾಳೆ ಹಣ್ಣೆಂದು
ಬಾಯೊಳಗೆ ಇಟ್ಟವರು ಉಂಟು ಇಲ್ಲಿ,
ದೇವಲೋಕದ ಮಾತು ರುದ್ರಾಕ್ಷಿ ಎಂದೆಣಿಸಿ
ಜಪ ಮಾಡಿದವರುಂಟೆ ಸ್ವರ್ಗದಲ್ಲಿ ?
ಸುರರ ವರ ಭಾಷೆಯಲಿ ಗದ್ಯವನು ಬರೆದರೂ
ಇದು ವರೆಗೆ ನೀ ಬರೆದ ಹಾಳು ಹರಟೆಗಳೆಲ್ಲ
ಕವನವಾಗಿರಬಹುದೇ ಇಷ್ಟರಲ್ಲೆ ?

೫

ನಮ್ಮೂರಿನಿಂದ ಹೋದವರೆಲ್ಲ ಕ್ಷೇಮವೆ ?
ಹೇಗಿಹನು ಬೀಡಿಯಂಗಡಿಯ ರಾಕು ?
ಅಲ್ಲಿ ಬೀಡಿಯ ಬದಲು ಸಿಗರೇಟು ಕಟ್ಟುವನೆ ?
ಸ್ವರ್ಗದಲಿ ಬಡತಿ ಹೊಂದಿರಲೆ ಬೇಕು
ಸುಖರೂಪವಾಗಿಹನೆ ಹೊಲೆಯ ಕೇರಿಯ ಜಾನು ?
ಸ್ವರ್ಗವನು ಗುಡಿಸುವನೆ ಇಡಿಯ ದಿವಸ ?
ಕೈಯೊಳಗೆ ಹಿಡಿದ ಕಸಬರಿಗೆ ಬಿಡುವವನಲ್ಲ;
ಬಲು ಚೊಕ್ಕವಾಗಿತ್ತು ಅವನ ಕೆಲಸ.
ಸ್ವರ್ಗದೊಳಗೀತನಿಗೆ ಸಿಗುವ ಸಂಬಳವೆಷ್ಟು ?
ಇವನ ಗುಡಿಸಲು ಇಲ್ಲಿ ಸೋರುತ್ತಿತ್ತು.
ಹೊಲೆಯರಲಿ ಹುಟ್ಟಿಯೂ ಸತ್ಪುರುಷನಾಗಿದ್ದ
ದೈವ ಬೇಕೆನ್ನುವರು ಯಾವುದಕ್ಕೂ
ಕೊನೆಯ ವರೆಗೂ ಪಾಪ ಕಂಗಾಲು ಸ್ಥಿತಿಯೊಳಗೆ
ಸಂಸಾರ ದೂಡಿದನು ಹೊಲೆಯ ಜಾನು
ಸ್ವರ್ಗದಲ್ಲಾದರೂ ಎರಡು ಸರಿಯಾದೂಟ
ದೊರಕುವುದು ಎಂದು ಭಾವಿಸಲೆ ನಾನು ?
ಹೇಗಿಹನು ಭಾವಿಕೇರಿಯ ರೈತ ಬುದಗೌಡ ?
ಪಡೆದಿಹನೆ ಸಾಕಷ್ಟು ಎಕರೆ ಗದ್ದೆ ?
ಈತನಿಗೆ ಇಲ್ಲಿ ಭತ್ತದ ಭೂಮಿಯಿರಲಿಲ್ಲ;
ಬಡವ ತಿನುತಿದ್ದ ಬರಿ ರಾಗಿ ಮುದ್ದೆ
ಒಮ್ಮೆಯಾದರು ನಿನಗೆ ಭೇಟಿಯಾಗಿದ್ದನೇ
ನೆರೆಮನೆಯ ಸೊನಗಾರ ವೆಂಕಟೇಶ ?
ಹೇಗಾದರೂ ಮಾಡಿ ಇಹಯಾತ್ರೆ ಮುಗಿಸಿದನು
ಅಲ್ಲಿಯಾದರೂ ಕರುಣೆಸಿದನೆ ಈಶ ?
ಈಗಾದರೂ ವೆಂಕಟೇಶನಿಗೆ ಸುಖವುಂಟೆ ?
ಉದ್ಯೋಗವಿದೆಯೆ ಸಾಕಷ್ಟು ದಿವಸ ?
ಇಂದ್ರದೇವನ ಸೂಳೆ ರಂಭೆಯೊಬ್ಬಳೆ ಸಾಕು
ಕೊಡಲಿಕ್ಕೆ ಈತನಿಗೆ ಭರ್ತಿಕೆಲಸ
ನಮ್ಮೂರ ಸಿಂಪಿ ಸಾಂಬನ ಪರಿಸ್ಥಿತಿ ಹೇಗೆ ?

ಹೊಲಿಗೆಗಿಂತಲೂ ಇವನ ಮಾತು ಹೆಚ್ಚು
ನೂರಾರು ರಗಳೆ ಸಿಕ್ಕಿಸಿಕೊಂಡು ಓಡಾಟ
ಮತ್ತೆ ತಲೆಯೊಳಗೆ ನಾಟಕದ ಹುಚ್ಚು
ಈ ತರದ ಸಿಂಪಿತನ ಸ್ವರ್ಗದಲಿ ನಡೆಯುವುದೆ ?
ಆಧುನಿಕ ಫ್ಯಾಶನ್ನು ಕಲಿತ ಹೊರತು
ರಂಭೆ ಮೇನಕೆ ಊರ್ವಶಿಯರು ಕೊಡುವರೆ ಕೆಲಸ !
ನೀ ಸ್ವಲ್ಪ ಆತನಿಗೆ ತಿಳಿಸಿ ಹೇಳು.
ಹೇಗಿಹಳು ಸೇವಂತಿ ರಾಮರಾಯರ ಸೂಳೆ ?
ಹಾಗೆಯೇ ಉಂಟೇನು ಅವಳ ಝೋಕು
ಒನಪು ಒಯ್ಯಾರದಲಿ ರಂಭೆಗೂ ಮಿಗಿಲೇನು ?
ಅಪ್ಸರೆಗೆ ಬರಬಹುದೆ ಇವಳ ಶೋಕು ?
ಸ್ವರ್ಗವೇರಲು ಈಕೆ ನಮ್ಮೂರ ಬೀದಿಯಲಿ
ಕವಿದಿತ್ತು ನಿತ್ಯವೂ ಕಪ್ಪು ಮೋಡ
ದೇವಲೋಕದ ಮೇಲೆ ಬೆಳಕು ಚೆಲ್ಲಿರಬೇಕು
ಸೇಂವತಿ ನಕ್ಕಾಡಿ ಸುರರ ಕೂಡ.
ಇಂದ್ರಭವನದ ಚಲನಚಿತ್ರಗಳ ನಟಿಯರಲಿ
ಈಕೆ ಪಡೆದಿರಬಹುದು ಉಚ್ಚ ಸ್ಥಾನ
ಹೀಗಾದ ಪಕ್ಷದಲಿ ನಮ್ಮೂರ ಪರವಾಗಿ
ಅಭಿನಂದನೆಯ ಸಲ್ಲಿಸವುದು ಕ್ಷೇಮ.
ನಮ್ಮೂರ ಮಡಿವಾಳ ಮಾದಪ್ಪನೂ ಮೊನ್ನೆ
ಸ್ವರ್ಗವನ್ನೇರಿ ಕೂತಿಹನು ಮತ್ತೆ
ಮುಪ್ಪಿನಿಂದಾತ ನಿತ್ರಾಣವಾಗಿದ್ದರೂ
ಗಗನಕ್ಕೆ ನೆಗೆದದ್ದು ನಿನಗೆ ಗೊತ್ತೆ ?
ನಮ್ಮ ಮುದಿ ಮಾದಪ್ಪ ಒಗೆಯಲಾರನು ಬಟ್ಟೆ
ನೀನಿದನು ದೇವರಿಗೆ ತಿಳಿಸಬೇಕು
ಮತ್ತೆ ಆ ಮುದುಕನಿಗೆ ಆ ಜನ್ಮ ಪರಿಯಂತ
ಪೆನ್‌ಶನ್ನು ಸಿಗುವಂತೆ ಮಾಡಬೇಕು
ಇವರೆಲ್ಲರೂ, ಗೆಳೆಯ, ನಮ್ಮ ಊರಿನ ಜನರು,
ಇವರ ಕುಶಲವ ಕೇಳಿ ಪತ್ರ ಹಾಕು.
ನನ್ನ ನೆನಪಿಗೆ ಬಾರದಂಥವರು ಇರಬಹುದು
ಅವರಿಗೂ ಕ್ಷೇಮವನು ಕೋರಬೇಕು.

೬

ಓ ಗೆಳೆಯ, ನೆನಪಾಯ್ತು! 'ಜನವಾಣಿ' ಪತ್ರಿಕೆಯ
ಮಾಜಿ ಸಂಪಾದಕರು ಸೌಖ್ಯವೇನು ?
ಅವರಿಗೂ ನನ್ನ ವಂದನೆಗಳನು ತಿಳಿಸಯ್ಯ
ಸಿಗದೆ ಹೋದರೆ ಸಮಯ, ಮಾಡು ಫೋನು.
ಸ್ವರ್ಗದೊಳಗಿನ ಮುಖ್ಯ ಪತ್ರಿಕೆಯ ಹೆಸರೇನು ?
ಪುಟ ಸಂಖ್ಯೆ ಮುಂತಾದ ವಿವರ ತಿಳಿಸು
ನಮ್ಮ ಕನ್ನಡ ಪತ್ರಗಳಿಗಿಂತ ಉತ್ತಮವೆ ?
ಮಾದರಿಗೆ ಒಂದು ಸಂಚಿಕೆಯ ಕಳಿಸು.
ಸುದ್ದಿಗಳ ತಿರುಪಿಸುತ ಚಕ್ಕುಲಿ ತಯಾರಿಸುವ
ಪತ್ರಿಕೆಗೆ ಉಂಟೇನು ಅಲ್ಲಿ ಸ್ಥಾನ ?
ಮತ್ತೆ ತಿರುಗಣೆಯೊಳಗೆ ಖಾರ ಹೆಚ್ಚಾದಷ್ಟು
ಆಸ್ಥೆಯಿಂದೋದುವುದೇ ಸ್ವರ್ಗಧಾಮ ?
ವಾರದ ಭವಿಷ್ಯವೂ ದೇವರಿಗೆ ಸೇರುವುದೆ ?
ಇದನು ಬರೆಯುವನಾರು ? ಯಾವ ಭಟ್ಟ ?
ಪ್ರತಿಯೊಂದು ಪತ್ರಿಕೆಗೆ ಬೇಕಲ್ಲ ವಿವಿಧ ಮುಖ !
ಇಲ್ಲದಿದ್ದರೆ ಪಿಳ್ಳೆಯೂ ಅದನು ಮುಟ್ಟ !
ಗಂಡ ಮಡದಿಗೆ ಕೊಡುವ ಜಾಹೀರು ನೋಟೀಸು
ವೃತ್ತ ಪತ್ರಿಕೆಯಲ್ಲಿ ಬರವುದುಂಟೆ ?
ಇಬ್ಬರೂ ಜಗಳಾಡಿ ಸೋಡಚೀಟಿಗೆ ಬರಲು
ಪ್ರಕಟವಾಗುವುದೇನು ಇವರ ತಂಟೆ ?
ಸುರರ ಪತ್ರಿಕೆಯೊಳಗೆ ಒಗಟಿಗೂ ಸ್ಥಳವಿದೆಯೆ ?
ಇರಲೆ ಬೇಕೆಂಬುದೆ ನನ್ನ ಎಣಿಕೆ.
ಆಧುನಿಕ ಜಗದೊಳಗೆ ಎಲ್ಲವೂ ಒಗಟಾಗಿ
ಮೆರೆಯ ಬೇಕೆಂಬುದೇ ನನ್ನ ಬಯಕೆ.
ಸ್ವರ್ಗದಲಿ ಸಕಲರಿಗೆ ಧನಕನಕ ಸೌಭಾಗ್ಯ
ನಿತ್ಯವೂ ಕೂತಲ್ಲಿ ದೊರೆಯುವಾಗ
ಯಾವುದನ್ನೂ ಯಾರು ಕೊಳ್ಳಬೇಕಾಗಿಲ್ಲ
ಜಾಹೀರಾತಿಗೆ ಅಲ್ಲಿ ಉಂಟೆ ಜಾಗ ?
ಪತ್ರಿಕೆಯ ಜಾಹೀರಾತಿಗೆ ಸ್ಥಾನವಿಲ್ಲದಿರೆ

ಪುಟ ತುಂಬ ಇರಲೆ ಬೇಕಾಯ್ತು ಸುದ್ದಿ
ಸುದ್ದಿಯೇ ಹೆಚ್ಚಾಗಿ ನಿದ್ದೆ ಕೆಟ್ಟರೆ ಹೇಗೆ
ಸಾಬೀತು ಉಳಿಯುವುದೇ ತಲೆಯ ಶುದ್ಧಿ ?
ಸುರರ ಪತ್ರಿಕೆ ಹೊರಡುವುದು ಯಾವ ಊರಿಂದ ?
ಹುಬ್ಬಳ್ಳಿಗೂ ದೊಡ್ಡದೇನು ನಗರ ?
ಪತ್ರಿಕಾ ವ್ಯವಸಾಯದಂಥ ಘನತರ ಕಾರ್ಯ
ಪಟ್ಟಣದ ಬೀದಿಯಲಿ ಬಹಳ ಹಗುರ.

೭

ಸ್ವರ್ಗಲೋಕದ ದೊಡ್ಡ ನಗರಗಳ ಗತಿಯೇನು ?
ಅಲ್ಲಿಯೂ ಉಂಟೇನು ಹೊಲಸು ವಸ್ತಿ ?
ಮೂರು ಮೊಳ ಖೋಲಿಯಲಿ ಆರು ಸಂಸಾರಗಳು
ಹೋರಾಡಬೇಕೇನು ಹಿಡಿದು ಕುಸ್ತಿ ?
ದೇವಲೋಕದ ದೊಡ್ಡ ನಗರಗಳ ಜನಸಂಖ್ಯೆ
ವಿಪರೀತ ಬೆಳೆದು ಬಹುತೇಕ ಜನರು
ಮನೆಗಳಿಲ್ಲದೆ ಪಾಪ ಬೀದಿಯಲಿ ಮಲಗುವರೆ ?
ಆದರೂ ಸುಮ್ಮನಿಹರೇನು ಸುರರು ?
ಸ್ವರ್ಗದಲಿ ಹೀಗಾಗುವುದು ಸಾಧ್ಯವಿಲ್ಲೆಂದು
ಹೃದಯದೊಳು ನುಡಿಯುತಿದೆ ಆತ್ಮಪಕ್ಷಿ
ಆದರೂ ಒಮ್ಮೊಮ್ಮೆ ಒಂದಿಷ್ಟು ಸಂದೇಹ !
ಸುಳ್ಳು ಹೇಳುವುದೇಕೆ ? ನಿನ್ನ ಸಾಕ್ಷಿ.
ಅಮರ ಲೋಕದ ಶಹರುಗಳಿಗೆ ಲಭಿಸಿರಬಹುದೆ
ಮಾನಸ ಸರೋವರದ ವಿಪುಲ ನೀರು ?
ನಮ್ಮ ಪಾಲಿಗೆ ಬರೀ ಗುರುಬಸಪ್ಪನ ಹೊಂಡ
ಬತ್ತಿದರೆ ನರಳುವುದು ಇಡಿಯ ಊರು
ದೇವಲೋಕದ ನಗರದೊಳಗೆ ನೀರಿನ ಕೊರತೆ
ಸ್ವಲ್ಪವೂ ಇರಲಾರದೆಂದು ನಂಬಿ
ಸ್ವರ್ಗವನ್ನೇರಲಿಕೆ 'ಕ್ಯೂ' ಹಿಡಿದು ನಿಂತಿಹರು
ಧಾರವಾಡದ ಸಾವಿರಾರು ಮಂದಿ.
ಇವರು ಸ್ವರ್ಗವನೇರಿದರೆ ನಮಗೆ ಅನುಕೂಲ

ಅಷ್ಟು ಮಟ್ಟಿಗೆ ಇಲ್ಲಿ ಕೊರತೆ ಕಡಮೆ
ನಿಜವಾಗಿಯೂ, ಗೆಳೆಯ, ಪ್ರತಿಯೊಂದು ಬಾಬಿನಲಿ
ಸುತ್ತ್ಯವಾಗಿಯೂ, ಸ್ವರ್ಗದವರ ಮಹಿಮೆ.
ಕಿರಿ ಪ್ರಾಯದಲ್ಲಿಯೇ ಭೂಲೋಕವನು ತ್ಯಜಿಸಿ
ಸ್ವರ್ಗವೇರಿದೆ ನೀನು ! ಪೂರ್ವಪುಣ್ಯ
ನಿನ್ನ ಮೇಲ್ಪಂಕ್ತಿಯನು ಅನುಸರಿಸಬೇಕೆಂದು
ಹೇಳುತಿದ್ದಾನಿಲ್ಲಿ ಸುಬ್ರಮಣ್ಯ.

೮

ದೇವಲೋಕದ ರಸ್ತೆಗಳ ಪರಿಸ್ಥಿತಿ ಹೇಗೆ ?
ಸ್ಫಟಿಕಗನ್ನಡಿಯೇ ಅದು ಮುಖ ನೋಡಲಿಕ್ಕೆ ?
ರಾಜಮಾರ್ಗದ ಎರಡು ಮಗ್ಗಲಿನ ವೃಕ್ಷಗಳ
ಪ್ರತಿಬಿಂಬವನು ನೋಡಬಹುದೆ ಚಿಕ್ಕೆ ?
ಮಳೆಗಾಲದಲಿ ಕೆಸರು, ಚಳಿಗಾಲದಲ್ಲಿ ಧೂಳು
ಯಾವಾಗಲೂ ಮಧ್ಯದೊಳಗೆ ಹೊಂಡ
ಬಿದ್ದಿರುವ ರಸ್ತೆಗಳ ಸ್ವರ್ಗದಲಿ ರಚಿಸಿದರೆ
ವಿಶ್ವಕರ್ಮನು ತೆತ್ತ ಬೇಕೆ ದಂಡ ?
ಸ್ವರ್ಗದಲಿ ಸಾರಿಗೆಯ ಸೌಕರ್ಯ ಯಾವ ಪರಿ ?
ಬರಿ 'ಗುಡ್ಸು' ತುಂಬಲಿಕೆ ಉಂಟೆ ರೈಲು ?
ಯಾವಾಗಲೂ ಸುರರು ಪುಷ್ಪಕ ವಿಮಾನದಲಿ
ಸಂಚಾರ ಗೈಯುವರೆ ಕೋಟಿ ಮೈಲು ?
ದೇವಲೋಕದ ನಭೋಮಂಡಳದ ಮಾರ್ಗದಲಿ
ಪುಷ್ಪಕ ವಿಮಾನಗಳು ಹಾರುವಾಗ,
ಹೂವುಗಳ ಪರಿಮಳವ ಸರಿಯಾಗಿ ಮೂಸಲಿಕೆ
ಮೇಲೆ ಮಾಡುವರೇನು ಜನರು ಮೂಗ ?
ಕೆಟ್ಟ ವಾಸನೆ ಬರುವ ಪೆಟ್ರೋಲು ಹಾಕಿದರೆ
ಪುಷ್ಪಕ ವಿಮಾನಕ್ಕೆ ದೊಡ್ಡ ಕುಂದು
ಸೀಮೆಎಣ್ಣೆಯ ಬದಲು ಶಶಿಯ ಬೆಣ್ಣೆಯ ಹಿಂಡಿ
ಹೂ ವಿಮಾನಕೆ ಹಾಕುವರೆ ತಂದು ?
ಸ್ವರ್ಗಲೋಕದ ರೈಲುಗಾಡಿ ಕಂಬಿಗಳಿರದೆ

ಓಡುತಿರಬೇಕೆಂದು ನನ್ನ ಎಣಿಕೆ
ವಿಜ್ಞಾನ ಸಾಧಿಸಿದ ಪ್ರಗತಿಯನು ನೋಡಿದರೆ
ಇದು ಸಾಧ್ಯವಿದೆ ಎಂದು ನನ್ನ ಗ್ರಹಿಕೆ
ತಪ್ಪಿದರೆ ಹೇಳಯ್ಯ, ನನ್ನ ಅನುಭವ ಕಡಿಮೆ
ಭೂಮಿಗೇ ಅಂಟಿಕೊಂಡಿದ್ದ ನಾನು
ಅಂತರಿಕ್ಷದ ಮತ್ತು ಅಮರ ಲೋಕದ ಬಗ್ಗೆ
ಮಾತಾಡುವುದು ತಪ್ಪು ಎಂಬೆ ಏನು ?

೬

ನಾವೆಲ್ಲರೂ, ಗೆಳೆಯ, ಸೌಖ್ಯವಾಗಿದ್ದೇವೆ
ಸುರಳೀತ ಸಾಗಿಹುದು ನಮ್ಮ ತೇರು
ಪಂಚವಾರ್ಷಿಕ ಯೋಜನೆಯ ಪರ್ವಕಾಲವಿದು
ಮುಗಿಲಿಗೇರಿದೆ ನಮ್ಮ ನೆಲದ ನೀರು
ಭಾರತೀಯರು ನಾವು ಕ್ಷೇಮವಾಗಿದ್ದೇವೆ
ಇದಕೆ ಕಾರಣ ನಮ್ಮ ಜನರ ಶಕ್ತಿ
ಕಷ್ಟಗಳು ಬಂದರೂ ಸಹಿಸಬೇಕೆನ್ನುವರು
ಮಂತ್ರಿಗಳ ಮೇಲೆ ಸಂಪೂರ್ಣ ಭಕ್ತಿ
ಪಂಚವಾರ್ಷಿಕದಲ್ಲಿ ಬೆಲೆಗಳೆಲ್ಲಾ ಏರಿ
ಅರೆ ಹೊಟ್ಟೆ ತಿಂದರೂ ಇಲ್ಲ ದುಃಖ.
ಪ್ರತಿಯೊಬ್ಬ ನಾಗರಿಕ ತ್ಯಾಗ ಮಾಡಿದ ಹೊರತು
ಸುಖವಿಲ್ಲವೆನ್ನುವಳು ಇಂದಿರಕ್ಕ.
ನಮ್ಮ ಪ್ರಗತಿಯ ವೇಗ ಅಪ್ರತಿಮವಾದದ್ದು.
ಸ್ವರ್ಗದಲ್ಲೂ ಕಾಣಸಿಗದು, ಗೆಳೆಯಾ,
ಪ್ರತಿಯೊಂದು ಯೋಜನೆಗೆ ತರತರದ ಬಣ್ಣಗಳು
ಎಷ್ಟು ಬಣ್ಣಿಸಿದರೂ ನಿನಗೆ ತಿಳಿಯಾ.
ಪ್ರತಿಯೊಂದು ಕ್ಷೇತ್ರದಲ್ಲಿ ಭರತ ಖಂಡದ ಪ್ರಗತಿ
ಅಪ್ರತಿಮವೆಂದು ಹೇಳುವರು ಇವರು
ಹೀಗಾಗಲಿಕೆ ನಿಜವಾದ ಕಾರಣ ಗೊತ್ತೆ ?
ನಮ್ಮ ಸರಕಾರ ತೋರಿಸುವ ಜೋರು
ಅಮರಲೋಕದ ಜೊತೆಗೆ ಭರತ ಖಂಡವ ತೂಗಿ

ನೋಡಲಿಕೆ ಇದು ಚಿನ್ನದಂಥ ಸಂಧಿ
ಈ ಕೆಲಸ ನಾನೆ ಕೈ ಕೊಳ್ಳ ಬೇಕೆಂದಿಹೆನು
ಇದಕೆ ಒಪ್ಪುವರೇನು ಸುರರ ಮಂದಿ ?
ದೇವಲೋಕದ ಪಂಚವಾರ್ಷಿಕದ ಕರಡನ್ನು
ಇದಕಾಗಿ ಆದಷ್ಟು ಬೇಗ ಕಳಿಸು.
ರಾಷ್ಟ್ರೀಯ ವಿಸ್ತರಣೆ ಮುಂತಾದ ಯೋಜನೆಯ
ಪೂರ್ಣ ತಪಶೀಲುಗಳನ್ನೆಲ್ಲ ತಿಳಿಸು.
ಸುರರ ಯೋಜನೆಯೊಳಗೆ ಹಲವಾರು ದೋಷಗಳು
ಇದ್ದರೂ ಇರಬಹುದು, ಯಾರು ಬಲ್ಲ !
ನೀನಿಷ್ಟು ಟೀಕೆ ಟಿಪ್ಪಣೆ ಮಾಡಿ ಕಳಿಸಿದರೆ
ನನ್ನ ಮಿದುಳಿಗೆ ದೊರೆಯಬಹುದು ಬೆಲ್ಲ,
ದೇವ ಲೋಕದ ದೊಡ್ಡ ಕಾಮಗಾರಿಗಳನ್ನು
ಪ್ರತ್ಯಕ್ಷ ನೋಡಲಿಕೆ ಬರಲೆ, ಹೇಳು ?
ಸ್ವರ್ಗವನ್ನೇರಲಿಕೆ ಸಿಗಬಹುದೆ ಪಾಸ್‌ಪೋರ್ಟು ?
ಸಿಗದೆ ಹೋದರೆ ನನ್ನ ಕೆಲಸ ಹಾಳು.

೧೦

ದೇವಲೋಕದ ರಾಜಕೀಯ ವಾತಾವರಣ
ಯಾವ ರೀತಿಯದೆಂದು ಒಂದು ಲೇಖ
ನೀ ಬರೆದು ಕಳಿಸಿದರೆ ಉಪಕಾರವಾದೀತು
ಆಸ್ತೆಯಲಿ ಓದುವುದು ನಮ್ಮ ಲೋಕ.
ನಮ್ಮ ಮಟ್ಟಿಗೆ ಇಲ್ಲಿ ಶುಭ್ರ ಭ್ರಷ್ಟಾಚಾರ
ರಾಜಕಾರಣಿಗಳಿಗೆ ಚೈನಿ ಶೋಕು
ಈ ರೀತಿ ನಡೆಯುತಿದೆ ನಮ್ಮ ಪ್ರಗತಿಯ ಗಾಡಿ !
ಜೋರಾಗಿ ಓಡುತಿದೆ, ಇಲ್ಲ ಬ್ರೇಕು.
ಅಲ್ಲಿಯೂ ಉಂಟೇನು ಪಾರ್ಲಿಮೆಂಟಿನ ರಗಳೆ
ಐದು ವರುಷಕ್ಕೊಮ್ಮೆ ಕೊಡುವ ಓಟು ?
ಹುರಿಯಾಳುಗಳು ಬಂದು ಬಡ ಜನರ ಹಿತಕಾಗಿ
ಇಟ್ಟು ಹೋಗುವರೇನು ಕೈಲಿ ನೋಟು ?
ಮಂತ್ರಿಮಂಡಳದಲ್ಲಿ ಯಾರುಂಟು ಸದ್ಯಕ್ಕೆ ?

ಬ್ರಹ್ಮ ಹರಿ ಹರರಲ್ಲಿ ಇದೆಯೆ ವ್ಯಾಜ್ಯ ?
ಗುಂಪುಗಾರಿಕೆಯಿಂದ ಆಡಳಿತ ಹದಗೆಟ್ಟು
ಗೋಳಾಡುತಿಹುದೇನು ಸುರರ ರಾಜ್ಯ ?
ಸ್ವರ್ಗದಲ್ಲೂ ಜಗಳ ತಂಟೆ ತಿಕ್ಕಾಟಗಳು
ತೀವ್ರವಾಗಿವೆ ಎಂಬ ದಟ್ಟ ಸುದ್ದಿ
ಸ್ವರ್ಗವೂ ಈ ರೀತಿ ಕೆಟ್ಟು ಹೋದರೆ ಹೇಗೆ ?
ಪಾತಾಳಕಿಳಿಯುವುದೆ ನಮ್ಮ ಬುದ್ಧಿ ?
ಇಂಥ ಸುದ್ದಿಗಳಲ್ಲಿ ಹುರುಳಿಲ್ಲದಿರಬಹುದು
ಆದರೂ ನಾ ನಿನಗೆ ತಿಳಿಸಬೇಕು
ನಿಜವಾದ ಸ್ಥಿತಿಯ ಕಲ್ಪನೆ ಪೂರ್ಣ ಬರುವಂತೆ
ಕೂಡಲೇ ನನಗೊಂದು ಪತ್ರ ಹಾಕು.

೧೧

ಶುಷ್ಕವೆನಿಸಿದ ವಿಷಯಗಳೆನೆತ್ತಿ ಇದುವರೆಗೆ
ಈ ಪತ್ರ ಬರೆದದ್ದು ನನ್ನ ತಪ್ಪು
ಓ ಗೆಳೆಯ, ಕೊನೆಗೊಂದು ವಿಷಯ ಉಳಿದಿಹುದು
ಈ ವಿಷಯದಲಿ ನಿನಗೆ ಆಸ್ತೆ ಹೆಚ್ಚು
ದೇವಲೋಕದ ಜನರ ಪಾನೀಯ ಯಾವ ಬಗೆ ?
ಸೋಮರಸದಿಂದ ಏರುವುದೆ ಅಮಲು ?
ಕೊಂಚ ಕುಡಿದರು ಕೂಡ ಮುಂದ ಥಕಥೈ ಎಂದು
ಚಪ್ಪಾಳೆ ತಟ್ಟಿ ಕುಣಿಯುವುದೆ ನವಿಲು ?
ಸೋಮ ಪಾನದ ಹೊರತು ಉಳಿದ ಪಾನಗಳುಂಟೆ ?
ಇಂದ್ರದೇವನಿಗಾಗಿ ಇದೆಯೆ ಬೇರೆ ?
ರಂಭೆಯೂ ಕುಡಿಯುವಳೆ ? ಕುಡಿದಾಗ ಮತ್ತಷ್ಟು
ಕೆಂಪೇರಿ ಮಿರುಗುವುದೆ ಅವಳ ಮೋರೆ ?
ಪರವಾನೆ ಉಂಟೇನು ದೇವಲೋಕದ ಒಳಗೆ
ಗ್ಲಾಸು ಬಾಟ್ಲಿಗಳನ್ನೆ ಒಯ್ಯಲಿಕ್ಕೆ ?
ಎಲೆಯ ದೊನ್ನೆಗಳನ್ನೆ ಉಪಯೋಗಿಸುವರೇನು ?
ಏನಾದರೇನಂತೆ ಕುಡಿಯಲಿಕ್ಕೆ ?
ದೇವ ಪಾನದ ಜೊತೆಗೆ ನೆಲಗಡ್ಲೆ ನಡೆಯುವುದೆ ?

ನಮ್ಮಂಥ ಮಾನವರ ಮಾತು ಬೇರೆ
ನಿಜವಾಗಿಯೂ ಹೇಳು, ಕೊರಳಾಣೆ, ಓ ಗೆಳೆಯ,
ನೀ ಕುಡಿಯುವುದು ದಿನಕೆ ಎಷ್ಟು ಸಾರೆ ?
ಇದನೆಲ್ಲ ಬರಿಯಲಿಕೆ ಸಂಕೋಚ ಪಡಬೇಡ,
ಯಾರಿಗೂ ಕಾಣಿಸೆನು ನಿನ್ನ ಪತ್ರ
ಮೇಲಾಗಿ ಸಂಪೂರ್ಣ ದಕ್ಷತೆಯ ವಹಿಸುವೆನು
ಕೆಡದಂತೆ ನಿನ್ನ ಪೂರ್ವಜರ ಗೋತ್ರ.
ಸದ್ಯಕ್ಕೆ ನನಗಂತು ತಾಳಲಾರದ ವಿರಸ
ಕುಡಿಯಲಿಕೆ ಗುಟುಕು ಸಹ ಸಿಗುವುದಿಲ್ಲ.
ಜೀವನದ ತಾಯ್‌ಬೇರು ಒಣಗಿ ಬೆಂಡಾಗಿಹುದು.
ಮುಖ ಮುದ್ರೆಯೂ ಈಗ ನಗುವುದಿಲ್ಲ.
ಕುಡಿಯ ಬಾರದು ಎಂಬ ಸರಕಾರಿ ಕಾನೂನು
ನನ್ನಂಥ ಹೆಡ್ಡನಿಗೆ ಮಾತ್ರ ಬಂಧ
ಕಳ್ಳರಿಗೆ ಕಾಕರಿಗೆ ಬೀದಿಗಳ ಪೋಕರಿಗೆ
ಮತ್ತೆ ಪೋಲಿಸರಿಗೆ ಮುಕ್ತ ಛಂದ.
ಈ ಪರಿಸ್ಥಿತಿಯೊಳಗೆ ಭೂಲೋಕವನೆ ಬಿಟ್ಟು
ನೀನಿರುವ ಕಡೆಗೆ ಬರಲೇನು ಹೇಳು ?
ನೀನು ಕರೆದಾಕ್ಷಣಕೆ ಹಾಜರಾಗುವೆ, ಗೆಳೆಯ;
ಸಾಕಾಯಿತಯ್ಯ ಬೇಸರದ ಬಾಳು.
ಈ ಪತ್ರ ಬಹಳ ಉದ್ದಾಯ್ತೀಗ ಗೆಳೆಯಾ
ಇನ್ನು ಮುಗಿಸುತ್ತೇನೆ : ಕ್ಷೇಮವಿರಲಿ,
ಆದಷ್ಟು ಬೇಗನೆ ಎಲ್ಲ ವಿವರವ ತಿಳಿಸಿ
ನಿನ್ನಿಂದ ಕೂಡಲೇ ಪತ್ರ ಬರಲಿ.

❖❖

ಮಾರ್ಚ್ ೧೯೬೨

೪

ಮಕ್ಕಳ ಪದ್ಯ

೧೯೭೬

(ಈ ಭಾಗದಲ್ಲಿ ೧೯೫೧ರಲ್ಲಿ ಪ್ರಕಟವಾದ “ಮಕ್ಕಳ ಗೀತಗಳು” ಹಾಗೂ ೧೯೫೬ರಲ್ಲಿ ಪ್ರಕಟವಾದ “ಮಕ್ಕಳ ಪದ್ಯಗಳು” ಸಂಕಲನದ ಕವಿತೆಗಳು ಸೇರಿವೆ)

ಪ್ರಸ್ತಾವನೆ

ಕೆಲವು ವರುಷಗಳ ಹಿಂದೆ ಪ್ರಕಟವಾದ "ಮಕ್ಕಳ ಗೀತಗಳು" ಮತ್ತು "ಮಕ್ಕಳ ಪದ್ಯಗಳು" ಇವೆರಡು ಸಂಕಲನಗಳಿಂದ ಆರಿಸಿ ಈ ಸಂಕಲನವನ್ನು ತಯಾರಿಸಿದೆ. "ಮಕ್ಕಳ ಗೀತಗಳು" ಪ್ರಕಟವಾದಾಗ ಹಿಂದಿನ ಮುಂಬಯಿ ಸರಕಾರದಿಂದ ಅದಕ್ಕೆ ಬಹುಮಾನ ದೊರಕಿತ್ತು. "ಮಕ್ಕಳ ಗೀತಗಳು" ೧೯೫೧ರಲ್ಲಿ ಪ್ರಕಟವಾಗಿತ್ತು. ಅದರ ಎರಡನೆಯ ಆವೃತ್ತಿಯು ೫೬ರಲ್ಲಿ ಬೆಳಕಿಗೆ ಬಂತು. ಆಮೇಲೆ "ಮಕ್ಕಳ ಪದ್ಯಗಳು" ೧೯೫೬ರಲ್ಲಿ ಪ್ರಕಟವಾಯಿತು. ಇವರೆಡೂ ಸಂಕಲನಗಳ ಪ್ರತಿಗಳು ಖರ್ಚಾಗಿ ಅನೇಕ ವರ್ಷಗಳಾದವು.

ಈಗ ಈ ಸಂಯುಕ್ತ ಸಂಕಲನವನ್ನು ಪ್ರಕಟಿಸಲಾಗಿದೆ. ಹೊಸದಾಗಿ ಬರೆದ "ಕುಮಟೆಯ ತೇರು", "ಬೆಕ್ಕಿನ ಆರೈಕೆ" ಮತ್ತು "ಬೆಕ್ಕಿನ ಉತ್ತರ" ಎಂಬ ಮೂರು ಪದ್ಯಗಳನ್ನು ಈ ಸಂಕಲನದಲ್ಲಿ ಸೇರಿಸಲಾಗಿದೆ. ಈ ಸಂಕಲನವನ್ನು ಪ್ರಕಟಿಸುವ ಕಾರ್ಯದಲ್ಲಿ ಅಂಕೋಲೆಯ ಪೀಪಲ್ಸ ಮಲ್ಟಿಪರ್ಪಜ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಮಹಾದೇವ ನಾಯ್ಕ ಇವರು ನೆರವಾಗಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಶಿರಸಿಯ ಸಹಕಾರಿ ಮುದ್ರಣಾಲಯದ ವ್ಯವಸ್ಥಾಪಕ ವರ್ಗದವರಿಗೂ ವಂದನೆಗಳು.

ಅಂಕೋಲೆ, (ಉ.ಕನ್ನಡ)

ತಾ॥ ೨೬-೧-೧೯೭೬ ದಿನಕರ ದೇಸಾಯಿ

ಬೆಕ್ಕೇ ಬೆಕ್ಕೇ

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ,
ಎಲ್ಲಿಗೆ ಹೋಗಿದ್ದೆ ?
ಕರೆದರು ಇಲ್ಲಾ, ಹಾಲೂ ಬೆಲ್ಲಾ
ಕಾಯಿಸಿ ಇಟ್ಟಿದ್ದೆ.

ಕೇಳೋ ಕಳ್ಳಾ, ಮುದ್ದಿನ ಮಳ್ಳಾ,
ಮೈಸೂರರಮನೆಗೆ;
ರಾಜನ ಸಂಗಡ ರಾಣಿಯು ಇದ್ದಳು
ಅಂತಃಪುರದೊಳಗೆ

ಬೆಕ್ಕೇ ಬೆಕ್ಕೇ, ಬೇಗನೆ ಹೇಳೇ,
ನೋಡಿದ ಆನಂದ
ರಾಣಿಯ ಮಂಚದ ಕೆಳಗೇ ಕಂಡೆನು
ಚಿಲಿಪಿಲಿ ಇಲಿಯೊಂದ

❖❖

ಕುಮಟೆಯ ತೇರು

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ,
ನಾವಿಬ್ಬರು ಕೂಡಿ
ಕುಮಟೆಯ ತೇರಿಗೆ ಹೋಗಿ ಬರೋಣವೆ ?
ಗುಮಟೆಯ ಪದ ಹಾಡಿ.

ಬೆಕ್ಕೇ ಬೆಕ್ಕೇ, ನಿನಗೂ ತೊಡಿಸುವೆ
ಠೀವಿಯ ಸಿಂಗಾರ,
ಮೈಯಿಗೆ ಕೋಟೂ, ಕಾಲಿಗೆ ಬೂಟೂ;
ಕಿವಿಯಲಿ ಬಂಗಾರ

ತೇರಿನ ಜಾತ್ರೆಗೆ ನಾನಾ ಮೋಜಿನ
ಆಟದ ಸಾಮಾನು
ಟುರು ಟುರು ಮೋಟರು, ಭುಸು ಭುಸು ರೈಲು
ಹೆಲ್ಲೋ ಟೆಲಿಫೋನು

ಬೆಕ್ಕೇ ಬೆಕ್ಕೇ, ಮುದ್ದಿನ ಸೊಕ್ಕೇ
ನಾವಿಬ್ಬರು ಕೂಡಿ
ಕುಮಟೆಯ ತೇರಿಗೆ ಹೋಗಿ ಬರೋಣವೇ ?
ಗಮಟೆಯ ಪದ ಹಾಡಿ

ಕೇಳೋ ಕಳ್ಳಾ, ಮುದ್ದಿನ ಮಳ್ಳಾ
ನೀ ತೇರಿಗೆ ಹೋಗು.
ಮೈಯಿಗೆ ಕೋಟೇ ? ಕಾಲಿಗೆ ಬೂಟೇ ?
ನನಗೇತಕೆ ಸೋಗು ?

❖❖

ಬೆಕ್ಕಿನ ಆರೈಕೆ

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ,
ಜಳಕವ ಮಾಡುವೆಯಾ ?
ಬೇಗನೆ ಮಿಂದು ತಿಂಡಿಯ ತಿಂದು
ಜತೆಯೊಳಗಾಡುವೆಯಾ ?

ಮೀಯುವ ನೀರದು ತಣ್ಣೀರಾದರೆ
ಚಳಿಯಲಿ ಸಾಯುವೆನು
ಹಂಡೆಯ ನೀರದು ಬಿಸಿಬಿಸಿಯಾದರೆ
ಸೆಕೆಯಲಿ ಬೇಯುವೆನು.

ಯಾವಾಗಲು ಮೈ ನೆಕ್ಕುವ ಬೆಕ್ಕಿಗೆ
ಜಳಕದ ಮಾತೇಕೆ ?
ತಪ್ಪದೆ ಹಾಲೂ ಮೀನೂ ಕೊಟ್ಟರೆ
ಉತ್ತಮ ಆರೈಕೆ.

❖❖

ಬೆಕ್ಕಿನ ಉತ್ತರ

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ,
ನೀನೇ ಸೊಗಸಮ್ಮ
ಗಾಜಿನ ಗೋಲಿಯನೆರಡೂ ಕಣ್ಣಲಿ
ನಾಟಿಸಿದನೆ ಬೊಮ್ಮ ?

ಗಲ್ಲದ ಮೇಲಿನ ಮೀಸೆಗಳೆಂಟೂ
ಸೊಕ್ಕಿನ ಬಡಿವಾರ.
ಮೀಸೆಯ ಬೋಳಿಸಿಕೊಂಡರೆ ಕೆಡುವುದೆ ?
ಬೆಕ್ಕಿನ ಸಿಂಗಾರ.

ಕೇಳೋ ಕಳ್ಳಾ, ಮುದ್ದಿನ ಮಳ್ಳಾ,
ಮೀಸೆಗಳಿರಬೇಕು
ಮೀಸೆಯ ನೋಡಿದ ಕೂಡಲೆ ಮೂಷಕ
ಗಾಬರಿಗೊಳಬೇಕು.

❖❖

ಬೆಕ್ಕು

ಗುರು ಗುರು ಎಂದು
ನೆಗೆಯುತ ಬಂದು
ಇಲಿಯನು ಕೊಂದು ಮೆಂವ್ ಮೆಂವ್
ಹೆದರಿದ ಕಪ್ಪೆಯು ಡ್ರೊಂಯ್ ಡ್ರೊಂಯ್.

ಜಿರಲೆಯ ನೋಡಿ
ಗಕ್ಕನೆ ಓಡಿ
ಹಿಡಿಯಿತು ಖೋಡಿ; ಗುರ್ ಗುರ್;
ತಿಂದೇ ಬಿಟ್ಟಿತು, ಕುರ್ ಕುರ್.

ಅಟ್ಟಕೆ ಹಾರಿ
ತಟ್ಟನೆ ಜಾರಿ
ಹಿಟ್ಟನು ಬೀರಲು ಹೋ ಹೋ;
ಅಜ್ಜಿಯು ಬೈದಳು 'ಥೋ ಥೋ'

ಹಗಲು ರಾತ್ರಿ.
ಹಾಲಿನ ಪಾತ್ರಿ.
ಸುತ್ತಲು ತಿರುಗುವುದೇಕ್ಕೈ ?
ಇನ್ನು ಪ್ರದಕ್ಷಿಣೆ ಸಾಕ್ಕೈ.

ಪಿತರ ತಲಬು ?
ಮೀನಿನ ಎಲಬು ?
ಅದನೇ ನೆಕ್ಕುವೆ ! ಛೀ ಛೀ;
ನಿನಗದು ಬಹಳೇ ಸೀ ಸೀ

ಚಕ್ಕುಲಿ ಲಾಡು
ಬೇಕೋ ನೋಡು ?
ನಾಲಿಗೆ ಕೇಡು, ಹಾಳ್ ಹಾಳ್,
ಕೊಡುವೆನು ನಿಲ್ಲೋ, ತಾಳ್ ತಾಳ್

ಈ ಬಿಳಿ ಗಂಡಾ
ಬಹಳೇ ಪುಂಡಾ
ಮರಿಗಳ ತಾಂಡಾ, ಮೆಂವ್ ಮೆಂವ್;
ಹೆದರಿದ ಕಪ್ಪೆಯು ಡ್ರೊಂಯ್ ಡ್ರೊಂಯ್.

❖❖

ಪುನರಾಗಮನ

ಬೆಕ್ಕೇ, ಬೆಕ್ಕೇ, ಮುದ್ದಿನ ಸೊಕ್ಕೇ
ಹಿಂದಿರುಗಿದೆ ಏನೆ ?
ನಿನ್ನನು ಕಂಡರೆ ಅಜ್ಜಿಗೆ ಪುನಃ
ಬರುವುದು ತಲೆಬೇನೆ.

'ಹಾಳು ಉಪದ್ರವ ಹೋಗಲಿ' ಎಂದು
ಕೊತ್ತಲದಲಿ ತುಂಬಿ
ಬೆಟ್ಟದ ಬುಡದಲಿ ನಿನ್ನನು ಬಿಟ್ಟರು
ಕಟ್ಟಡವಿಯ ನಂಬಿ !

ತಪ್ಪದೇ ನೀ ಹಿಂದಿರುಗಿದ ಗುಟ್ಟನು
ತಿಳಿಸುವೆಯಾ, ಜಾಣೆ ?
ದೇವನೆ ದಾರಿಯ ತೋರಿಸಿ ಕೊಟ್ಟನೆ ?
ಹೇಳೇ, ನನ್ನಾಣೆ !

ಅಜ್ಜಿಯ ಕಾಟವ ತಪ್ಪಿಸಿಕೊಳ್ಳಲು
ನಾವಿಬ್ಬರು ಸೇರಿ
ಅಕ್ಕನ ಊರಿಗೆ ಹೋಗಿಬಿಡೋಣವೆ
ಸದ್ದಿಲ್ಲದೆ ಜಾರಿ ?

❖❖

ತಾಯಿಯ ಉತ್ತರ

ಮಕ್ಕಳಿಗೆಲ್ಲಾ ಸಿಕ್ಕುವುದೇನೇ
ಆಕಾಶದ ಚಿಕ್ಕಿ ?
ಹೌದೋ ಕಂದಾ,
ಹೂ ಮಕರಂದಾ,
ನೀನಾದರೆ ಹಕ್ಕಿ.

ಮಕ್ಕಳಿಗೆಲ್ಲಾ
ಸಿಕ್ಕುವುದೇನೇ
ಜರತಾರಿಯ ಬಟ್ಟೆ ?
ಹೌದೋ ಕಂದಾ,
ಹೂ ಮಕರಂದಾ,
ನೀನಾದರೆ ಚಿಟ್ಟೆ.

ಮಕ್ಕಳಿಗೆಲ್ಲಾ ಸಿಕ್ಕುವುದೇನೇ
ಬೆಟ್ಟದ ನಾರಿಂಗ ?
ಹೌದೋ ಕಂದಾ,
ಹೂ ಮಕರಂದಾ
ನೀನಾದರೆ ಮಂಗ.

❖❖

ಅಕ್ಕನ ಬಂಡಿ

ನಮ್ಮ ಅಕ್ಕ ಪುಟ್ಟ ಬಂಡಿ
ಕಟ್ಟಿಕೊಂಡಳು;
ಆರಬೈಲು ಘಟ್ಟ ಹತ್ತ
ಬೇಕು ಅಂದಳು.

ಸೊಕ್ಕು ಬಂದ ಪುಂಡ ಬೆಕ್ಕು
ನೊಗವ ಹಿಡಿಯಿತು;
ಕುನ್ನಿಮರಿಯು ಓಡಿ ಬಂದು
ಡೋಲು ಬಡಿಯಿತು.

ಮಂಗವೊಂದು ಮುಂದೆ ಕೂತು
ಬಂಡಿ ನಡಿಸಿತು;
ಹೇಂಟೆಯೊಂದು ಹಾರಿ ಬಂದು
ಹಾದಿ ಗುಡಿಸಿತು;

ನಮ್ಮ ಅಕ್ಕ ನಕ್ಕು ನಕ್ಕು
ಬಾಯಿ ಕಿಸಿದಳು;
ಜತೆಯೊಳಿದ್ದ ಪುಟ್ಟ ತಂಗಿ
ತುಂಬ ಹಸಿದಳು.

ಕೊಡ್ಲಗದ್ದೆ ಹಳ್ಳಿ ಬರಲು
ಮಾಣಿ ಭಟ್ಟನು
ಹಾಲು, ಬೆಲ್ಲ, ಬಾಳೆಹಣ್ಣು
ತಂದು ಕೊಟ್ಟನು.

ಹಾಲು ಕಂಡ ಹಾಳು ಬೆಕ್ಕು
ಮೇಲೆ ಹಾರಿತು;
ಬಂಡಿ ಬದಿಗೆ ಓರೆಯಾಗಿ
ಕೆಳಗೆ ಜಾರಿತು.

ಬದಿಯ ಹಳ್ಳದಲ್ಲಿ ಅಕ್ಕ,
ತಂಗಿ ಇಬ್ಬರೂ
ಬೀಳಲಾಗಿ ದೇವಕನ್ಯೆ
ಯಂತೆ ಆದರು.

ಇಂದ್ರ ಬಂದು ಎತ್ತಿಕೊಂಡು
ನಭಕೆ ನೆಗೆದನು;
ಮಾಣಿ ಭಟ್ಟ ಬೆಪ್ಪನಾಗಿ
ಕವಳ ಜಗಿದನು.

❖❖

ಅಂಕೆಗಳು

ಒಂದೂ ಎರಡು
ಆಕಳು ಬರಡು

ಮೂರೂ ನಾಕೂ
ಮಜ್ಜಿಗೆ ಬೇಕು.

ಐದೂ ಆರೂ
ಹಾಲಿನ ಕೀರು.

ಏಳೂ ಎಂಟೂ
ಮೊಸರಿನ ಅಂಟು !

ಬರಿ ಒಂಭತ್ತು
ಸವಿ ಸವಿ ಮುತ್ತು

ಕೊನೆಯಲಿ ಹತ್ತು
ಬಾಯಿಗೆ ತುತ್ತು.

❖❖

ಚೆನ್ನಿ ಮತ್ತು ಕುನ್ನಿ

ಮುದ್ದಿನ ಚೆನ್ನಿ,
ಹುದ್ದರಿ ಕುನ್ನಿ,
ಒಬ್ಬರಿಗೊಬ್ಬರು ಅನ್ನಿ.

ಚೆನ್ನಿಗೆ ಜೇನು
ಕುನ್ನಿಗೆ ಮೀನು,
ಮಂಗನ ಬಾಯಲಿ ಹೇನು.

ಚೆನ್ನಿಗೆ ಉಂಡಿ
ಕುನ್ನಿಗೆ ತಿಂಡಿ.
ಆಟಕೆ ಬಣ್ಣದ ಬಂಡಿ

ಇಬ್ಬರ ಆಟ
ಮುದ್ದಿನ ಮಾಟ;
ದೇವರು ನೋಡುವ ನೋಟ.

ಚೆನ್ನಿಗೆ ಕುನ್ನಿ
ಕುನ್ನಿಗೆ ಚೆನ್ನಿ;
ಒಬ್ಬರಿಗೊಬ್ಬರು ಅನ್ನಿ.

❖❖

ಮಳೆರಾಯ

ಬಾರೋ ಬಾರೋ ಮಳೆರಾಯಾ,
ತಾರೋ ತಾರೋ ಹೊಳೆನೀರಾ,
ಹಕ್ಕಲು ತುಂಬಿತು ನೀರಿಂದ,
ಒಕ್ಕಲ ಮಕ್ಕಳಿಗಾನಂದ.

ಗುಡುಗುಡು ಗುಡುಗುಡು ಗುಡುಗಮ್ಮಾ;
ಹಪ್ಪಳ ತಾರೇ ನಾಗಮ್ಮಾ
ಸಪ್ಪಳ ಮಾಡದೆ ತಿನ್ನೋಣ
ಮಳೆರಾಯನ ಪದ ಅನ್ನೋಣ

❖❖

ನಗುಮುಖ

ನಗುಮುಖವೆಂದಿಗೂ ಇರಲಣ್ಣಾ
ನೀನೇ ಸುಂದರ ಕಾಮಣ್ಣ;
ಅಳುಬುರುಕಾದರೆ ನನ ತಮ್ಮಾ
ನಿನಗೆಂಬರು ಕಾಡಿನ ಗುಮ್ಮ.

❖❖

ಮಂಗನ ಮದುವೆ

ಬಿಸಿಲಲಿ ಮಳೆಹನಿ, ಮಂಗನ ಲಗ್ನ;
ಮದುವೆಯ ನೋಡಲು ಮಕ್ಕಳು ಮಗ್ನ
ಕಾಮನಬಿಲ್ಲಿನ ಮಂಟಪ ಚೆಂದ
ತಿಪ್ಪಾಭಟ್ಟನು ಕುಣಿಯುತ ಬಂದ;
ಬೆಂಡಿನ ಬಾಸಿಂಗವನೂ ತಂದ;
ಮಂಗನಿಗಾಯಿತು ಪರಮಾನಂದ.

ಕರಿ ಪುಕ್ಕದ ಹೇಂಟೆಯು ಮದವಳತಿ,
ಮಂಗನಿಗಿವಳೇ ಪ್ರೀತಿಯ ಗೆಳತಿ.
ದಿಬ್ಬಣ ಹೊರಡಲು ಕುಣಿಯಲಿಕೆಂದು
ಬೆಟ್ಟದ ನವಿಲುಗಳೆಲ್ಲಾ ಬಂದು,
ಥಕಥೈ ಥಕಥೈ ಕುಣಿದವು ಕುಣಿತ.
ಮಂಗನ ಮನದಲಿ ಮುಂದಿನ ಗಣಿತ.
ಹೊಸ ಸಂಸಾರವ ಹೂಡುವ ಕನಸು.
ಬೇಗನೆ ಅಪ್ಪನು ಆಗುವ ಮನಸು.

ಮಂಗನ ಕೊರಳಲಿ ಹಾಕಲು ಹಾರ,
ಹೇಂಟೆಗೆ ಬಹಳೇ ಹೊಸ ಬಡಿವಾರ !
ಆಯಿತು ಮರ್ಕಟ ಕುಕ್ಕುಟ ಲಗ್ನ
ಯಾವುದು ಎಂಥದು ಇಲ್ಲದೆ ವಿಘ್ನ

ಅರೆ ನಿಮಿಷದೊಳೇ ಗುಡುಗೂ ಸಿಡಿಲೂ !
ಗಾಳಿಗೆ ಹಾರಿತು ತೆಂಗಿನ ಮಡಲು
ಜಡಿಮಳೆ ಸುರಿಯಿತು ಚಪ್ಪರದೊಳಗೆ
ನೀರೇ ನೀರದು ಮಂಟಪದೊಳಗೆ
ಮಂಗನು ಹಾರಿದ ಟೊಂಗೆಯ ತುದಿಗೆ
ಹೇಂಟೆಯು ಹಾರಿತು ಗೂಡಿನ ಒಳಗೆ
ಒಬ್ಬರಿಗೊಬ್ಬರ ದರುಶನವಿಲ್ಲಾ !
ಇಂತಹ ಮದುವೆಯು ಮನುಜಗೆ ಸಲ್ಲಾ.

❖❖

ಕೊಡೆಯಲ್ಲಿ ಸ್ನಾನ

ತಿಪ್ಪಾಭಟ್ಟರ ಚೆಂದ ಕೊಡೆ,
ಸಾವಿರ ತೂತುಗಳೆಲ್ಲ ಕಡೆ !
ಮಳೆನೀರೆಲ್ಲಾ ಒಳಗಡೆಗೆ,
ಭಟ್ಟರು ಮಿಂದರು ಕೊಡೆಯೊಳಗೆ !

❖❖

ಅಡಿಗೆ ಭಟ್ಟ

ಅಡಿಗೆಯ ಭಟ್ಟ
ನಾಲಿಗೆ ಕೆಟ್ಟ;
ಬಡಿಸುವ ಮೊದಲೇ
ಬಾಯೊಳಗಿಟ್ಟ.

ಅಡಿಗೆಯ ಭಟ್ಟ
ಬಹಳೇ ದಿಟ್ಟ;
ಮೆಂವ್ ಮೆಂವ್ ಬೆಕ್ಕಿಗೆ
ಹೆದರಿಸೆ ಬಿಟ್ಟ !

ಅಡಿಗೆಯ ಭಟ್ಟ
ಬೇಯಿಸಿ ಕೊಟ್ಟ;
ಉಪ್ಪನು ಹಾಕಲು
ಮರತೇ ಬಿಟ್ಟ

ಅಡಿಗೆಯ ಭಟ್ಟ
ದೋಸೆಯ ಸುಟ್ಟ;
ತಂಬಿಗೆ ತುಪ್ಪವ
ತೀರಿಸಿ ಬಿಟ್ಟ.

ಅಡಿಗೆಯ ಭಟ್ಟ
ಮಜ್ಜಿಗೆ ಮುಟ್ಟ;
ಅಡಗಿಸಿ ಹಾಲನು
ಕುಡಿದೇ ಬಿಟ್ಟ.

ಅಡಿಗೆಯ ಭಟ್ಟ,
ಜಗದಲಿ ಶ್ರೇಷ್ಠ;
ಭಟ್ಟನ ಬೈದರೆ
ಕೂಳಿಗೆ ಕಷ್ಟ

❖❖

ತಿಪ್ಪಾಭಟ್ಟರ ರುಮಾಲು

ತಿಪ್ಪಾಭಟ್ಟರ ತಲೆಯ ರುಮಾಲು
ಒಗೆಯದೆ ಕಳೆದುವು ವಾರಗಳೇಳು !
ಅಗಸನಿಗಂತೂ ನೆನಪಿಲ್ಲ,
ಮನೆಯೊಳಗಂತೂ ಒಗೆದಿಲ್ಲ.

❖❖

ಇಣಚಿಗೆ

ಈಚೆಗೆ ಇಣಕಿ
ಆಚೆಗೆ ಹಣಕಿ
ಕುಣಿಯುವೆ ನಾಲ್ಕೂ ಕಡೆಯಲ್ಲಿ
ಕೆಳಗೂ ಮೇಲೂ ಬುಡದಲ್ಲಿ.

ಹಣ್ಣನು ಹಿಡಿದು
ಕೊರಕುವೆ ಕಡಿದು;
ತನಿ ತನಿ ರಸವನು ಹೀರುವೆ ನೀ,
ಹೊಸ ಹೊಸ ಫಲಗಳ ಕಂಡರೆ ನೀ.

ಕೈ ಮೈ ಸಣ್ಣ
ಕಂದಿಯ ಬಣ್ಣ
ಮಿದು ಮಿದು ಕೂದಲು ನಿನಗಣ್ಣಾ!
ರೇಶಿಮೆಗಿಂತಲೂ ಚೆಲುವಣ್ಣಾ!

ಬಾಲದ ಗೊಂಡೆ
ರೇಶಿಮೆ–ಉಂಡೆ;
ಎತ್ತಲು ಮೇಲಕೆ ಬಲು ಚೆಂದ,
ಸೊಗಸಿಗು ನಿನಗೂ ಸಂಬಂಧ.

ಮರವನು ಹತ್ತಿ
ಗೊಂಡೆಯನೆತ್ತಿ
ರೆಂಬೆಯ ಸುತ್ತೂ ಸುಳಿದಾಡಿ
ಸೋಜಿಗ ಮಾಡುವೆ ನಲಿದಾಡಿ

ಬಾರೆಲೆ ನೆಲಕೆ
ನಮ್ಮಂಗಳಕೆ
ನಾವಿಬ್ಬರು ಮುದ್ದಾಡುವುದು,
ಹುದ್ದರಿ ಆಟವ ಆಡುವುದು.

❖❖

ಬುದ್ಧಿಯ ಬರಗಾಲ

ತಿಪ್ಪಾಭಟ್ಟರ ತಲೆಬೋಡು
ಕನ್ನಡಿಯಂದದಿ ತಿಳಿ, ನೋಡು
ಕೂದಲಿಗೂ ಸಹ ದುಷ್ಕಾಳ !
ಬುದ್ಧಿಗೆ ಕೂಡಾ ಬರಗಾಲ.

❖❖

ನಗು ಮತ್ತು ಅಳು

ನಗುವೆಂದರೆ ಗಮಗಮಿಸುವ ಹೂವು,
ನಗುವೆಂದರೆ ರಸ ತುಂಬಿದ ಮಾವು.
ಅಳುವೆಂದರೆ ಸುರಿವುದು ಕಣ್ಣೀರು,
ಅಳುವೆಂದರೆ ತಾಪತ್ರಯ ನೂರು.
ಮಕ್ಕಳು ನಕ್ಕರೆ ಹೂವಿನ ತೋಟ
ಹಾಲೂ ಸಕ್ಕರೆ ಸವಿಯಾದೂಟ.

❖❖

ಮಂಗನ ಮೂತಿ

ಹುಳಿಯಾದರು ಸಹ ಮಾವಿನಕಾಯಿ
ಮಕ್ಕಳಿಗದನೇ ತಿನ್ನಲು ಬಾಯಿ;
ಹುಣಸೆಯ ಕಾಯಿಯ ಮೇಲೂ ಪ್ರೀತಿ,
ಹುಳಿ ತಲೆಗೇರಲು ಮಂಗನ ಮೂತಿ.

❖❖

ಮಕ್ಕಳ ಬಯಕೆ

೧

ಆಕಾಶದ ವರೆಗೂ ನಾ ಹೋಗಿ,
ತೋರಣ ಕಟ್ಟುವೆ ಓರಣವಾಗಿ,
ಮುಗಿಲಲಿ ಅಡಗುವೆ ಮಳೆ ಹನಿಯಾಗಿ.
ಮಿಂಚಿನ ಬೆಳಕಿಗೆ ತೋರುವೆನು;
ಹಂಚಿನ ಮಾಡಕೆ ಹಾರುವೆನು.

೨

ಗುಡುಗುಡು ಗುಮ್ಮನ ಗಗನದ ವಾದ್ಯ
ನಾನೇ ಬಾರಿಸಿ ಬಿಡುವುದು ಸಾಧ್ಯ!
ಮುಗಿಲಿನ ವರೆಗೂ ಮಕ್ಕಳ ರಾಜ್ಯ!
ಹಕ್ಕಿಯ ನಾನೇ ಹೋಲುವೆನು.
ಚಿಕ್ಕೆಯ ಜೊತೆಯೊಳಗಾಡುವೆನು.

೩

ಮಳೆ ನಾನಾಗಲು, ಗುಡ್ಡದ ಬದಿಗೆ
ಗಿಡಮರಗಳ ಹಸುರೆಲೆಗಳ ತುದಿಗೆ
ಪಟಪಟ ಕುಣಿವೆನು ಹತ್ತೂ ಕಡೆಗೆ;
ಅಂಗಳದಲಿ ನೀರಾಗುವೆನು;
ಗುಳ್ಳೆಯ ರೂಪದಿ ತೋರುವೆನು.

೪

ನಾನೇ ಹನಿ ಹನಿ, ಹರಿ ನೀರಾಗಿ
ಜಾರುತ ಹಾರುತ ತಡಸಲು ಆಗಿ
ಧೋ ಧೋ ಧೋ ಧೋ ಮುಂದಕೆ ಸಾಗಿ
ಶರಧಿಯ ಗರ್ಜನೆ ಮಾಡುವೆನು;
ತೆರೆಗಳ ಸಂಗಡ ಆಡುವೆನು.

❖❖

ಊದುಬತ್ತಿ

ಉರಿದರೆ ದೇಹ
ಮೂಗಿಗೆ ಮೋಹ

ಕಾಣಲು ಕರಿದು
ಪರಿಮಳ ಹಿರಿದು.

ತಲೆಯಲಿ ಕೆಂಪು
ಟೊಪ್ಪಿಗೆ ಸೊಂಪು

ದೇವರ ಮುಂದೆ
ನೀನೇ ನಿಂದೆ

❖❖

ಇಲಿ ಸಮ್ಮೇಳನ

ಚೀ ಪೀ ಎನ್ನುತ ಇಲಿಗಳ ತಂಡ
ಒಂದೆಡೆ ಸೇರಲು ಇಲಿಯ ಮುಖಂಡ
ಈ ಪರಿ ಭಾಷಣ ಮಾಡಿದನು,
ಆವೇಶದಿ ಮಾತಾಡಿದನು :

ಬೆಕ್ಕಿನ ಬಳಗಕೆ ಸೊಕ್ಕಿನ ಆಟ
ಇಲಿಯ ಕುಟುಂಬಕೆ ವೈರಿಯ ಕಾಟ
ಮಾರ್ಜಾಲದ ಮದ ಮುಳಗಿಸುವಾ,
ಮೂಷಿಕ–ಕೀರ್ತಿಯ ಬೆಳಗಿಸುವಾ,
ವೈರಿಯ ಕಾಟವ ತಪ್ಪಿಸಲು
ಯುಕ್ತಿಯನೊಂದನು ಸೂಚಿಸಲು
ಮುಂದಾಗಲಿ ಮೂಷಿಕ–ಕುಲವು;
ನಮಗಾಗಲಿ ಖಂಡಿತ ಗೆಲವು.

ಕೂಡಲೆ ಒಂದಿಲಿ ಸಭೆಯೊಳಗೆದ್ದು :
ಬೆಕ್ಕಿನ ಸೊಕ್ಕಿಗೆ ಒಂದೇ ಮದ್ದು;
ದೇವರ ಮುಂದಿನ ಗಣಗಣ ಗಂಟೆ
ಬೆಕ್ಕಿನ ಕೊರಳಲಿ ಕಟ್ಟಿರಿ ಕುಂಟೆ.

ಗಂಟೆಯ ಕಟ್ಟಲು ಬೆಕ್ಕಿನ ಪಾಡು
ಕುನ್ನಿಯಗಿಂತ ಕನಿಷ್ಠವು ನೋಡು
ಬೆಕ್ಕಿನ ನಡಿಗೆಗೆ ಗಣಗಣ ಗಂಟೆ
ಝಣ ಝಣವೆನ್ನಲು ಭಯ ನಮಗುಂಟೆ ?
ಗಂಟೆಯ ಸಪ್ಪಳ ಕೇಳಿದ ಕ್ಷಣಕೆ
ಬಿಲದೊಳು ಸೇರಲು ನಮಗೆಚ್ಚರಿಕೆ

ಕಟ್ಟಿರಿ ಗಂಟೆ
ಬೆಕ್ಕಿನ ತಂಟೆ
ಮುಗಿಯಿತು ಅನ್ನಿ
ಜಯ ಜಯವೆನ್ನಿ.

ಗಂಟೆಯ ಸೂಚನೆ ಮಂಜೂರಾಯ್ತು;
ಗಂಟೆಯ ದೊರಕಿಸಿ ತಂದದ್ದಾಯ್ತು.
ಆದರೆ ಕೊರಳಲಿ ಕಟ್ಟುವರಾರು ?
ಬೆಕ್ಕಿನ ಕೊರಳನು ಮುಟ್ಟುವರಾರು ?
ಪ್ರಶ್ನೆಗೆ ಉತ್ತರ ಸಿಗಲಿಲ್ಲ;
ಸಭೆಯಲಿ ಸಪ್ಪಳವೇ ಇಲ್ಲ !
ಇಲಿಯ ಮುಖಂಡನಿಗೂ ಸುಸ್ತು,
ಇಲಿ ಸಮ್ಮೇಳನ ಬರಖಾಸ್ತು.

❖❖

ತತ್ತಿಯ ದೋಸೆ

ಕೋಳಿಯ ತತ್ತಿ
ಬೆಳಗೆ ಹತ್ತಿ
ದುಂಡಗೆ ಸುತ್ತಿದ ನೀರುಳ್ಳಿ

ಬಿಳಿ ಬಿಳಿ ಮೊಟ್ಟೆ
ಒಡೆದೇ ಬಿಟ್ಟೆ;
ಅರಿಸಿಣ ಬಣ್ಣದ ನೀರುಳ್ಳಿ

ತಿನ್ನುವ ಮನಸು,
ಉಪ್ಪೂ ಮೆಣಸು
ಬೆರೆಯಿಸಿ ಬೇಯಿಸಿ ಆಂಬ್ಲೇಟು.

ತತ್ತಿಯ ದೋಸೆ
ಭಟ್ಟರಿಗಾಸೆ
ಅಡಗಿಸಿ ತಿನ್ನುವ ವ್ಯೆವಾಟು.

❖❖

ಕೀಟಲೆ ಹುಡುಗ

ಕೀಟಲೆ ಹುಡುಗನು ಗೋಪಾಲ
ಹಳ್ಳಿಗೆ ಅವನೇ ಭೂಪಾಲ !
ತಿಪ್ಪಾಭಟ್ಟರು ಹಳ್ಳಕೆ ಹೋಗಲು
ಗೋಪೂ ಹಿಂದಕೆ ಓಡಿದನು.

ಭಟ್ಟರು ಸ್ನಾನಕೆ ನೀರೊಳು ಮುಳುಗಲು,
ಸೋಜಿಗವೊಂದನು ಮಾಡಿದನು.
ಭಟ್ಟರು ತಂದಾ ಪಂಜೆಯನು
ಅಡಗಿಸಿ ಅಲ್ಲಿಂದೋಡಿದನು.

ಭಟ್ಟರು ಸ್ನಾನವ ತೀರಿಸಿ ಕೊಳ್ಳಲು
ಮೈಯೊರೆಸುವ ಪಂಜೆಯೆ ಇಲ್ಲ ;
ನಾಲ್ಕೂ ದಿಕ್ಕಿಗೆ ಹುಡುಕಾಡಿದರೂ
ಕಣ್ಣಿಗೆ ಅದು ಕಾಣಲೆ ಇಲ್ಲ.

ಭಟ್ಟರು ಸಿಟ್ಟಿನ ಭರದಲ್ಲಿ
ತಣ್ಣೀರಿನ ಮೈ–ಚಳಿಯಲ್ಲಿ
ಬೈಗಳನೇ ಉಚ್ಚರಿಸಿದರು,
ನಾಮಾವಳಿಯನೆ ಬಿಚ್ಚಿದರು.

ಭಟ್ಟರ ಬಾಯಲಿ ಹೊಸ ಮಂತ್ರ !
ಕೀಟಲೆ ಗೋಪಾಲನ ತಂತ್ರ.

❖❖

ನಮ್ಮ ಹಳ್ಳಿ

ಎಲ್ಲಾ ಕಡೆಯಲಿ
ಬೆಳೆದರು ಕಳ್ಳಿ
ಧರೆಯಲಿ ನಮದೇ
ಸುಂದರ ಹಳ್ಳಿ !

ಬೇಸಗೆ ಬಲು ಸೆಕೆ,
ಬಹಳೇ ಕಷ್ಟ ;
ಆದರು ನಮದೇ
ಹಳ್ಳಿಯು ಶ್ರೇಷ್ಠ !

ತುಸು ಮಳೆ ಬಂದರು
ಕೆಸರೇ ಕೆಸರು,
ಆದರು ಹಳ್ಳಿಗೆ
ಒಳ್ಳೇ ಹೆಸರು.

ಮಾವಿನ ಮರಗಳು
ಊರೊಳಗೆಲ್ಲಾ
ಒಂದೂ ಹಣ್ಣಿಗೆ
ಸವಿರಸವಿಲ್ಲಾ !

ಕೆರೆಯೊಳಗಂತೂ
ತಾವರೆ ಕಾಣಾ;
ತಪ್ಪದೆ ಕಾಂಬುದು
ಮಲಗಿದ ಕೋಣ.

ನಮ್ಮೀ ಹಳ್ಳಿಗೆ
ನಾವೇ ಯೋಗ್ಯ:
ಈ ತರದೂರೇ
ನಮ್ಮದು ಭಾಗ್ಯ .

❖❖

ಪಾಯಸದ ಹುಚ್ಚು

ತಿಪ್ಪಾಭಟ್ಟರು ಪಾಯಸ ಸುರಿದರು
ಎಲ್ಲರಿಗಿಂತಲು ತುಸು ಹೆಚ್ಚು

ದಕ್ಕಿಸಲಾಗದೆ ಹಾಸಿಗೆ ಹಿಡಿದರು,
ಬಿಡದಯ್ಯಾ ಪಾಯ್ಸದ ಹುಚ್ಚು !

❖❖

ತಿಪ್ಪಾಭಟ್ಟರು ನೇಗಿಲು ಹಿಡಿದರು

ತಿಪ್ಪಾಭಟ್ಟರು ನೇಗಿಲ ಹಿಡಿದರು
ಗದ್ದೆಯ ಹೂಡಲಿಕೆ !
ಊರಿನ ರೈತರು ಸೇರಿದರೆಲ್ಲರು
ಸೋಜಿಗ ನೋಡಲಿಕೆ.

ಕಟ್ಟಿದ ಎತ್ತುಗಳೆರಡೂ ಹೆದರಲು
ವೇಗದೊಳೋಡಿದವು.
ತಿಪ್ಪಾಭಟ್ಟರ ಧೋತ್ರವು ಹರಿಯಲು
ಮತ್ತೂ ಓಡಿದವು.

ನೇಗಿಲು ಮುಂದಕೆ, ಭಟ್ಟರು ಹಿಂದಕೆ
ಬಲು ಪೇಚಾಡಿದರು :
ಗೊಬ್ಬರ ಕುಣಿಯಲಿ ಭಟ್ಟರು ಬೀಳಲು
ರೈತರು ಹಾಡಿದರು :

ತೊಗರಿಯ ಸಾರದು ಭಟ್ಟರಿಗೆ,
ನೇಗಿಲ ಭರವೆ ದಿಟ್ಟರಿಗೆ.

❖❖

ಬಳಗ

ಕಂದಾ, ಕಂದಾ
ನೀ ಮಕರಂದಾ,
ಅವ್ಮಾ ಅವ್ಮಾ
ನೀ ಜಗದವ್ಮಾ

ಅಪ್ಪಾ, ಅಪ್ಪಾ,
ಹಾಲೂ ತುಪ್ಪ.
ಅಣ್ಣಾ, ಅಣ್ಣಾ
ತಂದೆಯೊ ಹಣ್ಣ ?

ತಮ್ಮಾ ತಮ್ಮಾ
ಕಾಡಿನ ಗುಮ್ಮ.
ಅಕ್ಕಾ, ಅಕ್ಕಾ,
ನಿನ ಹಲ್ಲು ಮುಕ್ಕ.

ತಂಗೀ,ತಂಗೀ,
ನೀ ಬಲು ಇಂಗಿ.
ಮಾವಾ,ಮಾವಾ,
ಅತ್ತೆಗೆ ದೇವ.

ಅತ್ತೆ,ಅತ್ತೆ
ಹೇಸರಗತ್ತೆ !

ಪಾತರಗಿತ್ತಿ

ಮಿಕಿ ಮಿಕಿ ಕನಸು,
ಹಿಗ್ಗಿತು ಮನಸು.
ಪಾತರಗಿತ್ತಿ
ಮಿದು ಮಿದು ಹತ್ತಿ !

ಹತ್ತಿಗೆ ಬಣ್ಣ
ಇದು ಬಲು ಚೆನ್ನಾ.
ಕೇಸರಿ, ಕೆಂಪು,
ಬಹಳೇ ಸೊಂಪು:

ನೀಲಿಯ ಬಣ್ಣ,
ಹಸರೂ ಅಣ್ಣಾ;
ಹಳದಿಯು ಇತ್ತು
ಸುತ್ತೂ ಮುತ್ತೂ.

ಪಾತರಗಿತ್ತಿಯ
ಬೆನ್ನನು ಹತ್ತಿ
ಕೂತೆನು ನಾನು
ಆಬಳಿಕೇನು ?

ಹಾರಲು ಮೇಲೆ
ಮುಗಿಲಲಿ ನಿಂದೆ;
ಜಾರಲು ಕೆಳಗೆ
ಭೂಮಿಗೆ ಬಂದೆ.

ಬಗೆ ಬಗೆ ಹೂವಿನ
ಬಣ್ಣದ ತೋಟ;
ತೋಟದೊಳೆಲ್ಲಾ
ಜಿಗಿಜಿಗಿದಾಟ

ಪಾತರಗಿತ್ತಿಗೆ
ಹೂವಿನ ಹಾಲು
ದೊರಕಲು, ನನಗೂ
ದೊರೆಯಿತು ಪಾಲು

ಹೂ ಮಕರಂದ
ಬಲು ರುಚಿಯಿಂದ
ನಾನೂ ತಿಂದೆ
ಸವಿ ಸವಿಯೆಂದೆ
ಹಿಗ್ಗಿತು ಮನಸು;
ಮುಗಿಯಿತು ಕನಸು.

❖❖

ಚಂದ್ರನ ಕೂಸು

ಹಳೆಯ ಪುರಾಣದ ಕತೆಯೊಂದ,
ಹೇಳುವೆ ನಾನಿಂದಿಗೆ ಕಂದ.

ದ್ವಾಪರ ಯುಗದಲಿ ಒಂದು ದಿನ
ಹುಣ್ಣಿಮೆಯಿರುಳಲಿ ಚಂದ ವನ.

ಚಂದ್ರನ ಮೈ ಗೋಲಾಗಿತ್ತು
ಬೆಳದಿಂಗಳು ಹಾಲಾಗಿತ್ತು.

ಹೊಲದಲಿ ಮೊಲ ಮೇಯುತಲಿರಲು
ಬೇಟೆಗೆ ಬಂದರು ವನಚರರು.

ಹೆದರಿದ ಮೊಲ ಮುಗಿಲಿಗೆ ಹಾರಿ
ಕೂತಿದೆ ಚಂದ್ರನ ಮೇಲೇರಿ.

ಕುಳ್ಳಲು ಭಯ–ಭೀತಿಯ ತೊರೆದು
ಚಂದ್ರನಿಗಾನಂದವು ಹಿರಿದು,

ಈ ಮೊಲವೇ ಶಾಶ್ವತವಾಗಿ
ಮೆರೆವುದು ಚಂದ್ರನ ಕೂಸಾಗಿ

❖❖

ಬಿಸಿ ಬಿಸಿ ಕಾಫಿ

ಕನ್ನಡ ನಾಡಿನ ಘಟ್ಟದಲಿ
ಬಾಬಾ–ಬೂಡನ್ ಬೆಟ್ಟದಲಿ
ಬೆಳೆವುದು ಬೀಜದ ಗಿಡ ಚೆಂದ,
ಬಿಸಿ ಬಿಸಿ ಕಾಫಿಯು ಅದರಿಂದ.

ಬೀಜವ ಕುಟ್ಟಲು, ಪುಡಿ ಮೊದಲು;
ಅದನೇ ನೀರೊಳು ಕುದಿಯಿಸಲು
ಬಿಸಿ ಬಿಸಿ ಕಾಫಿಯು ಕುಡಿಯಲಿಕೆ
ಹೊಸ ಆವೇಶವ ಪಡೆಯಲಿಕೆ.

ಅಜ್ಜಿಗು ಕಾಫಿ ಅತ್ತೆಗು ಕಾಫಿ,
ಮಾವನ ಕತ್ತೆಗು ಬಿಸಿ ಬಿಸಿ ಕಾಫಿ !
ಎಲ್ಲರು ಕುಡಿಯಿರಿ ಈ ಕಾಫಿ
ಸಕ್ಕರೆ–ಹಾಲಿಲ್ಲದ, ಪಾಪಿ.

❖❖

ನಮ್ಮೂರ ಪೆದ್ದ

ನಮ್ಮೂರ್ ಪೆದ್ದ
ತೆಳ್ಳಗೆ ಉದ್ದ;
ಎಷ್ಟೋ ಸರ್ತಿ ಮಿ–
ಠಾಯಿಯ ಕದ್ದ.

ನಮ್ಮೂರ್ ಪೆದ್ದ
ಮಾಡದೆ ಸದ್ದ
ಯಾವುದೊ ಏನೋ
ಚಿಂತೆಯೊಳಿದ್ದ.

ನಮ್ಮೂರ್ ಪೆದ್ದ
ಹಣಕುತಲಿದ್ದ;
ಹಾಗಾದರೆ ಹಣ
ಅವನೇ ಕದ್ದ !

ನಮ್ಮೂರ್ ಪೆದ್ದ
ಉಂಡೆಯ ಕದ್ದ
ತಿನ್ನುವ ಮೊದಲೇ
ಗುಂಡಿಗೆ ಬಿದ್ದ.

❖❖

ಚಂದಿರ ಮತ್ತು ತಾರೆಗಳು

ಚಂದಿರ ಮಾಮನು ಮುಗಿಲಲ್ಲಿ;
ಸುಂದರ ತಾರೆಗಳಲ್ಲಲ್ಲಿ;
ಲಕ ಲಕ ಹೊಳೆಯಲು ಬಿಳಿ ಬೆಳ್ಳಿ,
ಈ ತರ ಹೊಳೆವುದೆ ಬೆಳ್ಳುಳ್ಳಿ ?

ಅಡಗಲು ಚಂದಿರ ಮೋಡದಲಿ;
ಉಡುಗಣವದು ಹುಡುಕಾಡುತಲಿ.
ಮಿಣಿ ಮಿಣಿ ಮಿಣಿ ಮಿಣಿ ಮಿಣುಕುವುದೈ;
ದಣುವಾಗದೆ ಬಲು ಕುಣಿಯುವುದೈ.

ಹಿರಿಯಣ್ಣನು ಚಂದಿರನಾಗಿ
ಕಿರಿ ಚಿಣ್ಣರು ತಾರೆಗಳಾಗಿ
ಮಿನುಗಲು ಮುಗಿವುದು ಬೇಸರಿಕೆ;
ತಣಿವುದು ದೇವರ ನೀರಡಿಕೆ.

❖❖

ಅಕ್ಕನ ಲಗ್ನ

ಅಕ್ಕನ ಲಗ್ನ
ಮಕ್ಕಳು ಮಗ್ನ
ಬಾಸಿಂಗದ ಹೂ ನೋಡಲಿಕೆ
ಚಪ್ಪರದಲಿ ಕುಣಿದಾಡಲಿಕೆ

ಅಕ್ಕನ ಗಂಡ
ಚಿಕ್ಕೆಯ ಕಂಡ;
ಬಾನೊಳಗಲ್ಲಾ ! ಬಲು ಚಿತ್ರ;
ಅಕ್ಕನ ಮೊಗವೇ ನಕ್ಷತ್ರ !

ಭಾವನ ಸಿಟ್ಟು
ಹೋಯಿತು ಬಿಟ್ಟು
ಬಾಸಿಂಗದ ತಲೆ ತೂಗಾಡಿ
ಅಕ್ಕನ ಸಂಗಡ ಮಾತಾಡಿ

ಭಾವನ ಅಪ್ಪ
ಬಹಳೇ ದಪ್ಪ
ಆಕಾರವು ಹಲಸಿನ ಹಣ್ಣು
ಆತನ ಮೇಲೆಲ್ಲರ ಕಣ್ಣು

ಅಕ್ಕನ ಅತ್ತೆ
ಲಿಕಿ ಲಿಕಿ ಮುತ್ತೆ;
ಹಲಸಿನ ಹಣ್ಣಿಗೆ ಸತಿ ಚೆಂದ
ಚಿತ್ರ ವಿಚಿತ್ರದ ಸಂಬಂಧ

ಮಕ್ಕಳಿಗಾಟ,
ಮದುವೆಯ ಊಟ,
ಎಲ್ಲರಿಗೂ ಸುಖ–ಸಂತೋಷ;
ಹೆಂಗಸರಿಗೆ ಹೊಸ ಆವೇಶ.

❖❖

ಭೂತ–ಪಿಶಾಚಿ

ಭೂತ ಪಿಶಾಚಿಗಳಿಲ್ಲಂತೆ
ಸುಳ್ಳೇ ಹರಟೆಯ ಗುಲ್ಲಂತೆ
ಮೊಕದಲಿ ಕರಿಮುಸಿ ಬಡಿದಂತೆ
ಭೂತ ಪಿಶಾಚಿಗಳಾದಂತೆ
ಮಕ್ಕಳು ಮುದ್ದಾಗಿದ್ದಂತೆ
ಭೂತದ ಸದ್ದೂ ಇಲ್ಲಂತೆ.

❖❖

ಗಾಳಿಪಟ

ಬಾಲವನಲುಗಿಸಿ ಹಾರಾಡಿ
ಗಾಳಿಯ ಸಂಗಡ ಹೋರಾಡಿ
ನೋಡೋ ಮುಟ್ಟಿತು ಮುಗಿಲಲ್ಲಿ
ದೇವರ ಅಟ್ಟದ ತುದಿಯಲ್ಲಿ.

ಹಕ್ಕಿಯ ಮೀರಿ
ದಿಕ್ಕಿಗೆ ಹಾರಿ,
ಕಣ್ಣಿಗೆ ಕಾಂಬುದು ಬಲು ಸಣ್ಣ.
ಭೂಮಿಗೆ ಮರಳುವದೇನಣ್ಣ ?

ಹದ್ದಿಗೆ ಸೋಲು !
ಚಿಕ್ಕೆಗು ಮೇಲು !
ಬಣ್ಣದ ಬಾಲದ ಗಾಳಿಪಟ;
ಮಕ್ಕಳ ಆಟದ ಹಕ್ಕಿ ದಿಟ.

ಸೊಗಸಿನ ಆಟ,
ಮುಗಿಲಲಿ ಮಾಟ,
ನೋಡೋ ಎತ್ತರದಲಿ ಚೆಂದ,
ಬಾನಿನ ಹಣೆಯಲಿ ಶ್ರೀಗಂಧ.

❖❖

ತಿಪ್ಪಾಭಟ್ಟರ ಜನಿವಾರ

ತಿಪ್ಪಾಭಟ್ಟರ ಜನಿವಾರ
ಬೀಗದ ಕೈ ತೂಗುವ ದಾರ;
ತಿಪ್ಪಾಭಟ್ಟರ ಉಡಿದಾರ
ಪಂಜೆಯನುಡಲಿಕೆ ಆಧಾರ.

ತಿಪ್ಪಾಭಟ್ಟರ ಸಂಸಾರ
ನಿತ್ಯವು ಇಡ್ಲಿಗೆ ಸಾಂಬಾರ.
ತಿಪ್ಪಾಭಟ್ಟರ ಪರಿವಾರ
ನೆಂಟರಿಗೆಲ್ಲಾ ಬೇಜಾರ.

ತಿಪ್ಪಾಭಟ್ಟರ ವ್ಯಾಪಾರ
ಪಟ್ಟಣಶೆಟ್ಟಿಯ ಉದ್ಧಾರ
ತಿಪ್ಪಾಭಟ್ಟರ ಅವತಾರ
ಭೂತ ಪಿಶಾಚಿಗು ಬರಬಾರ !

❖❖

ಕಾಮನಬಿಲ್ಲು

ಕಾಮನ ಬಿಲ್ಲೇ,
ರಾಮನ ಬಿಲ್ಲೇ,
ಬಾನಲಿ ಮೂಡಿರುವೆ.
ಮುಗಿಲಿನ ಮೇಲೆ
ಬಣ್ಣದ ಲೀಲೆ.
ತೋರಣದಂತಿರುವೆ.

ಕೆಂಪೂ ನೀಲೀ
ಬಗೆ ಬಗೆ ಬಣ್ಣ
ಹಳದೀ ಹಸರೂ
ಏನೇನಣ್ಣಾ;
ರಂಗಗಳೆನಿತೋ ಮೈಯೊಳಗೆ
ತುಂಬಿದರಾರೈ ಮುಗಿಲೊಳಗೆ.

ದೇವರ ಮಕ್ಕಳು
ಸಾಬೂನಿನ ನೀ–
ರ್ಗುಳ್ಳೆಯ ಊದಿದರೆ ?
ಗುಳ್ಳೆಗಳೆಲ್ಲವು
ಪಂಕ್ತಿಯ ಸೇರಲು,
ಮುಗಿಲಲಿ ತೂಗಿದರೆ ?

ಅಟ್ಟದ ತುದಿಯಲಿ
ಬೆಟ್ಟದ ಬದಿಯಲಿ
ಕೈಯಿಗೆ ಮುಟ್ಟುವೆಯಾ ?
ಎತ್ತರ ಮರವನು
ಏರಿದ ಕೂಡಲೆ
ಮೈಯಿಗೆ ಹತ್ತುವೆಯಾ ?

❖❖

ದೇವರ ಲೀಲೆ

ತಿರುಗುವ ಪೃಥಿವಿಯು ದೇವನ ಬುಗುರಿ !
ಗಗನದ ಗುಡುಗೇ ಅವನ ನಗಾರಿ !
ತಾರೆಗಳೆಲ್ಲಾ ಮಿನುಗಲು ಮೇಲೆ
ಮುಗಿಲೊಳಗೆಲ್ಲಾ ದೇವರ ಲೀಲೆ.

❖❖

ಕುಂಬಾರನ ತಿಗರಿ

ತಿರುಗಲಿ ಕುಂಬಾರನ ತಿಗರಿ
ಇದಕೆಂಬರು ಚಕ್ರದ ಬುಗುರಿ
ತಿಗರಿಗು ಬುಗುರಿಗು ಸಂಬಂಧ
ಎರಡೂ ತಿರುಗಲು ಆನಂದ.

ತಿಗರಿಯು ತಿರುಗಲು ಗರಗರನೆ
ಗಡಿಗೆಗಳಾದವು ಭರ ಭರನೆ.
ಮಣ್ಣಿನ ಮುದ್ದೆಗೆ ಆನಂದ !
ಗರ ಗರ ತಿರುಗುವುದೇ ಚೆಂದ

ನಾವೂ ತಿಗರಿಯನೇರುವುದು,
ಮುದ್ದೆಯ ಪರಿಯಲಿ ತಿರುಗುವುದು.
ನಾವೂ ಗಡಿಗೆಗಳಾದಲ್ಲಿ
ಸೋಜಿಗವಲ್ಲವೆ ಜಗದಲ್ಲಿ !

❖❖

ಸೋಮಾರಿ – ಮಲ್ಲ

ದನಗಳ ಕಟ್ಟೋ ಮಲ್ಲಾ
ಮನದಲಿ ಬೇಸರವಲ್ಲಾ !

ಸಗಣಿಯ ಹೆಕ್ಕೋ, ಮಲ್ಲಾ
ತಗಣಿಯು ಕಚ್ಚುವದಲ್ಲಾ !

ಮರವನು ಹತ್ತೋ, ಮಲ್ಲಾ
ಮುರಿದೇ ಬೀಳುವೆನಲ್ಲಾ !

ಗದ್ದೆಯ ಹೂಡೋ, ಮಲ್ಲಾ
ನಿದ್ದೆಯೆ ಸರಿಯಾಗಿಲ್ಲ !

ಊಟಕೆ ಬಾರೋ ಮಲ್ಲಾ
ಹಾಜರು ಇದ್ದೇನಲ್ಲಾ !

❖❖

ಬೆಳೆ

ಬಿಸಿ ನೆಲದಲಿ ತುಸು ಹಸಿಯಾಯ್ತು,
ಬತ್ತಿದ ಬೀಜವು ಸಸಿಯಾಯ್ತು.

ಸಸಿ ದೊಡ್ಡಾಗಲು ತೆನೆ ಮುಂದೆ,
ತೆನೆಯೇ ದೇವರ ಮನೆಯೆಂದೆ.

ತೆನೆ ಹಣ್ಣಾಗಲು ಬೆಳೆ ನಿಂತು,
ಮನೆ ಮನೆಯಲಿ ಅನ್ನವು ಬಂತು.

ದೂರಾಯಿತು ಹೊಟ್ಟೆಯ ಹಸಿವು,
ಜೋರಾಯಿತು ರಟ್ಟೆಯ ಕಸವು.

ಬೆಳೆಯೇ ಭೂಮಿಯ ಬಂಗಾರ,
ಬೆಳೆಯೇ ದೇವನ ಅವತಾರ.

❖❖

ಜೋಗುಳ

ಜೋ ಜೋ ಜೋ ಜೋ ನನ ತಂಗಿ,
ಜೋಗುಳ ಹಾಡುವೆ ರಸರಂಗಿ.

ಮಾವಿನ ಕುಡಿಯೇ ನಿನ ಭಂಗಿ;
ಹೂವನು ಮುಡಿಯೇ ನನ ತಂಗಿ

ಮುದ್ದಿನ ಮಣಿಯೇ ಕುಡಿ ಗಂಜಿ,
ಆಟಕೆ ಕೊಡುವೆನು ಗುಲಗುಂಜಿ.

ಜೀವದ ಜೇನೇ, ನನ ತಂಗಿ,
ಕೈ–ಮೈ ಬಣ್ಣವು ನಾರಂಗಿ.

ಬಾಳಿನ ಬೆಳಕೇ ನನ ತಂಗೀ,
ಹೊಲಿಯುವೆ ರೇಶಿಮೆ ನಿಲವಂಗಿ

ಅರಳಿದ ಹೂವೇ, ನನ ತಾಯಿ,
ಕೊರಳಲಿ ಚಿನ್ನದ ಮಾಗಾಯಿ.

ಜೋ ಜೋ ಜೋ ಜೋ, ನನ ತಂಗಿ,
ಮಲಗಿದಳಮ್ಮಾ ರಸರಂಗಿ.

❖❖

ದೇವರ ಎತ್ತು

ಬಂತು ಬಂತು ದೇವರ ಎತ್ತು;
ಹಣೆಯ ಮೇಲೆ ಕುಂಕುಮ, ಮುತ್ತು

ಬೆನ್ನ ಮೇಲೆ ಜರತಾರಿಯ ಬಟ್ಟೆ,
ಸುತ್ತು–ಮುತ್ತಲೂ ಬಣ್ಣದ ಪಟ್ಟೆ,
ಡುಬ್ಬವೆನ್ನುವುದು ರೇಶಿಮೆ ಗಟ್ಟೆ ?
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು

ಹಿಂದಕೆ ಮುಂದಕೆ ಸರಿವುದು ಹೆಜ್ಜೆ
ಖುಳು ಖುಳು ಕುಣಿವುದು ಕಾಲಿನ ಗೆಜ್ಜೆ;
ಗಂಟೆಯ ಸರಗಳೆ ನಂದಿಗೆ ವಜ್ಜೆ?
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು

ಕಾವಿನ ಬಣ್ಣವೆ ಕೊಂಬಿಗೆ ಸೊಂಪು,
ಹಣೆಯ ಮೇಲೆ ಕುಂಕುಮದಲಿ ಕೆಂಪು
ಬಾಲ ಗೊಂಡೆಯದು ಕೇಸರ–ಗುಂಪು
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು

ಟಪ ಟಪ ಟಪನೇ ಬಡಿಯಲು ಕೋಲು
ಡುಬು ಡುಬು ಡುಬು ಡುಬು ನುಡಿವುದು ಡೋಲು
ಗಿಜಿ ಗಿಜಿ ಗಿಜಿ ಗಿಜಿ ಗೆಜ್ಜೆಯ ಸಾಲು
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು

ತಲೆಯನು ಅಲುಗಿಸಿ ಕರೆವುದು ಎತ್ತು,
ಮಕ್ಕಳೆಲ್ಲರೂ ನೆರೆದರು ಸುತ್ತು;
ನಂದಿರಾಯನಿಗೆ ಎಲ್ಲಾ ಗೊತ್ತು
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು,

ಈಶಭಕ್ತಿಯನು ಲೋಕಕೆ ಸಾರಿ
ನಮ್ರ ವರ್ತನೆಯ ರೀತಿಯ ತೋರಿ,
ನಮನ ಹಾಕುವುದು ಮಂಡಿಯನೂರಿ
ಬಂತು ಬಂತು ದೇವರ ಎತ್ತು,
ಹಣೆಯ ಮೇಲೆ ಕುಂಕುಮ, ಮುತ್ತು,

❖❖

ಹೊಲಿಗೆಯ ಯಂತ್ರ

ಕಾಲಿನ ತುಳಿತಕೆ ನಡೆವುದು ಯಂತ್ರ
ಗರ ಗರ ಗರ ಗರ ಮೊರೆವುದು ಮಂತ್ರ,
ದರ್ಜಿ ಮುರಾರಿಯ ಸೂಜಿಯ ತಂತ್ರ;
ಭರ ಭರ ಹೊಲಿ ಹೊಲಿ ಸಿಂಪಿಗನೇ.

ಹಳ್ಳಿಯ ಜನರಿಗೆ ಹೊಸ ದೌಲತ್ತು;
ಸಿಂಪಿ ಮುರಾರಿಗೆ ನಿಜ ಸಂಪತ್ತು;
ಊರಿನ ಮಕ್ಕಳು ಚಕ್ರದ ಸುತ್ತು
ಭರ ಭರ ಹೊಲಿ ಹೊಲಿ ಸಿಂಪಿಗನೇ.

ಹೊಲಿಯಲು ಬಂದವು ನಾನಾ ಬಟ್ಟೆ,
ಯಂತ್ರದ ಸುತ್ತಲು ಅರಿವೆಯ ಗಟ್ಟೆ
ನಾನೂ ಅಂಗಿಯ ಹೊಲಿಯಲು ಕೊಟ್ಟೆ
ಭರ ಭರ ಹೊಲಿ ಹೊಲಿ ಸಿಂಪಿಗನೇ.

ಒಂದೇ ದಿನದಲಿ ತೀರಿಸಿ ಬಿಟ್ಟ;
ಎಲ್ಲರಿಗೂ ಹೊಲಿದರಿವೆಯ ಕೊಟ್ಟ;
ಕಲಿತೆವು ಯಂತ್ರಸಿಪಾಯಿಯ ಗುಟ್ಟ
ಭರ ಭರ ಹೊಲಿ ಹೊಲಿ ಸಿಂಪಿಗನೇ.

❖❖

ತಿಪ್ಪಾಭಟ್ಟರ ಕುಂಬಳಕಾಯಿ

ತಿಪ್ಪಾಭಟ್ಟರು ಹೋದರು ಸಂತೆಗೆ
ಕುಂಬಳಕಾಯಿಯ ನೋಡಿದರು;
'ಮಜ್ಜಿಗೆ–ಹುಳಿ ಮಾಡಲು ಸೊಗಸಾಗಿದೆ'
ಮನದೊಳಗೇ ಮಾತಾಡಿದರು.

ಗುಂಡಾಕಾರದ ತುಂಬಿದ ಕಾಯಿ
ಉತ್ತಮ ಬೆಳೆದಿದೆ ಹಾಳಾದ್ದು;
ಮಂಡಿಗೆ ಮಾಡಲು ಬಲು ಹದವಾಗಿದೆ,
ಇದನೇ ಇಂದಿಗೆ ಕೊಳ್ಳುವುದು.

ಭಟ್ಟರು ಕುಂಬಳಕಾಯಿಯ ಕೊಂಡರು
ವಲ್ಲಿಯ ಸೆರಗಲಿ ಕಟ್ಟಿದರು;
ಪೇಟೆಯ ದಾಟಲು ಲಗು ಲಗು ನಡೆದರು,
ಅಂಗಳ ಗೋಡೆಯ ಮುಟ್ಟಿದರು.

ಕಟ್ಟಿದ ಗೆಣ್ಣದು ಸಡಿಲಾಗಿ
ಕುಂಬಳ ಬಿದ್ದಿತು ತುಂಡಾಗಿ;
ಹೆಂಡತಿ ಬೈದಳು ಭಟ್ಟರಿಗೆ
ಕುಂಬಳಕಾಯಿಯ ಕೆಡಿಸಿದಕೆ !

❖❖

ಮಕ್ಕಳ ಕುಣಿತ

ಕುಣಿವುದು ನಾನು,
ಮಣಿವುದು ನೀನು
ಬಾರೇ ಅಕ್ಕಾ; ತಾ ಧಿಮಿ ಥೈ

ಹಿಗ್ಗುವೆ ನಾನು
ಬಗ್ಗಲು ನೀನು
ಇಬ್ಬರು ಕೂಡಿಯೆ ತಕಧಿಮಿ ಥೈ

ಮಿಂಚಿನ ತೆರದಲಿ ಮರೆದರೆ ಸೈ;
ಮಂಜಿನವೊಲು ಧರೆಗಿಳಿದರೆ ಸೈ;
ಹೂವಿನ ತೆರದಲಿ ನಾವ್ ನಗಲು
ಭೂಮಿಗೆ ಬರುವುದು ಆ ಮುಗಿಲು
ಮೋಡದ ಮರೆಯಲಿ ನೀನಡಗು,
ಗುಡುಗದು ಗದರಲು ನೀ ನಡುಗು,

ಹಕ್ಕಿಯ ಪರಿ ನಾ ಹಾರುವೆನು
ಅಡಗಿದ ನಿನ್ನನು ತೋರುವೆನು
ಇಬ್ಬರು ಇನ್ನೂ ಕುಣಿಯುವುದೈ
ಒಬ್ಬರಿಗೊಬ್ಬರು ಅಪ್ಪುವದೈ,
ಅವ್ವನು ಅಪ್ಪನು ಒಪ್ಪಲು ಸೈ
ತಾಧಿಮಿ ತಕಧಿಮಿ ತಾಧಿಮಿ ಥೈ

❖❖

ಮಕ್ಕಳ ಕೋಲಾಟ

ಶರಣೂ ಶರಣೂ ಕೋಲೇನಾ
ಧರಣಿಗೆ ನಮನಾ, ಬೆನಾ ಬೆನಾ.

೧

ತಾಯಿಗೆ ನಮನಾ,
ತಂದೆಗೆ ನಮನಾ,
ತೆಂಗಿನ ಕಾಯಿಗೆ, ಕೋಲೇನಾ.
ಕಡಲೆಯ ತಿಂಬಾ
ಕಡಬನು ಉಂಬಾ
ಬೆನಕಗೆ ನಮನಾ, ಕೋಲೇನಾ.

೨

ಕುಡಿಯಿರಿ ಹಾಲಾ,
ಹಿಡಿಯಿರಿ ಕೋಲಾ,
ಇದು ಹೊಸ ಕಾಲಾ, ಕೋಲೇನಾ.
ಮಕ್ಕಳಿಗೆಲ್ಲಾ
ಸಕ್ಕರೆ ಬೆಲ್ಲಾ;
ಚಿಂತೆಯು ಸಲ್ಲಾ, ಕೋಲೇನಾ.

೩

ಮುಂದಕೆ ಮೇಲೆ
ಗಾಳಿಗೆ ತೇಲೆ
ಮೋಹನ ಲೀಲೆ, ಕೋಲೇನಾ.
ಕಾಲಿನ ಹೆಜ್ಜೆ
ನುಡಿಯಲಿ ಗೆಜ್ಜೆ
ಕುಣಿತದ ಬಿಜ್ಜೆ, ಕೋಲೇನಾ.

೪

ನಲಿವುದು ಮುಗಿಲು,
ಏತಕೆ ದಿಗಿಲು ?
ಹಗಲೂ ಇರುಳೂ, ಕೋಲೇನಾ,
ತಿಂಗಳ ಬೆಳಕೂ
ಮಂಗಳ ಥಳಕೂ,
ಅಂಗಳದೊಳಗೇ ಕೋಲೇನಾ.

೫

ನೂತನ ಸುಗ್ಗಿ;
ಹಿರಿ ಹಿರಿ ಹಿಗ್ಗಿ,
ಮೇಲಕೆ ನುಗ್ಗಿ ಕೋಲೇನಾ.
ತಲೆಗೆ ತುರಾಯಿ,
ಹೂವು ಕಾಯಿ;
ಸಂತಸ ತಾಯೀ, ಕೋಲೇನಾ.

೬

ಮಕ್ಕಳ ಸುಗ್ಗಿ;
ಮುದುಕರು ಕುಗ್ಗಿ
ಬೆನ್ನನು ಬಗ್ಗಿಸೆ, ಕೋಲೇನಾ.
ರಾಧೆಯೆ ಬಾರೆ,
ಆರತಿ ತೋರೆ,
ರೇಶಿಮೆ ಸೀರೆ, ಕೋಲೇನಾ.

೭

ಕುಣಿಯಲಿ ಕಡಲೂ
ತೆಂಗಿನ ಮಡಲೂ
ಭೂಮಿಯ ಒಡಲೂ, ಕೋಲೇನಾ.

ಭತ್ತದ ಕದಿರೂ
ಬೆಟ್ಟದ ಬಿದಿರೂ
ಹಕ್ಕಿಯ ಹೊದರೂ, ಕೋಲೇನಾ.

೮

ಸಂತಸ ಉಕ್ಕಿ
ಆಗಸ ಮಿಕ್ಕಿ
ಮಿನುಗಲಿ ಚುಕ್ಕಿ, ಕೋಲೇನಾ.
ಕುಣಿಯಲಿ ಕೊಳ್ಳಾ,
ಹಾರಲಿ ಹಳ್ಳಾ
ಜಗವೇ ಮಳ್ಳಾ, ಕೋಲೇನಾ.

೯

ಮಕ್ಕಳ ದೃಷ್ಟಿ
ಮಂಗಳ ಸೃಷ್ಟಿ
ನವ ಸಂತುಷ್ಟಿ, ಕೋಲೇನಾ.
ಕುಣಿವುದೆ ಶಕ್ತಿ
ಮಣಿವುದೆ ಭಕ್ತಿ
ಜೀವನ್ಮುಕ್ತಿ, ಕೋಲೇನಾ

೧೦

ಹುಣ್ಣಿವೆ ಹೋಳಿ,
ಚಿಣ್ಣರೆ ಏಳಿ,
ದುಮ್ಮನ ಸುಡಿರೋ, ಕೋಲೇನಾ.
ನೃತ್ಯವ ಕುಣಿದು,
ಸತ್ಯವ ನುಡಿದು,
ನಿತ್ಯತೆ ಪಡೆಯಿರಿ, ಕೋಲೇನಾ.

❖❖

ರೈತ ಮತ್ತು ಕರಡಿ

೧

ಕನ್ನಡ ನಾಡಿನ ಮಲೆಯೊಳಗಿದ್ದನು
ಉತ್ತಮ ರೈತನು ಮೋಟಂಗಿ;
ಆತನು ಬೆಳೆಯಿಸುತಿದ್ದನು ರುಚಿಕರ
ಬಹಳೇ ಉತ್ತಮ ಮೂಲಂಗಿ.

ಬೆಟ್ಟದ ಬುಡದಲಿ ಹಳ್ಳದ ದಂಡೆಗೆ
ಮೂಲಂಗಿಯ ಸಸಿ ಹಚ್ಚಿದನು,
ನೆಟ್ಟಿಯ ದಿನವೇ ಬೆಟ್ಟದ ಕರಡಿಯು
ಕಾಣಿಸಿಕೊಳ್ಳಲು ಬೆಚ್ಚಿದನು.

'ಏನಪ್ಪಾ ಕರಡೀರಾಯಾ ?
ಏತಕೆ ಬಂದೆಯೊ ಮಾರಾಯಾ ?'
ಅಂಜುತ ರೈತನು ಕೇಳಿದನು,
ಕರಡೀರಾಯನು ಹೇಳಿದನು :

ಈ ಬೆಟ್ಟಕೆ ನಾನೇ ಸ್ವಾಮಿ,
ಗೇಣಿಯ ಸಲ್ಲಿಸು ಆಸಾಮಿ.
ಗೇಣಿ ಕರಾರಿನ ಸಲುವಾಗಿ
ಮಾತಾಗಲಿ ಇಬ್ಬರ ನಡುವೆ.

'ಗೇಣಿಯ ತಿಂದರೆ ನೋಡಯ್ಯಾ,
ನಿನ್ನನು ನಾ ತಿಂದೇ ಬಿಡುವೆ.
ನಾನೇ ಒಡೆಯ
ಸುಳ್ಳದು ನಡೆಯ.

ಇಬ್ಬರಿಗೂ ಸರಿ ಸಮ ಭಾಗ,
ಕಡಿಮೆಯ ಕೊಟ್ಟರೆ ಅದು ಆಗ.'

ಆಗಲಿ ಆಗಲಿ ಅಂದನು ರೈತ
ನಿನಗಾವುದು ಬೆಳೆ ಬೇಕಪ್ಪಾ ?
ಕೆಳಗಿನ ಬುಡವೋ ? ಮೇಲಿನ ತುದಿಯೋ
ತರಕಾರಿಯ ಬೆಳೆ, ನೋಡಪ್ಪಾ.

ರುಚಿಕರ ತುದಿಯದು ನನಗಿರಲಿ,
ಬೆಂಡಿನ ಬುಡವೇ ನಿನಗಿರಲಿ
ಕರಡೀರಾಯನು ಹೇಳಿದನು,
ರೈತನು ತಲೆಯನು ತೂಗಿದನು

೨

ಮುಗಿಯಿತು ಸಂಕ್ರಾಂತಿಯ ಹಬ್ಬ,
ಮೂಲಂಗಿಯ ಬೆಳೆ ಅಬ್ಬಬ್ಬ !
ಎಲ್ಲಾ ಸಸಿಗಳು ಹಸನಾಗಿ
ಬೆಳೆದವು ಬಹಳೇ ಹಸುರಾಗಿ.

ಗಿಡಗಳ ಕೀಳುವ ದಿನ ಬಂತು,
ಆ ದಿನವೇ ಕರಡಿಯು ಬಂತು.

ತುದಿಗಳನೆಲ್ಲಾ ಕರಡಿಗೆ ಒಪ್ಪಿಸಿ,
ರೈತನು ಪಾವತಿ ಪಡಕೊಂಡ.
ಸಂತೆಯ ದಿನ ಮೂಲಂಗಿಯ ಮಾರಲು
ದುಡ್ಡಿನ ಚೀಲವ ಹಿಡಕೊಂಡ.

ಕರಡೀರಾಯನು ತುದಿಗಳನೆಲ್ಲಾ
ಮನೆಯಲಿ ಸಾಗಿಸಿ ರುಚಿ ನೋಡಿ
ಅದು ಬರಿ ಸೊಪ್ಪೇ ಎಂಬುದನರಿಯಲು

ಮರಮರ ಮರುಗಿದ ಪೇಚಾಡಿ
ಒಳಗಿಂದೊಳಗೇ ಗುಣುಗುಟ್ಟು,
ಸುಮ್ಮನೆ ಕೂತನು ವ್ಯಥೆಪಟ್ಟು

೩

ವರುಷವ ಕಳೆಯಲು ಮೋಟಂಗಿ
ಕರಡೀರಾಯನ ಬಳಿ ಹೋಗಿ,
ಪುನಹಾ ಹೊಲವನು ಕೇಳಿದನು

ಕರಡೀರಾಯನು ಚಿಂತಿಸಿ ಚಿಂತಿಸಿ
ಹೊಸ ಆಲೋಚನೆ ಹೂಡಿದನು.
ಬುಡವೇ ರುಚಿಕರ ಎಂದಾಲೋಚಿಸಿ
ರೈತನಿಗೀಪರಿ ಹೇಳಿದನು :

ಈ ಸಲ ತುದಿಗಳು ನಿನಗಿರಲಿ,
ಪಯರಿನ ಬುಡವೇ ನನಗಿರಲಿ
ಕರಡೀರಾಯನು ಹೀಗೆನಲು
ಮೋಟಂಗಿಯು ಒಪ್ಪಿಗೆ ಕೊಡಲು,
ಗೇಣಿ–ಕರಾರಿಗೆ ಸಹಿ ಹಾಕಿ
ರೈತನು ಹೊಲವನು ಹೂಡಿದನು.

೪

ಈ ಸಲ ರೈತನು ರಾಗಿಯ ಬಿತ್ತಿದ,
ಉತ್ತಮ ಬೆಳೆಯನು ಬೆಳೆಸಿದನು;
ಕದಿರಿನ ತುದಿಗಳನೆಲ್ಲಾ ಕೊಯ್ದನು
ಕಾಳಿನ ಕಣಜವ ತುಂಬಿದನು.

ಕದಿರನು ಕೊಯ್ಯಲು ಕೆಳಗಿನ ದಂಟದು
ಕರಡೀರಾಯನ ಪಾಲಾಯ್ತು
ಬುಡಗಳನೆಲ್ಲಾ ಒಂದೆಡೆ ಹೇರಲು
ಬಣಬೆಯು ಬಹಳೇ ಗೋಲಾಯ್ತು.

ರಾಗಿಯ ದಂಟಿನ ರಾಶಿಯ ನೋಡಲು
ಕರಡೀರಾಯನು ಹಿಗ್ಗಿದನು !
ಬಣಬೆಯನೆಲ್ಲಾ ಮನೆಯಲಿ ಸಾಗಿಸಿ
ಮರುದಿನ ರುಚಿಯನು ನೋಡಿದನು.

ಅಯ್ಯೋ, ಈ ಬುಡ ಬರಿ ಸಪ್ಪೆ !
ಹಾಳಾಗಲಿ ರೈತನ ತಿಪ್ಪೆ.
ಆತನ ಗೊಬ್ಬರವೇ ಹಾಳು !
ಹಾಳಾಯಿತೆ ರಾಗಿಯ ಕಾಳು ?

ಕರಡಿಯ ಕೋಪ
ಉರಿ ಉರಿ ತಾಪ
ಈ ಹೊತ್ತಿನ ವರೆಗೂ ಉಂಟು.
ಕರಡಿಗೆ ಬರಿ ರಾಗಿಯ ದಂಟು.

❖❖

ತಿಪ್ಪಾಭಟ್ಟರು

೧

ಕಡಲಿನ ಕನ್ನಡ ನಾಡು
ತಿಪ್ಪಾಭಟ್ಟರ ಬೀಡು
ನಾಡಿನ ಮಕ್ಕಳಿಗೆಲ್ಲಾ
ಭಟ್ಟರ ಜೀವನ ಬೆಲ್ಲ.

ತಿಪ್ಪಾ ಭಟ್ಟರ ಮೂರ್ತಿ
ಹತ್ತೂ ದಿಕ್ಕಿಗೆ ಕೀರ್ತಿ
ತಿಪ್ಪಾಭಟ್ಟರ ವೇಷ
ಎಲ್ಲರಿಗೂ ಸಂತೋಷ.

೨

ತಿಪ್ಪಾಭಟ್ಟರ ಡೊಳ್ಳು
ನೋಡಲು ಮಕ್ಕಳು ಮಳ್ಳು;
ಕುಂಬಳಕಾಯಿಯ ಹಾಗೆ
ಉರುಟುರುಟಾಗಿದೆ ಹೀಗೆ.

ತಿಪ್ಪಾಭಟ್ಟರ ಮೂಗು
ಹಗರಣದೊಳಗಿನ ಸೋಗು,
ತಿಪ್ಪಾಭಟ್ಟರ ಮೋರೆ
ಒಂದೇ ಬದಿಯಲಿ ಓರೆ.

ತಿಪ್ಪಾಭಟ್ಟರ ಜುಟ್ಟಾ
ತಲೆಯಲಿ ಎಲ್ಲಿಗು ಮುಟ್ಟಾ;
ಮೂರೇ ಕೂದಲು ಕೂಡಿ
ಗಾಳಿಗೆ ಕುಣಿವುದು, ನೋಡಿ

ಭಟ್ಟರ ಹಲ್ಲೊ ಬಿತ್ತು
ಆದರೆ ಒಂದೇ ಇತ್ತು
ಚಕ್ಕಲಿ ತಿನ್ನಲಿಕಾಗಾ
ತಿಂದರೆ ಹಲ್ಲಿಗೆ ತಾಗಾ.

೩

ಭಟ್ಟರ ಹಣೆಯಲಿ ಗಂಧ,
ಕಿವಿಯಲಿ ಉಂಗುರ ಚಂದ
ಸೊಂಟಕೆ ಹೊಸ ನೇವಾಳ
ಕೈಯಲಿ ಭಜನೆಯ ತಾಳ.

ತಿಪ್ಪಾಭಟ್ಟರ ಕವಳ
ತುಟಿಗಳ ತುಂಬಾ ಹವಳ
ಹಣೆಯಲಿ ಭಸ್ಮದ ಬೂದಿ
ಪೂಜೆಗೆ ಶಂಖವನೂದಿ

ಭಟ್ಟರ ಹಳೆ ಜನಿವಾರ,
ಸೊಂಟದ ಕೆಂಪುಡದಾರ;
ಎರಡೂ ಅಷ್ಟೇ ಚೊಕ್ಕ,
ಭಟ್ಟರಿಗೇ ಅವು ತಕ್ಕ.

ತಿಪ್ಪಾಭಟ್ಟರ ಪಂಜೆ
ಗಾಳಿಗೆ ಹಾರುವ ಮುಂಚೆ
ಮಂಡಿಯ ತನಕಾ ಇತ್ತು
ಗಾಳಿಯ ಹೊಡೆತಕೆ ಬಿತ್ತು

ಭಟ್ಟರ ಕಾಲಿನ ಜೋಡು
ಒಳಗಡೆ ಪೂರಾ ಓಡು;
‘ಭಟ್ಟರ ದುಡ್ಡಿಗೆ ತಕ್ಕ’
ಅಂದನು ಚಮಗಾರ್ ಪೊಕ್ಕ.

ಭಟ್ಟರು ಮಲಗುವ ಮಂಚ
ಅಲುಗಾಡಿದರೂ ಕೊಂಚ
ಭಟ್ಟರು ಹೊಡೆಯುವ ಗೊರಕೆ
ಶ್ರೀ ಭಗವಂತನ ಹರಕೆ !

ಭಟ್ಟರು ಮಲಗುವ ಚಾಪೆ,
ತುಂಬಾ ತಗಣೆಗಳೇಕೆ ?
ಬೆವರಿನ ಪರಿಮಳದಿಂದ
ತಗಣೆಗೆ ಪರಮಾನಂದ.

೪

ಗುಡಿಯಲಿ ದೇವರ ಮೂರ್ತಿ,
ತಿಪ್ಪಾಭಟ್ಟರ ಆರ್ತಿ;
ತೀರ್ಥದ ನೀರನು ಚೆಲ್ಲಿ
ಹೂವಿನ ಪಕಳೆಗೆ ಬಿಲ್ಲಿ.

ಭಟ್ಟರು ಮಾಡಲು ಮಾಟ
ತಪ್ಪಿತು ದೆವ್ವದ ಕಾಟ.
ಹರಿಜನ ಸೋಮಿಗೆ ಜಡ್ಡು
ಭಟ್ಟರಿಗಾಯಿತು ದುಡ್ಡು.

ಗುಡಿಯಲಿ ದೇವರ ತೀರ್ಥ,
ಭಟ್ಟರಿಗದು ಚರಿತಾರ್ಥ;
ಹೊಂಡದ ನೀರೂ ಸುದ್ದಾ
ಭಟ್ಟರ ಕೈಯಲಿ ಶುದ್ಧ.

೫

ಗಣಪತಿ ಹಬ್ಬವು ಬಂತು
ತಿಪ್ಪಾಭಟ್ಟರಿಗಂತೂ

ಬಹಳೇ ಗಡಿಬಿಡಿ ಅಂತೆ.
ದಕ್ಷಿಣೆ ಬೇಡುವ ಚಿಂತೆ.

ಪೂಜೆಗೆ ತಂದಾ ಹಣ್ಣು
ಭಟ್ಟರ ಎರಡೂ ಕಣ್ಣು
ತಪ್ಪದೆ ಹಣ್ಣಿನ ಮೇಲೆ
ಇದು ಭಗವಂತನ ಲೀಲೆ.

ದೇವರ ಪೂಜೆಯ ವಾದ್ಯ,
ಭಟ್ಟರ ಬಾಯಲಿ ಖಾದ್ಯ !
ಪೂಜೆಯ ಹೊತ್ತಿಗು ತಿಂಡಿ.
ಎಳ್ಳೂ–ಸಕ್ಕರೆ, ಉಂಡಿ

ಬೆಲ್ಲದ ಸೀ ಅವಲಕ್ಕಿ,
ಭಟ್ಟರ ಸಂತಸ ಉಕ್ಕಿ
ಮಂತ್ರವು ಮರತೇ ಹೋಯ್ತು
ಪೂಜೆಗೆ ತೊಂದರೆಯಾಯ್ತು

ತುಪ್ಪದ ಹಸಿ ಒಗ್ಗರಣೆ,
ಭಟ್ಟರಿಗಾಯಿತು ಸ್ಮರಣೆ;
ಬೇಗನೆ ಮುಗಿಯಿತು ಆರ್ತಿ,
ಭಟ್ಟರು ಉಂಡರು ಭರ್ತಿ.

ಕಾರ್ತಿಕ ಹಬ್ಬವು ಬಂತು;
ತಿಪ್ಪಾಭಟ್ಟರಿಗಂತೂ
ತುಳಸೀ ಲಗ್ನದ ದಿವಸ
ಚುರುಮುರಿ ಮುಕ್ಕುವ ಕೆಲಸ.

ಬಿಸಿ ಬಿಸಿ ತುಪ್ಪದ ದೋಸೆ,
ಭಟ್ಟರಿಗಾಯಿತು ಆಸೆ.
ದೇವರ ಪೂಜೆಯ ಬದಲು
ಉಡಪೀ ಅಂಗಡಿ ಮೊದಲು !

ತಿಪ್ಪಾಭಟ್ಟರ ಮೀಸೆ,
ತಿನ್ನಲು ತುಪ್ಪದ ದೋಸೆ
ಮೀಸೆಗೆ ಹಿಡಿಯಿತು ಜಿಗಟು,
ಭಟ್ಟರಿಗಿದು ಹೊಸ ಒಗಟು.

೬

ಊರಲಿ ಕಬ್ಬಿನ ಗಾಣ,
ಬೆಲ್ಲವು ಭಟ್ಟರ ಪ್ರಾಣ;
ತಂದರು ತಂಬಿಗೆ ಬೆಲ್ಲ
ಡೊಳ್ಳದು ತುಂಬಲೆ ಇಲ್ಲ.

ಭಟ್ಟರ ಕೈಯಲಿ ತಟ್ಟೆ,
ಅದರಲಿ ಕೋಳೀ ಮೊಟ್ಟೆ !
ಸಾಲೆಯ ಮಕ್ಕಳು ನೋಡಿ
ನಲಿದರು ಚೇಷ್ಟೆಯ ಮಾಡಿ.

ಭಟ್ಟರು ಪೇಟೆಯ ಒಳಗೆ
ಹೋದರು ಖಾನಾವಳಿಗೆ
ಚಿಪ್ಪೇಕಲ್ಲಿನ ಪಳದಿ
ತಿಂದರು; ಕೇಳೇ, ಕೆಳದಿ.

ಭಟ್ಟರ ಚಿಪ್ಪೇಕಲ್ಲು
ಊರಿನ ತುಂಬಾ ಗುಲ್ಲು
ಮಜ್ಜಿಗೆ ನೀರಿನ ಭಟ್ಟ
ಮೀನನು ತಿಂದೇ ಬಿಟ್ಟ !

ಭಟ್ಟರು ತಿಂದರು ಮೀನು
ನಮ್ಮೆಲ್ಲರ ಗತಿಯೇನು ?
ಭಟ್ಟನಿಗೇತಕೆ ಮೀನು ?
ಹರಗೀದಡಿ ಇಲ್ಲೇನು ?

೭

ಮಂಗಳವಾರದ ಸಂತೆ,
ಭಟ್ಟರಿಗೊಂದೇ ಚಿಂತೆ,
ತಿಂಬುವ ಎಲೆ, ತಂಬಾಕು
ಒಂದೇ ಪೈಸೆಗೆ ಬೇಕು !

ಭಟ್ಟರು ಕಂಡರು ಸುಗ್ಗಿ,
ಮನದಲಿ ಬಹಳೇ ಹಿಗ್ಗಿ
ಕೊಟ್ಟರು ಒಂದೇ ಬಿಲ್ಲಿ !
ಕರಡೀಗೂ ಅದರಲ್ಲಿ !

ಊರಲಿ ನಾಟಕ ಬಂದ್ರೆ
ಭಟ್ಟರಿಗಿಲ್ಲಾ ತೊಂದ್ರೆ
ತಿಕೀಟು ಕೊಳ್ಳದೆ ಭಟ್ಟ
ಒಳಗಡೆ ನಡೆದೇ ಬಿಟ್ಟ !

೮

ಬೇಸಗೆ ಬಿಸಿಲಿನ ತಾಪ
ಭಟ್ಟರಿಗಾಗದು ಪಾಪ,
ನೋಡಲು ಹೋದರು ಕುತ್ರಿ,
ತಿಂಗಳ ಬೆಳಕಿಗು ಛತ್ರಿ !

ಭಟ್ಟರ ಮನೆಯಲಿ ಬಿಟ್ಟಿ,
ಮೆಣಸಿನ ಪುಡಿಯನು ಕುಟ್ಟಿ

ದಣಿದಳು ಒಕ್ಕಲ ಮುದುಕಿ
ಸಾಯದೆ ಇದ್ದಳು ಬದುಕಿ !

ಭಟ್ಟರು ಭೀಮನ ವೇಷ
ಹಾಕಲು ಹೊಸ ಆವೇಶ
ಮೀಸೆಗಳೇ ಬಲು ಜೋರು,
ಹೊಗಳಿತು ಊರೇ ಊರು.

೯

ತಿಪ್ಪಾಭಟ್ಟರ ನಾಯಿ
ಮಡಕೆಗೆ ಹಾಕಿತು ಬಾಯಿ;
ಭಟ್ಟರ ಮನೆಯಲಿ ಇದ್ದಾ
ನಾಯೀ ಮರಿಯೂ ಶುದ್ಧ !

ತಿಪ್ಪಾಭಟ್ಟರ ಬೆಕ್ಕು
ಮೈಯಲಿ ಬಹಳೇ ಸೊಕ್ಕು.
ನೆರೆಮನೆ ಮಕ್ಕಳ ಹಾಲು
ಭಟ್ಟರ ಬೆಕ್ಕಿನ ಪಾಲು.

ಭಟ್ಟರ ಆಕಳು ಗೊಡ್ಡು,
ಪುಕ್ಕಟೆ ಹೋಯಿತು ದುಡ್ಡು.
ಚಿಪ್ಪೂ ಹಾಲಿಗೆ ಕಷ್ಟ
ಭಟ್ಟರದೇ ದುರದೃಷ್ಟ.

ಭಟ್ಟರ ಮನೆಯಲಿ ಮುಂಜಿ
ಚಪ್ಪರದಲ್ಲೇ ಗಂಜಿ;
ಬಾಯಿಗೆ ಉಪ್ಪಿನಕಾಯಿ,
ತಿನ್ನದೆ ಹೋಯಿತು ನಾಯಿ !

೧೦

ತಿಪ್ಪಾಭಟ್ಟರ ಮಾಣಿ
ಕೆಲಸಕೆ ಬಾರದ ಪ್ರಾಣಿ;
ಇಲ್ಲದ ವ್ಯಸನಕೆ ಬಿದ್ದ,
ಸೂಳೆಯ ದಾಗಿನೆ ಕದ್ದ.

ಭಟ್ಟರ ಸೊಸೆ ಮಂಕಾಳಿ,
ಜಂಬದ ಮೊಟ್ಟೆಯ ಕೋಳಿ
ಜಗದಂಬೆಯ ಅವತಾರ
ಮಾವನ ಮನೆ ಉದ್ಧಾರ.

ಭಟ್ಟರ ಮೊಮ್ಮಗ ಮಡ್ಡ
ಸಾಲೆಗೆ ಹೋದರು ದಡ್ಡ
ಅರಿಯನು ಮಂತ್ರದ ಅರ್ಥ
ದೇವರ ಪೂಜೆಗೆ ವ್ಯರ್ಥ.

ತಿಪ್ಪಾಭಟ್ಟರ ಅಳಿಯ
ಮಾವನ ಇಂಗಿತ ತಿಳಿಯ;
ಅಳಿಯನ ಎಲ್ಲಾ ಗಂಟು
ಮಾವನ ಬಳಿಯೇ ಉಂಟು.

ಭಟ್ಟರ ಎಲ್ಲಾ ಬಳಗ
ಬಂದರೆ, ಎಷ್ಟೋ ಕೊಳಗ
ಅಕ್ಕಿಯ ಅನ್ನಾ ಬೇಕು;
ಭಟ್ಟರಿಗಾಯಿತು ಸಾಕು.

೧೧

ತಿಪ್ಪಾಭಟ್ಟರ ಜೀವಾ
ಎಪ್ಪತ್ತಾಯಿತು ದೇವಾ,

ಊರಿನ ಎಲ್ಲಾ ಜನಕೆ
ತಿಪ್ಪಾಭಟ್ಟರ ಹರಕೆ

ಭಟ್ಟರು ಹಿಡಿದರು ಬೆತ್ತ
ಬಡಿದರು ಒರಲೆಯ ಹುತ್ತ
ಹುತ್ತಿನ ಒಳಗಡೆ ಹಾವು !
ಭಟ್ಟರಿಗಾಯಿತು ಸಾವು !

ತಿಪ್ಪಾಭಟ್ಟರ ಸಾವು
ಮಕ್ಕಳಿಗೆಲ್ಲಾ ನೋವು
ತಿಪ್ಪಾಭಟ್ಟರ ಬಾಳು
ಪುಣ್ಯದ ಅಕ್ಕೀ ಕಾಳು.

ಊರಿನ ಬಂಡೀ ಹಬ್ಬ
ಆಡೂ ಕಟ್ಟೆಯ ಸುಬ್ಬ
ಭಟ್ಟರ ಹಗರಣ ಮಾಡಿ
ತೋರಿಸಿದನು ಉಂಡಾಡಿ.

❖❖

ಮೈಸೂರಿನ ತಿಂಡಿಗಳು

ಮೈಸೂರಿನ ಟೀ–ಕಾಫೀ ಕ್ಲಬ್ಬು
ಎಲ್ಲಾ ತಿಂಡಿಗಳಾಗರ, ಸುಬ್ಬು,

ಒಂದೇ ಆಣೆಗೆ ತುಪ್ಪದ ದೋಸೆ !
ಮಕ್ಕಳಿಗೆಲ್ಲಾ ತಿನ್ನುವ ಆಸೆ.

ಉದ್ದಿನ ವಡೆ, ಕಾರದ ಅವಲಕ್ಕಿ,
ತಿನ್ನಲು ನಾಲಿಗೆ ಬಿಡುವದು ಸೊಕ್ಕಿ.

ಬೋಂಡ, ಪಕೋಡಾ, ವಾಂಗೀ–ಭಾತು
ಬಣ್ಣಿಸ ಹೋದರೆ ಸಾಲದು ಮಾತು.

ಚಪಾತಿ, ಸಾಗೂ ಪೂರೀ ಪಲ್ಲೆ !
ಒಮ್ಮೆಗೆ ತಿಂದರೆ ನೀ ಬಿಡಲೊಲ್ಲೆ;

ಜಿಲೇಬಿ, ಜಾಮೂನ್, ಹಾಲಿನ ಕೀರು,
ಕಂಡರೆ ಬರುವುದು ಬಾಯಲಿ ನೀರು.

ಇಡ್ಲಿ–ಚಟ್ನಿಯನು ಮುಕ್ಕುವರೆಲ್ಲ,
ಬಡ ಚಕ್ಕಲಿಯನು ಮುಟ್ಟುವರಿಲ್ಲ

ಕುಂಬಳಕಾಯಿಯ ಸೀ ದಮರೋಟ
ಉಪ್ಪಿಟ್ಟೆಂದರೆ ದ್ವಾದಶಿ ಊಟ.

ಮೈಸೂರಿನ ಟೀ–ಕಾಫೀ ಕ್ಲಬ್ಬು
ಎಲ್ಲಾ ತಿಂಡಿಗಳಾಗರ, ಸುಬ್ಬು.

❖❖

೫

ಬಿಡಿಗವನಗಳು

ಜಗವೆಂಬ ಗುಡಿ

(ವಾರ್ಧಿಕ ಷಟ್ಪದಿ)

ಜಗದೊಡೆಯ ನೆಲಸಿರುವ ಜಗವೆಂಬ ದೇಗುಲದ
ಬಗೆಬಗೆಯ ಸಾರಮಂ ನೋಡುವಾ ಕಣ್ತೆರೆದು
ಚಿಗಿತು ಪೂ ಬಿಡುವ ತರು– ಲತೆಗಳಿಂ ಪೋಣಿಸಿದ ವನಮಾಲೆ ಮೆರೆವುದೆಂತು
ಖಗಜಾತಿ ನಲುವಿಂದಮಿಂಚಲದೆ ಪಾಡುವುದು
ಸೊಗಸಾದ ಗಂಧಮಂ ಕುಸುಮತತಿ ಬೀರುವುದು
ಮುಗಿಲೊಳುಜ್ವಲಿಸುವುದು ರವಿಯೆಂಬ ದೀಪವಾರತಿ ಮಂತ್ರಮಂ ನುಡಿವುದು ॥

ಅಡಿಗಡಿಗೆ ಹೊಳೆಯಾಗಿ ಮುರಹರನ ತೀರ್ಥವೀ
ಗುಡಿಯೊಳಗೆ ಹರಿವುದತಿಮಂಜುಲಧ್ವನಿಯಂಗೆ ।
ಸಡಗರದಿ ನಭದಿಂದೆ ಸುರಿವುದಭಿಷೇಕಜಲ ಮೋಡಗಳು ಭೇರಿಹೊಡೆಯು
ಉಡುರಾಜ ಮಧ್ಯದಲಿ ಬೆಳಗುವನು ಕೆಲಬಲಕೆ
ಕಿಡಿಗಳಂದದಿ ತಾರೆಗಳು ಪೊಳೆದು ಕಂಗೊಳಿಸೆ
ಕಡಲೆಂಬ ಮುಕುರದೊಳು ಗುಡಿಯೆಂಬ ಜಗವಾಯ್ತು ಜಗವೆಂಬ ಗುಡಿಯದಾಯ್ತು॥

೧೯-೧೨-೧೯೨೬

❖❖

ಕವಿಯಲ್ಲಿ

(ವಾರ್ಧಿಕ ಷಟ್ಪದಿ)

ಎಲೆ ಕವಿಯೆ, ಕೇಳ್ ನೀನು ಮಿಕ್ಕ ಜನರಂತಿಲ್ಲ
ಕೊಳಲಿನಂದದಿ ನೀನು ಬಿದಿರಿನಂದದಿ ನಾನು
ಸುಳಿದು ಜ್ಞಾನದ ಗಾಳಿ ನಿನ್ನ ಬಗೆ – ಬಿರುಕಿನೊಳು ಪಾಡುವುದು ನಲುವಿಂದಲಿ।
ಇಳೆಯೊಳಗೆ ಗಾಯಕರು ಬದಕುವರೆ ? ನೀನಿರದೆ
ಬೆಳಗಿ ಪೊಳೆವುದೆ ನಾಡು ? ಮುಂಗಾಳು ಹರಿವುದೇ ?
ಹೊಳೆದು ಕಲ್ಪನೆಯ ಶಶಿ ನಿನ್ನ ಬಗೆ – ಮುಗಿಲಲ್ಲಿ ಬೀರುವುದು ಬೆಳದಿಂಗಳ ॥

ಸುರರು ರಚಿಸಿದ ಇಂದ್ರಧನುವೆಂಬ ಸಂಕದಿಂ
ಮರುಟನೆಲೆಗಳು ಸುಳಿವ ಹವೆಯ ಕಡಲನು ದಾಂಟಿ
ಅರಗಳಿಗೆಯೊಳು ಕಲ್ಪನೆಯ ಕುದುರೆಯನ್ನೇರಿ ಪೋಗಿ ನೀ ಸುರಲೋಕಕೆ।
ಮಿರುಗುತಿಹ ತಾರೆಗಳು ಸುರರ ಮನೆಯಂಗಳದಿ
ಅರಳಿ ಬಿದ್ದಿರುವ ಬಿಳಿ ಕುಂದ ಕುಸುಮಗಳೆಂದು
ಮರುಳುಗೊಳಿಸುವಿ ನೀನು ಎನ್ನ ಕಿರಿಮ್ಮನವನ್ನು ಹೇ ಕುಶಲ ಮಾಟಗಾರಾ !

೧೭-೪-೧೯೨೭

❖❖

ಜೀವೇಶ

ಶ್ರೀ ರಾಮನಾಜ್ಞೆಯಿಂ ಜೀವೇಶ ನಡೆಯುವಂ।
'ಮಾರುತಿ'ಯ ದೇಹದಿಂ ದೂರಾಗಿ ಮರುತದೊಳು।
ಪಾರಾಡಿ 'ಚಿರಜೀವಿ' ಪೆಸರಿನಿಂ ಬಾಳುವಂ; ವಾಯುಸುತ ಜೀವೇಶನು।
ಹೇರಾನೆಯೊಳಗಿಹನು ಕಟ್ಟಿರುವೆಯೊಳಗಿಹನು।
ಸೇರುವಂ; 'ಮಂಗ' ನಂದದಿ ಜೀವ ಚಂಚಲಂ ಜೀವನೇ 'ಹನುಮಂತ'ನು॥

೧೫-೦೬-೧೯೨೭

❖❖

ಕನ್ನಡವ್ಮಾ

ಕನ್ನಡವ್ಮಾ! ಕನ್ನಡವ್ಮಾ!! ಹಸಿವೆಯಿಂ ನಾ ಬಳಲುವೆ
ನಿನ್ನ ಕಂದಗೆ ಮೊಲೆಯನುಣಿಸಲು ಬೇಗನೇಳಾ ! ಬೇಡುವೆ ॥ ಪಲ್ಲ॥

ಮುಗಿಲಮುಟ್ಟಿದ ವಿಜಯಕೇತನ ತಾಳಿಕೋಟೆಯೊಳಿಳಿಯಿತೇ ?
ಜಗದೊಳಚ್ಚರಿ ! ಇದನು ಕೇಳೀ ಮೂರ್ಛೆ ನಿನ್ನನು ತಬ್ಬಿತೇ ?
ವಿಜಯನಗರದ ನಾಶವೂ
ವಿಜಯಿಗಳ ಜಯಘೋಷವೂ
ಮುಗಿಲೊಳೇರಲು ದಿವ್ಯ ಮಾತೇ ! ಮೂರ್ಛೆ ನಿನ್ನನು ಕೆಡವಿತೇ ?

೨

ನಿನ್ನ ನೆಚ್ಚರಿಸದೆಯೆ ಮಲಗಿಸಿ ಕಲ್ಲಿನೆದೆಯವರಾದೆವು;
ನಿನ್ನ ಸೇವೆಯ ಮಾಡಲರಿಯದೆ ಪರರ ನಂಬಲು ಪೋದೆವು;
ನಮ್ಮ ರವಿ ಮರೆಯಾದನು
ಬೊಮ್ಮ ತಿಮಿರವ ಕರೆದನು
ಕಣ್ಣು ಕಾಣದೆ ನಿನ್ನ ದೇಹವ ತುಳಿದು ಪಾಪಿಗಳಾದೆವು.

೩

ಮೇರೆಗಾಣದೆ ನಮ್ಮ ನಮ್ಮೊಳು ಹೋರಿ ಸೋತವರಾದೆವು;
ಹೋರುವಾಗಲೆ ಹೆರರು ಸೇರಲು ನಿನ್ನ ತುಂಡುಗಳಾದುವು;
ನಿನ್ನ ನುಡಿಯಂ ಬಿಟ್ಟೆವು
ಅನ್ಯನುಡಿಯಿಂ ಕೆಟ್ಟೆವು
ಘೋರ ಪಾಪವನಿಂತು ಗೈದೆವು ! ಕ್ಷಮಿಸು !! ಬೇಡುತಲಿರುವೆವು.

೪

ಅಳಿವುದೆಂದಿಗೆ ನಿನ್ನ ಮೂರ್ಛೆಯು ! ರವಿಯು ಮೂಡಿಹ ಮಾತೆಯೇ !
ಎಳೆಯ ಕನ್ನಡ ಕೋಗಿಲಮರಿಗಳು ಹಾಡತೊಡಗಿವೆ ದೇವಿಯೇ !
ನೋಡು ಕೃಷ್ಣನ ರಾಜ್ಯವಂ
ನೋಡು ನಮ್ಮೀ ಭಾಗ್ಯವಂ
ಬೆಳಕು ಹರಿಯಿತು ತಿಮಿರವಡಗಿತು ಬೇಗನೇಳಾ ತಾಯಿಯೇ !

೮-೧೨-೧೯೨೭

❖❖

ನಿನಗೆ.....? ನನಗೆ......?

ನಿನಗಿರಲಿ ಗಂಧವನು ಬೀರಬಹ ಕುಸುಮತತಿ
ನನಗದರ ಮಧುರಮಧುರ ಗಂಧವೊಂದೇ ಸಾಕು
ನಿನಗಿರಲಿ ಕಂಠದಲಿ ಕಲರವವು; ನನಗಿರಲಿ ಕರ್ಣಗಳು ಕೇಳಲದನು।
ಸುಣುಪಾದ ಕೆನ್ನೆಯಲಿ 'ತಾವರೆಯ ಹೊಸ ಕೆಂಪು'
ಕುಣಿವ ತಾರೆಗಳಂತೆ ಹೊಳೆವೆಸಳುಗಣ್ಣುಗಳು
ನಿನಗಿರಲಿ; ನಿನ್ನ ಮುದ್ದಿನ ಮೊಗವ ಮುದ್ದಿಡುವ ತುಟಿಗಳಿವು ಸಾಕು ನನಗೆ

ಕುಣಿಯುತಲಿ ನಟಿಸುತಲಿ ನಾಟ್ಯರಂಗಕೆ ಬಂದು
ಜನಮನವ ರಂಜಿಸುವ ಮುಕುತಿಯದು ನಿನಗಿರಲಿ
ಕುಣಿವ ನಟರನು ನೋಡಿ ನಲಿವ ನಯನಗಳೆರಡು ನನಗಿರಲಿ ತೃಪ್ತಿತೃಪ್ತಿ
ನಿನಗಿರಲಿ ನವರಸದ ಕಾವ್ಯ ರಚನೆಯ ಶಕ್ತಿ
ನನಗದನು ಓದಿಯಾನಂದ ಪಡೆಯುವ ರೀತಿ
ನಿನಗಿರಲಿ ಕ್ಷಮಯ ಗುಣ ನನಗಿರಲಿ ತುಂಟತನ ವರವಿಂತು ನೀಡು ದೇವಾ

೬-೩-೧೯೨೮

❖❖

ಜೀವನ

ಜೀವನವು ಝರಿಯಾಗಿ ತಿಳಿನೀರ ತೊರೆಯಾಗಿ
ಮಾವು ನೀರಲ ಹಲಸು ಮರಗಳಿಗೆ ನೀರೆರೆದು
ಜೀವಿಗಳ ಜೀವಾಳ ಕಡಲ–ಬೊಮ್ಮನ ಸೇರೆ ಜನ್ಮಸಾಫಲ್ಯವಿಂತು।
ಜೀವನವು ಎದೆಯೊಳಗೆ ಮಿದುವಾಗಿ ಸವಿರಸದ
ಹೂವಾಗಿ, ಹಗಲೊಳಗೆ ಜಗಕೆ ಗಂಧವ ಬೀರಿ
ನಾದಸಂಜೆಗೆ ಸೇರೆ, ಬರುವಿರುಳ ಕಾಣದಲೆ, । ಜನ್ಮಸಾಫಲ್ಯವಿಂತು ॥

ಜೀವನವು ಮೇರೆ ಮೀರಿಹ ಕಾಲ ಗಗನದೊಳು
ಜೀವಂತವಾಗಿ, ಮಿರುಮಿರುಗಿ ಬೆಳಕನು ನೀಡಿ
ಸಾವಿನೊಳು ಚಣದೊಳಗೆ ಸೇರುತಿಹ ಉಡುವಾಗೆ, ಜನ್ಮಸಾಫಲ್ಯವಿಂತು।
ಜೀವನವು ಹೊರಗೆ ನುಣುಪಾಗೊಳಗೆ ವಿಷ ಪಡೆದ
ಹಾವಾಗಿ, ಕಟುಕತರ ಭಾವಮಂ ತಳೆದೊಂದು
ಸಾವಿರಬರಿಸ ಬಾಳಿ ಜನರ ಬೈಗಳ ಕೇಳಿ, ಜನ್ಮಸಾಫಲ್ಯವೇನು॥

೪-೫-೧೯೨೮

❖❖

ಎಂತು

ಚಂದಿರನ ತಂಬೆಳಗು ನೆಲವೆಣ್ಣ ಮುತ್ತಿಡುವ
ಅಂದವನು ರವಿ ತಾನು ನೋಳ್ಪುದೆಂತು ?
ಕುಂದೆ ಕುಸುಮವು ಕಾಡಿನೊಲು ಬಿರಿದು ಸೂಸುತಿಹ
ಗಂಧವನು ಪುರವು ತಾ ಪಡೆವುದೆಂತು ?

ಪೆರೆಯಡಿಯ ಮಸಣದಲಿ ನಾನಾಧಿಕ ಶಾಂತಿಯಿಂ –
ದೊರಗಿರುವ ಬಗೆಯ ನಾ ಕಾಣ್ಬುದೆಂತು ?
ಮೊರೆವ ಸುಳಿಗಾಳಿಯಲೆಗಳ ಮೇಲೆ ತೇಲುತಿಹ
ಪರಮೇಶ ಪೊರಗಣ್ಗೆ ಪೊಳೆವುದೆಂತು ?

೨೩-೨-೧೯೨೯

❖❖

ಕುರುಡನ ದೇಶಭಕ್ತಿ

ದಾನಿ ದಯದೊಳಗಿತ್ತ ತುತ್ತನು
ತಿಂದು ಬಾಳನು ದೂಡುವೆ !
ಏನು ಜನಮವೊ ! ಸಾಕು ಜೀವನ !
ಮಸಣದೆಡೆಯನು ಸೇರುವೆ !

ಬೇಡಿ ತಿಂಬೆನು ರಾಗಿಯುಂಬೆನು
ರಾಗಿ ಬೆಳೆಯುವ ಹೊಲವನು
ನೋಡಲಾರೆನು ! ನನಗೆ ಕಣ್ಗಳ
ನೇಕೆ ಕೊಡನೇ ದೇವನು !

ಬಿಸಿಲಿನಿಂದಲಿ ಬೆನ್ನು ಬೆಮರಲು
ಸೇರ್ವೆ ಗಿಡದಡಿ ತಂಪನು
ಹಸುರು ಎಂಬೀ ಗಿಡದ ಸೊಂಪನು
ಸೋಳ್ಪುದೆಂತೀ ಕುರುಡನು !

ನೆಲವೆ ತಾಯಿಯು ! ತಾಯ ತೊಡೆಯಲಿ
ಮಳಲು ಹಾಸಿಗೆ ಎನ್ನುತೆ
ಮಲಗುವೆನು ನಾ ! ತಾಯಿ ನೆಲವನು
ನೋಡಲಾರದೆ ಕೊರಗುವೆ !

ಹರ ! ಹರಾ ! ಹರ ತಾಯ ಮೊಗವನು
ಎಂದು ಕಾಂಬೆನೊ ! 'ಶಿವ ಶಿವಾ' !
ಕುರುಡನೀ ಪರಿ ನುಡಿದು ಕಂಬನಿ –
ಗರೆದು ಎಂದನು 'ಶಿವ ಶಿವಾ' !

ಕಣ್ಣಪನಿಗಳ ಮತ್ತೆ ಕರೆದನು
ನೆಲವನೆಲ್ಲವ ತೊಯ್ದನು !
ಮಣ್ಣು ಕುಡಿಯಿತು ಕಣ್ಣ ನೀರನು !
ಕುಡಿಗಳ್ಳೆ ನೆಲದಮ್ಮನು !

೨೫-೩-೧೯೨೯

❖❖

ಹನಿಮುತ್ತು
(ಲಲಿತ ರಗಳೆ)

'ಹುಲ್ಲಿನೊಳು ಶೋಭಿಸುವ ಬೆಳ್ಳಿಯೀ ಮುತ್ತುಗಳು
ಎಲ್ಲಿಂದ ಬಂದವೀ ಬಲುಚಂದ ಹೂವುಗಳು ?
ನಿನ್ನೆ ಸಂಜೆಗೆ ಇಲ್ಲದಿವುಗಳನು ನೋಡಿಲ್ಲಿ
ಚೆನ್ನ ಈ ಮುತ್ತುಗಳ ಚೆಲ್ಲಿದವರಾರಿಲ್ಲಿ ?
ಬಲುಚಂದವಾಗಿಹವು ಬಿಸಿಲೊಳಗೆ ಹೊಳೆಯುವುವು
ಫಳಫಳನೆ ಮಿನುಗುವುವು ನೋಡಮ್ಮ! ಮಣಿಗಳಿವು...

ಹೀಗೆಂದು ಬಾಲಕನು ತಾಯಿಯೆಡೆ ನೋಡಿದನು
ಆಗಂಬೆ ನಲವಿನಿಂದಪ್ಪಿದಳು ತನಯನನು
ಮುಗಿಲೊಳಗೆ ಬೊಟ್ಟಿಟ್ಟು ಪೇಳತೊಡಗಿದಳವಳು
ಮಗನೆ, ಚಿಕ್ಕೆಗಳೆಲ್ಲ ಮಿನುಗುವವು ರಾತ್ರಿಯೊಳು
ಅಲ್ಲಿಂದ ಈ ಚಂದ ಮಣಿಗಣವು ಬೀಳುವುದು
ಅಲ್ಲಿಂದಲೇ ಮಳೆಯು ಧಾರಿಣಿಗೆ ಸುರಿಯುವುದು.

ಇಲ್ಲಿಯೇ ಮುತ್ತುಗಳು ಇರುವುವೇನೇ ? ಅಮ್ಮ!
ಚೆಲ್ಲಾಟವಾಡಲು ಸಿಗುವುದೇ ? ನನಗಮ್ಮ?

ನನಗಷ್ಟು ಮಣಿಗಳನು ಹೆಕ್ಕಿಕೊಡು ನೀನೀಗ
ಎನಗೆ ಸಿಗಲೊಲ್ಲವಿವು; ಬಲುಸೋತೆ ನಾನಾಗ
ಇಲ್ಲ! ಮುದ್ದಿನ ಕಣಿಯೆ, ಸಿಗಲೊಲ್ಲವಿವು ನಮಗೆ
ಒಲ್ಲೆ! ನೀರಾಗುವುದು ಮುಟ್ಟಿದೊಡೆನೀರ್ವನಿಗೆ

ಗಗನದಿಂ ಚೆಲ್ಲಿರುವ ಸೂಕ್ಷ್ಮಮಣಿಗಳ ನಿವನು
ಜಗದೊಳಗೆ ಪಡೆಯಲಸದಳವೆಂದು ದಿನಕರನು
ಆಕಾಶಕೊಯ್ಯುವನು; ಹೀಗೆನ್ನಲಾ ಮಗನು
ಆಕ್ರೋಶವನು ಹೂಡಿ ಕಣ್ಣೀರ ಸುರಿಸಿದನು
ಆ ನೋಟವಂ ನೋಡಲಾರದಿನ ಮನಸಿನಲಿ
ತಾನೊಂದು ವೇಗದಿಂದಡಗಿದನು ಮೋಡದಲಿ

೨೩-೫-೧೯೨೯

❖❖

ದೀನರ ಬಂಧು

ದುಡಿಯುವ ದೇಹದ ಬೆವರಲಿ ಮೀವನು
ಬಡವನ ಕಂಗಳಲುದಯಿಪನು
ಕಣ್ಣುಗಳಿಲ್ಲದ ಕುರುಡನ ನುಡಿಯೊಳು
ಶಿವ ಶಿವ ಎನ್ನುತಲಿರುತಿಹನು
ಅವನಾ ಹೆಸರದು ಏನೆಂದು ?
ದರಿದ್ರ ನಾರಾಯಣನೆಂದು !

೨

ಕಡಲಿನ ತೆರೆಗಳ ನೊರೆಯಲಿ ತೇಲುತ
ಜೋಗುಳ ಹಾಡನು ಹಾಡುವನು;
ದೋಣಿಯೊಳೊರಗಿದ ಬೆಸ್ತರ ಮಗುವಿಗೆ
'ತೊಟ್ಟಿಲ ತೂಗುತಲಿರುತಿಹನು
ಅವನಾ ಹೆಸರದು ಏನಯ್ಯಾ ?'
ದೀನಬಂಧು ಎನ್ನಯ್ಯಾ !

೩

ದೇವರು ಇಲ್ಲ, ಇದ್ದರೆ ಕಾಣನೆ
ಎಂಬೀ ಮಾತಿಗೆ ತಿರುಳಿಲ್ಲ;
ಕಂಗಳ ತೆರೆದರೆ ಕಾಂಬನು ದೇವ
ಬಡವರ ಬಂಧು ಮಾದೇವ !

೧೬-೧೨-೧೯೨೯

ನಿಜರೂಪು

೧

ಪ್ರೇಮದ ರೂಪವ ಪ್ರೀತಿಯ ರೂಪವ
ಚಿತ್ರಿಪನಾವನು ಸೋದರನೆ
ಭಕ್ತಿಯ ರೂಪವ ಮುಕ್ತಿಯ ರೂಪವ
ಬರೆಯುವನಾರೈ ಮಾನವನೆ
ಒಬ್ಬನ ಮನದಲಿ ಮೂಡಿದ ರೂಪು
ಪ್ರೇಮದ ಭಕ್ತಿಯ, ನಿಜರೂಪು

೨

ಗಾಳಿಯ ರೂಪವ ಬರೆಯುವನೆಂದು
ಕುಣಿಯುವ ಎಲೆಗಳ ಬರೆಯುವರು !
ಜೀವದ ರೂಪವ ಚಿತ್ರಿಪೆನೆಂದು
ಜೀವಿಯ ದೇಹವ ಕೊರೆಯುವರು !
ಗಾಳಿಯ ರೂಪವ ಬರೆಯಲಸಾಧ್ಯ
ಜೀವದ ರೂಪವ ಕೊರೆಯಲಸಾಧ್ಯ

೩

ದೇವನ ರೂಪವ ಕೊರೆಯುವೆನೆಂದು
ಕಲ್ಲಿನಗೊಂಬೆಯ ಕೆತ್ತುವರು !
ದೇವನ ರೂಪವು ಬರೆಯಲು ಬಾರದು
ಮನದಲಿ ಮೂಡಲಿ ನಿಜರೂಪು.

ಮಾರ್ಚ, ೧೯೩೩

❖❖

ರೈತರ ಹಾಡು

ಬೆಳಗಿನಿಂದಲೂ ಸಂಜೆಯವರೆಗೆ
ದುಡಿದೂ ಹೊಟ್ಟೆಗೆ ಇಲ್ಲವು ನಮಗೆ
ಒಡೆಯನಿಗಾಯ್ತು ಬೆಳಸಿದ ಭತ್ತ
ತೆಂಗಿನ ಕಾಯಿ ಮಡಲೂ ಕತ್ತಾ

ಹೆಂಡತಿ ಮಕ್ಕಳ ಹೊಟ್ಟೆಗೆ ಇಲ್ಲ
ಗೇಣಿಗೆ ಹೋಯ್ತು ಹುಟ್ಟಿದ ಬೆಲ್ಲ
ಬೆನ್ನಿನ ಮೇಲೆ ಸಾಲದ ಭಾರ
ಜಪ್ತಿಗೆ ಬಂದನು ಅಂಗಡಿಕಾರ

ವರುಷಕೆ ಒಂದೇ ಕಚ್ಚೆ–ರುಮಾಲು
ದೊರೆತರೆ ಅದುವೇ ರೈತನ ಪಾಲು
ರಾಗಿಯ ಅಂಬಲಿಗೂ ದುಷ್ಕಾಳ
ಒಡೆಯನು ಕುಡಿವನು ಎಳೆ ಸೀಯಾಂಳ

ಕಷ್ಟದಿ ಬೆಳಸಿದದ ಹಲಸೂ ಮಾವು
ಒಡೆಯನಿಗೆ; ಉಪವಾಸವು ನಾವು
ಹೊಟ್ಟೆಲಿ ಹಸಿವೆಯ ಬೆಂಕಿಯ ಜ್ವಾಲೆ
ಕೊರಳಿಗೆ ಸಾಲದ ಮುಳ್ಳಿನ ಮಾಲೆ

ಕೊಳಿಲ್ಲದೆ ಬಡ ರೈತನ ಹೊಟ್ಟೆ
ಬೆನ್ನಿಗೆ ತಾಗಿ ಆಗಿದೆ ತಟ್ಟೆ
ನಮಗೆ ಇಲ್ಲ ತಿನ್ನಲು ಕಾಳು
ದನಗಳಿಗೆಲ್ಲಿದೆ ಹಾಕಲು ಕೂಳು

ನೇಗಿಲ ಹೂಡುವ ಎರಡೂ ಎತ್ತು
ಸಾಕಲು ಆಗದೆ ಹೋದವು ಸತ್ತು
ಜಂಗಲ್ ಖಾತೆಯು ಬೆಳೆಯುತ ಹೋಯ್ತು
ಕುಮರೀ ಬಿತ್ತುವುದೂ ಬಂದಾಯ್ತು

ಅಡವಿಗೆ ಹೋಗಿ ಕೊಯ್ದರೆ ಸೊಪ್ಪು
ಗಾರ್ಡಸಿಪಾಯಿ ಹಿಡಿವನು ತಪ್ಪು
ಎಲ್ಲಾ ರೀತಿಯ ರೈತನ ಗೋಳು
ಬಡ ರೈತನ ಸಂಸಾರವು ಹಾಳು

*****

ಏಳಿರಿ, ಏಳಿರಿ ರೈತರೆ ಎಲ್ಲ
ಜಾಗ್ರತರಾಗಿರಿ ಊರೊಳಗೆಲ್ಲ
ಹಳ್ಳಿ ಹಳ್ಳಿಗೂ ಕೂಟವು ಬೇಕು
ಒಡೆಯರ ಅವಲಂಬಿಸುವುದು ಸಾಕು

ಒಕ್ಕಟ್ಟೇ ನಿಜ ರೈತರ ಶಕ್ತಿ
ಅದುವೆ ಅನ್ನವು ದೊರಕುವ ಯುಕ್ತಿ
ಜಾತಿ ಪಕ್ಷ ಪಂಗಡಗಳ ಮರೆತು
ಒಕ್ಕಟ್ಟಾಗಿರಿ ನಿಜವನು ಅರಿತು

ಹೊಟ್ಟೆಗೆ ಇದ್ದರೆ ಅಲ್ಲವೇ ಗೇಣಿ –
ಕೊಡುವುದು ತುಂಬಲು ಒಡೆಯನ ದೋಣಿ
ರೈತನಿಗನ್ನವು ಸಿಗಬೇಕೆಂದು
ಸ್ವಂತದ ಹೊಲ – ಮನೆ ಇರಬೇಕೆಂದು
ದೇಶದ ಹಿತವೇ ಇದರಲಿ ಎಂದು
ಸಾರಲು ಬೇಕು ರೈತರು ಇಂದು.

❖❖

ನಾಡವರೇ ನಿಜನಾಡಿಗರು !

ನಾಡವರೇ ನಿಜ ನಾಡಿಗರು
ನೋಡು ಕಾಳಗವ ಹೂಡಿಹರು !
ಸ್ವಾತಂತ್ರ್ಯದ ಸುಖದೂಟವನುಂಡು
ವಿಜಯ ನಗರದಲಿ ಕಾದಿದ ದಂಡು
ಉಪ್ಪು ಮಾಡುವರು ಮುಂದಕೆ ಬಂದು
ನಾಡವರೇ ನಿಜ ನಾಡಿಗರು ॥ ೧ ॥

ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲರೂ ಒಂದೆಡೆ ಕೂಡಿ
ಗಾಂಧಿ ಮಹಾತ್ಮರ ಕೊಂಬನು ಕೇಳಿ
ನೆಗೆದು ಕಾದುವರು ಧೈರ್‍ಯವ ತಾಳಿ
ನಾಡವರೇ ನಿಜ ನಾಡಿಗರು
ನೋಡು ಕಾಳಗವ ಹೂಡಿಹರು ॥ ೨ ॥

ಕಲ್ಲಿನ ದೇಹವು ಆರಡಿ ಉದ್ದ
ಸೋಲದು ಇವರಿದ್ದರೆ ಈ ಯುದ್ಧ
ಕನ್ನಡನಾಡಿನ ಶಿಖ್ಖರು ಇವರು
ದೇಶದಗೋಸುಗ ಕಾದುತಲಿಹರು
ನಾಡವರೇ ನಿಜನಾಡಿಗರು
ನೋಡು ಕಾಳಗವ ಹೂಡಿಹರು ॥ ೩ ॥

ಶಾಂತತೆಯಿಂದಲಿ ಕಾದಲುಬೇಕು
ಖಡ್ಗ ತುಪಾಕಿಗಳಿಂದಿಗೆ ಸಾಕು,
ಅಂದರೆ ಮುಗಿವುದು ವೈರಿಯಸೊಕ್ಕು
ಸಿಗುವುದು ನಮಗೆ ಸ್ವರಾಜ್ಯದ ಹಕ್ಕು
ನಾಡವರೇ ನಿಜನಾಡಿಗರು
ನೋಡು ಕಾಳಗವ ಹೂಡಿಹರು ॥ ೪ ॥

ನಾಡಿನ ಧೀರರು ಸೆರೆಮನೆಯಲ್ಲಿ
ಸ್ವಾತಂತ್ರ್ಯದ ಸುಖತೊಟ್ಟಿಲಿನಲ್ಲಿ
ನಾಡವರಲಿ ಮೂಡಿರುವುದು ಸ್ವರಾಜ್ಯ
ಇದುವೇ ಭಾರತ ಭೂಮಿಯ ಭಾಗ್ಯ
ನಾಡವರೇ ನಿಜನಾಡಿಗರು
ನೋಡು ಕಾಳಗವ ಹೂಡಿಹರು ॥ ೫ ॥

❖❖

ಅಂಕೋಲೆಯವರು ನಾವು

'ಅಂಕೋಲೆ'ಯವರು ! ನಾವು ! ಪರಮ ಧನ್ಯರು ॥ಪಲ್ಲವಿ॥

ಪುಣ್ಯ ಭಾರತವನು ಸುಲಿದು। ಜನರ ಶಕ್ತಿಯನ್ನು ಸೆಳೆದು।
ಉಪ್ಪಿಗೆ ಕರ ಹಾಕಿದಂಥ। ವೈರಿಗಳನು ಕಾದುನಿಂತ ॥
'ಅಂಕೋಲೆ'ಯವರು ॥

ಭರತಭೂಮಿ ಚರಣಕೆರಗಿ। ಪ್ರಾಣಭೀತಿಯನ್ನು ನೀಗಿ।
ಧೈರ್ಯದಿಂದ ಸೆರೆಗೆ ಹೋಗಿ। ರಾಷ್ಟ್ರಧ್ವಜವ ಎತ್ತಿಹಿಡಿದ
'ಅಂಕೋಲೆ'ಯವರು ॥

ದೇಶಪಾಂಡೆ, ಹರಡೀಕರರು। ವೀರ ಕೌಜಲಗಿಯವರು।
ರಂಗನಾಥ ದಿವಾಕರರು। ಹಸ್ತದಿಂದ ಹರಸಿದಂಥ।
'ಅಂಕೋಲೆ'ಯವರು ॥

ಜಯವ ಹೊಂದಿತು

ನೋಡು ನೋಡು ನಮ್ಮ ನಾಡು। ಜಯವ ಹೊಂದಿತು।
ಕೊಡದೆ ಕಪ್ಪ। ಮಾಡಿ ಉಪ್ಪ। ಯಶವ ತಂದಿತು।
ಗಾಂಧಿಯವರ ಮಾತ ಕೇಳಿ। ಹೃದಯದೊಳಗೆ ಧೈರ್ಯ ತಾಳಿ।
ದಾಸ್ಯ ಶೃಂಖಲೆಯನು ಸೀಳಿ । ಮುಂದೆ ಬಂದಿತು।
ಕಡಲ ತೀರ। ಧೀರವೀರ ರಿಂದ ತುಂಬಿತು। ನೋಡು ನೋಡು ॥

❖❖

ದೀನಗೊಂದು ಗೂಡು ಸಾಕು
ದೇವಗೊಂದು ವಿಶ್ವಬೇಕು
ಮಣ್ಣಹುಲ್ಲ ಸಣ್ಣಗೂಡು
ಬಡವಗದುವೇ ಸಿರಿಯ ಬೀಡು
ಹರಿಗೆ ಎಂದು ಗುಡಿಯನೊಂದ ಕಟ್ಟುತಿರುವೆಯ
ದೀನಗಿಂತ ದೇವ ಬಡವನೆಂದು ಬಗೆದೆಯಾ ?

('ದೀನಗಿಂತ ದೇವ ಬಡವ' ಕವನದಿ

ನನ್ನ ದೇಹದ ಬೂದಿ ಗಾಳಿಯಲಿ ತೂರಿಬಿಡಿ
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ
ಬೂದಿಗೊಬ್ಬರದಿಂದ ತೆನೆಯೊಂದು ನೆಗೆದುಬರೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

('ನನ್ನ ದೇಹದ ಬೂದಿ' ಕವನದಿಂದ)



* ಆಧುನಿಕ ಕನ್ನಡ ಕವಿಗಳಲ್ಲಿ ದಿನಕರ ದೇಸಾಯಿ ಅವರದು ಒಂದು ಗೌರವಾನ್ವಿತ ಹೆಸರು. ಒಬ್ಬ ವಿದ್ಯಾರ್ಥಿಕವಿಯಾಗಿಯೇ ಅವರು ನಾಡಿನ ತುಂಬಾ ಹೆಸರು ಮಾಡಿದವರು.......

* ದಿನಕರ ದೇಸಾಯರ ಕವನಗಳಲ್ಲಿ ಕಂಡುಬರುವ ವರ್ತಮಾನದ ಎಚ್ಚರ ಯಾರನ್ನಾದರೂ ಬೆರಗುಗೊಳಿಸುವಂತಿದೆ. ನಲ್ವತ್ತರ ದಶಕದಷ್ಟು ಹಿಂದೆಯೇ ಬರೆದ 'ತರುಣರ ದಸರೆ' ಈ ಅಭಿಪ್ರಾಯಕ್ಕೊಂದು ನಿಚ್ಚಳ ನಿದರ್ಶನ..... 'ಕಾಲಿನ ಜೋಡು' ಅನ್ನುವ ಒಂದು ಸರಳ ಕವನದಲ್ಲೂ ಮಾನವೀಯತೆಯ ಮರ್ಯಾದೆ ಹೆಚ್ಚಿಸುವಂಥ ದೃಷ್ಟಿಯೊಂದನ್ನು ಇಡಬಲ್ಲ ಕವಿ.

* ದಿನಕರ ದೇಸಾಯರ ಕಾವ್ಯದ ಇನ್ನೊಂದು ಲಕ್ಷಣ ಚುರುಕು ಮುಟ್ಟಿಸುವ ವಿಡಂಬನೆ ಮತ್ತು ವಿನೋದಗುಣ. ಈ ವಿಡಂಬನೆ ಮತ್ತು ವಿನೋದಗಳ ತೀವ್ರತೆಯಿಂದಾಗಿಯೇ ಅವರ ಚೌಪದಿಗಳೂ ನಾಡಿನ ತುಂಬ ಹೆಸರು ಮಾಡಿರುವುದು.

* ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಿನಕರ ದೇಸಾಯಿ ಶೋಷಿತರಪರ ದನಿಯೆತ್ತಿದ ಕವಿಯೆಂದೇ ಗುರುತಿಸಲ್ಪಡುತ್ತಾರೆ. 'ಹಸಿವೆಯಿಂದ ಕಂಗೆಟ್ಟ ನರನ ಮನಸ್ಸೇ ಕ್ರಾಂತಿಬೀಜಕ್ಕೆ ಭೂಮಿ' ಎಂಬುದು ಈ ಕವಿಯ ನಂಬಿಕೆ.

* ದೇಸಾಯರ ಬಹುಸಂಖ್ಯೆಯ ಕವನಗಳಲ್ಲಿ ಶ್ರಮ ಸಂಸ್ಕೃತಿ ಕುರಿತ ಕಾಳಜಿ, ಸಮಾನತೆ ಕುರಿತ ಎಚ್ಚರ, ನೆಲದಪ್ರೀತಿಗಳನ್ನು ಪುಷ್ಕಳವಾಗಿ ಕಾಣಬಹುದಾಗಿದೆ. ಇವರು ಸಾಮಾನ್ಯ ಜನರಿಗಾಗಿಯೇ ಬರೆದ ಜನತಾ ಕವಿ.

'ಪ್ರಸ್ತಾವನೆ'ಯಿಂದ